ಶುಕ್ರವಾರ, ಅಕ್ಟೋಬರ್ 8, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹನುಮಂತನ ವೇಷ

ನವರಾತ್ರಿ ಉತ್ಸವದ ಅಂಗವಾಗಿ ಅಮೃತಸರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಕಲಾವಿದರೊಬ್ಬರು ಹನುಮಂತನ ವೇಷ ಧರಿಸಿ ಪಾಲ್ಗೊಂಡಿದ್ದರು





ನಮಸ್ಕಾರ ಬೆಂಗಳೂರು! ನೀವು ನಮಗೆ ನಮ್ಮ ಮನೆಯವರಂತೆಯೇ ಅನಿಸುತ್ತದೆ.

ಹೇ, ಬೆಂಗಳೂರು! ನಾವು ಸ್ವೀಡನ್‌ನ ಅತ್ಯಂತ ನೆಚ್ಚಿನ ಹೋಮ್ ಫರ್ನಿಶಿಂಗ್ ಬ್ರ್ಯಾಂಡ್ ಆದ IKEA ಆಗಿದ್ದೇವೆ. ನಿಮ್ಮ ನಗರಕ್ಕೆ ಬರಲು ನಾವು ಸಜ್ಜುಗೊಳ್ಳುತ್ತಿರುವಂತೆಯೇ, ನಿಮ್ಮ ಮನೆಯ ಅನುಕೂಲತೆಯಿಂದಲೇ ಮನೆಗಾಗಿ ನೀವು ಶಾಪ್ಪಿಂಗ್ ಮಾಡಬಹುದು.

ನಿಮ್ಮ ಲಿವಿಂಗ್ ರೂಮ್, ಮತ್ತು ಇತರ ಪ್ರತಿಯೊಂದು ರೂಮ್‌ಗಳಿಗಾಗಿ, ನಿಮ್ಮ ಸ್ಟೋರೇಜ್‌ಗೆ ಹೊಂದಿಕೆಯಾಗುವ ಬುಕ್‌ಕೇಸ್‌ಗಳು ಮತ್ತು ಬೆಡ್‌ಗಳಾಗಿ ಬದಲಾಯಿಸಬಹುದಾದ ಸೋಫಾಗಳಿಂದ ಹಿಡಿದು, ಸ್ಮಾರ್ಟ್ ಆದ ಮತ್ತು ಕೈಗೆಟುಕುವ ಬೆಲೆಯ ಹೋಮ್ ಫರ್ನಿಶಿಂಗ್ ಸೊಲ್ಯುಶನ್‌ಗಳ ವಿಶಾಲ ವ್ಯಾಪ್ತಿಯನ್ನು ನಾವು ಹೊಂದಿದ್ದೇವೆ.

Scan the QR code to join IKEA family club

Shop online at IKEA.in | IKEA app

IKEA

Make Everyday Brighter

ನಿಯಮ ಉಲ್ಲಂಘಿಸಿ ನಿರ್ಮಿಸಿದ್ದ ಅಪಾರ್ಟ್‌ಮೆಂಟ್ ಸಮುಚ್ಚಯ • ಎ.ಎನ್. ಬಿಲ್ಡರ್ಸ್ ವಿರುದ್ಧ ಪ್ರಕರಣ

ಎಂಟು ವರ್ಷಕ್ಕೆ ಕುಸಿದುಬಿದ್ದ ಕಟ್ಟಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮತ್ತೊಂದು ಅವಘಡ ಸಂಭವಿಸಿದ್ದು, ಕಸ್ತೂರಿ-ನಗರದ ಡಾಕ್ಟರ್ಸ್ ಬಡಾವಣೆಯಲ್ಲಿ ನಿರ್ಮಿಸಿದ್ದ ನಾಲ್ಕು ಅಂತಸ್ತಿನ ಕಟ್ಟಡ ಗುರುವಾರ ಕುಸಿದು ಬಿದ್ದಿದೆ. ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದ್ದೇ ಅವಘಡಕ್ಕೆ ಕಾರಣವೆಂದು ಹೇಳಲಾಗುತ್ತಿದ್ದು, ಎ.ಎನ್. ಬಿಲ್ಡರ್ಸ್ ವಿರುದ್ಧ ರಾಮಮೂರ್ತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆನ್ನಿಗಾನಹಳ್ಳಿ (ವಾರ್ಡ್ ನಂ.50) ವ್ಯಾಪ್ತಿಯಲ್ಲಿರುವ ಡಾಕ್ಟರ್ಸ್ ಬಡಾವಣೆಯ 2ನೇ ಅಡ್ಡರಸ್ತೆಯಲ್ಲಿ 'ಸನ್‌ಶೈನ್' ಅಪಾರ್ಟ್‌ಮೆಂಟ್ ಸಮುಚ್ಚಯ ಹೆಸರಿನಲ್ಲಿ ಕಟ್ಟಡ ನಿರ್ಮಿಸಲಾಗಿತ್ತು. ಕಟ್ಟಡದ ಎಂಟು ಫ್ಲ್ಯಾಟ್‌ಗಳಲ್ಲಿ ಜನರು ವಾಸವಿದ್ದರು. ಕೆಲ ದಿನಗಳ ಹಿಂದಷ್ಟೇ ಕಟ್ಟಡದಲ್ಲಿ ಬಿರುಕು ಕಾಣಿಸಿಕೊಂಡು, ಸ್ವಲ್ಪ ಪ್ರಮಾಣದಲ್ಲಿ ವಾಲಿತ್ತು.

ಆತಂಕಗೊಂಡ ಎಲ್ಲ ನಿವಾಸಿಗಳು, ಫ್ಲ್ಯಾಟ್ ಖಾಲಿ ಮಾಡಿದ್ದರು. ನಿಧಾನವಾಗಿ ವಾಲುತ್ತಿದ್ದ ಕಟ್ಟಡ, ಗುರುವಾರ ಮಧ್ಯಾಹ್ನ ಏಕಾಏಕಿ ಕುಸಿದು ಬಿದ್ದಿದ್ದು, ಫ್ಲ್ಯಾಟ್‌ಗಳಲ್ಲಿ ಯಾರೂ ಇಲ್ಲ-ದಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ.

'ಎ.ಎನ್. ಬಿಲ್ಡರ್ಸ್‌ನ ಆಯೇಷಾ ಬೇಗ್, ಮೊಹಮ್ಮದ್ ಆಸಿಫ್ ಹಾಗೂ ಮೊಹಮ್ಮದ್ ಇಯಾಸುದ್ದೀನ್ ಎಂಬುವರು ಜಂಟಿಯಾಗಿ ಕಟ್ಟಡ ನಿರ್ಮಿಸಿದ್ದರು. ಕಟ್ಟಡ ನಿರ್ಮಾಣದ ವೇಳೆ ಯಾವುದೇ ನಿಯಮಗಳನ್ನು ಪಾಲಿಸಿರಲಿಲ್ಲ. ಬಿಬಿಎಂಪಿ ಅಧಿಕಾರಿಗಳು ನೀಡಿರುವ ದೂರು ಆಧರಿಸಿ ಮೂವರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳ-ಲಾಗಿದೆ' ಎಂದು ಪೊಲೀಸ್ ಅಧಿಕಾರಿ-ಯೊಬ್ಬರು ಹೇಳಿದರು.

'ಪಿಲ್ಲರ್‌ಗಳಲ್ಲಿ ಬಿರುಕು ಕಾಣಿಸಿಕೊಂಡು ಇಡೀ ಕಟ್ಟಡ ಕುಸಿದಿತ್ತು. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಲಾಯಿತು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು, ಕಟ್ಟಡದ ಅವಶೇಷಗಳಡಿ ಯಾರಾದರೂ ಸಿಲುಕಿದ್ದಾರಾ? ಎಂಬುದನ್ನು ಹುಡುಕಾಡಿದರು. ಯಾರು ಇಲ್ಲವೆಂಬುದು ಗೊತ್ತಾಗುತ್ತಿದ್ದಂತೆ ನಿಟ್ಟುಸಿರು ಬಿಟ್ಟೆವು' ಎಂದೂ ತಿಳಿಸಿದರು.

'ಎಂಟು ವರ್ಷಗಳ ಹಿಂದಷ್ಟೇ ಕಟ್ಟಡವನ್ನು ನಿರ್ಮಿಸಲಾಗಿತ್ತು. ಕಟ್ಟಡದ ಗುಣಮಟ್ಟ ಉತ್ತಮವಾಗಿ-ರಲಿಲ್ಲ. ಹೀಗಾಗಿ, ಎಂಟೇ ವರ್ಷದಲ್ಲೇ ಬಿರುಕು ಕಾಣಿಸಿಕೊಂಡು ಕುಸಿದು ಬಿದ್ದಿದೆ. ಕಾನೂನು ಬಾಹಿರವಾಗಿ ಕಟ್ಟಡ ನಿರ್ಮಿಸಿದ್ದ ಎ.ಎನ್. ಬಿಲ್ಡರ್ಸ್‌ನ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಆರೋಪಿಗಳನ್ನು ವಿಚಾರಣೆ ನಡೆಸಿದ ಬಳಿಕವೇ ಮತ್ತಷ್ಟು ಮಾಹಿತಿ ಸಿಗಲಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದೂ ಹೇಳಿದರು.

ಶ್ವಾನ ರಕ್ಷಣೆ: ಕುಸಿದು ಬಿದ್ದ ಕಟ್ಟಡದ ಫ್ಲ್ಯಾಟ್‌ನಲ್ಲಿ ಶ್ವಾನವೊಂದು ಸಿಲುಕಿಕೊಂಡಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ, ಫ್ಲ್ಯಾಟ್‌ನೊಳಗೆ ಹೋಗಿ ಶ್ವಾನವನ್ನು ರಕ್ಷಿಸಿ ಹೊರಗೆ ತಂದರು. ಅದನ್ನು ಪಡೆದ ಮಾಲೀಕರು, ಸಿಬ್ಬಂದಿ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.



ಕಸ್ತೂರಿನಗರದ ಡಾಕ್ಟರ್ಸ್ ಬಡಾವಣೆಯಲ್ಲಿ ಕುಸಿದಿರುವ ಕಟ್ಟಡ – ಪ್ರಜಾವಾಣಿ ಚಿತ್ರ

ಅಕ್ಕ–ಪಕ್ಕದ ಕಟ್ಟಡ ಸದೃಢತೆ ಬಗ್ಗೆಯೂ ಸಮೀಕ್ಷೆ

ಕುಸಿತಗೊಂಡ ಕಟ್ಟಡದ ಸುತ್ತಮುತ್ತಲಿನ ಕಟ್ಟಡಗಳ ದೃಢತೆ, ವಾಸ ಯೋಗ್ಯದ ಬಗ್ಗೆ ನುರಿತ ಸ್ಟ್ರಕ್ಚರಲ್ ಎಂಜಿನಿಯರ್‌ಗಳನ್ನು ಒಳಗೊಂಡ ಪ್ರತಿಷ್ಠಿತ ಸಂಸ್ಥೆ ಮೂಲಕ ಸಮೀಕ್ಷೆ ನಡೆಸಿ ವರದಿ ನೀಡಲು ಜಂಟಿ ಆಯುಕ್ತರಿಗೆ ಮತ್ತು ಮುಖ್ಯ ಎಂಜಿನಿಯರ್‌ಗೆ ಸೂಚನೆ ನೀಡಲಾಗಿದೆ ಎಂದು ಗೌರವ್ ಗುಪ್ತ ಹೇಳಿದರು.

ಮಣ್ಣಿನ ಪರೀಕ್ಷೆ ನಡೆಸಬೇಕು. ಕಟ್ಟಡ ವಾಸಯೋಗ್ಯ ಅಲ್ಲದಿದ್ದರೆ ಕೂಡಲೇ ತೆರವುಗೊಳಿಸಬೇಕು. ಯಾವುದೇ ಕಟ್ಟಡದಲ್ಲಿ ನಿಯಮ ಬಾಹಿರವಾಗಿ ಅನಧಿಕೃತ ಮಹಡಿ ನಿರ್ಮಿಸಿಕೊಂಡಿರುವುದು ದೃಢಪಟ್ಟಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲು ಸೂಚನೆ ನೀಡಲಾಗಿದೆ ಎಂದರು.

ಬಿದ್ದಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿ ಆರಂಭಿಸಲಾಗಿದೆ ಎಂದು ಹೇಳಿದರು.

ಮೂರು ಅಂತಸ್ತಿಗೆ ಅನುಮತಿ ಕಟ್ಟಿದ್ದು ನಾಲ್ಕು ಅಂತಸ್ತು

'ಮೂರು ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆದು, ನಾಲ್ಕು ಅಂತಸ್ತಿನ ಕಟ್ಟಡ ನಿರ್ಮಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, 'ಆಯೆಷಾ ಬೇಗ್, ಮೊಹಮ್ಮದ್ ಆಸಿಫ್ ಮತ್ತು ಮೊಹಮ್ಮದ್ ಇಯಾಸುದ್ದೀನ್ ಎಂಬುವರು ಜಂಟಿಯಾಗಿ 40/80 ಅಡಿ ಅಳತೆಯಲ್ಲಿ ಸನ್‌ಶೈನ್ ಅಪಾರ್ಟ್‌ಮೆಂಟ್ ಹೆಸರಿನಲ್ಲಿ ಎಂಟು ಫ್ಲ್ಯಾಟ್‌ಗಳನ್ನು ಒಳಗೊಂಡ ಮನೆ ನಿರ್ಮಿಸಿದ್ದಾರೆ. 2012–13ನೇ ಸಾಲಿನಲ್ಲಿ ಮೂರು ಅಂತಸ್ತಿನ ಕಟ್ಟಡಕ್ಕೆ ಅನುಮತಿ ಪಡೆಯಲಾಗಿದೆ. ಆದರೆ, ನಾಲ್ಕು ಅಂತಸ್ತಿನ ಕಟ್ಟಡ ಮತ್ತು ಅದರ ಮೇಲೊಂದು ಟೆಂಟ್ ನಿರ್ಮಿಸಲು ಸಿದ್ಧತೆ ನಡೆಸಲಾಗಿತ್ತು' ಎಂದು ಹೇಳಿದರು.

'ಕೆರೆ ಜಾಗದಲ್ಲಿ ಕಟ್ಟಡ ನಿರ್ಮಿಸಿದ್ದರಿಂದ ಅನಾಹುತವಾಗಿದೆ ಮತ್ತು ಸ್ವಾಧೀನಾನುಭವ ಪತ್ರ ಪಡೆಯದೆ ವಾಸಕ್ಕೆ ನೀಡಲಾಗಿದೆ ಎಂಬ ಆರೋಪಗಳೂ ಇವೆ. ಮಣ್ಣು ಪರೀಕ್ಷೆ ನಡೆಸಿಯೇ ಕಟ್ಟಡ ನಿರ್ಮಿಸಬೇಕಾಗುತ್ತದೆ. ಆದರೆ, ಅದ್ಯಾವುದನ್ನು ಮಾಡಿದಂತೆ ಕಾಣಿಸುತ್ತಿಲ್ಲ ಮತ್ತು ಕಳಪೆ ಕಾಮಗಾರಿಯಿಂದಲೇ ಕಟ್ಟಡ ಬಿದ್ದಿದೆ ಎಂದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಕೆರೆ ಜಾಗದಲ್ಲಿ ಕಟ್ಟಡ ಇರುವ ಬಗ್ಗೆ ಸ್ಥಳೀಯರು ದೂರು ಕೊಟ್ಟಿದ್ದರೂ ನಿರ್ಲಕ್ಷ್ಯ ವಹಿಸಿದ ಅಧಿಕಾರಿ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದರು.

'ಸ್ವಾಧೀನಾನುಭವ ಪತ್ರ ಪಡೆಯದಿದ್ದರೆ ವಿದ್ಯುತ್ ಮತ್ತು ನೀರಿನ ಸಂಪರ್ಕ ದೊರೆಯುವುದಿಲ್ಲ. ಅಕ್ರಮವಾಗಿ ವಿದ್ಯುತ್ ಮತ್ತು ನೀರಿನ ಸಂಪರ್ಕ ಪಡೆದಿದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಅಕ್ರಮವಾಗಿ ಸಂಪರ್ಕ ನೀಡಿದ್ದರೆ ಸಂಬಂಧಪಟ್ಟ ಅಧಿಕಾರಿಯ ವಿರುದ್ಧವೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳ-ಲಾಗುವುದು' ಎಂದು ಹೇಳಿದರು.

ರಾಜ್ಯದ 73 ಇನ್‌ಸ್ಪೆಕ್ಟರ್ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 73 ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಪೊಲೀಸ್ ಸಿಬ್ಬಂದಿ ಮಂಡಳಿ ಗುರುವಾರ ಆದೇಶ ಹೊರಡಿಸಿದೆ.

ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ವರ್ಗಾವಣೆಯಾದವರು; ಕೆ.ಟಿ. ನಾಗರಾಜು; ಸಂಪಿಗೆಹಳ್ಳಿ ಠಾಣೆ, ಎಂ. ಪ್ರವೀಣ್; ಚಿಕ್ಕಜಾಲ, ಪ್ರಭು ಗಂಗನಹಳ್ಳಿ; ಸಿಸಿಬಿ, ಮನೋಜ್ ಹೂವಳೆ; ಚಂದ್ರಾಲೇಔಟ್, ಬ್ರಿಜೇಶ್ ಮ್ಯಾಥ್ಯೂ; ಸರಸ್ವತಿನಗರ ಹೊಸ ಠಾಣೆ, ಆರ್.ಜಿ. ರವಿಕುಮಾರ್; ಬ್ಯಾಡರಹಳ್ಳಿ, ಟಿ. ವೆಂಕಟೇಶ್; ಕುಮಾರಸ್ವಾಮಿ ಎಂ.ಎಲ್. ಚೇತನ್‌ಕುಮಾರ್; ಕಲಾಸಿಪಾಳ್ಯ ಠಾಣೆ, ಸಂಗನಗೌಡ; ಸಿಟಿ ಮಾರ್ಕೆಟ್ ಸಂಚಾರ, ಎ.ಕೆ. ರಕ್ಷಿತ್; ಕೆಂಪೇಗೌಡನಗರ, ಕೆ.ವೈ. ಪ್ರವೀಣ್; ಕಾಟನ್‌ಪೇಟೆ, ಬಿ.ಆರ್. ಜಗದೀಶ್; ರಾಜಗೋಪಾಲನಗರ, ಟಿ. ವೆಂಕಟೇಶ್; ಕುಮಾರಸ್ವಾಮಿ ಲೇಔಟ್, ಆರ್. ಸಂತೋಷ್ ರಾಮ್; ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ, ಶಾಂತರಾಮ್; ವೈಟ್‌ಫೀಲ್ಡ್, ಎಂ.ಎಸ್. ರವಿ; ಶೇಷಾದ್ರಿಪುರ, ವಿ.ಎಸ್. ಸೀಮಾ; ಹಲಸೂರು ಸಂಚಾರ ಠಾಣೆ, ಜಿ.ಕೆ. ಶಂಕರ್‌ನಾಯಕ್; ಬ್ಯಾಟರಾಯನಪುರ.

ಗುಂಡು ಹಾರಿಸಿಕೊಂಡು ಕಾಫಿ ಬೆಳೆಗಾರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆ ಬನವಾಸೆ ಗ್ರಾಮದ ಕಾಫಿ ಬೆಳೆಗಾರ ಬಸವಲಿಂಗಪ್ಪ (70) ಗುರುವಾರ ಸಂಜೆ ಬಂದೂಕಿನಿಂದ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಉತ್ತಮ ಕಾಫಿ ಬೆಳೆಗಾರರೂ, ದಾನಿಗಳೂ ಆಗಿದ್ದ ಅವರು ಇತ್ತೀಚೆಗೆ ನರ ದೌರ್ಬಲ್ಯ ಹಾಗೂ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ.

ಸುದ್ದಿ 2 ನಿಮಿಷ

ದಸರಾಗೆ ಒಂದು ಸಾವಿರ ಹೆಚ್ಚುವರಿ ಬಸ್

ಬೆಂಗಳೂರು: ದಸರಾ ಅಂಗವಾಗಿ ರಾಜ್ಯದ ವಿವಿಧೆಡೆ ಸಂಚರಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ಇದೇ 13ರಿಂದ 21ರವರೆಗೆ ಒಂದು ಸಾವಿರ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಿದೆ.

ಧರ್ಮಸ್ಥಳ, ಕುಕ್ಕೆ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ಮೈಸೂರು, ಮಡಿಕೇರಿ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್, ತಿರುವನಂತಪುರ, ಚೆನ್ನೈ, ಕೊಯಮತ್ತೂರು, ಪುಣೆ ಸೇರಿದಂತೆ ವಿವಿಧ ಸ್ಥಳಗಳಿಗೆ ಹೆಚ್ಚುವರಿ ಬಸ್‌ಗಳು ಕಾರ್ಯಾಚರಣೆ ನಡೆಸಲಿವೆ.

ಪ್ರಯಾಣ ದರಗಳಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ. ನಿಗಮದ ವೆಬ್‌ಸೈಟ್ www.ksrtc.karnataka.gov.in ಹಾಗೂ ಕರ್ನಾಟಕ ಮತ್ತು ಅಂತರ ರಾಜ್ಯದಲ್ಲಿರುವ ಗಣಕೀಕೃತ ಬುಕಿಂಗ್ ಕೌಂಟರ್‌ಗಳಲ್ಲಿ ಮುಂಗಡ ಆಸನ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಕೇಂದ್ರ ಕಾರಾಗೃಹದಲ್ಲಿ ಸಾವು ಕೈದಿಗಳ ದಿಢೀರ್ ಪ್ರತಿಭಟನೆ?

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿ ಆನಂದ್ (45) ಎಂಬುವರು ಹೃದಯಾಘಾತದಿಂದ ಗುರುವಾರ ಬೆಳಿಗ್ಗೆ ಮೃತಪಟ್ಟಿದ್ದು, ಇದರಿಂದ ಆತಂಕಗೊಂಡ ಜೈಲಿನ ಕೈದಿಗಳು ದಿಢೀರ್ ಪ್ರತಿಭಟನೆ ನಡೆಸಿದರೆಂದು ಗೊತ್ತಾಗಿದೆ.

'ಜೈಲಿನ ಆವರಣದಲ್ಲಿ ಸೇರಿದ್ದ ಕೈದಿಗಳು, ಆಕ್ರೋಶ ಹೊರಹಾಕಿದರು. ಸ್ಥಳಕ್ಕೆ ಜೈಲಿನ ಹಿರಿಯ ಅಧಿಕಾರಿಗಳನ್ನು ಕರೆಸಿ ಮನವಿ ಸಲ್ಲಿಸಿದರು' ಎಂಬುದಾಗಿ ಮೂಲಗಳು ಹೇಳಿವೆ.

'ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ಮೂಲದ ಆನಂದ್ ಅವರಿಗೆ ಜೈಲಿನಲ್ಲಿ ಸೂಕ್ತ ಪ್ರಾಥಮಿಕ ಚಿಕಿತ್ಸೆ ಸಿಗಲಿಲ್ಲ. ಜೈಲಿನಲ್ಲಿರುವ ವೈದ್ಯಕೀಯ ವ್ಯವಸ್ಥೆ ಸರಿ ಇಲ್ಲದಿರುವುದೇ ಈ ಸಾವಿಗೆ ಕಾರಣ' ಎಂಬುದಾಗಿ ಕೈದಿಗಳು ಆರೋಪಿಸಿದರು.'

'ಕೆಲ ತಿಂಗಳ ಹಿಂದಷ್ಟೇ ಇಬ್ಬರು ಕೈದಿಗಳು ವೈದ್ಯಕೀಯ ಚಿಕಿತ್ಸೆ ಸಿಗದೇ ಮೃತಪಟ್ಟರು. ಈಗ ಆನಂದ್ ಸಹ ತೀರಿಕೊಂಡಿದ್ದಾರೆ. ಇತರೆ ಕೈದಿಗಳಿಗೆ ಆತಂಕ ಶುರುವಾಗಿದ್ದು, ಜೀವ ಭಯವಿದೆ. ಜೈಲಿನ ವೈದ್ಯಕೀಯ ವ್ಯವಸ್ಥೆಯನ್ನು ಕೂಡಲೇ ಸುಧಾರಿಸಬೇಕು. ಸದ್ಯ ಇರುವ ಜೈಲಿನ ಅಧಿಕಾರಿಗಳು ಹಾಗೂ ವೈದ್ಯರನ್ನು ಅಮಾನತು ಮಾಡಿ, ಹೊಸಬರನ್ನು ನೇಮಿಸಬೇಕು' ಎಂಬುದಾಗಿ ಕೈದಿಗಳು ಒತ್ತಾಯಿಸಿದರು' ಎಂದೂ ಮೂಲಗಳು ಹೇಳಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

I, **K. L. Santosh**, the authorized signatory of **KMK Developers Private Limited**, a private limited company incorporated under the Companies Act, 1956, having its registered office at No.510, Outer Ring Road, HRBR Layout, 2nd Block, Kalyannagar Bengaluru-560043 Karnataka do hereby intimate the general public that the below mentioned original deeds/ documents pertaining to the converted land bearing Survey No.107/2 measuring 1 acre 6 guntas situated at Kumbena Agrahara Village, Bidarahalli Hobli, Bengaluru East Taluk have been lost/misplaced:

1) Confirmation Deed dated 09-10-2014, executed by Majid Moula in favour of Smt. Kanakamma, registered before the Senior Sub-Registrar, Shivajinagar (Bidarahalli) as Doc. No. BDH-1-01956-2014-15 and stored in CD. No. BDHD 113.
2) General Power of Attorney dated 22-03-1995 executed by Majid Moula and others in favour of Shamanna.

If any person/s are in possession of the aforesaid original Deeds, she/he/they shall return the same to the undersigned.

Sd/- **K. L. Santosh**
KMK Developers Pvt. Ltd.
Place :Bengaluru
Date : 07-10-2021

REAL ESTATE SELLING

Agricultural Land Converted

General

FOR SALE 5 Acres of coffee estate with pepper vines in prominent location in coorg. Can be converted home stay, residential, schools etc. #7022723432

Flat

J P Nagar



FLATS available @ Prime Location on 100 feet Road J.P Nagar. INSPIRE: Contact: 9844006667

Malleshwaram

SALE 3 BHK apartment 1750sft Renaissance Park-3, Malleshwaram behind Orion Mall. 2.1 Crores negotiable. 9342139450

House

Basaveshwaranagar

BASAVESHWARA NAGAR 40X60 West North Corner House for Sale, Prime Location University Layout: 9448324477/ 7795163795

Industrial & Factory

General

SALE, KIADB Industrial lands in and around Bengaluru and Tumkur, Kolar, Harohalli Doddaballpur, Devanahalli. 9980333333 vds@khpl.co.in

Multiple Locations

SALE INDUSTRIAL Converted land 3280 sft & 6200 sft near JP Nagar Metro Station & 2,30,868 sft Near Airport 2nd toll adjacent to NH-7. Verna Developers, MG-Road 9353128035/ 9620253180

Residential/ Commercial

Outskirts

SALE: RECENTLY Construction RCC building at Honaganahatti, near Tavarekere, Ground floor 2 BHK+ car parking, 1st Floor 3 BHK+ Kitchen+ water 2900 sft. Rs.65 lakhs (negotiable) Contact: Prakash Gowda- 9972460943, 9448505526

Sites

Magadi Road

SITES AVAILABLE Tavrekere Town attached Magadi Road 7.5 acres Lay-out Ready for Registration contact: 6364105341

Vishweshwariah Layout

"VISVESHWARAIAH LAYOUT 9th Block 30x40 West Facing BDA Site for sale,Good location. Contact: 9845067549"

S.M. VISHWESHWARAIAH Layout 5th Block: 20x30 (North) Site Sale, Near KLE College. Mob: 9060756616, 9845139576

Villas/Bunglows

Thanisandra

SOBHA CITY 5-BHK Semi-furnished Row House Villa For Sale/Lease/Rent @ Sobha City, Behind Manyatha Tech Park-7337676822

DH ಪ್ರಜಾವಾಣಿ Classifieds

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

REAL ESTATE BUYING

Sites

Vishweshwariah Layout

WANTED SITES 30x40, 40x60, 50x80 Nagarbhavi, Vishweshwaraiah Layout, Rajajinagar Housing Cooperative Society, ITI& MPM: 9008418631

RENTAL PROPERTIES

Accommodation Available

Industrial And Factory

RENT, DODDABALLPUR, Industrial sheds 5000, 10000, 20000, 40000 sqft with all Infrastructure, power. Contact: 9900399999

House

RENT: 2 BHK+ 24 hours water Rent- 10,000, Deposit- 30,000 at Tumkur road highway opposite Zindal Hospital. Contact: Bekery Nanjudappa- 9945457601, 9448505526

Accommodation Wanted

Godown

WAREHOUSE/ GODOWN Space Ready to move-in Required For Rent immediately 10,000sft to 50,000sft for Grocery Storage Close to Mysore City (Brokers excuse) 9740803686

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

OPPORTUNITY FOR Retd Officials,Bankers, VRS, NRI, Teachers,Professionals, CAs. Earn Salary+Incentives.Call: 8095301555

General

JOB OPPORTUNITY, for Retired, Men, House wife, Work from home/ office, SSLC, PUC, Degree, in Reputed Company, Age 40-75, Bangalorians only, Earn up to 40000, Call: 9741401834

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Wanted

WANTED BUSINESS DEVELOPMENT MANAGER, Earn more than 1,00,000/ month, Part-time/ Full-time/ Freshers/ Retired. 8660955348

Walk-in

REQUIRED TELE callers Walk-in within a week. If you are proficient in any one of these languages English/ Hindi/ Telugu. to schedule your interview, call Polus Technologies, Chamarajpet, Bangalore - 560018. Mob: 9380703108

ಕ್ಲಾಸಿಫೈಡ್ಸ್ WEEKEND CORNER





EDUCATIONAL

Admission

DIRECT FINAL: LLB (Can Practice) B.Tech/ M.Tech/ Diploma/ B.Pharm/ D.Pharm/ MBA/ BBA/ BCA/ B.Sc (IT, CS)/ B.Com. LIMITED SEATS. Call: 9448460103/ 7093438248.

For Online Classified Booking
Name Change / Education / Property / Job / Services and many more contact
9880856233 | 9886213331
dhclassifieds.com

BUSINESS

Business to Business

Business

WANTED RUNNING Corrugated Box MNFR Unit Seller Consultant. Contact with details on 9481185244/ 9141128148.

INVEST IN MSME to get 12 %interest per annum. contact info@innovativesliding.com

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

PERSONAL

Announcements

I, PULAKARAM GOPI RAJU alias P. GOPI RAJU alias PULAKARAM GOPI alias GOPI .P residing No. 13, 1st Cross, Near Ayyappaswamy Temple, Shabari Nagar, Sahakaranagar Post, Bangalore- 560092 bring to the notice of general public that all the above said are my names. I will use PULAKARAM GOPI RAJU as my full name hereafter and the same is sworn vide affidavit dated 05/10/2021 sworn before notary G.R. Ravichandra Reddy, Bangalore.

Change of Name

I, MOHAMMED ABDULLAH MOLKALMURU REHAMAN, residing at Bengaluru-47, have changed my name as MOHAMMED ABDULLA vide affidavit dated 7/10/2021 before Notary P.C.Ramaiah, Bengaluru

CHANGE OF NAME

I, SUSANNA, Residing at No. 203/36, Sri Nanjundeshwara Nilaya, Behind MTB School, 9th Cross, Lakshmisagar Layout, Mahadevapura, Bangalore-560048, have changed my name to **SUSANNA SAMSON,** vide affidavit dated 07/10/2021, before Notary N. Narayana Swamy, Bangalore. Henceforth I shall be called **SUSANNA SAMSON** only.

I, RAJESH, residing at Bengaluru-60 have changed my name as RAJESH KIVADE, vide affidavit dated 7/10/2021 before Notary P.C.Ramaiah, Bengaluru

Lost

I, MARWAN Bahaj have Lost the Original Degree certificates, Marks Cards and Migration certificates Bearing No. HSC16PH0030 for 1st, 2nd, 3rd and 4th year issued by Dayananda Sagar University, Bangalore. Finder Please Contact:- 9148949938.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.


GM-Advertisement

ಶುಕ್ರವಾರ, ಅಕ್ಟೋಬರ್ 8, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 280 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಮಾಡೆಲಿಂಗ್‌ನಲ್ಲಿ ಯಶಸ್ವಿಯಾಗಿ ಚಂದನವನ ಪ್ರವೇಶಿಸಿದ ಸೂರಜ್ ಗೌಡ, 'ನಿನ್ನ ಸನಿಹಕೆ'ಯಲ್ಲಿ ನಟನೆ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ.



ಸಂಖ್ಯೆ-ಸುದ್ದಿ: ದೇಶದಲ್ಲಿ ಶಿಕ್ಷಣದ ಸ್ಥಿತಿಗತಿ
ಪ್ರಥಮ ದರ್ಜೆ ಕ್ರಿಕೆಟ್‌ಗೆ ಅಭಿಮನ್ಯು ಮಿಥುನ್ ವಿದಾಯ 14
ಮೇನಕಾ, ವರುಣ್ ಗಾಂಧಿ, ಸ್ವಾಮಿಗೆ ಕೊಕ್ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,677 ▲	17,790 ▲	₹48,330 (ಬೆಂಗಳೂರು)	₹62,600 (ಬೆಂಗಳೂರು)	74.79 ▲

ನಿರಂತರ ಸದೃಢ ಆರೋಗ್ಯಕ್ಕಾಗಿ
SDM AYURVEDA PHARMACY
ಚ್ಯವನಪ್ರಾಶ ಲೇಹ
ತಯಾರಕರು ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ, ಉಡುಪಿ
Ph: 0820-2520852, 8970977513

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4295/-gm
ಬೆಳ್ಳಿ ₹ 57,000/- *CA
ಚಿಕ್ಕಪೇಟೆ: 41300355

ಮಳೆಯಿಂದ ಗೋಡೆ ಕುಸಿದು ಒಬ್ಬನ ಸಾವು 6

ವಿಜಯೇಂದ್ರ ಆಪ್ತ ಉಮೇಶ್ ಮನೆಯಿಂದ ಮೂಟೆಗಟ್ಟಲೆ ದಾಖಲೆ ವಶ

ಬಿಎಸ್‌ವೈ ಸುತ್ತ ಐಟಿ ಬಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ, ಮುಖ್ಯಮಂತ್ರಿ ಸಚಿವಾಲಯದ ಸಿಬ್ಬಂದಿಯೂ ಆಗಿರುವ ಆಯನೂರು ಉಮೇಶ್, 31 ಗುತ್ತಿಗೆದಾರರು ಹಾಗೂ ಐವರು ಲೆಕ್ಕ ಪರಿಶೋಧಕರ ಕಚೇರಿ, ಮನೆ ಮೇಲೆ ದಾಳಿ ನಡೆಸಿರುವ ಆದಾಯ ತೆರಿಗೆ (ಐ.ಟಿ) ಅಧಿಕಾರಿಗಳು ಶೋಧ ನಡೆಸಿದ್ದಾರೆ.



ಯಡಿಯೂರಪ್ಪ

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಜಲ ಸಂಪನ್ಮೂಲ ಮತ್ತು ಲೋಕೋಪಯೋಗಿ ಇಲಾಖೆಗಳ ಬೃಹತ್ ಕಾಮಗಾರಿಗಳ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ತೆರಿಗೆ ವಂಚನೆ, ಅಕ್ರಮ ಹಣದ ವಹಿವಾಟು ನಡೆಸಿರುವ ಆರೋಪದ ಮೇಲೆ ಐ.ಟಿ ಇಲಾಖೆ ತನಿಖೆ ಆರಂಭಿಸಿದೆ. ಗುರುವಾರ ನಸುಕಿನಲ್ಲಿ ಕಾರ್ಯಾಚರಣೆ ಆರಂಭಿಸಿದ್ದ ಐ.ಟಿ ಇಲಾಖೆಯ ಬೆಂಗಳೂರು ಮತ್ತು ಗೋವಾ ಇಲಾಖೆಯ ಅಧಿಕಾರಿಗಳು, ತಡರಾತ್ರಿಯವರೆಗೂ ಶೋಧ ಮುಂದುವರಿಸಿದ್ದರು.

ಬೆಂಗಳೂರು ನಗರ, ಬೀದರ್, ಬಾಗಲಕೋಟೆ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ 50ಕ್ಕೂ ಹೆಚ್ಚು ಸ್ಥಳಗಳಲ್ಲಿ ಐ.ಟಿ. ಅಧಿಕಾರಿಗಳಿಂದ ಶೋಧ ನಡೆದಿದೆ.

8ನೇ ಪುಟ ನೋಡಿ

ಪಂಚನಾಮೆಗೆ ಸಹಿ ಹಾಕಲು ನಿರಾಕರಣೆ

ಉಮೇಶ್ ನಿವಾಸದ ಮೇಲೆ ಬೆಳಿಗ್ಗೆ 5 ಗಂಟೆಗೆ ದಾಳಿ ನಡೆಸಿದ್ದ ಐ.ಟಿ ಅಧಿಕಾರಿಗಳು, ಸಂಜೆ 4.15ರ ವೇಳೆಗೆ ಶೋಧ ಕಾರ್ಯಾಚರಣೆ ಪೂರ್ಣಗೊಳಿಸಿದ್ದರು. ಆದರೆ, ವಶಕ್ಕೆ ಪಡೆದ ದಾಖಲೆ, ನಗದು, ಚಿನ್ನಾಭರಣ ಮತ್ತಿತರ ವಿವರಗಳನ್ನು ಒಳಗೊಂಡ ಪಂಚನಾಮೆ ವರದಿಗೆ ಸಹಿ ಮಾಡಲು ಉಮೇಶ್ ಒಪ್ಪಲಿಲ್ಲ.

ಅಧಿಕಾರಿಗಳು ಪರಿ ಪರಿಯಾಗಿ ತಿಳಿ ಹೇಳಿದರೂ ಉಮೇಶ್ ಮಣಿಯಲಿಲ್ಲ. ಸಹಿ ಹಾಕಲು ನಿರಾಕರಿಸಿದ್ದರಿಂದ ಕಾರ್ಯಾಚರಣೆ ಅಂತ್ಯಗೊಳಿಸುವುದು ವಿಳಂಬವಾಗಿತ್ತು. ಮೂವರು ಅಧಿಕಾರಿಗಳ ತಂಡ ತಡರಾತ್ರಿಯವರೆಗೂ ಉಮೇಶ್ ಬಳಿ ಸಹಿ ಪಡೆಯಲು ಪ್ರಯತ್ನ ನಡೆಸಿತ್ತು.



ಆಯನೂರು ಉಮೇಶ್

ದಾಳಿಗೊಳಗಾದ ಕಂಪನಿಗಳು

ಉಪ್ಪಾರ್ ಕನ್‌ಸ್ಟ್ರಕ್ಷನ್ಸ್
ಶಂಕರನಾರಾಯಣ ಕನ್‌ಸ್ಟ್ರಕ್ಷನ್ಸ್
ಶ್ರೀನಿವಾಸ ಕನ್‌ಸ್ಟ್ರಕ್ಷನ್
ಸ್ಟಾರ್ ಇನ್‌ಫ್ರಾ
ಅಮೃತಾ ಕನ್‌ಸ್ಟ್ರಕ್ಷನ್ಸ್

ಪ್ರಮುಖ ಗುತ್ತಿಗೆದಾರರು: ಡಿ.ವೈ. ಉಪ್ಪಾರ್, ಜಿ. ಶಂಕರ್, ಹನುಮಂತ, ಜಯಂತ್ ಶೆಟ್ಟಿ, ಸ್ಟಾರ್ ಚಂದ್ರು, ವೆಂಕಟೇಶ್ವರ ರಾವ್, ಎಂ.ಶ್ರೀನಿವಾಸ (ಕೊಪ್ಪಳ), ಎಸ್. ಎಸ್. ಆಲೂರು (ವಿಜಯಪುರ),- ಗೋಪಾಲ, ರಾಜು

ಉಪ್ಪಾರ್ ಸುತ್ತ ತನಿಖೆ

ಡಿ.ವೈ. ಉಪ್ಪಾರ್ ಜಲ ಸಂಪನ್ಮೂಲ ಇಲಾಖೆಯಲ್ಲಿ ಸಾವಿರಾರು ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳ ಗುತ್ತಿಗೆ ಪಡೆದಿದ್ದಾರೆ. ಮಳೆಗಾಲದಲ್ಲೂ ಕಾಲುವೆಗಳ ನಿರ್ಮಾಣ, ದುರಸ್ತಿ ಕಾಮಗಾರಿಗಳನ್ನು ನಡೆಸುವಂತೆ ಉಪ್ಪಾರ್ ಒಡೆತನದ ಕಂಪನಿಗಳಿಗೆ ಗುತ್ತಿಗೆ ನೀಡಲಾಗಿತ್ತು. ದಾಳಿಗೊಳಗಾದ ಹಲವು ಗುತ್ತಿಗೆದಾರರು ಉಪ್ಪಾರ್ ನಿಕಟವರ್ತಿಗಳಾಗಿದ್ದು, ಅವರ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿರುವ ಶಂಕೆ ಇದೆ ಎಂದು ಮೂಲಗಳು ತಿಳಿಸಿವೆ.

ಲಖಿಂಪುರ ಹಿಂಸೆ: ಆರೋಪಿಗಳ

ವಿವರ ಕೇಳಿದ ಸುಪ್ರೀಂ ಕೋರ್ಟ್

ಮಾಹಿತಿ ಸಲ್ಲಿಕೆಗೆ ಉತ್ತರ ಪ್ರದೇಶ ಸರ್ಕಾರಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಲಖಿಂಪುರ-ಖೇರಿಯಲ್ಲಿ ಕಳೆದ ಭಾನುವಾರ ನಡೆದ 'ಎಂಟು ಮಂದಿಯ ಕೊಲೆ' ಪ್ರಕರಣದ ಆರೋಪಿಗಳು ಯಾರು ಮತ್ತು ಅವರನ್ನು ಬಂಧಿಸಲಾಗಿದೆಯೇ ಎಂಬ ಮಾಹಿತಿ ಇರುವ ಸ್ಥಿತಿಗತಿ ವರದಿ ಸಲ್ಲಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರ ಪೀಠವು ಶುಕ್ರವಾರದ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಿದೆ.

'ತನಿಖೆ ಸರಿಯಾಗಿ ನಡೆಯುತ್ತಿಲ್ಲ ಎಂಬ ಅಸಮಾಧಾನ ವ್ಯಕ್ತವಾಗಿದೆ. ಯಾರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ, ಅವರನ್ನು ಬಂಧಿಸಲಾಗಿದೆಯೇ ಎಂಬ ಮಾಹಿತಿ ಬೇಕಾಗಿದೆ' ಎಂದು ಉತ್ತರ ಪ್ರದೇಶದ ಪರವಾಗಿ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಗರಿಮಾ ಪ್ರಸಾದ್ ಅವರಿಗೆ ಪೀಠವು ಹೇಳಿತು.



ಭಾನುವಾರ ನಡೆದ ಎಂಟು ಮಂದಿಯ ಹತ್ಯೆಗೆ ಸಂಬಂಧಿಸಿ ನ್ಯಾಯಾಲಯವು ಸ್ವಯಂಪ್ರೇರಿತವಾಗಿ ಬುಧವಾರ ದೂರು ದಾಖಲಿಸಿಕೊಂಡಿತು. ಇದನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಎಂದು ಪರಿಗಣಿಸುವಂತೆ ರಿಜಿಸ್ಟ್ರಿಗೆ ತಿಳಿಸಿದೆ. ವಕೀಲರಾದ ಶಿವಕುಮಾರ್ ತ್ರಿಪಾಠಿ ಮತ್ತು ಸಿ.ಎಸ್. ಪಂಡಾ ಅವರು ಪ್ರಕರಣದ ಬಗ್ಗೆ ಅರ್ಜಿಯೊಂದನ್ನು ಸಲ್ಲಿಸಿದ್ದರು. ಈ ಅರ್ಜಿಯಲ್ಲಿ ಸಿಬಿಐ ತನಿಖೆಗೆ ಒತ್ತಾಯಿಸಲಾಗಿದೆ. ವಿಚಾರಣೆ ಶುಕ್ರವಾರ ಮುಂದುವರಿಯಲಿದೆ.

'ತಾಯಿಗೆ ಚಿಕಿತ್ಸೆ ಕೊಡಿ'

ಮೃತ ರೈತ ಲವ್‌ಪ್ರೀತ್ ಸಿಂಗ್ ಅವರ ತಾಯಿಗೆ ತಕ್ಷಣ ಚಿಕಿತ್ಸೆ ಕೊಡಿಸಬೇಕಾಗಿದೆ. ಈ ಚಿಕಿತ್ಸೆಗೆ ನೆರವಾಗುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಬೇಕು ಎಂದು ವಕೀಲರಾದ ಅಮೃತಪಾಲ್ ಸಿಂಗ್ ಖಾಲ್ಸಾ ವಿಚಾರಣೆ ಸಂದರ್ಭದಲ್ಲಿ ಕೋರಿದರು. ಮಗನನ್ನು ಕಳೆದುಕೊಂಡ ತಾಯಿಯು ಆಘಾತಗೊಂಡಿದ್ದಾರೆ ಎಂದರು.

ಈ ವಿಚಾರವನ್ನು ತಕ್ಷಣವೇ ರಾಜ್ಯ ಸರ್ಕಾರದ ಗಮನಕ್ಕೆ ತನ್ನಿ. ಅಗತ್ಯ ವೈದ್ಯಕೀಯ ನೆರವು ಸಿಗುವಂತೆ ನೋಡಿಕೊಳ್ಳಿ ಎಂದು ಪೀಠವು ಗರಿಮಾ ಪ್ರಸಾದ್ ಅವರಿಗೆ ತಿಳಿಸಿತು.

ಇನ್ನಷ್ಟು ಸುದ್ದಿಗಳು 9

ಚಿನಕುರಳಿ
ಪ್ರಕಾಶ್ ಶೆಟ್ಟಿ



ಉಪ ಚುನಾವಣೆ: ಸಜ್ಜನರ, ಭೂಸನೂರಗೆ ಬಿಜೆಪಿ ಟಿಕೆಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಹಾನಗಲ್ ಹಾಗೂ ಸಿಂದಗಿ ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಗೆ ಬಿಜೆಪಿ ಗುರುವಾರ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ.

ಹಾನಗಲ್‌ನಲ್ಲಿ ಮಾಜಿ ಶಾಸಕ ಶಿವರಾಜ ಸಜ್ಜನರ, ಸಿಂದಗಿಯಲ್ಲಿ ಮಾಜಿ ಶಾಸಕ ರಮೇಶ ಭೂಸನೂರ ಅವರನ್ನು ಕಣಕ್ಕಿಳಿಸಿದೆ.

ಸಿಂದಗಿ ಕ್ಷೇತ್ರದಿಂದ ರಮೇಶ ಭೂಸನೂರ ಅವರಿಗೆ ನಿರೀಕ್ಷೆಯಂತೆ ಟಿಕೆಟ್ ದೊರೆತಿದೆಯಾದರೂ, ಹಾನಗಲ್ ಕ್ಷೇತ್ರದಲ್ಲಿ ಸಂಸದ ಶಿವಕುಮಾರ ಉದಾಸಿ ಅಥವಾ ಅವರ ಪತ್ನಿ ರೇವತಿ ಅವರಿಗೆ ಟಿಕೆಟ್ ನೀಡಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ.



ಶಿವರಾಜ ಸಜ್ಜನರ



ರಮೇಶ ಭೂಸನೂರ

8ನೇ ಪುಟ ನೋಡಿ

'ಕೊರೊನಾ: ಚಾಮುಂಡೇಶ್ವರಿ ರಕ್ಷಿಸಲಿ'

ಮೈಸೂರು: 'ಮನುಕುಲಕ್ಕೆ ಬಂದಿರುವ ದೊಡ್ಡ ಗಂಡಾಂತರವಾದ ಕೊರೊನಾದಿಂದ ಎಲ್ಲರನ್ನೂ ಚಾಮುಂಡೇಶ್ವರಿ ಪಾರು ಮಾಡಲಿ' ಎಂದು ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಕೋರಿದರು. ಚಾಮುಂಡಿಬೆಟ್ಟದಲ್ಲಿ ಗುರುವಾರ ಬೆಳಿಗ್ಗೆ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದ ಅವರು, 'ಕಷ್ಟ ಕಾಲದಲ್ಲಿ ದೇವಿಯ ಅಗ್ರಪೂಜೆಯೊಂದಿಗೆ ಆರಂಭವಾದ ಉತ್ಸವ ಸುಲಲಿತವಾಗಿ ನಡೆಯಲಿ. ಎಲ್ಲರಿಗೂ ಒಳಿತು ಮಾಡಲಿ' ಎಂದರು. 6

ಏರುತ್ತಲೇ ಇದೆ ಪೆಟ್ರೋಲ್, ಡೀಸೆಲ್ ದರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೈಸೆಗಳ ಲೆಕ್ಕದಲ್ಲಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸುತ್ತಲೇ ಇವೆ. ಗುರುವಾರ ಪೆಟ್ರೋಲ್ ದರವನ್ನು ಲೀಟರಿಗೆ 30 ಪೈಸೆ ಮತ್ತು ಡಿಸೆಲ್ ದರ ಲೀಟರಿಗೆ 35 ಪೈಸೆಗಳಷ್ಟು ಏರಿಕೆ ಮಾಡಿವೆ. 13

ಕಾಶ್ಮೀರ: ಶಿಕ್ಷಕರು ಸೇರಿ ಮೂವರ ಕೊಂದ ಉಗ್ರರು

ಪ್ರಜಾವಾಣಿ ವಾರ್ತೆ

ಶ್ರೀನಗರ: ಶ್ರೀನಗರ ಮತ್ತು ಬಂಡಿಪೊರಾ ಪ್ರದೇಶದಲ್ಲಿ 48 ತಾಸುಗಳಲ್ಲಿ ಉಗ್ರರು ಮೂವರು ನಾಗರಿಕರನ್ನು ಹತ್ಯೆ ಮಾಡಿದ್ದಾರೆ. ಅವರಲ್ಲಿ ಇಬ್ಬರು ಸರ್ಕಾರಿ ಶಾಲೆಯ ಶಿಕ್ಷಕರು. ಸತೀಂದರ್ ಕೌರ್ ಮತ್ತು ದೀಪಕ್ ಚಂದ್ ಅವರ ಮೇಲೆ ಗುರುವಾರ ಬೆಳಿಗ್ಗೆ 11.15ರ ಹೊತ್ತಿಗೆ ಗುಂಡು ಹಾರಿಸಲಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಆಸ್ಪತ್ರೆ ತಲುಪುವ ಮೊದಲೇ ಮೃತಪಟ್ಟರು.

ಕಾಶ್ಮೀರ ಕಣಿವೆಯಲ್ಲಿ ಕಳೆದ ಐದು ದಿನಗಳಲ್ಲಿ ಏಳು ಮಂದಿಯನ್ನು ಉಗ್ರರು ಗುಂಡಿಟ್ಟು ಕೊಂದಿದ್ದಾರೆ.

ಶ್ರೀನಗರದಲ್ಲಿ ಔಷಧ ಅಂಗಡಿ ನಡೆಸುತ್ತಿದ್ದ ಮಖನ್ ಲಾಲ್ ಬಿಂದ್ರೂ ಅವರನ್ನು ಮಂಗಳವಾರ ಸಂಜೆ ಗುಂಡಿಟ್ಟು ಕೊಲ್ಲಲಾಗಿದೆ. ಔಷಧ ಅಂಗಡಿಯ ಒಳಗೆ ಹತ್ತಿರದಿಂದ ಗುಂಡು ಹಾರಿಸಿ ಅವರ ಹತ್ಯೆ ಮಾಡಲಾಗಿದೆ. ಅದಾಗಿ, ಒಂದು ತಾಸಿನ ಬಳಿಕ ಬಿಹಾರದ ಬೀದಿಬದಿ ವ್ಯಾಪಾರಿ ಒಬ್ಬರನ್ನು ಲಾಲ್ ಬಝಾರ್ ಪ್ರದೇಶದಲ್ಲಿ ಕೊಲ್ಲಲಾಗಿದೆ. ಅದೇ ದಿನ ಬಂಡಿಪೊರಾ ಜಿಲ್ಲೆಯಲ್ಲಿಯೂ ಒಬ್ಬ ನಾಗರಿಕರ ಹತ್ಯೆ ಆಗಿದೆ.

'ಕಾಶ್ಮೀರದ ಮುಸ್ಲಿಮರ ಹೆಸರು ಕೆಡಿಸುವುದು ಉಗ್ರರ ಉದ್ದೇಶ. ಕಾಶ್ಮೀರದಲ್ಲಿ ಬಹಳ ಹಿಂದಿನಿಂದಲೂ ಕೋಮು ಸಾಮರಸ್ಯ ಮತ್ತು ಸಹೋದರತ್ವ ಇದೆ. ಶಿಕ್ಷಕರು ಸೇರಿ ಮುಗ್ಧ ನಾಗರಿಕರ ಹತ್ಯೆಯ ಮೂಲಕ ಇಲ್ಲಿನ ಸಾಮರಸ್ಯ ಕದಡಲು ಉಗ್ರರು ಮುಂದಾಗಿದ್ದಾರೆ' ಎಂದು ಕಾಶ್ಮೀರ ಪೊಲೀಸ್ ಮುಖ್ಯಸ್ಥ ದಿಲ್‌ಬಾಗ್ ಸಿಂಗ್ ಹೇಳಿದ್ದಾರೆ.

ಇನ್ನೊಂದು ಸುದ್ದಿ 11



ಮದುವೆಯ ಖರೀದಿಗಳಿಗಾಗಿ ವಿಶೇಷ ಸೌಲಭ್ಯಗಳು
ಮುಂಗಡವಾಗಿ 5% ರಿಂದ ಪಾವತಿಸುವ ಮೂಲಕ ಆಭರಣಗಳನ್ನು ಕಾಯ್ದಿರಿಸಿ, ಮತ್ತು ಚಿನ್ನದ ದರದಲ್ಲಾಗುವ ಏರಿಳಿತದಿಂದ ಸಂರಕ್ಷಿಸಲ್ಪಡಿ.



ರೂಪಾಯಿ 50,000 ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಪ್ರತಿ ಸ್ಟಡೆಡ್ ಅಥವಾ ವಜ್ರಾಭರಣಗಳ ಖರೀದಿಯೊಂದಿಗೆ ಉಚಿತ ಚಿನ್ನದ ನಾಣ್ಯ ಪಡೆಯಿರಿ.

GOLDEN BLOOM, GOLDEN GLOW
ಆಭರಣ ಖರೀದಿ ಯೋಜನೆಯೊಂದಿಗೆ ನಿಮ್ಮ ಹಣಕ್ಕೆ ಅತ್ಯುತ್ತಮ ಮೌಲ್ಯ ಪಡೆಯಿರಿ.

ಈ ದಂತೇರಾಸ್‌ಗೆ ಚಿನ್ನವನ್ನು ಮುಂಗಡವಾಗಿ ಕಾಯ್ದಿರಿಸುವ ಮೂಲಕ ಹೆಚ್ಚುವರಿಯಾಗಿ ಬೆಳ್ಳಿಯನ್ನು ಉಚಿತವಾಗಿ ಪಡೆಯಿರಿ.

MALABAR FAIR PRICE PROMISE
For Everyone. Everyday. Everywhere.

Brides Of India 2021 ರ ಕ್ಯಾಟಲಾಗ್‌ನ್ನು ಡೌನ್‌ಲೋಡ್ ಮಾಡಲು ಈ QR ಕೋಡನ್ನು ಸ್ಕ್ಯಾನ್ ಮಾಡಿ.

1. ಸಂಪೂರ್ಣ ಪಾರದರ್ಶಕತೆ 2. ಖಚಿತ ಜೀವನಪರ್ಯಂತ ಉಚಿತ ಮೇಯಿಂಟೆನೆನ್ಸ್ 3. ಚಿನ್ನ ವಿನಿಮಯದಲ್ಲಿ ಶೂನ್ಯ ಕಡಿತ 4. 100% BIS 916 ಹಾಲ್‌ಮಾರ್ಕ್ ಹೊಂದಿರುವ ಶುದ್ಧ ಚಿನ್ನ 5. ಪರೀಕ್ಷಿಸಲಾಗಿರುವ ಮತ್ತು ಪ್ರಮಾಣೀಕೃತ ವಜ್ರಗಳು 6. ಬೈಬ್ಯಾಕ್ ಗ್ಯಾರಂಟಿ 7. ಆಭರಣವು ಪೂರಕ ವಿಮೆಗೆ ಒಳಪಡುತ್ತದೆ 8. ನ್ಯಾಯಯುತ ಬೆಲೆಯ ನೀತಿಗಳು 9. ಜವಾಬ್ದಾರಿಯುತ ಮೂಲದ ಉತ್ಪನ್ನಗಳು 10. ಕಾರ್ಮಿಕರಿಗೆ ನ್ಯಾಯಯುತ ಅಭ್ಯಾಸಗಳು

ಮಲಬಾರ್ ಗೋಲ್ಡ್ & ಡೈಮಂಡ್ಸ್
Call: 1800 572 0916 | INDIA | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN

SINGHANIA UNIVERSITY
(Recognized under Section 2(f) of the UGC Act, 1956)
PACHERI BARI, JHUNJHUNU, RAJASTHAN (INDIA). Website: www.singhaniauniversity.ac.in
MISSION : EDUCATION FOR ALL, HEALTHCARE FOR ALL, EMPLOYMENT FOR ALL, CORRUPTION FREE, AUTONOMOUS & MULTI TASKING EDUCATION SYSTEM

SINGHANIA UNIVERSITY INTRODUCES
INTEGRATED UNIVERSITY EDUCATION & SCHOOL EDUCATION WITH MULTI CAREER / MULTI DISCIPLINARY & STUDENT CENTRIC CHOICE BASED EDUCATION

Applications are invited to run our HEALTHCARE CENTER "Mittal Tower, Mahatma Gandhi Road, Bangalore" and "Babu Khan Estate, Hyderabad Bagh, Hyderabad" in revenue sharing basis from Doctors, Healthcare organisations and other interested parties.
FACILITIES - OPD, Medicine, Eye, Dental, Physiotherapy, Pharmacy, Lab, OT etc.
For collaboration mail at : coll@singhaniauniversity.ac.in

SINGHANIA UNIVERSITY HOSPITAL & RESEARCH CENTER

FACULTY OF MEDICINE	FACULTY OF ALLIED & HEALTHCARE PROFESSIONALS
MBBS, MD (All Specialization), MS (All Specialization), D.Pharma, B.Pharma, M.Pharma, BAMS, BHMS, BDS, MDS, Diploma / PG Diploma in Healthcare Education, and other courses	B.Sc/M.Sc (Nursing), Medical Lab Technology (DMLT /BMLT), Radio Imaging Technology (DRIT / BRIT), Physiotherapy (BPT/MPT), Sonography, Dialysis Technician, X-Ray Technician

SINGHANIA UNIVERSITY BOARD OF SECONDARY & SENIOR SECONDARY EDUCATION
SECONDARY / CLASS 10TH — SENIOR SECONDARY / CLASS 10+2 / CLASS 12TH

FACULTIY OF MULTI DISCIPLINARY & MULTI EMPLOYABILITY EDUCATION	FACULTY OF PROFESSIONAL EDUCATION	FACULTY OF RESEARCH	FACULTY OF PUBLIC & GOVERNMENT SECTOR EDUCATION
BA, MA, BSC, MSC, BCA, MCA, BBA, MBA, B.ED, M.ED, B.P.ED, M.P.ED, B.TECH, M.TECH,	LL.B/LL.M (HONS IN General practice, civil practice, criminal practice, litigation practice), Chartered Accountancy	PHD and other courses	This department focus on the preparation for Public /Government sector jobs.

** NOTE : THE STUDENTS CAN CHOOSE ANY COMBINATIONS OF TWO COURSES OF THEIR CHOICE FOR DUAL DEGREE
MODE OF STUDY : *ASSISTED SELF STUDY *BLENDED LEARNING *CONVENTIONAL MODE OF LEARNING
ALL UNDERGRADUATE, POST GRADUATE AND RESEARCH COURSES AVAILABLE. FOR MORE DETAILS VISIT UNIVERSITY WEBSITE

RECRUITMENT: Applications are invited from (Mail your CV at - hr@singhaniauniversity.ac.in)
- MD (General Medicine/pediatrics/ortho/radiology & other), MS (Obs. & Gynae.) or equivalent
- Professionals for Jt. Registrar (Good in IT Skills/Strategy execution/Administrative work)

LEGAL OPINION - (IN PUBLIC INTEREST)
As per law and legal advice, Singhania University is recognized under Section 2(f) of the UGC Act which is a central act passed by the parliament in pursuance to Entry 66 of schedule 7 of the Constitution of India. Only universities recognized under the UGC Act are authorized and empowered to award diploma/degrees and nobody else. As such degree/diploma awarded by SU are recognized under Sections 12 and 22 of the UGC Act and automatically become recognized for all intents and purposes such as recognition under professional council Acts like the NMC Act, Pharmacy Act, INC Act, NCTE Act, AICTE act and all others.
SU is established and recognized under the provisions of the Constitution of India, as such, its legal status is that of constitutional body such as the Courts, Election Commission, CAG, State and Central Government etc. and it's autonomy is protected under Entry 44, List 1 of Schedule 7 of the Constitution of India.
For more information, court judgments and legal opinion, visit the university website and for legal consultancy, write to Legal Consultancy Department, Singhania University (legal@singhaniauniversity.ac.in)

INVITING APPLICATIONS FOR COLLABORATION
HOSPITALS / MEDICAL & PARA MEDICAL INSTITUTES / HEALTHCARE STARTUPS : For clinical training, multi employability & multi disciplinary education, medical assessments, healthcare innovations, research etc. INSTITUTES / COLLEGES / SCHOOLS : For Admissions / Employment oriented training / Assessment etc.
TO APPLY FOR COLLABORATION MAIL AT : COLL@SINGHANIAUNIVERSITY.AC.IN

FOR ADMISSION CALL AT : 8448515516
OR MAIL AT : admission@singhaniauniversity.ac.in

ಐಐಎಸ್‌ಸಿ: ಮುಂದಿನ ವರ್ಷದಿಂದ ವೈದ್ಯಕೀಯ ಶಿಕ್ಷಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ಮುಂದಿನ ವರ್ಷದಿಂದ ವೈದ್ಯಕೀಯ ಕೋರ್ಸ್‌ಗಳನ್ನು ಆರಂಭಿಸಲಿದೆ.

ಐಐಎಸ್‌ಸಿ ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್ ಅವರು ಬುಧವಾರ ನಡೆದ ಸಂಸ್ಥೆಯ ಘಟಿಕೋತ್ಸವದಲ್ಲಿ ಈ ವಿಷಯವನ್ನು ಪ್ರಕಟಿಸಿದರು.

‘ಭಾರತೀಯ ವಿಜ್ಞಾನ ಸಂಸ್ಥೆ ಆರಂಭದಿಂದಲೂ ವಿಜ್ಞಾನ, ಎಂಜಿನಿಯರಿಂಗ್ ಶಿಕ್ಷಣ ಮತ್ತು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. 12 ವರ್ಷಗಳ ಹಿಂದೆ ಸಾಕಷ್ಟು ಅಂತರ್‌ಶಿಸ್ತೀಯ ವಿಭಾಗಗಳನ್ನು ಆರಂಭಿಸಲಾಯಿತು. ಮುಂದಿನ ವರ್ಷ ಮತ್ತೊಂದು ಬದಲಾವಣೆಯನ್ನು ಮಾಡಲಿದ್ದೇವೆ. ಕಳೆದ 100 ವರ್ಷಗಳಲ್ಲಿ ಸಂಸ್ಥೆಯಲ್ಲಿ ವಿಜ್ಞಾನ ಮತ್ತು ಎಂಜಿನಿಯರಿಂಗ್‌ನಲ್ಲಿ ಶ್ರೇಷ್ಠತೆ ಸಾಧಿಸಲಾಗಿದೆ. ಇದೇ ಕ್ಯಾಂಪಸ್‌ನಲ್ಲಿ ಸ್ನಾತಕೋತ್ತರ ವೈದ್ಯಕೀಯ ಶಾಲೆಯನ್ನು ಆರಂಭಿಸುವ ಯೋಜನೆ ಹಮ್ಮಿಕೊಂಡಿದ್ದೇವೆ’ ಎಂದು ಅವರು ಹೇಳಿದರು.

ಕೇಂದ್ರದ ಮಾಜಿ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಅವರು ಮೇ ತಿಂಗಳಿನಲ್ಲಿ ಐಐಎಸ್‌ಸಿ, ಐಐಟಿಗಳು, ಐಸರ್‌ಗಳು ಮತ್ತು ಎನ್‌ಐಟಿಗಳ ನಿರ್ದೇಶಕರ ಸಭೆಯನ್ನು ನಡೆಸಿದಾಗ, ರಾಷ್ಟ್ರೀಯ ಶಿಕ್ಷಣ ನೀತಿ–2020 ಅಂಗವಾಗಿ ಐಐಎಸ್‌ಸಿ ಮತ್ತು ಐಐಟಿ ಕಾನ್ಪುರದಲ್ಲಿ ವೈದ್ಯಕೀಯ ಕೋರ್ಸ್‌ಗಳನ್ನು ಆರಂಭಿಸುವುದಾಗಿ ಪ್ರಕಟಿಸಿದ್ದರು.



ಐಐಎಸ್‌ಸಿ

ಕ್ಯಾಂಪಸ್‌ನಲ್ಲಿ ಬ್ರೈನ್ ಕಂಪ್ಯುಟೇಷನ್, ಡೇಟಾ ವಿಜ್ಞಾನ, ಬಯೋಮೆಡಿಕಲ್ ಸಿಸ್ಟಮ್ ಮತ್ತು ಸಾಧನಗಳು, ಸೈಬರ್ ಸೆಕ್ಯುರಿಟಿ ಅಲ್ಲದೆ, ಭವಿಷ್ಯದ ತಂತ್ರಜ್ಞಾನದ ಪ್ರಗತಿಗಾಗಿ ಅತ್ಯಂತ ಮಹತ್ವದ್ದೆನಿಸಿರುವ ಕ್ವಾಂಟಮ್ ಕಂಪ್ಯೂಟಿಂಗ್ ವಿಷಯದ ಕೋರ್ಸ್ ಮತ್ತು ಸಂಶೋಧನೆ ಕೂಡ ಆರಂಭಿಸಲಾಗುತ್ತದೆ ಎಂದು ರಂಗರಾಜನ್ ತಿಳಿಸಿದರು.

ಅಲ್ಲದೆ, ಕೋಟಕ್ ಎಐ-ಎಂಎಲ್ ಕೇಂದ್ರವನ್ನು ಹೊಸ ಕಟ್ಟಡ ಸಂಕೀರ್ಣದಲ್ಲಿ ಆರಂಭಿಸಲಾಗುತ್ತದೆ. ಇದಕ್ಕೆ ಕೋಟಕ್ ಮಹೀಂದ್ರ ಬ್ಯಾಂಕ್ ನೆರವು ನೀಡಲಿದೆ. ಈ ಕೇಂದ್ರದಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮೆಷಿನ್ ಲರ್ನಿಂಗ್ ಮತ್ತು ವಿತ್ತೀಯ ತಂತ್ರಜ್ಞಾನ ಪರಿಹಾರಗಳ ಕುರಿತು ಸೃಜನಾತ್ಮಕ ಶಿಕ್ಷಣ ಮತ್ತು ಸಂಶೋಧನೆಗಳನ್ನು ನಡೆಸಲಾಗುವುದು ಎಂದು ಅವರು ಹೇಳಿದರು.

ತಾಯಿ– ಮಗುವಿನ ಹತ್ಯೆ: ವ್ಯಾಪಾರದ ಸೋಗಿನ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಗೂರು ಠಾಣೆ ವ್ಯಾಪ್ತಿಯ ಚೌಡೇಶ್ವರಿ ಬಡಾವಣೆಯಲ್ಲಿ ಚಂದ್ರಕಲಾ (40) ಹಾಗೂ ಅವರ ಮಗು ರಾತನ್ಯ (4) ಹತ್ಯೆ ಸಂಬಂಧ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸುತ್ತಿದ್ದಾರೆ.

‘ಮುಖಕ್ಕೆ ಮಾಸ್ಕ್ ಹಾಗೂ ಬೆನ್ನಿಗೆ ಬ್ಯಾಗ್ ಹಾಕಿಕೊಂಡು ಮನೆಗೆ ನುಗ್ಗಿದ್ದ ಆರೋಪಿ, ತಾಯಿ ಹಾಗೂ ಮಗುವನ್ನು ಕೊಂದು ಪರಾರಿಯಾಗಿದ್ದಾನೆ. ಆತ ಯಾರು ಎಂಬುದನ್ನು ಪತ್ತೆ ಮಾಡಲು ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮೃತ ಚಂದ್ರಕಲಾ, ಆಯುರ್ವೇದ ಔಷಧಿಯ ಆನ್‌ಲೈನ್ ಮಾರಾಟದ ವ್ಯಾಪಾರ ಮಾಡುತ್ತಿದ್ದರು. ಈ ಸಂಬಂಧ ಹಲವರನ್ನು ಸಂಪರ್ಕಿಸುತ್ತಿದ್ದರು. ವ್ಯಾಪಾರ ಸೋಗಿನಲ್ಲೇ ಆರೋಪಿ ಮನೆಗೆ ಬಂದು ಕೃತ್ಯ ಎಸಗಿರುವ ಮಾಹಿತಿಯೂ ಇದೆ’ ಎಂದರು.

‘ಬಾಲಬ್ರೂಯಿ’: ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರಂಪರಿಕ ಕಟ್ಟಡಗಳಲ್ಲಿ ಒಂದಾದ ಬಾಲಬ್ರೂಯಿ ಅತಿಥಿಗೃಹದ ಆವರಣದಲ್ಲಿ ‘ಕಾನ್‌ಸ್ಟಿಟ್ಯೂಷನ್ ಕ್ಲಬ್’ ನಿರ್ಮಾಣ ಕುರಿತಂತೆ ಮುಂದಿನ ಆದೇಶದವರೆಗೂ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.


’ಬಾಲಬ್ರೂಯಿ ಅತಿಥಿಗೃಹವನ್ನು ಕಾನ್‌ಸ್ಟಿಟ್ಯೂಷನ್ ಕ್ಲಬ್ ಆಗಿ ಪರಿವರ್ತಿಸುವ ನಿಟ್ಟಿನಲ್ಲಿ, ಆವರಣದಲ್ಲಿನ ಹಳೆಯ ಮರಗಳನ್ನು ತೆರವುಗೊಳಿಸದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ದತ್ತಾತ್ರೇಯ ಟಿ. ದೇವರೆ ಹಾಗೂ ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ಗುರುವಾರ ವಿಚಾರಣೆ ನಡೆಸಿತು.

'ಬಾಲಬ್ರೂಯಿ ಅತಿಥಿಗೃಹದ ಸುತ್ತಲಿನ ಮರಗಳ ಗಣತಿ ನಡೆಸಿ, ಒಂದು ವಾರದೊಳಗೆ ವರದಿ ಸಲ್ಲಿಸಬೇಕು. ಅರ್ಜಿಯ ಮುಂದಿನ ವಿಚಾರಣೆವರೆಗೂ ಕ್ಲಬ್ ನಿರ್ಮಾಣ ವಿಚಾರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು’ ಎಂದು ನ್ಯಾಯಪೀಠ ಆದೇಶಿಸಿದೆ. 'ನ್ಯಾಯಾಲಯದ ಅನುಮತಿ ಇಲ್ಲದೆ ಯಾವುದೇ ಕಾರಣಕ್ಕೂ ಕಟ್ಟಡ ಮತ್ತು ಮರಗಳಿಗೆ ಹಾನಿ ಉಂಟಾಗದಂತೆ ನೋಡಿಕೊಳ್ಳಬೇಕು. ಮರಗಳ ಬಗ್ಗೆ ತೋಟಗಾರಿಕಾ ಇಲಾಖೆ ಪರಿಶೀಲನೆ ನಡೆಸಿ ಮುಂದಿನ ವಿಚಾರಣೆ ವೇಳೆ ವರದಿ ನೀಡಬೇಕು’ ಎಂದೂ ತಾಕೀತು ಮಾಡಿದೆ.

'ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯನ್ನೂ ಈ ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಮಾಡಬೇಕು. ಅವರು ಬಾಲಬ್ರೂಯಿ ಅತಿಥಿ ಗೃಹದ ಮೌಲ್ಯ ಮತ್ತು ಪರಂಪರೆಯನ್ನು ಮಾಪನ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ಸೂಚಿಸಿದೆ.

ವಿಚಾರಣೆಯನ್ನು ನವೆಂಬರ್ 19ಕ್ಕೆ ಮುಂದೂಡಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ









ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅ.8ರಿಂದ 11ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: 8ರಂದು ದೇವರಚಿಕ್ಕನಹಳ್ಳಿ, ಅಕ್ಷಯನಗರ, ಹಿರಂಡಹಳ್ಳಿ, ದೊಡ್ಡತೋಗೂರು, ದೊಡ್ಡನೆಕ್ಕುಂದಿ, ಮಾರತ್ತಹಳ್ಳಿ, ಸಂಜಯನಗರ, 9ರಂದು ಇಸ್ರೊ ಬಡಾವಣೆ, ದೊಡ್ಡಕಲ್ಲಸಂದ್ರ, ಕುಮಾರಸ್ವಾಮಿ ಬಡಾವಣೆ, 11ರಂದು ಎಲೆಕ್ಟ್ರಾನಿಕ್ ಸಿಟಿ, ಕೋಣಪ್ಪನ ಅಗ್ರಹಾರ, ಬಿಟಿಎಂ ಬಡಾವಣೆ 6ನೇ ಹಂತ, ತಲಘಟ್ಟಪುರ, ಹುಳಿಮಾವು, ಎಚ್‌ಎಸ್‌ಆರ್ ಬಡಾವಣೆ (ಬೆಳಿಗ್ಗೆ 10ರಿಂದ ಸಂಜೆ 5), ವಿಜಯನಗರ, ಹೊಸಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ನಾಗರಬಾವಿ, ಬಸವೇಶ್ವರ ನಗರ, ಚಂದ್ರಾ ಬಡಾವಣೆ, ಕಾಮಾಕ್ಷಿಪಾಳ್ಯ, ಸುಂಕದಕಟ್ಟೆ (ಅ.8ರಿಂದ 11 ರವರೆಗೆ).

ವಕೀಲರ ಸಂಘಕ್ಕೆ ಆಡಳಿತ ಅಧಿಕಾರಿ

ಬೆಂಗಳೂರು: ಬೆಂಗಳೂರು ವಕೀಲರ ಸಂಘದ ಆಡಳಿತಾಧಿಕಾರಿಯಾಗಿ ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶಿಸಿದೆ.

ಸಿಎಸ್‌ಆರ್ ನಿಧಿಯಡಿ ಸ್ಥಿರ ಆಸನ ಸೇರಿ ವಿವಿಧ ಸೌಲಭ್ಯ ಒದಗಿಸಲು ಯೋಜನೆ

ಕಸಾಪ: ದಶಕದ ಬಳಿಕ ನವೀಕರಣ

• ವರುಣ ಹೆಗಡೆ



ಕನ್ನಡ ಸಾಹಿತ್ಯ ಪರಿಷತ್ತಿನ ಹೊರನೋಟ – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದ ಹೃದಯ ಭಾಗದಲ್ಲಿರುವ ಶ್ರೀ ಕೃಷ್ಣರಾಜ ಪರಿಷನ್ಮಂದಿರವನ್ನು ದಶಕದ ಬಳಿಕ ನವೀಕರಣಗೊಳಿಸಲು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮುಂದಾಗಿದೆ.

ಪರಿಷತ್ತಿನಲ್ಲಿ ಮೂರು ಸಭಾಂಗಣಗಳಿದ್ದು, ಶ್ರೀ ಕೃಷ್ಣರಾಜ ಪರಿಷನ್ಮಂದಿರವು ನಗರದ ಅತ್ಯಂತ ಹಳೆಯ ಸಭಾಂಗಣಗಳಲ್ಲಿ ಒಂದಾಗಿದೆ. ಇದು 1938ರಿಂದ ಕಾರ್ಯನಿರ್ವಹಿಸುತ್ತಿದೆ. ಕಾಲ ಕಾಲಕ್ಕೆ ಈ ಸಭಾಂಗಣವನ್ನು ನವೀಕರಣ ಮಾಡುತ್ತಾ ಬರಲಾಗಿದೆ. ಹತ್ತು ವರ್ಷಗಳ ಹಿಂದೆ ಪ್ಲೈವುಡ್‌ನಿಂದ ಸಭಾಂಗಣದ ಗೋಡೆಗಳನ್ನು ಅಂದಗೊಳಿಸಲಾಗಿತ್ತು. ಸೀಲಿಂಗ್ ಅನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಬಳಸಿ ಅಂದಗೊಳಿಸಲಾಗಿತ್ತು. ಆದರೆ, ಈಗ ಸಭಾಂಗಣದ ಪ್ಲೈವುಡ್‌ಗಳು ಹಾಳಾಗಿದ್ದು, ಕೆಲವೆಡೆ ಕಿತ್ತು ಹೋಗಿವೆ.

ವೇದಿಕೆಯ ನೆಲ ಹಾಸು ಕೂಡ ಹಾಳಾಗಿದೆ. ಸಭಾಂಗಣದಲ್ಲಿ ಜೋಡಿಸಿದ ಸ್ಥಿರ ಆಸನಗಳು ಇಲ್ಲದಿರುವುದರಿಂದ ಪ್ರೇಕ್ಷಕರ ಸಂಖ್ಯೆಗೆ ಅನುಗುಣವಾಗಿ 160ರಿಂದ 180 ಆಸನಗಳನ್ನು ಅಳವಡಿಸಲಾಗುತ್ತಿತ್ತು. ಈಗ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿಯಲ್ಲಿ ಸಭಾಂಗಣ ನವೀಕರಣ ಮಾಡಿ, ಸ್ಥಿರ ಆಸನಗಳ ಅಳವಡಿಕೆಗೆ ಪರಿಷತ್ತು ಯೋಜನೆ ರೂಪಿಸಿದೆ. ಸಿಎಸ್‌ಆರ್ ನಿಧಿ ಅಡಿಯಲ್ಲಿ ಸಭಾಂಗಣಕ್ಕೆ ಅಗತ್ಯ ಸೌಲಭ್ಯ ಒದಗಿಸಲು ಕೆಲವೊಂದು ಬ್ಯಾಂಕ್‌ಗಳು ಮುಂದೆ ಬಂದಿವೆ.

ಧ್ವನಿ ಸಮಸ್ಯೆ: ಪರಿಷತ್ತು 100 ವರ್ಷಗಳು ಪೂರೈಸಿದ ಸವಿನೆನಪಿಗಾಗಿ ನಿರ್ಮಿಸಲಾಗಿದ್ದ ಶತಮಾನೋತ್ಸವ ಸ್ಮಾರಕ ಭವನವು 2018ರಲ್ಲಿ ಉದ್ಘಾಟನೆಗೊಂಡಿತ್ತು. ₹ 5 ಕೋಟಿ ವೆಚ್ಚದ ಭವನದ ಮೂರನೇ ಮಹಡಿಯಲ್ಲಿ ಸಭಾಂಗಣ ನಿರ್ಮಿಸಿ, ಅಕ್ಕಮಹಾದೇವಿ ಹೆಸರನ್ನು ಇಡಲಾಗಿತ್ತು. ಈ ಸಭಾಂಗಣದಲ್ಲಿಯೂ ಸ್ಥಿರ ಆಸನಗಳಿಲ್ಲ. ಅಲ್ಲಿ 180 ಆಸನಗಳನ್ನು ಹಾಕಬಹುದಾಗಿದೆ. ಈಗ ಸ್ಥಿರ ಆಸನ ಅಳವಡಿಕೆ ಮಾಡಲು ಪರಿಷತ್ತು ಮುಂದಾಗಿದೆ.

ಪ್ರಾರಂಭದಿಂದಲೂ ಈ ಸಭಾಂಗಣದ ಧ್ವನಿ ವ್ಯವಸ್ಥೆಯಲ್ಲಿ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ವೇದಿಕೆಯಲ್ಲಿ ಮಾತನಾಡಿದವರ ಧ್ವನಿಯು ಪ್ರತಿಧ್ವನಿಸುವುದರಿಂದ ಪ್ರೇಕ್ಷಕರಿಗೆ ಕಿರಿಕಿರಿ ಆಗಲಿದೆ. ಈ ಸಮಸ್ಯೆಯನ್ನು ಪರಿಹರಿಸಬೇಕೆಂಬ ಒತ್ತಾಯ ಸಾಹಿತ್ಯಾಸಕ್ತರಿಂದ ವ್ಯಕ್ತವಾಗಿತ್ತು. ಈಗ ಆ ಸಮಸ್ಯೆಯನ್ನೂ ಸಿಎಸ್‌ಆರ್ ನಿಧಿಯಿಂದ ಪರಿಹರಿಸಲು ಯೋಜನೆ ರೂಪಿಸಲಾಗಿದೆ.

ಶ್ರೀ ಕೃಷ್ಣರಾಜ ಪರಿಷನ್ಮಂದಿರ ಹಾಗೂ ಅಕ್ಕಮಹಾದೇವಿ ಸಭಾಂಗಣಕ್ಕೆ ದಿನವೊಂದಕ್ಕೆ ₹ 5 ಸಾವಿರ, ಅರ್ಧ ದಿನಕ್ಕೆ ₹ 3 ಸಾವಿರ ಬಾಡಿಗೆಯನ್ನು ಪರಿಷತ್ತು ನಿಗದಿ ಮಾಡಿದೆ. ₹ 2 ಸಾವಿರ ಠೇವಣಿ ಕಟ್ಟಬೇಕಿದೆ.

₹ 1 ಕೋಟಿ ವೆಚ್ಚದಲ್ಲಿ ಯೋಜನೆ

ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡದ ಕೆಲ ಕೊಠಡಿಗಳು ಹಾಗೂ ಸಭಾಂಗಣದ ನವೀಕರಣಕ್ಕೆ ₹ 1 ಕೋಟಿ ವೆಚ್ಚವಾಗಲಿದೆ ಎಂದು ಪರಿಷತ್ತು ಅಂದಾಜಿಸಿದೆ. ಅಧ್ಯಕ್ಷರ ಕೊಠಡಿಯನ್ನೂ ನವೀಕರಣ ಮಾಡಲು ಯೋಜನೆ ರೂಪಿಸಲಾಗಿದೆ. ಪರಿಷತ್ತಿನ ವಜ್ರಮಹೋತ್ಸವ ಕಟ್ಟಡದ ಮೂರನೇ ಮಹಡಿಯಲ್ಲಿರುವ ಕುವೆಂಪು ಸಭಾಂಗಣದಲ್ಲಿ ಚುನಾವಣೆ ಚಟುವಟಿಕೆಗಳು ನಡೆಯುತ್ತಿವೆ. ಹಾಗಾಗಿ, ಕಿರಿದಾದ ಈ ಸಭಾಂಗಣವನ್ನು ನವೀಕರಣ ಮಾಡುತ್ತಿಲ್ಲ. ಇದಕ್ಕೆ ₹2 ಸಾವಿರ ಬಾಡಿಗೆಯನ್ನು ನಿಗದಿ ಮಾಡಲಾಗಿದೆ.



ಪರಿಷತ್ತಿನ ಕಟ್ಟಡವು ತುಂಬಾ ಹಳೆಯದಾಗಿದ್ದು, ಸೋರುತ್ತಿದೆ. ಸಭಾಂಗಣಗಳಲ್ಲಿ ಸ್ಥಿರ ಆಸನಗಳು ಇಲ್ಲ. ಸಿಎಸ್‌ಆರ್ ನಿಧಿಯಡಿ ಕಟ್ಟಡ, ಸಭಾಂಗಣ ನವೀಕರಣ ಮಾಡುತ್ತೇವೆ

ಎಸ್. ರಂಗಪ್ಪ
ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿ



ಸಿಎಸ್‌ಆರ್ ನಿಧಿಯ ಮೂಲಕ ಸಭಾಂಗಣಗಳ ನವೀಕರಣಕ್ಕೆ ಈ ಹಿಂದೆ ಪ್ರಯತ್ನ ನಡೆಸಿದ್ದೆ. ಕಂಪನಿಗಳು ಆಸಕ್ತಿ ತೋರಿರುವುದು ಸಂತಸಕರ

ಮನು ಬಳಿಗಾರ್
ಕಸಾಪ ನಿಕಟಪೂರ್ವ ಅಧ್ಯಕ್ಷ

ಸುದ್ದಿ 2 ನಿಮಿಷ

ಹೈಕೋರ್ಟ್: ವಿಶ್ವಪ್ರಿಯ ಸಂಸ್ಥೆ ಹೂಡಿಕೆದಾರರ ಅರ್ಜಿ ವಿಲೇವಾರಿ

ಬೆಂಗಳೂರು: ತಮಿಳುನಾಡಿನ 'ವಿಶ್ವಪ್ರಿಯ ಫೈನಾನ್ಷಿಯಲ್ ಸರ್ವೀಸಸ್ ಸೆಕ್ಯೂರಿಟೀಸ್' ಸಂಸ್ಥೆಯು, ಠೇವಣಿದಾರರು ಮತ್ತು ಹೂಡಿಕೆದಾರರಿಗೆ ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣವನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಕುರಿತಂತೆ, 'ವಿಶ್ವಪ್ರಿಯ ಇನ್ವೆಸ್ಟರ್ಸ್ ಆ್ಯಂಡ್ ಡಿಪಾಸಿಟರ್ಸ್ ವೆಲ್ಫೇರ್ ಅಸೋಸಿಯೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ಅರ್ಜಿದಾರರ ಪರ ವಕೀಲರು, ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ 13 ಎಫ್‌ಐಆರ್‌ಗಳನ್ನು ಸಿಐಡಿಗೆ ಹಸ್ತಾಂತರಿಸಿ ರಾಜ್ಯ ಸರ್ಕಾರ 2021ರ ಸೆಪ್ಟೆಂಬರ್ 24 ರಂದು ಆದೇಶ ಹೊರಡಿಸಿದೆ. ಹೀಗಾಗಿ ಅರ್ಜಿದಾರರ ಮನವಿ ಈಡೇರಿದ್ದು, ಅರ್ಜಿಯನ್ನು ಇತ್ಯರ್ಥ ಮಾಡಬಹುದು ಎಂದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

'ಹೂಡಿಕೆ ಮೊತ್ತಕ್ಕೆ ವಾರ್ಷಿಕ ಶೇ 10.47ರಷ್ಟು ಹಿಂಪಾವತಿ (ರಿಟರ್ನ್ಸ್) ಮಾಡುವುದಾಗಿ ಭರವಸೆ ನೀಡಿದ್ದರೂ ಹಣ ಹಿಂದಿರುಗಿಸಿಲ್ಲ' ಎಂದು ಆರೋಪಿಸಿ, ವಿಶ್ವಪ್ರಿಯ ಫೈನಾನ್ಷಿಯಲ್ ಸರ್ವೀಸಸ್ ಸೆಕ್ಯೂರಿಟೀಸ್ ಏಜೆನ್ಸಿಯ ಹೂಡಿಕೆದಾರರು ಆರೋಪಿಸಿದ್ದಾರೆ.

ಈ ಕುರಿತು 2020ರ ಡಿಸೆಂಬರ್‌ನಲ್ಲಿ ಜಯನಗರ, ಗಿರಿನಗರ, ಸಿದ್ದಾಪುರ, ವೈಟ್ ಫೀಲ್ಡ್, ಮಲ್ಲೇಶ್ವರ, ಹಲಸೂರು, ಮಾರತ್ತಹಳ್ಳಿ ಠಾಣೆಗಳಲ್ಲಿ ಸಂಸ್ಥೆಯ ವಿರುದ್ಧ ಎಫ್‌ಐಆರ್ ದಾಖಲಾಗಿವೆ.



ದುರ್ಗಾ ಪೂಜೆ: ಷರತ್ತು ಸಡಿಲಿಕೆ

ಬೆಂಗಳೂರು: ಸಾರ್ವಜನಿಕ ಸ್ಥಳದಲ್ಲಿ 4 ಅಡಿ ಎತ್ತರದ ದುರ್ಗಾ ಮೂರ್ತಿಯನ್ನಷ್ಟೇ ಪ್ರತಿಷ್ಠಾಪಿಸಬೇಕು ಎಂಬ ನಿರ್ಬಂಧವನ್ನು ಬಿಬಿಎಂಪಿ ತೆಗೆದಿದೆ.

ಪುಷ್ಪಾಂಜಲಿ ಮತ್ತು ಸಂಧಿ ಪೂಜೆ ವೇಳೆ ಕೋವಿಡ್ ನಿಯಮಗಳನ್ನು ಅನುಸರಿಸಿಕೊಂಡು 50 ಜನರಿಗೆ ಹಂತ-ಹಂತವಾಗಿ ಬರಲು ಅವಕಾಶ ಕಲ್ಪಿಸಿದ್ದು, ಹೀಗೆ ಬರುವ ಒಟ್ಟು ಸಂಖ್ಯೆಗೆ ಯಾವುದೇ ನಿರ್ಬಂಧವಿಲ್ಲ ಎಂದು ಹೇಳಿದೆ.

ಅವಶ್ಯಕತೆ ಅನುಸಾರ, ಒಂದು ವಾರ್ಡಿಗೆ ಅನೇಕ ಮೂರ್ತಿಗಳನ್ನು ಇಡಲು ಅವಕಾಶ ಕಲ್ಪಿಸಿದ್ದು, ವಲಯ ಜಂಟಿ ಆಯುಕ್ತರು ಹಾಗೂ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯಬೇಕು ಎಂದು ಬಿಬಿಎಂಪಿ ತಿಳಿಸಿದೆ.

ಪ್ರಾರ್ಥನಾ ಸಮಯದಲ್ಲಿ ಸಾಂಪ್ರದಾಯಿಕ ವಾದ್ಯಗಳಿಗೆ(ಡಾಕ್ ಮತ್ತು ಡೋಲ್) ಅನುಮತಿಸಲಾಗಿದೆ. ಇನ್ನುಳಿದ ವಿಷಯಗಳ ಬಗ್ಗೆ ಸರ್ಕಾರ ಹೊರಡಿಸಿರುವ ಆದೇಶದಂತೆ ಷರತ್ತುಗಳನ್ನು ಪಾಲಿಸಬೇಕು ಎಂದು ತಿಳಿಸಿದೆ. ದುರ್ಗಾ ಪೂಜೆಗೆ ವಿಧಿಸಿದ್ದ ಷರತ್ತುಗಳಿಗೆ ಆಕ್ಷೇಪ ವ್ಯಕ್ತಪಡಿಸಿ ಸಂಸದ ತೇಜಸ್ವಿ ಸೂರ್ಯ ಅವರು ಬಿಬಿಎಂಪಿಗೆ ಬುಧವಾರ ಪತ್ರ ಬರೆದಿದ್ದರು.



'ಪವಿತ್ರವಸ್ತ್ರ ಅಭಿಯಾನ'ದಲ್ಲಿ ಕೈಮಗ್ಗದ ಉತ್ಪನ್ನಗಳನ್ನು ಜನರು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಚಿತ್ರಕಲಾ ಪರಿಷತ್ತಿನಲ್ಲಿ 'ಕೈಮಗ್ಗ'ದ ಕಲರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಚಿತ್ರಕಲಾ ಪರಿಷತ್ತಿನಲ್ಲಿ ಕೈಮಗ್ಗದ ಬಗೆಬಗೆಯ ಉತ್ಪನ್ನಗಳು ಹಾಗೂ ಕರಕುಶಲ ವಸ್ತುಗಳು ನಗರದ ಜನತೆಯನ್ನು ಸೆಳೆಯುತ್ತಿವೆ.

ಚರಕ, ದೇಸಿ, ಅಖಿಲ ಭಾರತ ಕೈಮಗ್ಗ ಸಂಘಟನೆಗಳ ಒಕ್ಕೂಟ ಹಾಗೂ ಗ್ರಾಮ ಸೇವಾ ಸಂಘವು ಒಟ್ಟಾಗಿ ಹಮ್ಮಿಕೊಂಡಿರುವ 'ಪವಿತ್ರವಸ್ತ್ರ ಅಭಿಯಾನ'ದ ಎರಡನೇ ದಿನವಾದ ಗುರುವಾರ ಕೂಡ ಮಕ್ಕಳು, ವೃದ್ಧರು ಸೇರಿದಂತೆ ವಿವಿಧ ವಯೋಮಾನದವರು ಭೇಟಿ ನೀಡಿ, ಕೈಮಗ್ಗದ ಉತ್ಪನ್ನಗಳನ್ನು ವೀಕ್ಷಿಸಿದರು. ಬಿದಿರಿನ ಬುಟ್ಟಿ, ಹತ್ತಿ ಬಟ್ಟೆಗಳು, ಕೈಮಗ್ಗದಿಂದ ನೇಯ್ದ ಸೀರೆಗಳು ಸೇರಿದಂತೆ ಹಲವು ಉತ್ಪನ್ನಗಳ ಖರೀದಿ ಜೋರಾಗಿತ್ತು.

ಕೈಮಗ್ಗದಿಂದ ನೇಯ್ದ ಖಾದಿ ಸೀರೆಗಳು, ಖಾದಿ ಜುಬ್ಬಾ, ಪೈಜಾಮ, ಲಂಗ-ದಾವಣಿ, ಜಮಖಾನಾ, ಮ್ಯಾಟ್ ಸೇರಿದಂತೆ ವಿವಿಧ ಉತ್ಪನ್ನಗಳು ಮಳಿಗೆಗಳಲ್ಲಿ ಕಾಣಸಿಗುತ್ತವೆ. ₹ 100ನಿಂದ ₹ 10 ಸಾವಿರದ ವರೆಗಿನ ಕೈಮಗ್ಗದ ಉತ್ಪನ್ನಗಳು ಮಳಿಗೆಗಳಲ್ಲಿ ಇವೆ.

ಚರ್ಮದ ಪಾದರಕ್ಷೆ, ಶೂ, ಬ್ಯಾಗುಗಳು, ಸೆಣಬಿನ ಚೀಲಗಳು, ಮಣ್ಣಿನ ಅಲಂಕಾರಿಕ ವಸ್ತುಗಳೂ ಇವೆ. ದೊಡ್ಡದಾದ ನೆಲ ಹಾಸುಗಳೂ (ಕಾರ್ಪೆಟ್) ಕಾಣಸಿಗುತ್ತವೆ. ವಿಜಯಪುರದ ಕೈದಿಗಳು ತಯಾರಿಸಿದ ಕೈಮಗ್ಗದ ಉತ್ಪನ್ನಗಳು ಪ್ರದರ್ಶನದಲ್ಲಿದ್ದು, ಗಮನಸೆಳೆಯುತ್ತಿವೆ. ಖಾದಿ ಮಳಿಗೆಗಳಲ್ಲಿ ಅಂಗಿ, ಜಾಕೆಟ್, ಪಂಚೆ ಮುಂತಾದ ಸಾಂಪ್ರದಾಯಿಕ ಉಡುಪುಗಳನ್ನು ನಗರದ ಮಂದಿ ಖರೀದಿಸಿ, ಸಂಭ್ರಮಿಸಿದರು.

ತಮಿಳುನಾಡು, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ಖಾದಿ ಉಡುಪುಗಳು ಒಂದೇ ಸೂರಿನಡಿ ಸಿಗುತ್ತಿರುವುದು ಅಭಿಯಾನದ ವಿಶೇಷ. ಇದೇ 10ರವರೆಗೆ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಈ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

ಚಿತ್ರಕಲಾ ಪ್ರದರ್ಶನ ಇಂದು

'ಪವಿತ್ರವಸ್ತ್ರ ಅಭಿಯಾನ'ದ ಅಂಗವಾಗಿ ಚಿತ್ರಕಲಾ ಪರಿಷತ್ತಿನಲ್ಲಿ 'ಸರಳತೆಯ ಸೌಂದರ್ಯ' ಶೀರ್ಷಿಕೆಯಡಿ ಶುಕ್ರವಾರ ಬೆಳಿಗ್ಗೆ 11ಕ್ಕೆ ಕಲಾ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಪ್ರಸನ್ನ ಹಾಗೂ ನಿರಂಜನ್ ಅವರು ರಚಿಸಿದ ಕಲಾಕೃತಿಗಳು ಪ್ರದರ್ಶನ ಕಾಣಲಿವೆ. ಕಲಾ ನಿರ್ದೇಶಕ ಎಂ.ಎಸ್. ಸತ್ಯು ಅವರು ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.

International E-Waste Day
14th Oct

SOGO™ | EWASTE MANAGEMENT

ಇ–ತ್ಯಾಜ್ಯ ಸಂಗ್ರಹಣಾ ಚಾಲನೆ

9–10 ಅಕ್ಟೋಬರ್ 2021

ಈ ಅಂತರರಾಷ್ಟ್ರೀಯ ಇ–ತ್ಯಾಜ್ಯ ಮಾಸದಲ್ಲಿ ಸೊಗೊ ಸಿನರ್ಜಿ ಇವರು ನಿಮ್ಮ ಸಮುದಾಯದಲ್ಲಿನ ವಿದ್ಯುತ್ ಮತ್ತು ವಿದ್ಯುನ್ಮಾನ ತ್ಯಾಜ್ಯವನ್ನು ಸಂಗ್ರಹಿಸಲಿದ್ದಾರೆ

| ಹಳೆಯ ಫೋನ್‌ಗಳು | ವೈರ್‌ಗಳು | ಚಾರ್ಜರ್‌ಗಳು
| ಮಾನಿಟರ್ | ಕೀ ಬೋರ್ಡ್ |
| ರೆಫ್ರಿಜರೇಟರ್ | ಟೆಲಿವಿಷನ್ |
| ವಾಷಿಂಗ್ ಮಷೀನ್ಸ್ | ಕಂಪ್ಯೂಟರ್ಸ್

ಸೊಗೊ ಜೊತೆ ಕೈಜೋಡಿಸಿ
ಮರುಬಳಕೆ
ರಿಸೈಕಲ್
ತಡೆಗಟ್ಟಿರಿ

ತ್ಯಾಜ್ಯ ವಿಲೇವಾರಿ ಕೇಂದ್ರಗಳು
- ಇಂದಿರಾನಗರ ಕ್ಲಬ್,
- ಕೋರಮಂಗಲ ಕ್ಲಬ್,
- ದೊಮ್ಮಲೂರು ಕ್ಲಬ್,
- ಗೋಪಾಲನ್ ಗ್ರಾಂಡೆಯರ್ (ಹೂಡಿ ವೃತ್ತ),
- ಸಲಾರ್‌ಪುರಿಯಾ ಸೆನೋರಿಟಾ (ಸರ್ಜಾಪುರ)

R2 Responsible Recycling | KSPCB | cpcb | MSME | ISO 14001:2015 | ISO 45001:2018 | PRO CERTIFIED | EPR EXTENDED PRODUCER RESPONSIBILITY

ಉಚಿತ ತ್ಯಾಜ್ಯ ಪಿಕಪ್‌ಗಾಗಿ ಸಂಪರ್ಕಿಸಿ

WWW.SOGOEWASTE.COM | PH : +91 73377 30707 | ಟೋಲ್ ಫ್ರೀ 1800 102 4780

WWW.SOGOINDIA.COM | WWW.SOGORENTALS.COM

ಹೊಯ್ಸಳ ಸೈರನ್‌ನಿಂದ ನೆಮ್ಮದಿಗೆ ಭಂಗ ಆಗುವುದಿಲ್ಲವೇ: ಸುರೇಶ್‌ಕುಮಾರ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಳ್ಳುಗಾಡಿಯಲ್ಲಿ ಮೆಗಾಫೋನ್ ಬಳಸುತ್ತಿರುವ ವ್ಯಾಪಾರಿಗಳ ವಿರುದ್ಧ ನಗರದ ಪೊಲೀಸರು ಏಕಾಏಕಿ ಕಾರ್ಯಾಚರಣೆ ಆರಂಭಿಸಿದ್ದು, ಈ ಕ್ರಮವನ್ನು ಬಿಜೆಪಿ ಶಾಸಕ ಎಸ್. ಸುರೇಶ್‌ಕುಮಾರ್ ಪ್ರಶ್ನಿಸಿದ್ದಾರೆ.

'ಮೆಗಾಫೋನ್‌ನಿಂದ ನೆಮ್ಮದಿಗೆ ಭಂಗವಾಗುತ್ತಿದೆ' ಎಂಬುದಾಗಿ ಸಾರ್ವಜನಿಕರೊಬ್ಬರು ನೀಡಿದ್ದ ದೂರಿನ ನೆಪದಲ್ಲಿ ಪೂರ್ವ ವಿಭಾಗದ ಪೊಲೀಸರು ಇತ್ತೀಚೆಗಷ್ಟೇ ತಳ್ಳುಗಾಡಿ ವ್ಯಾಪಾರಿಗಳ ಮೆಗಾಫೋನ್‌ಗಳನ್ನು ಜಪ್ತಿ ಮಾಡಿದ್ದರು. ಈ ವರ್ತನೆಗೆ ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದರು. ಇದೀಗ, ಸುರೇಶ್‌ಕುಮಾರ್ ಸಹ ವ್ಯಾಪಾರಿಗಳ ಪರ ನಿಂತಿದ್ದಾರೆ.

ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಪತ್ರ ಬರೆದಿರುವ ಸುರೇಶ್‌ಕುಮಾರ್, 'ಮೆಗಾಫೋನ್ ಜಪ್ತಿ ಮಾಡುವಂತೆ ತೆಗೆದುಕೊಂಡಿರುವ ತೀರ್ಮಾನವನ್ನು ಬಡ ವ್ಯಾಪಾರಿಗಳ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಪರಾಮರ್ಶೆ ಮಾಡಬೇಕು' ಎಂದು ಕೋರಿದ್ದಾರೆ.

'ಬಿಸಿಲು, ಮಳೆ, ಚಳಿ, ಗಾಳಿ ಎನ್ನದೇ ತಳ್ಳುಗಾಡಿಯಲ್ಲಿ ಕಿ.ಮೀ.ಗಟ್ಟಲೇ ಸುತ್ತಾಡಿ ವ್ಯಾಪಾರ ಮಾಡುವ ವ್ಯಕ್ತಿಗಳ ಬಗ್ಗೆ ಕನಿಕರ ಇರಬೇಕು. ಆರ್ಥಿಕವಾಗಿ ಹಿಂದುಳಿದ ವ್ಯಾಪಾರಿಗಳು, ಲಾಕ್‌ಡೌನ್ ಸಮಯದಲ್ಲಿ ಸಾಕಷ್ಟು ಜರ್ಜರಿತರಾಗಿದ್ದಾರೆ. ಇವರ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು ಮೊದಲನೇ ದಿನ ಸಂಬಳ ಬಂದು ಬೀಳುವುದಿಲ್ಲ ಎಂಬುದನ್ನು ನೀವು ಅರಿತುಕೊಳ್ಳಬೇಕು' ಎಂದೂ ಹೇಳಿದ್ದಾರೆ.

'ಸಾಮಗ್ರಿಗಳ ಬಗ್ಗೆ ಒಬ್ಬ ವ್ಯಕ್ತಿ ಎಷ್ಟು ಬಾರಿ ಕೂಗಿ ಹೇಳಬಹುದೆಂದು ನೀವು ಯೋಚಿಸಬೇಕಿತ್ತು. ತಳ್ಳುಗಾಡಿ ವ್ಯಾಪಾರಿಗಳು ಧ್ವನಿವರ್ಧಕ ನಿಯಂತ್ರಣ ಮಾಡುವ ಕುರಿತು ಜಾಗೃತಿ ಮೂಡಿಸಬೇಕಾದ ನೀವು, ಇಡೀ ದಿನ ಗಂಟಲು ಶೋಷಣೆ ಮಾಡಿಕೊಂಡೇ ವ್ಯಾಪಾರ ಮಾಡಿ ಎಂದು ಹೇಳುವುದು ಸರಿಯಲ್ಲ. ಇದು ಮಾನವೀಯ ನಡವಳಿಕೆಯಲ್ಲ.'

'ನಿಮ್ಮ ಹೊಯ್ಸಳ ಗಸ್ತು ವಾಹನ ಹಾಗೂ ಅಂಬುಲೆನ್ಸ್‌ಗಳು ರಾತ್ರಿ ವೇಳೆ ಸೈರನ್ ಹಾಕಿಕೊಂಡು ಹೋಗುವಾಗ ನೆಮ್ಮದಿಗೆ ಭಂಗವಾಗುವುದಾಗಿ ಯಾರಾದರೂ ದೂರು ಕೊಟ್ಟರೆ, ನಿಮ್ಮ ವಾಹನಗಳ ಓಡಾಟವನ್ನೂ ನಿಲ್ಲಿಸುತ್ತೀರಾ' ಎಂದು ಸುರೇಶ್‌ಕುಮಾರ್ ಪ್ರಶ್ನಿಸಿದ್ದಾರೆ.

'ಮೆಟ್ರೊ ಮುಖ್ಯಸ್ಥರನ್ನು ಠಾಣೆಯಲ್ಲಿ ಕೂರಿಸಿದ್ದು ನೆನಪಿದೆ'

'ಮೆಟ್ರೊ ನಿಲ್ದಾಣದಲ್ಲಿ ರೈಲುಗಳ ಬರುವ ಹಾಗೂ ಹೋಗುವ ಬಗ್ಗೆ ಧ್ವನಿವರ್ಧಕದಲ್ಲಿ ಕೂಗುತ್ತಾರೆ. ಇದರಿಂದ ನೆಮ್ಮದಿಗೆ ಭಂಗ ಬರುತ್ತದೆಂದು ಸಾರ್ವಜನಿಕರೊಬ್ಬರು 2017ರ ನವೆಂಬರ್‌ನಲ್ಲಿ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ದೂರು ನೀಡಿದ್ದರು. ನಿಲ್ದಾಣದ ಮುಖ್ಯಸ್ಥರನ್ನು ಠಾಣೆಗೆ ಕರೆಸಿ ಇಡೀ ದಿನ ಕೂರಿಸಿದ್ದ ಘಟನೆ ನನ್ನ ನೆನಪಿನಲ್ಲಿದೆ' ಎಂದು ಸುರೇಶ್‌ಕುಮಾರ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

TATA **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**

ನೊಂದಾಯಿತ ಕಚೇರಿ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಜಿನೆಸ್ ಪಾರ್ಕ್, ಗಣಪತರಾವ್ ಕದಂ ಮಾರ್ಗ, ಲೋವರ್ ಪರೇಲ್, ಮುಂಬೈ–400013.
ಶಾಖೆ ವಿಳಾಸ: 2ನೇ ಮಹಡಿ, ಪ್ರೆಸ್ಟೀಜ್ ಕ್ರೋನಿಕ್ ನಂ. 62, ರಿಚ್ಮಂಡ್ ರೋಡ್, ಬೆಂಗಳೂರು–560025, ದೂರವಾಣಿ ಸಂ.: 09030001897/09866577659

ಸ್ಥಿರಾಸ್ತಿ ಮಾರಾಟ ಕುರಿತಾದ ಮಾರಾಟ ಪ್ರಕಟಣೆ (ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 8(6) ಅಡಿಯಲ್ಲಿ) ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಅನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(6) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟ ಕುರಿತಾದ ಇ–ಹರಾಜು ಮಾರಾಟ ಪ್ರಕಟಣೆ.

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಕೆಳಕಂಡ ಸಾಲಗಾರರಿಗೆ/ಸಹ–ಸಾಲಗಾರರಿಗೆ ತಿಳಿಸುವುದು ಏನೆಂದರೆ, ಈ ಕೆಳಗೆ ವಿವರಿಸಲಾಗಿರುವ ಸ್ಥಿರಾಸ್ತಿಗಳನ್ನು (ಭದ್ರತಾ ಸ್ವತ್ತುಗಳನ್ನು) **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್** (ಸೆಕ್ಯೂರ್ಡ್ ಕ್ರೆಡಿಟರ್) ಇವರಿಗೆ ಅಡಮಾನ ನೀಡಲಾಗಿರುತ್ತದೆ, ಸದರಿ ಅಡಮಾನ ಸ್ವತ್ತುಗಳನ್ನು ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌ನ (ಸೆಕ್ಯೂರ್ಡ್ ಕ್ರೆಡಿಟರ್‌ರ) ಅಧಿಕೃತ ಅಧಿಕಾರಿಯು ತಮ್ಮ ಸಾಂಕೇತಿಕ ಸ್ವಾಧೀನತೆಗೆ ಪಡೆದುಕೊಂಡಿದ್ದು, ಸದರಿ ಸ್ವಾಧೀನ ಸ್ವತ್ತುಗಳನ್ನು 17ನೇ ನವಂಬರ್ 2021 ರಂದು (ಬುಧವಾರ) **"ಹೇಗಿದೆಯೊ ಎಲ್ಲಿದೆಯೊ"** ಮತ್ತು **"ಹೇಗಿದೆಯೊ ಏನಿದೆಯೊ"** ಮತ್ತು **"ಅಲ್ಲಿ ಏನೇನಿದೆಯೊ"** ಆಧಾರದಲ್ಲಿ ಮಾರಾಟ ಮಾಡಲಾಗುತ್ತಿದೆ. ಮೀಸಲು ಬೆಲೆ ಮತ್ತು ಭದ್ರತಾ ಠೇವಣಿ ಮೊತ್ತದ ವಿವರಗಳು ಕೆಳಗಿನಂತಿರುತ್ತವೆ.

ಭದ್ರತಾ ಸಾಲವನ್ನು ವಸೂಲಾತಿ ಮಾಡಿಕೊಳ್ಳಲೆಂದು ಸದರಿ ಭದ್ರತಾ ಸ್ವತ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಮುಂದೂಡಿಕೆ/ರದ್ದುಪಡಿಸುವಿಕೆ ಉಂಟಾಗದಿದ್ದಲ್ಲಿ, ಸದರಿ ಭದ್ರತಾ ಸ್ವತ್ತುಗಳನ್ನು **17ನೇ ನವಂಬರ್ 2021 ರಂದು (ಬುಧವಾರ)** ಅಪರಾಹ್ನ 2 ಗಂಟೆಗೆ ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ **ಶಾಖೆ ವಿಳಾಸ: 2ನೇ ಮಹಡಿ, ಪ್ರೆಸ್ಟೀಜ್ ಕ್ರೋನಿಕ್ ನಂ. 62, ರಿಚ್ಮಂಡ್ ರೋಡ್, ಬೆಂಗಳೂರು–560025** ವಿಳಾಸದಲ್ಲಿ ಮಾರಾಟ ಮಾಡಲಾಗುತ್ತದೆ. ಸದರಿ ಸ್ವತ್ತುಗಳ ಖರೀದಿಗಾಗಿ ಮೊಹರಾದ ಇ–ಹರಾಜು ಮತ್ತು ಎಇಂಡಿ ರೂಪದ ಡಿಮಾಂಡ್ ಡ್ರಾಫ್ಟ್‌ನ್ನು **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌ನ** ಅಧಿಕೃತ ಅಧಿಕಾರಿಯವರು **16ನೇ ನವಂಬರ್, 2021 (ಮಂಗಳವಾರ)** ಸಂಜೆ 5 ಗಂಟೆಯವರೆಗೆ ಸ್ವೀಕರಿಸುತ್ತಾರೆ. ಸದರಿ ಸ್ವತ್ತಿನ ಮಾರಾಟವನ್ನು **"ಹೇಗಿದೆಯೊ ಎಲ್ಲಿದೆಯೊ ಆಧಾರದಲ್ಲಿ"** ಮಾರಾಟ ಮಾಡಲಾಗುತ್ತದೆ ಮತ್ತು ಇಲ್ಲಿಯವರೆಗೆ ಕಂಡುಬಂದಿರುವ ಸದರಿ ಸ್ವತ್ತಿಗೆ ಸಂಬಂಧಿತ ಹೊಣೆಗಾರಿಕೆಗಳು ಮತ್ತು ಕ್ಲೇಮ್‌ಗಳ ಬಗ್ಗೆ ಷೆಡ್ಯೂಲ್‌ನಲ್ಲಿ ವಿವರಿಸಲಾಗಿದೆ.

ಲೋನ್ ಅಕೌಂಟ್ ನಂ.	ಗ್ರಾಹಕರ ಹೆಸರು	ದಿನಾಂಕದಂತೆಗಿನ ವಸೂಲಾತಿ ಮೊತ್ತ	ಭದ್ರತಾ ಸ್ವತ್ತುಗಳ ವಿವರ	ಮೀಸಲು ಬೆಲೆ (ರೂ.)	ಇಎಂಡಿ/ಹೆಚ್ಚಳ ಮೊತ್ತ
6865902	ಗಿರಿಜಾ ಎಂಟರ್‌ಪ್ರೈಸಸ್ ಪ್ರತಿನಿಧಿಸುವ ಪಾಲುದಾರರು ಶ್ರೀ. ರಾಮಕೃಷ್ಣ ಶ್ರೀನಿವಾಸ ಮತ್ತು ಇತರರು	Rs. 2,45,54,008.59 (ರೂಪಾಯಿ ಎರಡು ಕೋಟಿ ನಲವತ್ತೈದು ಲಕ್ಷ ಐವತ್ನಾಲ್ಕು ಸಾವಿರದ ಎಂಟು ಮತ್ತು ಐವತ್ತೊಂಬತ್ತು ಪೈಸೆ ಮಾತ್ರ/–).	ಬೆಂಗಳೂರು ಚಾಮರಾಜಪೇಟೆ ಒಂದನೇ ಕ್ರಾಸ್‌ನಲ್ಲಿ ಸ್ಥಿತಗೊಂಡಿರುವ ನಂ.10 (ಹಳೆಯ ನಂ.227), ಬೆಂಗಳೂರು ಕಾರ್ಪೊರೇಷನ್ ಡಿವಿಜನ್ ನಂ.42 (ಹಳೆಯ ನಂ.41–ಡಿ0 ಹೊಂದಿರುವ, ಪೂರ್ವ–ಪಶ್ಚಿಮ 64 ಅಡಿ ಮತ್ತು 8 ಇಂಚು ಅಥವಾ 19.65 ಮೀಟರ್ ಮತ್ತು ಉತ್ತರ–ದಕ್ಷಿಣ 41 ಅಡಿ ಮತ್ತು 6 ಇಂಚು ಅಥವಾ 12.75 ಮೀಟರ್, ಒಟ್ಟಾರೆ 2683 ಚದರ ಅಡಿ ಅಥವಾ 298 ಚದರ ಯಾರ್ಡ್ಸ್ ವಿಸ್ತೀರ್ಣವುಳ್ಳ, ಮುಂಭಾಗದಲ್ಲಿ ಸುಮಾರು ಮೂರು ಚದರ ವಿಸ್ತೀರ್ಣದ ಕಟ್ಟಡವೂ ಸೇರಿದಂತೆ, ಸದರಿ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: (ದಿನಾಂಕ 15/04/1999ರ ಸೇಲ್ ಡೀಡ್ ನಂ. 177/1999–2000 ರಲ್ಲಿ ಇನ್ನೂ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿದೆ) ಪೂರ್ವಕ್ಕೆ: ಅಡ್ಡರಸ್ತೆ, ಪಶ್ಚಿಮಕ್ಕೆ: ನಂ. 242 ಹೊಂದಿರುವ ಸ್ವತ್ತು, ಉತ್ತರಕ್ಕೆ: ಕನ್ಸರ್ವನ್ಸಿ ರಸ್ತೆ, ದಕ್ಷಿಣಕ್ಕೆ: ನಂ. 243 ಹೊಂದಿರುವ ಸ್ವತ್ತು.	Rs. 3,65,36,880/-	Rs. 36,53,688/- Rs. 25 ಸಾವಿರ ಗುಣಾಂಕಗಳಲ್ಲಿ
8643909	ಚಲಪತಿರಾವ್ ಜಿ	Rs. 59,65,172/- (ರೂಪಾಯಿ ಐವತ್ತೊಂಬತ್ತು ಲಕ್ಷ ಅರವತ್ತೈದು ಸಾವಿರದ ಒಂದು ನೂರ ಎಪ್ಪತ್ತೆರಡು ಮಾತ್ರ/–)	ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ವಿಳಾಸದಲ್ಲಿ ಸ್ಥಿತಗೊಂಡಿರುವ, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ ಸೈಟ್ ನಂ. 07, ಖಾತಾ ನಂ. 129/07 ಹೊಂದಿರುವ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಶ್ರೀನಿವಾಸುಲುರವರ ನಿವೇಶನ; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ರಸ್ತೆ; ದಕ್ಷಿಣಕ್ಕೆ: ಶ್ರೀಮತಿ ಗಂಗಮ್ಮನವರ – ಪೂರ್ವ ಪಶ್ಚಿಮ 40 ಅಡಿ ಮತ್ತು ಉತ್ತರ ದಕ್ಷಿಣ 30 ಅಡಿ ಒಟ್ಟಾರೆ 1200 ಚ.ಅ ವಿಸ್ತೀರ್ಣದ ಜಿಎಫ್+ಎಫ್ಎಫ್+ಎಸ್ಎಫ್ ಹೊಂದಿರುವ ಸ್ವತ್ತು.	Rs. 56,37,375/-	Rs.5,63,738/-- Rs. 25 ಸಾವಿರ ಗುಣಾಂಕಗಳಲ್ಲಿ

ಮಾರಾಟಕ್ಕೆ ನಿಗದಿಪಡಿಸಲಾಗಿರುವ ಸ್ವತ್ತಿನ ವಿವರವು ಷೆಡ್ಯೂಲ್‌ನಲ್ಲಿದೆ. ಒಂದು ವೇಳೆ ಮೇಲ್ಕಾಣಿಸಿದ ಬಾಕಿಮೊತ್ತವು, ಬಡ್ಡಿ ಮತ್ತು ಶುಲ್ಕಗಳ ಸಮೇತ (ಮಾರಾಟದ ವೆಚ್ಚವೂ ಸೇರಿದಂತೆ) 'ಅಧಿಕೃತ ಅಧಿಕಾರಿ' ಇವರಿಗೆ ಪಾವತಿಗೊಂಡಲ್ಲಿ ಅಥವಾ ಸದರಿ ಭದ್ರತಾ ಸಾಲವನ್ನು, ಬಡ್ಡಿ ಮತ್ತು ಶುಲ್ಕಗಳ ಸಮೇತ ಮರುಪಾವತಿಸಿರುವ ಕುರಿತಂತೆ ಅವರ ತೃಪ್ತಿಗನುಸಾರವಾದ ಪುರಾವೆ ಸಲ್ಲಿಸಿದಲ್ಲಿ, ಸದರಿ ಮಾರಾಟವನ್ನು ಸ್ಥಗಿತಗೊಳಿಸಲಾಗುತ್ತದೆ. ಸದರಿ ಮಾರಾಟಕ್ಕೆ ಸಾಮಾನ್ಯ ಜನರನ್ನು ತಮ್ಮ ಟೆಂಡರ್‌ನ್ನು ಖುದ್ದಾಗಿ ಸಲ್ಲಿಸಲು ಆಹ್ವಾನಿಸಲಾಗಿದೆ. ಸದರಿ ಮಾರಾಟಕ್ಕೆ ಸಂಬಂಧಿತ ಯಾವುದೇ ಕರ್ತವ್ಯಕ್ಕೆ ನಿಯೋಜಿತರಾದ ಯಾವುದೇ ವ್ಯಕ್ತಿಯಾಗಲಿ ಅಥವಾ ಅಧಿಕಾರಿಯಾಗಲಿ, ಸದರಿ ಮಾರಾಟದಲ್ಲಿ ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಬಿಡ್ ಸಲ್ಲಿಸುವಂತಿಲ್ಲ, ಮಾರಾಟಗೊಂಡ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿ ಸಾಧಿಸುವ ಪ್ರಯತ್ನವನ್ನು ಕೂಡ ಮಾಡುವಂತಿಲ್ಲ. ಒಂದು ವೇಳೆ ಮಾರಾಟ ದಿನಾಂಕಕ್ಕೆ ಮುಂಚಿತವಾಗಿಯೇ, ಸಾಲಗಾರರು **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌ಗೆ** ಸಂದಾಯ ಆಗಬೇಕಿರುವ ಬಾಕಿಮೊತ್ತವನ್ನು ಸಂಪೂರ್ಣ ಮರುಪಾವತಿಸಿದಲ್ಲಿ, ಸದರಿ ಮಾರಾಟವನ್ನು ಸ್ಥಗಿತಗೊಳಿಸಲಾಗುತ್ತದೆ. ಈ ಮಾರಾಟವು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ಮತ್ತು ಕೆಳಕಂಡ ಷರತ್ತುಗಳ ನಿಬಂಧನೆಗೆ ಒಳಪಟ್ಟಿರುತ್ತದೆ:

ಷರತ್ತು ಮತ್ತು ನಿಬಂಧನೆಗಳು: ಸದರಿ ಇ–ಹರಾಜು ಪ್ರಕ್ರಿಯೆಯನ್ನು https://disposalhub.com ಪೋರ್ಟಲ್‌ನಲ್ಲಿ, ತಲಾ 10 ನಿಮಿಷಗಳ ಅಸೀಮಿತ ವಿಸ್ತರಣಗಳೊಂದಿಗೆ, **17ನೇ ನವಂಬರ್ 2021 (ಬುಧವಾರ) ರಂದು ಮಧ್ಯಾಹ್ನ 2.00 ರಿಂದ 3.00 ಗಂಟೆಯೊಳಗೆ** ಕೈಗೊಳ್ಳಲಾಗುತ್ತದೆ. 1) ಈ ಕೆಳಗಿನ ಷೆಡ್ಯೂಲ್‌ನಲ್ಲಿ ನೀಡಲಾಗಿರುವ ವಿವರಗಳು ಈ ಕೆಳಗೆ ಸಹಿ ಹಾಕಿರುವವರ ಅತ್ಯುತ್ತಮ ತಿಳುವಳಿಕೆಯ ಮೇರೆಗೆ ನೀಡಲ್ಪಟ್ಟಿರುತ್ತವೆ, ಆದರೆ ಸದರಿ ವಿವರಣೆಯಲ್ಲಿ ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ದೋಷಗಳು ಕಂಡುಬಂದಲ್ಲಿ, ಅಂತಹುದಕ್ಕೆ ಕೆಳಗೆ ಸಹಿ ಹಾಕಿರುವವರು ಹೊಣೆಗಾರರಾಗಿರುವುದಿಲ್ಲ. ಬಿಡ್ ಮೊತ್ತಕ್ಕೆ ಸಂಬಂಧಿಸಿದಂತೆ, ಬಿಡ್‌ದಾರರಲ್ಲಿ ಯಾವುದೇ ತಗಾದೆ ಉದ್ಭವವಾದ ಸಂದರ್ಭದಲ್ಲಿ, ಸದರಿ ಲಾಟ್‌ನ್ನು ಪುನಃ ಹರಾಜಿಗೆ ನಿಗದಿಪಡಿಸಲಾಗುತ್ತದೆ. 2) ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಈ ಸ್ವತ್ತನ್ನು ಮಾರಾಟ ಮಾಡಲಾಗುವುದಿಲ್ಲ. 3) ಬಿಡ್ ಹೆಚ್ಚಳ ಮೊತ್ತ ರೂ. 25,000/– (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ/–) ಆಗಿರುತ್ತದೆ. 4) ಸ್ವತ್ತಿನ ಖರೀದಿಗಾಗಿ ಸಲ್ಲಿಸಲಾಗುವ ಎಲ್ಲಾ ಬಿಡ್‌ಗಳ ಜೊತೆಗೆ ಭದ್ರತಾ ಠೇವಣಿ ಮೊತ್ತದ ಡಿಮಾಂಡ್ ಡ್ರಾಫ್ಟ್ ಲಗತ್ತಾಗಿರಬೇಕು ಮತ್ತು ಅದು **"ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್" ಹೆಸರಿನಲ್ಲಿ ಪಡೆದಿರಬೇಕು ಹಾಗೂ ಬೆಂಗಳೂರು ಶಾಖೆಯಲ್ಲಿ ಪಾವತಿಯಾಗುವಂತಿರಬೇಕು**. ಯಶಸ್ವಿಯಾಗದಿರುವ ಬಿಡ್‌ದಾರರಿಗೆ ಅವರ ಡಿಮಾಂಡ್ ಡ್ರಾಫ್ಟ್ ಹಿಂದಿರುಗಿಸಲಾಗುತ್ತದೆ. 5) ಯಾವುದೇ ಲಾಟ್‌ನಲ್ಲಿ ಗರಿಷ್ಠ ಬಿಡ್ ಕೂಗಿದ ಬಿಡ್‌ದಾರರನ್ನು, ಅವರು ಕೂಗಿದ ಬಿಡ್ ಮೊತ್ತವು ಮೀಸಲು ಬೆಲೆಗಿಂತ ಇಲ್ಲದಿದ್ದ ಪಕ್ಷದಲ್ಲಿ, ಅಂತಹವರನ್ನು ಖರೀದಿದಾರ ಎಂದು ಘೋಷಿಸಲಾಗುತ್ತದೆ. ಒಂದು ವೇಳೆ ಕೂಗಿದ ಗರಿಷ್ಠ ಬೆಲೆಯು ಭದ್ರತಾ ಸಾಲಕ್ಕೆ ಸೂಕ್ತವಾಗಿದೆಯೊ ಇಲ್ಲವೊ ಎಂಬುದನ್ನು ನಿರ್ಧರಿಸುವುದು 'ಅಧಿಕೃತ ಅಧಿಕಾರಿ' ವಿವೇಚನೆಗೆ ಒಳಪಟ್ಟಿರುತ್ತದೆ. 6) ಸ್ವತ್ತಿನ ಪರಿಶೀಲನೆಯನ್ನು **25ನೇ ಅಕ್ಟೋಬರ್, 2021 (ಸೋಮವಾರ)** ರಂದು ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯೊಳಗೆ ಕೈಗೊಳ್ಳಬಹುದಾಗಿರುತ್ತದೆ. 7) ದಾಖಲಾಗಿರುವ ಕಾರಣಗಳಿಂದಾಗಿ, ಮಾರಾಟವನ್ನು ಮುಂದೂಡುವುದು/ಕೈಬಿಡುವುದು 'ಅಧಿಕೃತ ಅಧಿಕಾರಿ' ಯವರ ವಿವೇಚನೆಗೆ ಒಳಪಟ್ಟಿರುತ್ತದೆ. 8) ಖರೀದಿದಾರ ಎಂದು ಘೋಷಿಸಲ್ಪಟ್ಟ ವ್ಯಕ್ತಿಯು, ಘೋಷಣೆಯಾದ ತಕ್ಷಣವೇ, ಖರೀದಿ ಮೊತ್ತದ ಶೇಕಡ ಇಪ್ಪತ್ತೈದರಷ್ಟು ಮೊತ್ತವನ್ನು 'ಅಧಿಕೃತ ಅಧಿಕಾರಿ' ಇವರಿಗೆ ಪಾವತಿಸುವುದು. ಇದಕ್ಕೆ ತಪ್ಪಿದಲ್ಲಿ, ಅವರ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಸದರಿ ಸ್ವತ್ತನ್ನು ಪುನಃ ಮಾರಾಟಕ್ಕೆ ನಿಗದಿಪಡಿಸಿ ಮಾರಾಟ ಮಾಡಲಾಗುತ್ತದೆ. 9) ಒಂದು ವೇಳೆ ತಿಳಿಸಿದಂತೆ ಆರಂಭಿಕ ಮೊತ್ತವನ್ನು ಪಾವತಿಸಿದಲ್ಲಿ, ಪಾವತಿಸಬೇಕಾದ ಖರೀದಿ ಮೊತ್ತದಲ್ಲಿನ ಇನ್ನುಳಿದ ಮೊತ್ತವನ್ನು ಖರೀದಿದಾರರು ಸ್ವತ್ತು ಮಾರಾಟ ಖಚಿತಗೊಂಡ ದಿನಾಂಕದಿಂದ 15ನೇ ದಿನದೊಳಗೆ, ಆ ದಿನವನ್ನು ಹೊರತುಪಡಿಸಿ ಅಥವಾ ಆ 15ನೇ ದಿನದಂದು ಭಾನುವಾರ ಅಥವಾ ಇನ್ನಾವುದೇ ರಜಾದಿನವಾಗಿದ್ದಲ್ಲಿ ಮಾರನೇಯ ಕಚೇರಿ ಕೆಲಸದ ದಿನದಂದು ಅಧಿಕೃತ ಅಧಿಕಾರಿಗೆ ಪಾವತಿಸತಕ್ಕದ್ದು, ಈ ಅವಧಿಯನ್ನು ಸರ್ಫಾಯಸಿ ಕಾಯ್ದೆಗೆ ಅನುಗುಣವಾಗಿ ಅಧಿಕೃತ ಅಧಿಕಾರಿಯು ಮುಂದಿನ ಲೆಕ್ಕಾಚಾರದ ಪ್ರಕಾರ ವಿಸ್ತರಿಸಬಹುದಾಗಿರುತ್ತದೆ. ನಿಗದಿತ ಅವಧಿಯೊಳಗೆ ಸಂಪೂರ್ಣ ಮೊತ್ತ ಪಾವತಿಯಾಗದಿದ್ದ ಪಕ್ಷದಲ್ಲಿ, ಹೊಸದಾಗಿ ಮರು ಮಾರಾಟ ಘೋಷಣೆ ಹೊರಡಿಸಿ ಸದರಿ ಸ್ವತ್ತನ್ನು ಪುನಃ ಮಾರಾಟ ಮಾಡಲಾಗುತ್ತದೆ ಮತ್ತು ಇಲ್ಲಿಯವರೆಗೆ ಜಮೆ ಮಾಡಲಾಗಿರುವ ಎಲ್ಲಾ ಮೊತ್ತಗಳನ್ನು **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌ಗೆ** ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಸುಸ್ತಿದಾರ ಖರೀದಿದಾರರು ಸ್ವತ್ತಿಗೆ ಸಂಬಂಧಿತ ಎಲ್ಲಾ ಕ್ಲೇಮ್‌ಗಳನ್ನು ಕಳೆದುಕೊಳ್ಳುತ್ತಾರೆ ಅಥವಾ ಮರು ಮಾರಾಟ ಮಾಡಲಾಗುವ ಸ್ವತ್ತಿನ ಮೊತ್ತದಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಅಧಿಕೃತ ಅಧಿಕಾರಿಯ ವಿವೇಚನೆಯ ಮೇರೆಗೆ ಸ್ವತ್ತನ್ನು ಮರು ಮಾರಾಟ ಮಾಡಲಾಗುತ್ತದೆ. 10) ಸದರಿ ಸ್ವತ್ತಿಗೆ ಸಂಬಂಧಿಸಿದ ಮತ್ತು ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌ಗೆ ತಿಳಿದಿರುವಂತಹ ಯಾವುದೇ ಋಣಭಾರಗಳ ವಿವರ: ಶೂನ್ಯ. ಸದರಿ ಸ್ವತ್ತಿಗೆ ಸಂಬಂಧಿತ ಯಾವುದೇ ಕ್ಲೇಮ್‌ಗಳಿದ್ದಲ್ಲಿ ಮತ್ತು ಸ್ವತ್ತಿನ ಮೌಲ್ಯ ಸ್ವರೂಪದ ಮೇಲೆ ಪ್ರಭಾವ ಬೀರಬಲ್ಲ ಯಾವುದೇ ಬಲ್ಲ ವಿವರಗಳು: ಮೇಲ್ಕಾಣಿಸಿರುವುದನ್ನು ಹೊರತುಪಡಿಸಿ ಶೂನ್ಯ. 11) ಇ–ಹರಾಜಿಗೆ ಸಂಬಂಧಿತ ವಿವರ, ನೆರವು, ಪ್ರಕ್ರಿಯೆ ಮತ್ತು ಆನ್‌ಲೈನ್ ತರಬೇತಿಗಾಗಿ ಸೇವಾ ಪೂರೈಕೆದಾರರಾದ ಮೆ. ನೆಕ್ಸ್‌ಜೆನ್ ಸೊಲ್ಯೂಷನ್ಸ್ ಲಿಮಿಟೆಡ್, ಹೆಸರು: ಕ್ಲೈಂಟ್ ಸರ್ವೀಸ್ ಡೆಲಿವರಿ (ಸಿಎಸ್‌ಡಿ) ನಮ್ಮ ಮಾರಾಟ ಪಾಲುದಾರರಾದ ಇವರನ್ನು ಇ–ಮೇಲ್ ಐಡಿ: csd@disposalhub.com, ಫೋನ್ ನಂ. +91 40 2782 2864, ಮೊಬೈಲ್ ನಂ. +91 9010911100 ಇವರನ್ನು ಆಸಕ್ತಿಯುಳ್ಳ ಬಿಡ್‌ದಾರರು ಸಂಪರ್ಕಿಸಬಹುದು. 12) ಸೂಚನೆ: ಆಸಕ್ತಿಯುಳ್ಳ ಬಿಡ್‌ದಾರರು ಅಧಿಕೃತ ಅಧಿಕಾರಿ ಶ್ರೀ. ನೀಲಾ ಪ್ರತಾಪ್/ಶ್ರೀ. ಚಂದ್ರಶೇಖರ ಯು ಇವರನ್ನು ಸಂಪರ್ಕಿಸಬಹುದು, ಇಮೇಲ್ ಐಡಿ neela.pratap@tatacapital.com/chandrasekhar.u@tatacapital.com ಮತ್ತು ಮೊಬೈಲ್ ನಂ. 9030001897/9866577659 ಮತ್ತು 13) ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ಸೆಕ್ಯೂರ್ಡ್ ಕ್ರೆಡಿಟರ್‌ರವರ www.tatacapital.com/tcfsl.html ವೆಬ್‌ಸೈಟ್ ಪರಿಶೀಲಿಸಿರಿ.

ಸಹಿ/– ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್
ಮೊಬೈಲ್ ನಂ. 9030001897/09866577659

ಸ್ಥಳ: ಬೆಂಗಳೂರು
ದಿನಾಂಕ: 08/10/2021

ಚಾಮುಂಡಿಬೆಟ್ಟದಲ್ಲಿ ಸರಳ, ಸಾಂಪ್ರದಾಯಿಕ ನಾಡಹಬ್ಬಕ್ಕೆ ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಅವರಿಂದ ಚಾಲನೆ

‘ಕೊರೊನಾ: ಚಾಮುಂಡೇಶ್ವರಿ ರಕ್ಷಿಸಲಿ’

ಪ್ರಜಾವಾಣಿ ವಾರ್ತೆ

ಮೈಸೂರು: 'ಮನುಕುಲಕ್ಕೆ ಬಂದಿರುವ ದೊಡ್ಡ ಗಂಡಾಂತರವಾದ ಕೊರೊನಾದಿಂದ ಎಲ್ಲರನ್ನೂ ಚಾಮುಂಡೇಶ್ವರಿ ಪಾರು ಮಾಡಲಿ' ಎಂದು ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಕೋರಿದರು.

ಚಾಮುಂಡಿಬೆಟ್ಟದಲ್ಲಿ ಗುರುವಾರ ಬೆಳಿಗ್ಗೆ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದ ಅವರು, 'ಕಷ್ಟ ಕಾಲದಲ್ಲಿ ದೇವಿಯ ಅಗ್ರಪೂಜೆಯೊಂದಿಗೆ ಆರಂಭವಾದ ಉತ್ಸವ ಸುಲಲಿತವಾಗಿ ನಡೆಯಲಿ. ಎಲ್ಲರಿಗೂ ಒಳಿತು ಮಾಡಲಿ' ಎಂದರು.

ಮಂಜು ಮುಸುಕಿದ ವಾತಾವರಣದಲ್ಲಿ, ಕೋವಿಡ್ ಮೂರನೇ ಅಲೆ ಭೀತಿ ನಡುವೆ ನಡೆದ ನಾಡಹಬ್ಬ ಆಚರಣೆಯ ಆರಂಭದ ಕ್ಷಣಗಳಿಗೆ ಗಣ್ಯರು, ಗ್ರಾಮಸ್ಥರು ಸಾಕ್ಷಿಯಾದರು.

ದೇವಸ್ಥಾನದ ಪ್ರಾಂಗಣದಲ್ಲಿ ನಿರ್ಮಿಸಿದ್ದ ವೇದಿಕೆಯ ಎಡಭಾಗದಲ್ಲಿ ಬೆಳ್ಳಿ ಮಂಟಪದಲ್ಲಿದ್ದ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಕೃಷ್ಣ ಅವರು ಬೆಳಿಗ್ಗೆ 8.25ಕ್ಕೆ ಪುಷ್ಪನಮನ ಸಲ್ಲಿಸಿದರು. ಊರುಗೋಲು ನೆರವಿನಲ್ಲಿ ನಿಧಾನವಾಗಿ ನಡೆದುಬಂದು, ದೇವಿಗೆ ಮಂಗಳಾರತಿ ಬೆಳಗಿದರು.

ನಂತರ ಅವರು, ‘ಮೈಸೂರು ಜೊತೆಯಲ್ಲೇ ಬೆಳೆದೆ’ ಎಂದು ಬಾಲ್ಯವನ್ನು ಸ್ಮರಿಸಿದರು. 'ಕೃಷ್ಣರಾಜ ಜಲಾಶಯವನ್ನು ನಿರ್ಮಿಸಲು ರಾಜಮನೆತನದ ಒಡವೆಗಳನ್ನು ಒತ್ತೆ ಇಟ್ಟು ಹಣ ತಂದ ಅರಸರಿಗೆ ಲಕ್ಷಾಂತರ ರೈತರ ಪರವಾಗಿ ಅನಂತ ವಂದನೆಗಳು. ರಾಜಶಾಹಿಯನ್ನು ನಾವು ವಿರೋಧಿಸುತ್ತೇವೆ. ಆದರೆ, ಅವರು ಮಾಡಿದ ಇಂಥ ಜನಪರ ಕೆಲಸಗಳನ್ನು ಇತಿಹಾಸದಿಂದ ಅಳಿಸಲು ಆಗುವುದಿಲ್ಲ' ಎಂದರು.

ದಸರಾ ಟೂರಿಸಂ ಸರ್ಕಿಟ್: ಸಿ.ಎಂ

ಮೈಸೂರು: 'ದಸರಾ ಉತ್ಸವವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಲು ಟೂರಿಸಂ ಸರ್ಕಿಟ್ ಮಾಡಲು ಪ್ರಯತ್ನಿಸಲಿದ್ದು, ಆ ಕ್ಷೇತ್ರದ ಪರಿಣಿತರ ಸಹಕಾರ ಪಡೆಯಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ದಸರಾ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಎಸ್.ಎಂ.ಕೃಷ್ಣ ಅವರ ಆಡಳಿತಾವಧಿಯಲ್ಲಿ ಜಾರಿಗೆ ಬಂದಿದ್ದ ಯಶಸ್ವಿನಿ ಯೋಜನೆಯನ್ನು, ಸರ್ಕಾರದ ಹಣಕಾಸು ಸ್ಥಿತಿ ಸುಧಾರಣೆಯಾದರೆ ಮತ್ತೆ ಚಾಲನೆಗೊಳಿಸಲಾಗುವುದು’ ಎಂದರು.

'ದೇವಿ ಚಾಮುಂಡೇಶ್ವರಿ ಎಲ್ಲರಿಗೂ ಒಳಿತು ಮಾಡಿದರೆ, ಮಳೆ ಬೆಳೆ ಪರಿಸ್ಥಿತಿ ಸುಧಾರಿಸಿದರೆ ಮುಂದಿನ ವರ್ಷ ಅದ್ಧೂರಿ ದಸರಾ ಹಮ್ಮಿಕೊಳ್ಳಲು ಸರ್ಕಾರ ಸಿದ್ಧವಿದೆ' ಎಂದು ಹೇಳಿದರು.

ಮೋದಿ ಸಂಪುಟಕ್ಕೆ ಶ್ಲಾಘನೆ

ಮೈಸೂರು: 'ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶ ಪ್ರಚಂಡ ಸಾಧನೆಗಳನ್ನು ಮಾಡುತ್ತಿದ್ದು ಇಡೀ ವಿಶ್ವವೇ ನಮ್ಮ ಕಡೆಗೆ ನೋಡುತ್ತಿದೆ’ ಎಂದು ಎಸ್.ಎಂ.ಕೃಷ್ಣ ಶ್ಲಾಘಿಸಿದರು.

‘ಮೋದಿ ನೇತೃತ್ವದಲ್ಲಿ ದೇಶ ಬಹಳ ದೊಡ್ಡ ಕನಸುಗಳನ್ನು ಕಂಡುಕೊಂಡಿದೆ. ಅವುಗಳನ್ನು ನನಸು ಮಾಡಲು ಮೋದಿ ಹಗಲೂ ರಾತ್ರಿ ಶ್ರಮಿಸುತ್ತಿದ್ದಾರೆ. 55 ವರ್ಷದಿಂದ ರಾಜಕೀಯವನ್ನು ಬಹಳ ದೂರ ಮತ್ತು ಹತ್ತಿರದಿಂದ ನೋಡಿರುವೆ. ಇಷ್ಟು ಕಷ್ಟಪಟ್ಟು ದೇಶದ ಬಗ್ಗೆ ಚಿಂತನೆ ಮಾಡಿ ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದಕ್ಕೆ ಅವರಿಗೆ ನಮ್ಮೆಲ್ಲರ ಗೌರವವಿದೆ’ ಎಂದರು.

‘ವಿಶ್ವದಲ್ಲಿ ಭಾರತ ಮತ್ತು ಚೀನಾ ಪ್ರಗತಿಯತ್ತ ದಾಪುಗಾಲಿಟ್ಟಿವೆ. ಪೈಪೋಟಿಯಲ್ಲಿ ಎಲ್ಲಿವರೆಗೂ ಮತ್ಸರ ಇರುವುದಿಲ್ಲವೋ ಅಲ್ಲಿವರೆಗೂ ಅದನ್ನು ಸ್ವಾಗತಿಸಬಹುದು. ಮೋದಿ ಮತ್ತು ಅವರ ಮಂತ್ರಿಮಂಡಲದ ಎಲ್ಲ ಸದಸ್ಯರಿಗೂ ಚಾಮುಂಡೇಶ್ವರಿ ಶಕ್ತಿ ಕೊಡಲಿ, ಆರೋಗ್ಯ ಕೊಡಲಿ. ದೇಶದ ಸೇವೆ ಮಾಡುವ ಮಮಕಾರವನ್ನು ಕೊಡಲಿ ಎಂದು ಹಾರೈಸುವೆ’ ಎಂದು ನುಡಿದರು.

ಶಿಷ್ಟಾಚಾರ ಉಲ್ಲಂಘನೆ; ‘ದಸರಾ ಉತ್ಸವವನ್ನು ಉದ್ಘಾಟಿಸಿದ ಎಸ್.ಎಂ.ಕೃಷ್ಣ ಅವರು, ಪ್ರಧಾನಿ ಮೋದಿಯವರನ್ನು ಹೊಗಳಲು ವೇದಿಕೆಯನ್ನು ಬಳಸಿಕೊಂಡಿದ್ದು ನಾಡಿನ ಸಂಪ್ರದಾಯಕ್ಕೆ ವಿರುದ್ಧವಾದದ್ದು. ಅವರು ನಾಡಹಬ್ಬದ ಶಿಷ್ಟಾಚಾರವನ್ನು ಉಲ್ಲಂಘಿಸಿದಂತಾಗಿದೆ’ ಎಂದು ಕೆಪಿಸಿಸಿ ವಕ್ತಾರ ಎಚ್.ಎ. ವೆಂಕಟೇಶ್ ಆರೋಪಿಸಿದ್ದಾರೆ.

'ದಸರಾ ಉತ್ಸವದ ವೇಳೆ ಪ್ರವಾಸಿಗರಿಗೆ ರಾಜ್ಯದ ವಿವಿಧೆಡೆ ಪ್ರವಾಸ ಕರೆದೊಯ್ಯುವ ಪ್ಯಾಕೇಜ್ ಮಾಡಿದರೆ ಆರ್ಥಿಕವಾಗಿ ಲಾಭವಾಗುತ್ತದೆ' ಎಂದು ಸಲಹೆ ನೀಡಿದರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು.


ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಗುರುವಾರ ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಅವರು ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಪುಷ್ಪ ನಮನ ಸಲ್ಲಿಸಿ ದಸರಾ ಉತ್ಸವಕ್ಕೆ ಚಾಲನೆ ನೀಡಿದರು. ಶಾಸಕ ಜಿ.ಟಿ.ದೇವೇಗೌಡ, ಸಚಿವೆ ಶಶಿಕಲಾ ಜೊಲ್ಲೆ, ಮೇಯರ್ ಸುನಂದಾ ಫಾಲನೇತ್ರ, ಸಚಿವ ಎಸ್.ಟಿ.ಸೋಮಶೇಖರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಎಲ್.ನಾಗೇಂದ್ರ, ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್, ಸಚಿವ ಆರ್.ಅಶೋಕ ಮತ್ತು ಶಾಸಕ ಎಸ್.ಎ.ರಾಮದಾಸ್ ಇದ್ದಾರೆ

ಸರಳ ದಸರಾಗೆ ಚಾಲನೆ

ಮಡಿಕೇರಿ: ಇಲ್ಲಿನ ಬನ್ನಿಮಂಟಪದ ಪಂಪಿನಕೆರೆಯ ಬಳಿ ಗುರುವಾರ ಸಂಜೆ ನಾಲ್ಕು ಶಕ್ತಿದೇವತೆಗಳ ಕರಗಕ್ಕೆ ಪೂಜೆ ಸಲ್ಲಿಸಿ ಮಡಿಕೇರಿ ದಸರಾಕ್ಕೆ ಚಾಲನೆ ನೀಡಲಾಯಿತು.

ಕಂಚಿ ಕಾಮಾಕ್ಷಿಯಮ್ಮ, ಕೋಟೆ ಮಾರಿಯಮ್ಮ, ಕುಂದೂರು ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮನ ಕರಗೋತ್ಸವದ ನಗರ ಪ್ರದಕ್ಷಿಣೆ ನಡೆದಾಗ ಭಕ್ತರು ವಿನಮ್ರರಾಗಿ ನಮಿಸಿದರು. ಒಂಬತ್ತು ದಿನ ಕರಗಗಳು ಮನೆ ಮನೆ ಸಂಚಾರ ಮಾಡಲಿವೆ.

ಕೋವಿಡ್ ಕಾರಣಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ದಸರಾ ಕ್ರೀಡಾಕೂಟ ಹಾಗೂ ಕವಿಗೋಷ್ಠಿ ರದ್ದಾಗಿವೆ.

‘ವಿಜಯದಶಮಿ ದಿನ ರಾತ್ರಿ ವಿವಿಧ ದೇವಸ್ಥಾನಗಳ ಮಂಟಪಗಳ ಮೆರವಣಿಗೆಗೆ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಜನರು ಸೇರುವಂತಿಲ್ಲ’ ಎಂದು ಜಿಲ್ಲಾಡಳಿತ ಸೂಚಿಸಿದೆ.

‘ಕೋವಿಡ್ ಸಾಂಕ್ರಾಮಿಕ ಕಾಯಿಲೆಯು ಸತತ ಎರಡನೇ ವರ್ಷವೂ ದಸರಾ ಸಂಭ್ರಮ ಕಸಿದುಕೊಂಡಿದೆ. ಕರಗೋತ್ಸವವನ್ನು ಯಾವ ಕಾರಣಕ್ಕೂ ಸ್ಥಗಿತಗೊಳಿಸುವಂತಿಲ್ಲ. ಸೀಮಿತ ಜನರು ಸೇರಿ ನಡೆಸುತ್ತಿದ್ದೇವೆ’ ಎಂದು ನಗರ ಸತೀಶ್ ಹೇಳಿದರು.

ದಸರಾ ನಾಳೆಯಿಂದ (ಶ್ರೀರಂಗಪಟ್ಟಣ): ಶ್ರೀರಂಗಪಟ್ಟಣ ದಸರಾಗೆ ಅ.9ರಿಂದ ಮೂರು ದಿನ ನಡೆಯಲಿದ್ದು, ಮಧ್ಯಾಹ್ನ 3 ಗಂಟೆಗೆ ತಾಲ್ಲೂಕಿನ ಕಿರಂಗೂರು ಬಳಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಲಿದ್ದಾರೆ.

ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿದ ಬಳಿಕ ಜಂಬೂಸವಾರಿಗೆ ಚಾಲನೆ ದೊರೆಯಲಿದೆ. ಬನ್ನಿ ಮಂಟಪದಿಂದ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದವರೆಗೆ ಜಂಬೂ ಸವಾರಿ ನಡೆಯಲಿದ್ದು ಜಾನಪದ ಕಲಾ ತಂಡಗಳು ಪಾಲ್ಗೊಳ್ಳಲಿವೆ.

ಪ್ರಶಸ್ತಿ ಪ್ರದಾನ: ಅರಮನೆ ಆವರಣದಲ್ಲಿ ಸಂಜೆ ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮೃದಂಗ ವಿದ್ವಾಂಸ ಎ.ವಿ.ಆನಂದ್ ಅವರಿಗೆ ‘ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹ 5 ಲಕ್ಷ ನಗದು ಹಾಗೂ ಸರಸ್ವತಿ ಪುತ್ಥಳಿ ಒಳಗೊಂಡಿದೆ.

ಸುದ್ದಿ 2 ನಿಮಿಷ

ಮೈಸೂರು ರಾಜರಿಗೆ ಬಹುಪರಾಕ್

ಚಾಮರಾಜನಗರ: ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಸಿಮ್ಸ್) 450 ಹಾಸಿಗೆ ಸಾಮರ್ಥ್ಯದ ಹೊಸ ಬೋಧನಾ ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್, ಮೈಸೂರು ರಾಜವಂಶಸ್ಥರ ಆಡಳಿತವನ್ನು, ಅದರಲ್ಲೂ ವಿಶೇಷವಾಗಿ ಜಯಚಾಮರಾಜೇಂದ್ರ ಒಡೆಯರ್ ಅವರ ಕೊಡುಗೆಗಳನ್ನು ಶ್ಲಾಘಿಸಿದರು.

‘ಯೋಚನೆ ಹಾಗೂ ಕ್ರಿಯೆಯಲ್ಲಿ ಮುಂದೆ ಇದ್ದ ರಾಜರನ್ನು ಹೊಂದಿದ್ದ ಅದೃಷ್ಟ ಈ ಪ್ರಾಂತ್ಯದ್ದು. ಮಹಾರಾಜ ಚಾಮರಾಜ ಒಡೆಯರ್ ಸಮಾಜ ಸುಧಾರಕರಾಗಿದ್ದರು. 1881ರಲ್ಲೇ ಮೈಸೂರಿನಲ್ಲಿ ಬಾಲಕಿಯರಿಗೆ ಕನ್ನಡ ಮಾಧ್ಯಮ ಶಾಲೆ ತೆರೆದಿದ್ದರು. ಸ್ವಾಮಿ ವಿವೇಕಾನಂದರು ಷಿಕಾಗೋದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು’ ಎಂದು ಕೋವಿಂದ್ ಸ್ಮರಿಸಿದರು.

‘ರಾಜ ವಂಶಸ್ಥರ ಪ್ರಗತಿಪರ ಪರಂಪರೆಯನ್ನು ಜಯಚಾಮರಾಜೇಂದ್ರ ಒಡೆಯರ್ ಮುಂದುವರೆಸಿದ್ದರು. ದೇಶದ ಸ್ವಾತಂತ್ರ್ಯ ನಂತರ ತಮ್ಮ ರಾಜ್ಯವನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆಗೊಳಿಸುವ ಒಪ್ಪಂದಕ್ಕೆ ಸಹಿ ಹಾಕಿದವರಲ್ಲಿ ಒಡೆಯರ್ ಮೊದಲಿಗರು. ನಾನು ಅವರನ್ನು ಒಬ್ಬ ರಾಜ ಮತ್ತು ಪ್ರಭುತ್ವವಾದಿ ಎಂದು ಕರೆಯಲು ಇಚ್ಛಿಸುತ್ತೇನೆ’ ಎಂದರು.

‘ಮೈಸೂರಿನ ಸಿರಿವಂತ ಸಂಸ್ಕೃತಿಯನ್ನು ಪಾಶ್ಚಿಮಾತ್ಯದಲ್ಲಿದ್ದ ಅತ್ಯುತ್ತಮ ನಾಗರಿಕತೆಯೊಂದಿಗೆ ಬೆರೆಸಿದ್ದರು. ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಸಿರಿವಂತಗೊಳಿಸಿದರು. ಜನರ ಬೇಡಿಕೆ ಮೇರೆಗೆ ಕರ್ನಾಟಕದ ಮೊದಲ ರಾಜ್ಯಪಾಲರಾಗಿ ಅವರನ್ನು ನೇಮಿಸಲಾಗಿತ್ತು’ ಎಂದು ರಾಷ್ಟ್ರಪತಿ ಕೊಂಡಾಡಿದರು.



28ರಿಂದ ಹಾಸನಾಂಬೆ ದರ್ಶನೋತ್ಸವ

ಹಾಸನ: ಅಧಿದೇವತೆ ಹಾಸನಾಂಬೆ ದರ್ಶನೋತ್ಸವ ಅ. 28 ರಿಂದ ನ. 6ರವರೆಗೆ ನಡೆಯಲಿದ್ದು, ಸಂಪ್ರದಾಯದಂತೆ ಅಂದು ಮಧ್ಯಾಹ್ನ 12 ಗಂಟೆಗೆ ದೇವಸ್ಥಾನದ ಗರ್ಭಗುಡಿ ಬಾಗಿಲು ತೆರೆದು ನ.6ರ ಮಧ್ಯಾಹ್ನ 12 ಗಂಟೆಗೆ ಮುಚ್ಚಲಾಗುತ್ತದೆ.

‘ಕೋವಿಡ್ ಕಾರಣದಿಂದ ಈ ಬಾರಿಯೂ ಸಾರ್ವಜನಿಕ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಆನ್‌ಲೈನ್ ಮತ್ತು ನಗರದ ಹಲವೆಡೆ ಎಲ್‌ಇಡಿ ಪರದೆ ಅಳವಡಿಸಿ, ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು. ವಿಶೇಷ ಪೂಜೆ, ಧಾರ್ಮಿಕ ಕಾರ್ಯಕ್ರಮಗಳಷ್ಟೇ ನಡೆಯಲಿವೆ. ವಿಶೇಷ ಆಹ್ವಾನಿತರಿಗರಿಗಷ್ಟೇ ದರ್ಶನಕ್ಕೆ ಅವಕಾಶ ಇರಲಿದೆ’ ಎಂದು ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ಮಳೆಯಿಂದ ಗೋಡೆ ಕುಸಿದು ಒಬ್ಬನ ಸಾವು

ಪ್ರಜಾವಾಣಿ ವಾರ್ತೆ

ದಾವಣಗೆರೆ: ತಾಲ್ಲೂಕಿನ ನರಗನಹಳ್ಳಿಯಲ್ಲಿ ಗುರುವಾರ ಮನೆಯ ಗೋಡೆ ಕುಸಿದು ಕುಂಬ್ಳರ ಮಂಜಪ್ಪ (48) ಎಂಬವರು ಮೃತಪಟ್ಟಿದ್ದು, ಅವರ ಸಹೋದರ ಪರಶುರಾಮಪ್ಪ ಗಾಯಗೊಂಡಿದ್ದಾರೆ.

6 ದಿನಗಳಿಂದ ಮಳೆ ಸುರಿಯುತ್ತಿದ್ದು, ಬುಧವಾರ ಗಾಳಿ ಸಹಿತ ದಿನಪೂರ್ತಿ ಮಳೆ ಬಂದಿತ್ತು. ಮಣ್ಣಿನ ಗೋಡೆ ತೇವಗೊಂಡು ದುರ್ಬಲವಾಗಿತ್ತು. ಗುರುವಾರ ಮಧ್ಯಾಹ್ನ ಗೋಡೆ ಕುಸಿದು ಇಬ್ಬರ ಮೇಲೆ ಬಿದ್ದಿದೆ. ಮನೆಯ ಇತರ ಸದಸ್ಯರು ಪಾರಾಗಿದ್ದಾರೆ. ಗಾಯಗೊಂಡಿದ್ದವರನ್ನು ಆಸ್ಪತ್ರೆಗೆ ಕರೆ ತರುವ ದಾರಿಯಲ್ಲಿ ಮಂಜಪ್ಪ ಮೃತಪಟ್ಟಿದ್ದಾರೆ.

ಚಿತ್ರದುರ್ಗ ವರದಿ: ತಾಲ್ಲೂಕಿನ ಮುದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ 24.1 ಸೆಂ.ಮೀ ಮಳೆ ಸುರಿದಿದೆ. ಇದು ರಾಜ್ಯದಲ್ಲಿ ದಾಖಲಾದ ಅತಿ ಹೆಚ್ಚು ಮಳೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಗ್ರಾಮದ 120 ಹೆಕ್ಟೇರ್ ಪ್ರದೇಶದ ಕೆರೆಗೆ ಅಪಾರ ಪ್ರಮಾಣದ ನೀರು ಹರಿದುಬಂದಿದೆ. ಮಳೆಗೆ ಮೆಕ್ಕೆಜೋಳ, ಹತ್ತಿ, ಶೇಂಗಾ ಬೆಳೆಗೆ ಹಾನಿಯಾಗಿದೆ. ಸಿರಿಗೆರೆಯ ತರಳಬಾಳು ಮಠದ ಬಳಿಯ ಶಾಂತಿವನ ಕಿರುಜಲಾಶಯ ದಶಕದ ಬಳಿಕ ಭರ್ತಿಯಾಗಿದೆ.

ಚಿತ್ರದುರ್ಗ ನಗರ ವ್ಯಾಪ್ತಿಯ ಸಾಧಿಕ್ ನಗರದ 14 ಮನೆಗಳಿಗೆ ಮಳೆ ನೀರು ನುಗ್ಗಿ ಸಮಸ್ಯೆ ಸೃಷ್ಟಿಯಾಗಿತ್ತು.


ಕುಂಬ್ಳರ ಮಂಜಪ್ಪ ಅವರ ಮನೆಯ ಗೋಡೆ ಕುಸಿದಿದೆ

ಹಳ್ಳದಾಟುತ್ತಿದ್ದ ಮಹಿಳೆ ನೀರುಪಾಲು

ಶಿವಮೊಗ್ಗ: ಬುಧವಾರ ಸುರಿದಿದ್ದ ಧಾರಾಕಾರ ಮಳೆಗೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ನೆರಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರಡಿ ಬಳಿ ಹಳ್ಳ ದಾಟುವಾಗ ರೈತ ಮಹಿಳೆಯೊಬ್ಬರು ನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿದ್ದಾರೆ.

ಅಗಸರಕೊಪ್ಪದ ಜೆರಾಲ್ಡ್ ಮಚಾದೋ ಅವರ ಪತ್ನಿ ಜಸ್ಟಿನ್ ಮಚಾದೋ (36) ಮೃತಪಟ್ಟವರು. ಗದ್ದೆಗೆ ಹೋಗುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಅವರೊಂದಿಗೆ ಹಳ್ಳ ದಾಟುತ್ತಿದ್ದ ಅವರ 10 ವರ್ಷದ ಮಗ ಜೊಯೆಲ್ ಅಪಾಯದಿಂದ ಪಾರಾಗಿದ್ದಾನೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	115.25	13,726	6,387
ಹಾರಂಗಿ	2,859	2,858.22	1,814	1,037
ಕಬಿನಿ	2284.00	2,279.66	3,800	3,500
ಹೇಮಾವತಿ	2,922	2,912.92	4,797	4,742
ಲಿಂಗನಮಕ್ಕಿ	1,819	1,816.15	8,554	-
ಸೂಪಾ (ಮೀ)	564	556.85	13,773	1,784
ಮಾಣಿ	594	587.62	456	-
ತುಂಗಭದ್ರಾ	1,633	1,632.99	30,495	30,315
ಮಲಪ್ರಭಾ	2079.5	2,079.00	5,398	4,894
ಘಟಪ್ರಭಾ	2175	2,175.00	2,207	2,207
ಭದ್ರಾ	186	185.8	14,869	11,235
ಆಲಮಟ್ಟಿ (ಮೀ)	519.6	519.60	16,260	16,260
ನಾರಾಯಣಪುರ (ಮೀ)	492.25	492.18	15,000	18,800

* ನೆಲಮಟ್ಟದಿಂದ

9 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಅ.8ರಿಂದ 12ರವರೆಗೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಇದೇ 8 ರಂದು ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ ‘ಯೆಲ್ಲೊ ಅಲರ್ಟ್’ ಮುಂದುವರಿಸಲಾಗಿದೆ.

ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಮಳೆ ದಿಢೀರ್ ತಗ್ಗಿದ್ದು, ಕೆಲವೆಡೆ ಸಾಧಾರಣ ಮಳೆ ಸಾಧ್ಯತೆ ಇದೆ. ಕರಾವಳಿಯಲ್ಲಿ ಗಂಟೆಗೆ ಗರಿಷ್ಠ 50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ.

ಮಳೆ ಎಲ್ಲಿ, ಎಷ್ಟು?: ಚಿತ್ರದುರ್ಗದಲ್ಲಿ ಗುರುವಾರ ಗರಿಷ್ಠ 13 ಸೆಂ.ಮೀ ಮಳೆಯಾಗಿದೆ. ಕಾರವಾರ, ಪಾವಗಡ 7, ಹಿರಿಯೂರು, ಗೌರಿಬಿದನೂರು 6, ದಾವಣಗೆರೆ 5, ಕಂಪ್ಲಿ, ಶಿವಮೊಗ್ಗ 4, ಹಾವೇರಿ, ಕುಮಟಾ, ಬೆಳವಾಗಿ, ಮಧುಗಿರಿ, ಶಿಡ್ಲಘಟ್ಟ, ಹಾಸನ, ಶ್ರೀರಂಗಪಟ್ಟಣ 3, ತಿಪಟೂರು 2, ನಿಪ್ಪಾಣಿ, ಚಿಕ್ಕೋಡಿ, ಹೊಸಕೋಟೆ, ಮಂಡ್ಯದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಬೆಳಗಾವಿ: ಗುಡುಗು ಸಹಿತ ವಿವಿಧೆಡೆ ಮಳೆ

ಬೆಳಗಾವಿ: ಜಿಲ್ಲೆಯ ವಿವಿಧೆಡೆ ಗುರುವಾರ ಜೋರು ಮಳೆಯಾಗಿದೆ. ಬೆಳಗಾವಿ ನಗರದಲ್ಲಿ ಆಗಾಗ ತುಂತುರು ಮಳೆ ಬಿದ್ದಿತು. ರಾಮದುರ್ಗ, ಸವದತ್ತಿ, ಹುಕ್ಕೇರಿ, ರಾಮದುರ್ಗ, ಯಮಕನಮರಡಿಯಲ್ಲಿ ಮಳೆಯಾಗಿದೆ. ತಲ್ಲೂರ ಗ್ರಾಮದ ಸುತ್ತಮುತ್ತ ಮೂರ್ನಾಲ್ಕು ದಿನದಿಂದ ಮಳೆಯಾಗುತ್ತಿದೆ. ಕೆರೆ ಕಟ್ಟೆಗಳು ತುಂಬಿವೆ. ಗುರುವಾರವೂ ಗುಡುಗು ಸಹಿತ ಮಳೆಯಾಯಿತು. ತಗ್ಗು ಪ್ರದೇಶದಲ್ಲಿರುವ ಹಲವು ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರದಾಡುವಂತಾಯಿತು.


ಜೋರು ಮಳೆಯಿಂದಾಗಿ ಬೆಳಗಾವಿ ಜಿಲ್ಲೆಯ ತಲ್ಲೂರ–ಮುನವಳ್ಳಿ ರಸ್ತೆಯ ಜಲಾವೃತವಾಗಿದ್ದು, ವಾಹನ ಸಂಚಾರಕ್ಕೆ ಪರದಾಡುವಂತಾಯಿತು

ಬಡಾಲ ಅಂಕಲಗಿ ದುರಂತ: ಪ್ರಧಾನಿಯಿಂದ ಪರಿಹಾರ

‘ಶಿಥಿಲಾವಸ್ಥೆಯಲ್ಲಿರುವ ಮನೆಗಳ ಸಮೀಕ್ಷೆ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಬಡಾಲ ಅಂಕಲಗಿಯಲ್ಲಿ ಗೋಡೆ ಕುಸಿದು ಮೃತಪಟ್ಟಿದ್ದ ಏಳು ಜನರ ಕುಟುಂಬದವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ ಗುರುವಾರ ಸಾಂತ್ವನ ಹೇಳಿದ್ದು, ಪರಿಹಾರದ ಚೆಕ್ ಹಸ್ತಾಂತರಿಸಿದರು.

ಘಟನೆಯಲ್ಲಿ ಒಂದೇ ಕುಟುಂಬದ ಇಬ್ಬರು ಬಾಲಕಿಯರು ಸೇರಿದಂತೆ 6 ಮಂದಿ ಹಾಗೂ ಎದುರು ಮನೆಯ ಬಾಲಕಿ ಬುಧವಾರ ಸಾವಿಗೀಡಾಗಿದ್ದರು. ಅವರಿಗೆ ತಲಾ ₹ 5 ಲಕ್ಷದಂತೆ ಒಟ್ಟು ₹ 35 ಲಕ್ಷ ಪರಿಹಾರವನ್ನು ಸರ್ಕಾರ ನೀಡಿದೆ.

ಬಳಿಕ ಮಾತನಾಡಿದ ಸಚಿವರು, ‘ಏಳು ಜನರ ಸಾವು ನೋವಿನ ಸಂಗತಿ. ನೋವು ತುಂಬಿಕೊಡಲು ಸಾಧ್ಯವಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರೂ ತಲಾ ₹ 2 ಲಕ್ಷದಂತೆ ಪರಿಹಾರ ಕೊಡಲು ಮಂಜೂರಾತಿ ನೀಡಿದ್ದಾರೆ’ ಎಂದು ತಿಳಿಸಿದರು.

‘ಮೂವರು ಮಕ್ಕಳಿಗೆ ತಲಾ ₹ 1 ಲಕ್ಷವನ್ನು ಮಕ್ಕಳ ಕಲ್ಯಾಣ ನಿಧಿಯಿಂದ ಕೊಡಲಾಗುವುದು. ಆ ಕುಟುಂಬದವರ ನೋವಿನೊಂದಿಗೆ ಇರುತ್ತೇವೆ. ಬಿದ್ದಿರುವ ಮನೆ ಕಟ್ಟಿಕೊಳ್ಳುವುಕ್ಕೆ ₹ 5 ಲಕ್ಷ ಧನಸಹಾಯ ಮಾಡಲಾಗುವುದು’ ಎಂದರು.

‘ಮಳೆ ಜಾಸ್ತಿ ಆಗುವ ಗ್ರಾಮಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಮನೆಗಳ ಸಮೀಕ್ಷೆ ನಡೆಸಬೇಕು. ನಿವಾಸಿಗಳನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅಪಾಯದ ಸ್ಥಿತಿಯ ಮನೆಗಳ ದುರಸ್ತಿ ಅಗತ್ಯ. ಪರಿಹಾರ ಕೊಡುವುದರ ಬದಲಿಗೆ, ಪ್ರಾಣ ಉಳಿಸಿಕೊಳ್ಳಲು ಆದ್ಯತೆ ನೀಡಬೇಕಾಗಿದೆ’ ಎಂದು ಹೇಳಿದರು.

ದುರ್ಘಟನೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಕಚೇರಿ ಟ್ವೀಟ್ ಮಾಡಿದೆ. ಪಿಎಂಎನ್‌ಆರ್‌ಎಫ್‌ನಲ್ಲಿ ತಲಾ ₹ 2 ಲಕ್ಷ ಪರಿಹಾರ ಒದಗಿಸಲಾಗುವುದು’ ಎಂದು ಎಂದು ತಿಳಿಸಿದೆ.


ಬೆಳಗಾವಿ ತಾಲ್ಲೂಕಿನ ಬಡಾಲ ಅಂಕಲಗಿ ಗ್ರಾಮದಲ್ಲಿ ಮಳೆಯಿಂದಾಗಿ ಮನೆಯ ಗೋಡೆ ಕುಸಿದು ತಮ್ಮ ಕುಟುಂಬದ ಆರು ಮಂದಿಯನ್ನು ಕಳೆದುಕೊಂಡ ಭೀಮಪ್ಪ ಖನಗಾಂವಿ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ ಪರಿಹಾರದ ಚೆಕ್ ಅನ್ನು ಗುರುವಾರ ನೀಡಿದರು. ಡಿಸಿಪಿ ವಿಕ್ರಂ ಅಮಟೆ, ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ, ಉಪ ವಿಭಾಗಾಧಿಕಾರಿ ರವೀಂದ್ರ ಕರಲಿಂಗಣ್ಣವರ ಇದ್ದಾರೆ

ಕೆಟಿಪಿಪಿ ನಿಯಮ ಉಲ್ಲಂಘನೆ ಆಗಿಲ್ಲ: ಸೆಸ್ಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಕೃಷಿ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವ ಉದ್ದೇಶಕ್ಕೆ ಕರೆದಿದ್ದ ಟೆಂಡರ್‌ನಲ್ಲಿ ಕೆಟಿಪಿಪಿ ನಿಯಮಗಳ ಉಲ್ಲಂಘನೆ ಆಗಿಲ್ಲ ಎಂದು ‘ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ’(ಸೆಸ್ಕ್) ಸ್ಪಷ್ಟಪಡಿಸಿದೆ.

ವಿದ್ಯುತ್ ಮೂಲಸೌಕರ್ಯವನ್ನು ಒದಗಿಸಲು ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿತ್ತು. ಇದಕ್ಕಾಗಿ ಕೆಟಿಪಿಪಿ ನಿಯಮಗಳ ಅರ್ಹತಾ ಮಾನದಂಡಗಳನ್ನು ನಿರ್ಧರಿಸಿ ನಿಗದಿಪಡಿಸಲು ನಿರ್ದೇಶಕರ ಅಧ್ಯಕ್ಷತೆಯಲ್ಲಿ ಉನ್ನತ ಅಧಿಕಾರಿಗಳನ್ನು ಒಳಗೊಂಡ ಅರ್ಹತಾ ಮಾನದಂಡಗಳ ಸಮಿತಿಯನ್ನೂ ರಚಿಸಲಾಗಿತ್ತು. ಸಮಿತಿ ನಿಗದಿಪಡಿಸಿದ ಅರ್ಹತಾ ಮಾನದಂಡಗಳನ್ನು ಅಳವಡಿಸಿಕೊಂಡೇ ಟೆಂಡರ್ ಆಹ್ವಾನಿಸಲಾಗಿತ್ತು ಎಂದು ಹೇಳಿದೆ.

ಕೆಟಿಪಿಪಿ ನಿಯಮ ಉಲ್ಲಂಘನೆಯ ವರದಿಯು ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ನಂತರ ಸಮಿತಿಯು ಮತ್ತೊಮ್ಮೆ ಸಭೆ ನಡೆಸಿ ಅರ್ಹತಾ ಮಾನದಂಡಗಳನ್ನು ಮರು ಪರಿಶೀಲನೆ ನಡೆಸಿತು. ನಿಯಮದಲ್ಲಿ ಯಾವುದೇ ಉಲ್ಲಂಘನೆ ಆಗಿಲ್ಲ ಎಂದು ಸಮಿತಿ ವರದಿ ನೀಡಿದೆ ಎಂದು ನಿಗಮ ತಿಳಿಸಿದೆ.

ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳು ಹಾಗೂ ಚನ್ನರಾಯಪಟ್ಟಣ ವಿಭಾಗ ವ್ಯಾಪ್ತಿಯಲ್ಲಿ ಕಾಮಗಾರಿ ನಡೆಸಲು ₹266.80 ಕೋಟಿಗಳ 24 ಲಾಟ್‌ಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಟೆಂಡರ್‌ಗಳ ತಾಂತ್ರಿಕ–ವಾಣಿಜ್ಯ ಬಿಡ್‌ಗಳನ್ನು ತೆರೆಯಲಾಗಿದ್ದು ಒಟ್ಟು 48 ಬಿಡ್‌ದಾರರು ಭಾಗವಹಿಸಿದ್ದಾರೆ. ಈ ಬಿಡ್‌ಗಳ ಮೌಲ್ಯಮಾಪನಾ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಎಂದು ನಿಗಮ ಹೇಳಿದೆ.

ಸ್ಮಶಾನ ಜಾಗದ ಕೊರತೆ ಆದೇಶ ಪಾಲನೆ ವಿಳಂಬ ಆರೋಪ

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಖುದ್ದು ಹಾಜರಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶವ ಸಂಸ್ಕಾರಕ್ಕೆ ಸ್ಮಶಾನದ ಜಾಗ ಇಲ್ಲದ ಗ್ರಾಮ ಹಾಗೂ ಪಟ್ಟಣಗಳಿಗೆ ಕಾಲಮಿತಿಯೊಳಗೆ ಅಗತ್ಯ ಜಮೀನು ಮಂಜೂರು ಮಾಡುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಪಾಲನೆಯಲ್ಲಿ ವಿಳಂಬ ಆಗಿರುವ ಕುರಿತಂತೆ ವಿವರಣೆ ನೀಡಲು ನ. 11ರಂದು ವಿಚಾರಣೆಗೆ ಖುದ್ದು ಹಾಜರಾಗಿ’ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಹೈಕೋರ್ಟ್ ನಿರ್ದೇಶಿಸಿದೆ.

ನಗರದ ವಕೀಲ ಮಹಮ್ಮದ್ ಇಕ್ಬಾಲ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರು ವಾದ ಮಂಡಿಸಿ, ‘ಕೋರ್ಟ್ ಆದೇಶ ನೀಡಿ ಎರಡು ವರ್ಷ ಕಳೆದರೂ ಸರ್ಕಾರ ಈವರೆಗೆ ಆದೇಶ ಪಾಲನೆ ಮಾಡಿಲ್ಲ’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಈ ಕುರಿತ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, 'ಈ ಪ್ರಕರಣದಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯನ್ನು ನ್ಯಾಯಾಲಯಕ್ಕೆ ಕರೆಸಿ ವಿವರಣೆ ಪಡೆಯದೆ ವಿಧಿಯಿಲ್ಲ’ ಎಂದು ಅಭಿಪ್ರಾಯಪಟ್ಟು ವಿಚಾರಣೆಯನ್ನು ನ. 11ಕ್ಕೆ ಮುಂದೂಡಿದೆ.

ಪ್ರಕರಣವೇನು?: 'ರಾಜ್ಯದಲ್ಲಿ ಶವ ಸಂಸ್ಕಾರಕ್ಕೆ ಜಾಗ ಇಲ್ಲದ 6 ಸಾವಿರಕ್ಕೂ ಅಧಿಕ ಕಂದಾಯ ಗ್ರಾಮ, ಜನವಸತಿ ಪ್ರದೇಶ ಹಾಗೂ 218 ಪಟ್ಟಣ ಪ್ರದೇಶಗಳಲ್ಲಿ ಅಗತ್ಯ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಮಹಮ್ಮದ್ ಇಕ್ಬಾಲ್ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

2019ರ ಆಗಸ್ಟ್ 23ರಂದು ಈ ಅರ್ಜಿ ವಿಲೇವಾರಿ ಮಾಡಿದ್ದ ಹೈಕೋರ್ಟ್, ‘ಸ್ಮಶಾನ ಜಾಗ ಇಲ್ಲದ ಗ್ರಾಮಗಳು ಮತ್ತು ಪಟ್ಟಣಗಳಿಗೆ ಅಗತ್ಯ ಜಮೀನು ಒದಗಿಸಲು 6 ತಿಂಗಳಲ್ಲಿ ಕ್ರಮ ಕೈಗೊಳ್ಳಬೇಕು’ ಎಂದು ಸರ್ಕಾರಕ್ಕೆ ನಿರ್ದೇಶಿಸಿತ್ತು.

'ನಿಗದಿತ ಸಮಯದಲ್ಲಿ ಹೈಕೋರ್ಟ್ ಆದೇಶ ಪಾಲನೆ ಆಗಿಲ್ಲ’ ಎಂದು ಅರ್ಜಿದಾರರು ಈ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿದ್ದಾರೆ.

ವಸುಧೇಂದ್ರ, ಲಕ್ಷ್ಮಣ ತೆಲಗಾವಿಗೆ ‘ಗಳಗನಾಥ ಪ್ರಶಸ್ತಿ’

ಗದಗ: ಹಾವೇರಿಯ ಗಳಗನಾಥ ಮತ್ತು ರಾಜಪುರೋಹಿತ ಪ್ರತಿಷ್ಠಾನ ನೀಡುವ ‘ಗಳಗನಾಥ ಪ್ರಶಸ್ತಿ’ಗೆ ಲೇಖಕ ವಸುಧೇಂದ್ರ ಹಾಗೂ ‘ರಾಜಪುರೋಹಿತ ಸಂಶೋಧಕ ಪ್ರಶಸ್ತಿ’ಗೆ ಪ್ರೊ. ಲಕ್ಷ್ಮಣ ತೆಲಗಾವಿ ಆಯ್ಕೆಯಾಗಿದ್ದಾರೆ.


ವಸುಧೇಂದ್ರ


ಲಕ್ಷ್ಮಣ ತೆಲಗಾವಿ

ಗದಗ ನಗರದಲ್ಲಿ ಅ.10ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಪ್ರಶಸ್ತಿಯು ₹50 ಸಾವಿರ ನಗದು, ಫಲಕವನ್ನು ಒಳಗೊಂಡಿದೆ ಎಂದು ಗಳಗನಾಥ ಮತ್ತು ರಾಜಪುರೋಹಿತ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ದುಷ್ಯಂತ ನಾಡಗೌಡ ತಿಳಿಸಿದ್ದಾರೆ.

ವೃದ್ಧನ ಶವ ಹುಡುಕಲು ನದಿಗೆ ಇಳಿದ ಮೂವರು ನೀರುಪಾಲು

ಬಾಗಲಕೋಟೆ: ಹುನಗುಂದ ತಾಲ್ಲೂಕಿನ ಧನ್ನೂರು ಬಳಿ ಕೃಷ್ಣಾ ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ವೃದ್ಧನ ಶವ ಹುಡುಕಲು ಹೋದ ಆತನ ಇಬ್ಬರು ಸಂಬಂಧಿಗಳು ಹಾಗೂ ಬೋಟ್ ಚಾಲಕ ಗುರುವಾರ ನದಿ ಮಧ್ಯದಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ಗೆ ತುತ್ತಾಗಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ಹರನಾಳ ಗ್ರಾಮದ ಶಿವಪ್ಪ ಸಿದ್ದಪ್ಪ ಅಬಲೂರ (70) ಎರಡು ದಿನದ ಹಿಂದೆ ಸಾಲದ ಬಾಧೆಯಿಂದ ಬೇಸತ್ತು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರ ಶವ ಹುಡುಕಲು ಮೊಮ್ಮಗ ಯಮನಪ್ಪ ಸಾಬಣ್ಣ ಅಬಲೂರ (35) ಸಂಬಂಧಿ ಶರಣಗೌಡ ಭೀಮನಗೌಡ ಬಿರಾದಾರ (36), ಕೂಡಲಸಂಗಮದ ಪರಶುರಾಮ ಚನ್ನಪ್ಪ ತಳವಾರ (21) ತೆರಳಿದ್ದರು. ಪರಶುರಾಮ ಬೋಟ್ ಚಲಾಯಿಸುತ್ತಿದ್ದರು ಎನ್ನಲಾಗಿದೆ. ನದಿ ಮಧ್ಯೆ ಹಾದು ಹೋಗಿರುವ ವಿದ್ಯುತ್ ಕಂಬದ ಬಳಿಗೆ ಬೋಟ್ ಹೋದಾಗ ಹತ್ತಿರದಲ್ಲಿಯೇ ಇದ್ದ ವಿದ್ಯುತ್ ತಂತಿ ತಗುಲಿದೆ. ಆಗ ವಿದ್ಯುತ್ ಸ್ಪರ್ಶದಿಂದ ಆಘಾತಗೊಂಡು ಮೂವರು ನದಿಗೆ ಬಿದ್ದು ನೀರು ಪಾಲಾಗಿದ್ದಾರೆ ಎಂದು ತಿಳಿದುಬಂದಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಶವಗಳ ಹುಡುಕಾಟ ನಡೆಸಿದ್ದು, ವೃದ್ಧನ ಶವವನ್ನು ಸಂಜೆ ಹೊರ ತೆಗೆಯಲಾಯಿತು. ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಅಣ್ಣನಿಂದಲೇ ಅತ್ಯಾಚಾರ

ಶಹಾಪುರ (ಯಾದಗಿರಿ ಜಿಲ್ಲೆ): ಮನೆಗೆ ಕರೆದೊಯ್ಯುವುದಾಗಿ ನಂಬಿಸಿ, ಮಾರ್ಗ ಮಧ್ಯೆ ತಂಗಿಯ (ದೊಡ್ಡಪ್ಪನ ಪುತ್ರಿ) ಮೇಲೆ ಅಣ್ಣನೇ ಅತ್ಯಾಚಾರ ಮಾಡಿದ ಘಟನೆ ಸೋಮವಾರ (ಅ.4) ನಡೆದಿದ್ದು, ಬುಧವಾರ ಪ್ರಕರಣ ದಾಖಲಾಗಿದೆ. ಸುರಪುರ ತಾಲ್ಲೂಕಿನ ಗ್ರಾಮವೊಂದರ ನಿವಾಸಿಯಾದ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ‘ಅನಾರೋಗ್ಯದ ಕಾರಣ ಶಹಾಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು ಗ್ರಾಮಕ್ಕೆ ತೆರಳಲು ಬಸ್ ನಿಲ್ದಾಣದಲ್ಲಿ ತಂಗಿ ಯು ನಿಂತಿದ್ದ ವೇಳೆ ಅಣ್ಣನೇ ಗ್ರಾಮಕ್ಕೆ ಕರೆದೊಯ್ಯುವುದಾಗಿ ನಂಬಿಸಿ, ಕರೆದೊಯ್ದಿದ್ದ’ ಎಂದು ಶಹಾಪುರ ಸಿಪಿಐ ಶ್ರೀನಿವಾಸ ಅಲ್ಲಾಪುರೆ ತಿಳಿಸಿದ್ದಾರೆ. ‘ಮಾರ್ಗ ಮಧ್ಯೆ ಸೀತಾಫಲ ಹಣ್ಣು ತರಲು ಹೋಗೋಣ ಎಂದು ಹೇಳಿ ಕರೆದೊಯ್ದು ಅತ್ಯಾಚಾರ ಮಾಡಿದ್ದಾನೆ. ಆರೋಪಿ ಜೀವ ಬೆದರಿಕೆ ಹಾಕಿದ ಕಾರಣ ತಡವಾಗಿ ದೂರು ನೀಡಿರುವುದಾಗಿ ಸಂತ್ರಸ್ತೆ ಹೇಳಿಕೆ ನೀಡಿದ್ದಾಳೆ’ ಎಂದು ಮೂಲಗಳು ತಿಳಿಸಿವೆ.

ಪದವಿಗೆ ಕನ್ನಡ: ವಿವರಣೆ ಕೇಳಿದ ಹೈಕೋರ್ಟ್

ಕನ್ನಡ ಕಡ್ಡಾಯ ಪ್ರಶ್ನಿಸಿ ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ವಿದ್ಯಾರ್ಥಿಗಳಿಗೆ ಕನ್ನಡವನ್ನು ಒಂದು ಕಡ್ಡಾಯ ಭಾಷೆಯನ್ನಾಗಿ ಕಲಿಯಬೇಕೆಂದು ಹೊರಡಿಸಿರುವ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವರಣೆ ಕೇಳಿದೆ.

ಈ ಸಂಬಂಧ, ಸಂಸ್ಕೃತ ಭಾರತಿ (ಕರ್ನಾಟಕ) ಟ್ರಸ್ಟ್, ಮಹಾವಿದ್ಯಾಲಯ ಸಂಸ್ಕೃತ ಪ್ರಾಧ್ಯಾಪಕ ಸಂಘ, ಹಯಗ್ರೀವ ಟ್ರಸ್ಟ್ ಮತ್ತು ವ್ಯೋಮಾ ಲಿಂಗ್ವಿಸ್ಟಿಕ್ ಲ್ಯಾಬ್ ಫೌಂಡೇಷನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ವಾದ ಆಲಿಸಿದ ನ್ಯಾಯಪೀಠ, ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಶುಕ್ರವಾರಕ್ಕೆ (ಅ.8) ಮುಂದೂಡಿದೆ.

ಏನಿದು ಅರ್ಜಿ?:

"ರಾಜ್ಯ ಸರ್ಕಾರ 2021ರ ಆ.7 ಮತ್ತು ಸೆ.15ರಂದು ಹೊರಡಿಸಿರುವ ಎರಡು ಆದೇಶಗಳ ಮೂಲಕ ಪದವಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಕಲಿಕೆ ಕಡ್ಡಾಯಗೊಳಿಸಿದೆ. ಇದು ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ವಿರುದ್ಧವಾಗಿದೆ. ಎನ್‌ಇಪಿ ಪ್ರಕಾರ ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಇಂತಹುದೇ ಭಾಷೆಯನ್ನು ಕಲಿಯಬೇಕೆಂದು ಒತ್ತಡ ಹೇರುವಂತಿಲ್ಲ. ಇದು ಸಂವಿಧಾನದ ಕಲಂ14 ಕ್ಕೆ ವಿರುದ್ಧವಾಗಿದೆ" ಎಂಬುದು ಅರ್ಜಿದಾರರ ಆಕ್ಷೇಪ.

"ಈ ಆದೇಶದಿಂದಾಗಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಪ್ರವೇಶ ಮತ್ತು ಹಕ್ಕುಗಳಿಗೂ ತೊಂದರೆ ಆಗಲಿದೆ. ವಿದ್ಯಾರ್ಥಿಗಳು ಅನಿವಾರ್ಯವಾಗಿ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಅಲ್ಲದೆ, ರಾಜ್ಯದಲ್ಲಿ 1,32,000 ವಿದ್ಯಾರ್ಥಿಗಳು ಮತ್ತು 600 ಸಂಸ್ಕೃತ ಶಿಕ್ಷಕರು, 3,000 ಹಿಂದಿ ಶಿಕ್ಷಕರು ಸೇರಿದಂತೆ ನಾನಾ ಭಾಷೆಗಳನ್ನು ಬೋಧಿಸುವ ಸುಮಾರು 4 ಸಾವಿರ ಪ್ರಾಧ್ಯಾಪಕರಿಗೆ ತೊಂದರೆ ಆಗಲಿದೆ. ಅಲ್ಲದೆ, 12ನೇ ತರಗತಿವರೆಗೆ ಕನ್ನಡವನ್ನು ಕಲಿಯದ ವಿದ್ಯಾರ್ಥಿಗಳು ಏಕಾಏಕಿ ಕನ್ನಡ ಕಲಿಯಬೇಕಾದ ತೊಂದರೆ ಎದುರಿಸಬೇಕಾಗುತ್ತದೆ" ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಅತ್ಯಾಚಾರ ಪ್ರಕರಣ: ಮತ್ತೆ ಮೂವರ ಬಂಧನ

ಸುರಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ ಅತ್ಯಾಚಾರಕ್ಕೆ ಯತ್ನಿಸಿ, ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಮಹಿಳೆ ಕೊಲೆ ಮಾಡಿದ ಪ್ರಕರಣ ಸಂಬಂಧ ತಿರುಪತಿ ಮರೆಪ್ಪ ಕರಿಗುಡ್ಡ, ಗೋವಿಂದ ಮರೆಪ್ಪ ಕರಿಗುಡ್ಡ ಮತ್ತು ಬಸಪ್ಪ ಗೋಪಯ್ಯ ಅಳ್ಳಳ್ಳಿ ಎಂಬುವರನ್ನು ಗುರುವಾರ ಬಂಧಿಸಲಾಗಿದೆ.

‘ಒಟ್ಟು 10 ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಮೊದಲ ಆರೋಪಿ ಗಂಗಪ್ಪ ಅಳ್ಳಳ್ಳಿಯನ್ನು ಈಗಾಗಲೇ ಬಂಧಿಸಲಾಗಿದೆ’ ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಸುನೀಲಕುಮಾರ ಮೂಲಿಮನಿ ತಿಳಿಸಿದ್ದಾರೆ.

ಐಟಿ ದಾಳಿ: ಉಪಚುನಾವಣೆ ಮೇಲೆ ಪರಿಣಾಮ?

ಪ್ರಜಾವಾಣಿ ವಾರ್ತೆ

ಪ್ರಜಾ ಮತ — ಜನತಂತ್ರದ ಹಬ್ಬ 2021

ಬೆಂಗಳೂರು: ಶಾಸಕ ಬಿ.ಎಸ್. ಯಡಿಯೂರಪ್ಪ ಅವರ ಆಪ್ತರ ಮೇಲೆ ಗುರುವಾರ ಆದಾಯ ತೆರಿಗೆ ದಾಳಿ ನಡೆದಿರುವುದು ಮುಂಬರುವ ಹಾನಗಲ್ ಮತ್ತು ಸಿಂದಗಿ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಮೇಲೆ ಪ್ರಭಾವ ಬೀರುವುದೇ ಎಂಬ ಚರ್ಚೆ ಬಿಜೆಪಿ ವಲಯದಲ್ಲಿ ಆರಂಭವಾಗಿದೆ.

ಈ ಬೆಳವಣಿಗೆಗಳಿಂದ ಯಡಿಯೂರಪ್ಪ ಮುನಿಸಿಕೊಂಡು ಚುನಾವಣಾ ಪ್ರಚಾರಕ್ಕೆ ಹೋಗದೇ ಇದ್ದರೆ, ನಿಶ್ಚಿತವಾಗಿಯೂ ಚುನಾವಣೆ ಮೇಲೆ ಪ್ರಭಾವ ಬೀರಬಲ್ಲದು. ಈಗಲೂ ಪ್ರಭಾವಿಯಾಗಿರುವುದರಿಂದ ಲಿಂಗಾಯಿತ ಸಮುದಾಯದ ಮತದಾರರು ಬಿಜೆಪಿಗೆ ಕೈಕೊಡುವ ಸಾಧ್ಯತೆ ಇದೆ ಎಂಬ ವ್ಯಾಖ್ಯಾನವೂ ನಡೆದಿದೆ.

ಉಪಚುನಾವಣೆಯಲ್ಲಿ ಪ್ರಚಾರ ನಡೆಸಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುವುದಾಗಿ ಯಡಿಯೂರಪ್ಪ ಹೇಳಿದ್ದು, ಅದಕ್ಕಾಗಿ ಸಿದ್ಧತೆಯನ್ನೂ ನಡೆಸಿಕೊಂಡಿದ್ದರು. ದಿಢೀರ್ ಬೆಳವಣಿಗೆಯಿಂದ ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ. ವಿಜಯೇಂದ್ರ ಒತ್ತಡಕ್ಕೆ ಒಳಗಾಗುವುದು ಸಹಜ. ತಮಗೆ ಆಗಿರುವ ಆಘಾತವನ್ನು ಬಹಿರಂಗಪಡಿಸದೇ ಇರಲು ಯಡಿಯೂರಪ್ಪ ಒಮ್ಮೆ ಕ್ಷೇತ್ರಗಳಲ್ಲಿ ಮುಖ ತೋರಿಸಲು ಹೋಗಬಹುದು. ಆದರೆ, ವಿರೋಧ ಪಕ್ಷಗಳು ಈ ದಾಳಿಯನ್ನು ಚುನಾವಣಾ ಅಸ್ತ್ರವಾಗಿ ಬಳಸುವ ಸಾಧ್ಯತೆ ಇದೆ. ಇದರಿಂದ ಬಿಜೆಪಿಗೆ ಕಠಿಣ ಎನಿಸಿರುವ ಈ ಕ್ಷೇತ್ರಗಳಲ್ಲಿ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂದು ಮೂಲಗಳು ಹೇಳಿವೆ.

ಈ ಎರಡೂ ಕ್ಷೇತ್ರಗಳ ಉಸ್ತುವಾರಿಗಳ ಪಟ್ಟಿಯಲ್ಲಿ ಆರಂಭದಲ್ಲಿ ಬಿ.ವೈ. ವಿಜಯೇಂದ್ರ ಅವರ ಹೆಸರು ಇರಲಿಲ್ಲ. ಆದರೆ, ಅವರ ಬೆಂಬಲಿಗರಿಂದ ಟೀಕೆಗಳು ಕೇಳಿ ಬಂದಿದ್ದರಿಂದ ಬಳಿಕ ಹೆಸರು ಸೇರಿಸಲಾಗಿತ್ತು. ಚುನಾವಣಾ ಪ್ರಚಾರದ ಪಟ್ಟಿ ಸಿದ್ಧವಾಗ ಬೇಕಿದೆ. ಅದರಲ್ಲಿ ಬಿಎಸ್‌ವೈ ಅವರ ಹೆಸರಿಲ್ಲದಿದ್ದರೆ ಅವರು ಪ್ರಚಾರಕ್ಕೆ ಹೋಗುವ ಸಾಧ್ಯತೆ ಕಡಿಮೆ ಎಂದೂ ತಿಳಿಸಿವೆ.

ಉಪಚುನಾವಣಾ ಪ್ರಚಾರ ಸಮಯದ ನಿರ್ಬಂಧ

ಸಿಂದಗಿ ಮತ್ತು ಹಾನಗಲ್ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಪ್ರಚಾರದ ಸಮಯವನ್ನು ಕೋವಿಡ್ ಕಾರಣದಿಂದಾಗಿ ರಾತ್ರಿ 7 ರಿಂದ ಬೆಳಿಗ್ಗೆ 10 ಗಂಟೆಯವರೆಗೆ ನಿರ್ಬಂಧಿಸಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಅಲ್ಲದೆ, ಮತಎಣಿಕೆಯ ದಿನ ಎಣಿಕೆ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಚುನಾವಣಾ ಅಧಿಕಾರಿಗಳು, ಸಿಬ್ಬಂದಿ ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಎರಡು ಡೋಸ್ ಕೋವಿಡ್ ಲಸಿಕೆಯನ್ನು ಪಡೆದಿರಬೇಕು ಎಂದು ತಿಳಿಸಿದೆ. ಒಂದು ಡೋಸ್ ಲಸಿಕೆ ಪಡೆದವರು ಮತ ಎಣಿಕೆಯ ದಿನಕ್ಕೆ 72 ಗಂಟೆ ಮುಂಚಿತವಾಗಿ ಆರ್‌ಟಿಪಿಸಿಆರ್ ಪ್ರಮಾಣ ಪತ್ರ ಪಡೆಯಬೇಕು. ಒಂದೂ ಡೋಸ್ ಲಸಿಕೆ ಪಡೆಯದವರು 48 ಗಂಟೆಯೊಳಗಿನ ಆರ್‌ಟಿಪಿಸಿಆರ್ ಪ್ರಮಾಣಪತ್ರವನ್ನು ಸಂಬಂಧಿಸಿದ ಮತ ಎಣಿಕೆ ಕೇಂದ್ರದ ಅಧಿಕಾರಿಗೆ ಸಲ್ಲಿಸಬೇಕು ಎಂದು ಆಯೋಗ ತಿಳಿಸಿದೆ.

ಉಪಚುನಾವಣೆಯಲ್ಲಿ ಅಭ್ಯರ್ಥಿಗಳ ಚುನಾವಣಾ ಒಟ್ಟು ಖರ್ಚನ್ನು ₹ 30.80 ಲಕ್ಷಕ್ಕೆ ಮಿತಿಗೊಳಿಸಲಾಗಿದೆ ಎಂದೂ ಆಯೋಗ ಹೇಳಿದೆ.

'ಕಾಂಗ್ರೆಸ್ ಮತಬ್ಯಾಂಕ್ ಒಡೆಯುವ ಉದ್ದೇಶವಿಲ್ಲ'

ವಿಜಯಪುರ: 'ಕಾಂಗ್ರೆಸ್ ಪಕ್ಷದ ಮತಬ್ಯಾಂಕ್ ಒಡೆಯುವ ಸಲುವಾಗಿ ಸಿಂದಗಿ, ಹಾನಗಲ್ ಕ್ಷೇತ್ರ ಉಪಚುನಾವಣೆಗಳಲ್ಲಿ ಅಲ್ಪ ಸಂಖ್ಯಾತ ಅಭ್ಯರ್ಥಿಗಳನ್ನು ಕಣಕ್ಕಿಳಿಸಿಲ್ಲ' ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸಿಂದಗಿಯಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮ ಪಕ್ಷ ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿರುವುದಕ್ಕೆ ಕೀಳುಮಟ್ಟದ ಪ್ರಚಾರ ಮಾಡುವುದನ್ನು ಕಾಂಗ್ರೆಸ್‌ನವರು ನಿಲ್ಲಿಸಬೇಕು. ಕಾಂಗ್ರೆಸ್ ನಾಯಕರ ನಿಜ ಬಣ್ಣ ಬಯಲು ಮಾಡಲೆಂದೇ ಎರಡೂ ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯದ ವಿದ್ಯಾವಂತರನ್ನು ಕಣಕ್ಕಿಳಿಸಿದ್ದೇನೆ ಎಂದು ಹೇಳಿದರು.

ಕಾಂಗ್ರೆಸ್ ನಾಯಕರ ಅನುಮತಿ ಪಡೆದು ನಾವು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಿತ್ತೇ? ಬಿಜೆಪಿಯೊಂದಿಗೆ ಒಳ ಒಪ್ಪಂದ ಮಾಡಿಕೊಂಡಿದ್ದರೆ ನಾನೇಕೆ ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಮಾತನಾಡುತ್ತಿದ್ದೆ ಎಂದು ಪ್ರಶ್ನಿಸಿದರು.

'ಜೆಡಿಎಸ್‌ಗೆ ಯಾವಾಗಲೂ ಕಾಂಗ್ರೆಸ್ ಟಾರ್ಗೆಟ್'



ಹುಬ್ಬಳ್ಳಿ: 'ಹಾನಗಲ್ ಹಾಗೂ ಸಿಂದಗಿ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗುರಿಯಾಗಿಸಿ ಹಾಗೂ ಬಿಜೆಪಿಗೆ ನೆರವಾಗಲು ಜೆಡಿಎಸ್ ಅಲ್ಪಸಂಖ್ಯಾತ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗುರುವಾರ ಆರೋಪಿಸಿದರು. ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಜೆಡಿಎಸ್ ಪದೇ ಪದೇ ಕಾಂಗ್ರೆಸ್ ಅನ್ನೇ ಟಾರ್ಗೆಟ್ ಮಾಡುತ್ತಿದೆ. ಹಿಂದೆ ಬಸವಕಲ್ಯಾಣದಲ್ಲೂ ಹೀಗೇ ಮಾಡಿತ್ತು. ಅಲ್ಪಸಂಖ್ಯಾತ ಅಭ್ಯರ್ಥಿಗಳನ್ನು ಎಲ್ಲಿ ಕಣಕ್ಕಿಳಿಸಬೇಕಿತ್ತೊ ಅಲ್ಲಿ ನಿಲ್ಲಿಸಿಲ್ಲ' ಎಂದರು.

ನಾಜಿಯಾ ಶಕೀಲ್ ಅಂಗಡಿ (ಜೆಡಿಎಸ್)	
ಅಭ್ಯರ್ಥಿ	ಜೆಡಿಎಸ್
ವಯಸ್ಸು	34
ವಿದ್ಯಾರ್ಹತೆ	ಎಂ.ಎ., ಬಿಇಡಿ
ವೃತ್ತಿ	ಸ್ವಂತ ಉದ್ಯೋಗ
ಕೈಯಲ್ಲಿರುವ ನಗದು	ಸ್ವಂತ ₹2 ಲಕ್ಷ, ಪತಿ ಶಕೀಲ್ ಅಂಗಡಿ ಬಳಿ ₹50 ಸಾವಿರ
ಬ್ಯಾಂಕ್ ಖಾತೆಯಲ್ಲಿ	ಸ್ವಂತ– ₹ 4.24 ಲಕ್ಷ, ಪತಿಯ ಬಳಿ– ₹1.65ಲಕ್ಷ
ವಿಮಾಕಂಪನಿ	ಇಲ್ಲ, ಪತಿ ಬಳಿ ₹42.75 ಲಕ್ಷ
ಹೂಡಿಕೆ	ಸ್ವಂತ ₹7.70 ಲಕ್ಷ, ಪತಿ ಹೂಡಿಕೆ ಮಾಡಿಲ್ಲ
ವಾಹನಗಳು	ಟಾಟಾ ಸಫಾರಿ, ಪತಿಯ ಬಳಿ ಇಲ್ಲ
ಆಭರಣ	520 ಗ್ರಾಂ ಬಂಗಾರ(₹ 24 ಲಕ್ಷ), 50 ಗ್ರಾಂ ಬೆಳ್ಳಿ, ಪತಿ ಬಳಿ ಇಲ್ಲ
ಒಟ್ಟು ಚರಾಸ್ತಿ ಮೌಲ್ಯ	₹10.70 ಲಕ್ಷ, ಪತಿ ₹ 24.70 ಲಕ್ಷ
ಒಟ್ಟು ಸ್ಥಿರಾಸ್ತಿ ಮೌಲ್ಯ	ಸ್ಥಿರಾಸ್ತಿ ₹ 1 ಲಕ್ಷ(1 ಎಕರೆ ಜಮೀನು), ಪತಿ ಬಳಿ ಇರುವ ಸ್ಥಿರಾಸ್ತಿ ₹ 9.60 ಲಕ್ಷ (6 ಎಕರೆ ಕೃಷಿ ಭೂಮಿ)
ಬ್ಯಾಂಕ್ ಸಾಲ	ಇಲ್ಲ, ಪತಿ ಮಾಡಿರುವ ಸಾಲ ₹7.01 ಲಕ್ಷ
ಇತರೆ ಸಾಲ	ಇಲ್ಲ, ಪತಿ ಮಾಡಿರುವ ಸಾಲ ಇಲ್ಲ

ಹೆಸರು	ನಿಯಾಜ್ ಶೇಖ್
ಅಭ್ಯರ್ಥಿ	ಜೆಡಿಎಸ್
ವಯಸ್ಸು	36
ವಿದ್ಯಾರ್ಹತೆ	ಬಿ.ಇ. ಕಂಪ್ಯೂಟರ್ ಸೈನ್ಸ್
ವೃತ್ತಿ	ಸಮಾಜ ಸೇವೆ
ಕೈಯಲ್ಲಿರುವ ನಗದು	₹25 ಸಾವಿರ
ಬ್ಯಾಂಕ್ ಖಾತೆಯಲ್ಲಿ	₹46 ಲಕ್ಷ;
ವಾಹನಗಳು	ಇಲ್ಲ
ಆಭರಣ	ಪತ್ನಿ ಬಳಿ 30 ಗ್ರಾಂ ಬಂಗಾರದ ಆಭರಣದ ಮೌಲ್ಯ ₹1,33,550
ಒಟ್ಟು ಮೌಲ್ಯ	
ಸ್ಥಿರಾಸ್ತಿ	ಇಲ್ಲ
ಪಾವತಿಸಬೇಕಿರುವ ಸಾಲ	₹8,62,589

ಶ್ರೀನಿವಾಸ್ ವಿಪ್ಪರಾವ್ ಮಾನೆ (ಕಾಂಗ್ರೆಸ್)	
ಅಭ್ಯರ್ಥಿ	ಕಾಂಗ್ರೆಸ್
ವಯಸ್ಸು	47
ವಿದ್ಯಾರ್ಹತೆ	ಬಿಕಾಂ
ವೃತ್ತಿ	ಉದ್ಯಮಿ
ಕೈಯಲ್ಲಿರುವ ನಗದು	ಸ್ವಂತ– ₹21 ಲಕ್ಷ, ಪತ್ನಿ ಉಷಾ ಬಳಿ– ₹70 ಸಾವಿರ
ಬ್ಯಾಂಕ್ ಖಾತೆಯಲ್ಲಿ	ಸ್ವಂತ– ₹27 ಲಕ್ಷ, ಪತ್ನಿ ಬಳಿ– ₹15 ಲಕ್ಷ
ಅಂಚೆ ಕಚೇರಿ, ವಿಮಾಕಂಪನಿ	₹4.89 ಲಕ್ಷ, ಪತ್ನಿ– ₹2.68 ಲಕ್ಷ
ಹೂಡಿಕೆ	ಸ್ವಂತ– ₹1.04 ಕೋಟಿ, ಪತ್ನಿ– ₹26 ಲಕ್ಷ
ವಾಹನಗಳು	ಇಲ್ಲ
ಆಭರಣ	ಪತ್ನಿ– 498 ಗ್ರಾಂ (₹5.80 ಲಕ್ಷ)
ಒಟ್ಟು ಚರಾಸ್ತಿ ಮೌಲ್ಯ	₹2.26 ಕೋಟಿ
ಒಟ್ಟು ಸ್ತಿರಾಸ್ತಿ ಮೌಲ್ಯ	₹1.83 ಕೋಟಿ
ಬ್ಯಾಂಕ್ ಸಾಲ	₹22.25 ಲಕ್ಷ
ಇತರೆ ಸಾಲ	₹1.57 ಕೋಟಿ

ರೇವತಿ ಉದಾಸಿಗೆ ತಪ್ಪಿದ ಟಿಕೆಟ್: ಆಕ್ರೋಶ

ಪ್ರಜಾವಾಣಿ ವಾರ್ತೆ

ಅಕ್ಕಿಆಲೂರ (ಹಾವೇರಿ ಜಿಲ್ಲೆ): ಹಾನಗಲ್ ವಿಧಾನಸಭೆ ಉಪ ಚುನಾವಣೆಗೆ ಬಿಜೆಪಿಯಿಂದ ಹಾವೇರಿಯ ಮಾಜಿ ಶಾಸಕ ಶಿವರಾಜ್ ಸಜ್ಜನರ ಅವರಿಗೆ ಟಿಕೆಟ್ ಘೋಷಿಸಿದೆ.

ಗುರುವಾರ ಬೆಳಗಿನವರೆಗೂ ರೇವತಿ ಉದಾಸಿ ಅವರೇ ಪಕ್ಷದ ಅಭ್ಯರ್ಥಿ ಎನ್ನುವ ವಾತಾವರಣವಿತ್ತು. ಈ ಮಧ್ಯೆ ಬಿಜೆಪಿ ಹೊರಗಿನ ಅಭ್ಯರ್ಥಿಗೆ ಮಣೆ ಹಾಕಿದ್ದು, ಕಾರ್ಯಕರ್ತರಲ್ಲಿ ಅಸಮಾಧಾನ ಭುಗಿಲೆದ್ದಿದೆ.

ಹಾನಗಲ್ ಸೇರಿದಂತೆ ತಾಲೂಕಿನ ಅಕ್ಕಿಆಲೂರ, ಆಡೂರು ಸೇರಿದಂತೆ ಹಲವು ಗ್ರಾಮಗಳಲ್ಲಿ ರಸ್ತೆಗಿಳಿದು ದಿಢೀರ್ ಪ್ರತಿಭಟನೆ ನಡೆಸಿದ ಕಾರ್ಯಕರ್ತರು ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ಹೊರಹಾಕಿದರು. ಹಾನಗಲ್‌ನ ದಿ.ಸಿ.ಎಂ.ಉದಾಸಿ ಅವರ ಸಮಾಧಿ ಎದುರು ಹಲವು ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿದರು. ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ಸಲ್ಲಿಸುವ ಎಚ್ಚರಿಕೆ ಹಾಕಿ, ರಾಜೀನಾಮೆ ಪತ್ರಗಳನ್ನೂ ಪ್ರದರ್ಶಿಸಿದರು.

'ಪಕ್ಷ ನನಗೆ ಅವಕಾಶ ನೀಡಿದ್ದು, ಎಲ್ಲ ಕಾರ್ಯಕರ್ತರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ಎದುರಿಸುತ್ತೇನೆ' ಎಂದು ಶಿವರಾಜ್ ಸಜ್ಜನರ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ.
ಕಾರ್ಯನಿರ್ವಾಹಕ ಇಂಜಿನೀಯರ್‌ರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ.
ಸಂ: ಕಾನಿಇಂ/ಪಂರಾಇಂ/ವಿಕೊ/ 5054/ಟೆಂಡರ್‌ಪ್ರಕಟಣೆ/2021–22/1271
ದಿನಾಂಕ :05.10.2021

ಟೆಂಡರ್ ಪ್ರಕಟಣೆ

ಉಲ್ಲೇಖ 1. ಈ ಕಛೇರಿ ಟೆಂಡರ ಪ್ರಕರಣೆ ಸಂಖ್ಯೆ : 379 ದಿನಾಂಕ 09.06.2021
2.ಈ ಕಚೇರಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 470/ ದಿ : 23.06.2021.
ಈ ಕಛೇರಿ ಉಲ್ಲೇಖಿತ ಪ್ರಕಟಣೆಯಂತೆ ಇ–ಪ್ರೋಕ್ಯೂರಮೆಂಟನಲ್ಲಿ ಟೆಂಡರ್ ಇಂಡೆಂಟ್ ಸಂಖ್ಯೆ: 83723 ಯಲಬುರ್ಗಾ ತಾಲೂಕಿನ ಸಿದ್ನೆಕೊಪ್ಪ – ಯರೇಹಂಚಿನಾಳ ರಸ್ತೆ ಕಿಮಿ 3.00 ರಿಂದ ಸುಧಾರಣೆ ಹಾಗೂ ಡಾಂಬರೀಕರಣ, ಮತ್ತು 83724 ಯಲಬುರ್ಗಾ ತಾಲೂಕಿನ ಹೋಸುರದಿಂದ ಸೊಂಪೂರು ಕೂಡು (ಸಿಸಿ) ರಸ್ತೆ ಅಭಿವೃದ್ಧಿಪಡಿಸುವುದು (ಎಸ್ ಸಿ) ಕಾಮಗಾರಿ ಈ ಕಛೇರಿ ಟೆಂಡರ ನೋಟಿಫಿಕೇಶನ ಸಂ; 379 ದಿನಾಂಕ 9.06.2021ರ ಪತ್ರದಂತೆ ಟೆಂಡರ ಸ್ವೀಕರಿಸುವ ದಿನಾಂಕವನ್ನು ತಾಂತ್ರಿಕ ಕಾರಣಗಳಿಂದ ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿತ್ತು.; ಆದ್ದರಿಂದ ಸದರಿ ಟೆಂಡರಗಳನ್ನು ದಿನಾಂಕ 07.10.2021 ರಿಂದ 30.10.2021ರ ವರೆಗೆ ಡೌನಲೋಡ ಮಾಡಿಕೊಂಡು, ಹಾಗೂ ಟೆಂಡರ ಸಲ್ಲಿಸಲು ಕೊನೆಯ ದಿನಾಂಕವನ್ನು 30.10.2021ರ ಸಮಯ 4.00 ಗಂಟೆವರೆಗೆ ನಿಗದಿಪಡಿಸಿದ್ದು. ಟೆಂಡರ್ ತೆರೆಯುವ ದಿನಾಂಕವನ್ನು 01.11.2021ಕ್ಕೆ ನಿಗದಿಪಡಿಸಲಾಗಿದೆ.
ಸಹಿ/–(ರಂಗಯ್ಯ ಬಡಿಗೇರ)
ಕಾರ್ಯನಿರ್ವಾಹಕ ಇಂಜಿನೀಯರ್‌ರು, ಪಂ.ರಾ.ಇಂ. ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/313/ಎಂಸಿಎ/2021–22

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಕೃಭಾಜನಿನಿ ಅರಣ್ಯ ವಿಭಾಗ, ಆಲಮಟ್ಟಿ
ಕಛೇರಿ ದೂರವಾಣಿ ಸಂಖ್ಯೆ: 08426–281410
ಸಂ.ಕೃಭಾಜನಿನಿ/ಅರಣ್ಯ/ಬಿಯುಡಿ/ಡಿಟಿಪಿ/ಎಲ್.ಎಸ್.ಯೋ/ಇ–ಟೆಂಡರ್/2021–22/555 ದಿನಾಂಕ:04–10–2021.

ಅಲ್ಪಾವಧಿ ಟೆಂಡರ್ ಪ್ರಕಟಣೆ

[ಇ–ಪ್ರೋಕ್ಯೂರಮೆಂಟ್ ಮುಖಾಂತರ]
ಈ ಕೆಳಗೆ ನಮೂದಿಸಿದ ಲ್ಯಾಂಡಸ್ಕೇಪ್ ಯೋಜನೆಯ 8 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧೀನಿಯಮದಡಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.e-proc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು. ಇ–ಪ್ರೋಕ್ಯೂರ್‌ಮೆಂಟ್ ನಿಗದಿಪಡಿಸಿದಂತೆ ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮುಖಾಂತರ ಪಾವತಿಸತಕ್ಕದ್ದು.
ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತೆರೆಯುವ ದಿನಾಂಕಗಳು ಈ ಕೆಳಗಿನಂತಿವೆ.

ಕ್ರ ಸಂ	ವಿವರ	1ನೇ ಕರೆ ಟೆಂಡರ್ ದಿನಾಂಕ
1	ಟೆಂಡರ್ ಪ್ರಕಟಿಸುವ ದಿನಾಂಕ (ಅಂದಾಜು)	04–10–2021 ಸಂಜೆ 5–00 ಘಂಟೆವರೆಗೆ
2	ಪ್ರಿ ಬಿಡ್ ಮೀಟಿಂಗ್	11–10–2021 ಮಧ್ಯಾಹ್ನ 3.00 ಘಂಟೆಗೆ
3	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	16–10–2021 ಸಂಜೆ 5–00 ಘಂಟೆವರೆಗೆ
4	ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	18–10–2021 ಬೆಳಿಗ್ಗೆ 11–00 ಘಂಟೆಗೆ
5	ಆರ್ಥಿಕ ಬಿಡ್ ತೆರೆಯುವ ದಿನಾಂಕ	21–10–2021 ಬೆಳಿಗ್ಗೆ 11–00 ಘಂಟೆಗೆ

ಷರಾ: 1) ದಿನಾಂಕ 11–10–2021 ರಂದು ಮಧ್ಯಾಹ್ನ 3:00 ಗಂಟೆಗೆ ಪ್ರಿ ಬಿಡ್ ಮೀಟಿಂಗ್‌ನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೃಭಾಜನಿನಿ ಅರಣ್ಯ ವಿಭಾಗ, ಆಲಮಟ್ಟಿ ರವರ ಕಚೇರಿಯಲ್ಲಿ ನಿಗದಿಪಡಿಸಲಾಗಿದೆ. ಸದರಿ ಟೆಂಡರಿಗೆ ಸಂಭಂಧಿಸಿದಂತೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತ ರೂಪದಲ್ಲಿ **ದಿನಾಂಕ 08–10–2021** ರಂದು ಸಾಯಂಕಾಲ 5:00 ಘಂಟೆಯವರೆಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಸಲ್ಲಿಸಬೇಕು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೃಭಾಜನಿನಿ ಅರಣ್ಯ ವಿಭಾಗ ಆಲಮಟ್ಟಿ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಕೃಭಾಜನಿನಿ ಅರಣ್ಯ ವಿಭಾಗ, ಆಲಮಟ್ಟಿ
ಕಛೇರಿ ದೂರವಾಣಿ ಸಂಖ್ಯೆ: 08426–281410
ಸಂ.ಕೃಭಾಜನಿನಿ/ಅರಣ್ಯ/ಬಿಯುಡಿ/ಡಿಟಿಪಿ/ಎಲ್.ಎಸ್.ಯೋ/ಇ–ಟೆಂಡರ್/2021–22/557 ದಿನಾಂಕ:04–10–2021.

ಅಲ್ಪಾವಧಿ ಟೆಂಡರ್ ಪ್ರಕಟಣೆ

[ಇ–ಪ್ರೋಕ್ಯೂರಮೆಂಟ್ ಮುಖಾಂತರ]
ಈ ಕೆಳಗೆ ನಮೂದಿಸಿದ ಲ್ಯಾಂಡಸ್ಕೇಪ್ ಯೋಜನೆಯ 4 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧೀನಿಯಮದಡಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.e-proc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು. ಇ–ಪ್ರೋಕ್ಯೂರ್‌ಮೆಂಟ್ ನಿಗದಿಪಡಿಸಿದಂತೆ ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮುಖಾಂತರ ಪಾವತಿಸತಕ್ಕದ್ದು.
ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತೆರೆಯುವ ದಿನಾಂಕಗಳು ಈ ಕೆಳಗಿನಂತಿವೆ.

ಕ್ರ ಸಂ	ವಿವರ	1ನೇ ಕರೆ ಟೆಂಡರ್ ದಿನಾಂಕ
1	ಟೆಂಡರ್ ಪ್ರಕಟಿಸುವ ದಿನಾಂಕ (ಅಂದಾಜು)	04–10–2021 ಸಂಜೆ 5–00 ಘಂಟೆವರೆಗೆ
2	ಪ್ರಿ ಬಿಡ್ ಮೀಟಿಂಗ್	11–10–2021 ಮಧ್ಯಾಹ್ನ 3.00 ಘಂಟೆಗೆ
3	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	16–10–2021 ಸಂಜೆ 5–00 ಘಂಟೆವರೆಗೆ
4	ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	18–10–2021 ಬೆಳಿಗ್ಗೆ 11–00 ಘಂಟೆಗೆ
5	ಆರ್ಥಿಕ ಬಿಡ್ ತೆರೆಯುವ ದಿನಾಂಕ	21–10–2021 ಬೆಳಿಗ್ಗೆ 11–00 ಘಂಟೆಗೆ

ಷರಾ: 1) ದಿನಾಂಕ 11–10–2021 ರಂದು ಮಧ್ಯಾಹ್ನ 3:00 ಗಂಟೆಗೆ ಪ್ರಿ ಬಿಡ್ ಮೀಟಿಂಗ್‌ನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೃಭಾಜನಿನಿ ಅರಣ್ಯ ವಿಭಾಗ, ಆಲಮಟ್ಟಿ ರವರ ಕಚೇರಿಯಲ್ಲಿ ನಿಗದಿಪಡಿಸಲಾಗಿದೆ. ಸದರಿ ಟೆಂಡರಿಗೆ ಸಂಭಂಧಿಸಿದಂತೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತ ರೂಪದಲ್ಲಿ **ದಿನಾಂಕ 08–10–2021** ರಂದು ಸಾಯಂಕಾಲ 5:00 ಘಂಟೆಯವರೆಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಸಲ್ಲಿಸಬೇಕು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೃಭಾಜನಿನಿ ಅರಣ್ಯ ವಿಭಾಗ ಆಲಮಟ್ಟಿ

ದೆಹಲಿಯ ರೈತ ಚಳವಳಿ ದಿಕ್ಕು ತಪ್ಪುತ್ತಿದೆಯೇ?

'ಪ್ರಜಾಸತ್ತಾತ್ಮಕವಾಗಿ ಚರ್ಚೆ ನಡೆಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಮೂರು ಕೃಷಿ ತಿದ್ದುಪಡಿ ಕಾಯ್ದೆಗಳನ್ನು ರದ್ದುಪಡಿಸಲು ಒತ್ತಾಯಿಸಿ 11 ತಿಂಗಳಿನಿಂದ ದೆಹಲಿಯ ಗಡಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವರ ಪುತ್ರನ ಕಾರಿಗೆ ನಾಲ್ವರು ರೈತರು ಬಲಿಯಾಗಿದ್ದಾರೆ. ಅದರ ವಿರುದ್ಧ ಸ್ಫೋಟಗೊಂಡ ಆಕ್ರೋಶ ಹಿಂಸಾಚಾರಕ್ಕೆ ತಿರುಗಿ ಮತ್ತೆ ನಾಲ್ವರು ಮೃತಪಟ್ಟಿದ್ದಾರೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ 'ದೆಹಲಿಯ ರೈತ ಚಳವಳಿ ದಿಕ್ಕು ತಪ್ಪುತ್ತಿದ್ದೆಯೇ?' ವಿಷಯದ ಮೇಲೆ 'ಪ್ರಜಾವಾಣಿ' ಗುರುವಾರ ಆಯೋಜಿಸಿದ್ದ ಫೇಸ್ ಬುಕ್ ಲೈವ್ ಸಂವಾದದಲ್ಲಿ ಅತಿಥಿಗಳು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪೂರ್ಣ ವಿಡಿಯೊಗಾಗಿ– facebook.com/ prajavani.net

'ಫ್ಯಾಸಿಸ್ಟ್ ಧೋರಣೆ ನಿಲ್ಲಿಸಲಿ'



ರೈತರ ಚಳವಳಿ ದಾರಿ ತಪ್ಪುತ್ತಿಲ್ಲ. ಮುಂದೆಯೂ ತಪ್ಪುವುದಿಲ್ಲ. ಆದರೆ, ದಿಕ್ಕು ತಪ್ಪಿಸುವ ಕೆಲಸಗಳನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಮೂರು ಪ್ರಧಾನ ಶಕ್ತಿಗಳು ಈ ಚಳವಳಿಯ ದಾರಿ ತಪ್ಪಿಸಲು ಶಕ್ತಿ ಮೀರಿ ಯತ್ನಿಸುತ್ತಿವೆ. ಬಂಡವಾಳಶಾಹಿಗಳ ನಿಯಂತ್ರಣದಲ್ಲಿರುವ ಮಾಧ್ಯಮಗಳು (ಗೋಧಿ ಮೀಡಿಯಾ ಎನ್ನುವ) ಚಳವಳಿಯ ದಾರಿ ತಪ್ಪಿಸಲು ಯತ್ನಿಸುತ್ತಿವೆ. ಎರಡನೆಯದಾಗಿ, ಸುಳ್ಳುಗಳನ್ನು ಹಬ್ಬಿಸಲಾಗುತ್ತಿದೆ. ಇದನ್ನು ನಿಯಂತ್ರಿಸುವ ಯತ್ನವನ್ನು ಯಾರೂ ಮಾಡುತ್ತಿಲ್ಲ. ಮೂರನೆಯದಾಗಿ ಸರ್ಕಾರ ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಹಿಂಸೆಯನ್ನು ಪ್ರಚೋದಿಸುವವರು ದೇಶದ ನಾಯಕರಾಗುತ್ತಿದ್ದಾರೆ. ಸರ್ಕಾರವೇ ಹಿಂಸೆಯನ್ನು ಪ್ರಚೋದಿಸುತ್ತಿದೆ.

ಕೇಂದ್ರ ಸರ್ಕಾರ ಫ್ಯಾಸಿಸ್ಟ್ ಧೋರಣೆ ಬಿಟ್ಟು ಪ್ರಜಾಸತ್ತಾತ್ಮಕ ರೀತಿಯಲ್ಲಿ ಎಲ್ಲರ ಜತೆ ಚರ್ಚೆಗಳನ್ನು ನಡೆಸಬೇಕು. ಈ ಚಳವಳಿ ರಾಜಕೀಯ ಪ್ರೇರಿತವಾಗಿರಲು ಸಾಧ್ಯವಿಲ್ಲ. ಕಾಂಗ್ರೆಸ್‌ಗೆ ಇಂದು ಮಂಡಲ್ ಪಂಚಾಯ್ತಿ ಗೆಲ್ಲುವ ಶಕ್ತಿ ಇಲ್ಲ. ದುರ್ಬಲವಾಗಿರುವ ಕಾಂಗ್ರೆಸ್ ಪಕ್ಷಕ್ಕೆ ಒಂದು ವರ್ಷದವರೆಗೆ ರೈತರ ಚಳವಳಿಯನ್ನು ಹಿಡಿದುಕೊಟ್ಟುಕೊಳ್ಳುವ ಶಕ್ತಿ ಇದೆಯೇ? ಒಂದು ವೇಳೆ, ಚಳವಳಿಯಲ್ಲಿ ಖಾಲಿಸ್ತಾನಿಗಳು, ದೇಶದ್ರೋಹಿಗಳು ಭಾಗಿಯಾಗಿದ್ದರೆ ನಮ್ಮ ಸಶಕ್ತವಾದ ಮತ್ತು ಬಲಿಷ್ಠವಾಗಿರುವ ಗೃಹ ಸಚಿವರು ಏನು ಮಾಡುತ್ತಿದ್ದಾರೆ? ಅವರೆಲ್ಲರನ್ನೂ ಬಂಧಿಸಬಹುದಾಗಿತ್ತು.

ಪುರುಷೋತ್ತಮ ಬಿಳಿಮಲೆ, ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ

ಪ್ರಜಾವಾಣಿ ಸಂವಾದ

'ಕೇಂದ್ರ ಸರ್ಕಾರದ್ದು ದುರಹಂಕಾರದ ನಿಲುವು'



ರೈತ ಚಳವಳಿಯನ್ನು ಹತ್ತಿಕ್ಕುವ ಕಾರ್ಯವನ್ನು ಸರ್ಕಾರವೇ ಮಾಡುತ್ತಿದೆ. ರೈತ ಚಳವಳಿ ದಿಕ್ಕು ತಪ್ಪುತ್ತಿಲ್ಲ. ಆದರೆ, ದಿಕ್ಕು ತಪ್ಪಿಸಲು ಸರ್ಕಾರವೇ ನಿರಂತರವಾಗಿ ಷಡ್ಯಂತ್ರ ನಡೆಸುತ್ತಿದೆ. ಕೃಷಿ ಕಾಯ್ದೆಗಳ ವಿಷಯದಲ್ಲಿ ಕೇಂದ್ರ ಸರ್ಕಾರ ದುರಹಂಕಾರದ ನಿಲುವು ಕೈಗೊಂಡಿದೆ.

ಕೃಷಿ ಕಾಯ್ದೆಯನ್ನು ರಾತ್ರೋ ರಾತ್ರಿ ಜಾರಿಗೊಳಿಸಲಾಗಿದೆ. ಸ್ಥಾಯಿ ಸಮಿತಿ ಮಾಡಿದ ಶಿಫಾರಸುಗಳ ಆಧಾರದ ಮೇಲೆ ಕಾಯ್ದೆಯನ್ನು ಜಾರಿಗೊಳಿಸಬೇಕಾಗಿತ್ತು. ಆದರೆ, ಸಂಸತ್‌ನಲ್ಲಿ ಬಹುಮತ ಹೊಂದಿರುವುದನ್ನೇ ಮಾನದಂಡವಾಗಿರಿಸಿಕೊಂಡು ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಈ ಕಾಯ್ದೆ ರೈತರ ಪರವಾಗಿದ್ದರೆ ಎಲ್ಲರೂ ಒಪ್ಪಿಕೊಳ್ಳುತ್ತಿದ್ದರು. ಎಲ್ಲ ವಿರೋಧ ಪಕ್ಷಗಳು ಕಾಯ್ದೆಗೆ ವಿರೋಧ ವ್ಯಕ್ತಪಡಿಸಿವೆ.

ನ್ಯಾಯಾಂಗವು ಸಹ ಕುರುಡನಂತೆ ವರ್ತಿಸುತ್ತಿದೆ. ಯಾವುದೇ ಘಟನೆ ನಡೆದಾಗ ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಸಂತ್ರಸ್ತರನ್ನು ಭೇಟಿಯಾಗಿ ಸಾಂತ್ವನ ಹೇಳುತ್ತಾರೆ. ಇದು ಮಾನವೀಯತೆ. ಇದರ ಹಿಂದೆ ರಾಜಕೀಯ ಲಾಭ ಪಡೆಯುವ ಉದ್ದೇಶವಿಲ್ಲ. ಆದರೆ, 'ಇವರನ್ನು ತಡೆಯುವ ಕೆಲಸವನ್ನು ಉತ್ತರ ಪ್ರದೇಶ ಸರ್ಕಾರ ಮಾಡಿದೆ.

ಬ್ರಿಜೇಶ್ ಕಾಳಪ್ಪ, ಎಐಸಿಸಿ ವಕ್ತಾರ

'ಪ್ರತಿಭಟನೆ ಮೂರು ರಾಜ್ಯಗಳಿಗೆ ಸೀಮಿತವಾಗಿರುವುದೇಕೆ'




ಕೃಷಿ ವಲಯದಲ್ಲಿ ರಚನಾತ್ಮಕ ಸುಧಾರಣೆಗಳಾಗುವುದು ಅಗತ್ಯವಿದೆ. ಆದರೆ, ಒಂದು ವರ್ಷದಿಂದ ನಡೆಯುತ್ತಿರುವ ಚಳವಳಿಯಲ್ಲಿ ನಿಜವಾಗಿಯೂ ರೈತರು ಇದ್ದಾರೆಯೇ? ರೈತರು ಕಾಯ್ದು ಜಮೀನಿನ ಕೆಲಸವನ್ನು ಬಿಟ್ಟು ಇಷ್ಟು ಸುದೀರ್ಘವಾದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಸಾಧ್ಯವೇ?

ಮೂರು ರಾಜ್ಯಗಳನ್ನು ಹೊರತು ಪಡಿಸಿದರೆ ಬೇರೆ ರಾಜ್ಯಗಳಲ್ಲಿ ಪ್ರತಿಭಟನೆಗಳು ಏಕೆ ನಡೆಯುತ್ತಿಲ್ಲ. ಈ ಬಗ್ಗೆ ಚರ್ಚಿಸಿದಾಗ ಮಾತ್ರ ರೈತರ ಪ್ರತಿಭಟನೆ ಹಿಂದೆ ಯಾವ ಶಕ್ತಿಗಳಿವೆ ಅಥವಾ ಸರ್ಕಾರಕ್ಕೆ ಯಾವ ರೀತಿಯ ಪಟ್ಟಭದ್ರ ಹಿತಾಸಕ್ತಿ ಇದೆ ಎನ್ನುವುದು ಗೊತ್ತಾಗುತ್ತದೆ. ಪ್ರತಿಭಟನೆಯಲ್ಲಿರುವವರು ರೈತರು ಅಥವಾ ಇಲ್ಲವೋ ಎನ್ನುವುದು ಸಹ ಗೊತ್ತಾಗಬೇಕಾಗಿದೆ.

ಪ್ರತಿಭಟನೆ ಎಂದರೆ ರಸ್ತೆ ತಡೆ ಮಾಡುವುದು ಸರಿ ಅಲ್ಲ. ಉತ್ತರ ಪ್ರದೇಶದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಕ್ರಮಕೈಗೊಳ್ಳುತ್ತಿದ್ದಾರೆ. ರಾಜಕಾರಣಿಗಳು ಸಹ ಅಲ್ಲಿ ಹೋಗುವ ಅಗತ್ಯ ಇಲ್ಲ. ಪೊಲೀಸರು ಸಮರ್ಪಕವಾಗಿ ಕೆಲಸ ಮಾಡಲು ಅವಕಾಶ ನೀಡಬೇಕು.

ಆಶಾ ಕೃಷ್ಣಸ್ವಾಮಿ, ಪತ್ರಕರ್ತೆ

'ರಾಜಕೀಯ ಪ್ರೇರಿತ ಪ್ರತಿಭಟನೆ'



ರೈತರದ್ದು ರಾಜಕೀಯ ಪ್ರೇರಿತ ಪ್ರತಿಭಟನೆ. ಕೃಷಿ ಕಾಯ್ದೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದರೂ ಪ್ರತಿಭಟನೆ ಮುಂದುವರಿಸಲಾಗಿದೆ. ಹೀಗಾಗಿ, ಇದು ದಲ್ಲಾಳಿಗಳು ಮತ್ತು ಕೆಲ ರಾಜಕೀಯ ಪಕ್ಷಗಳ ಕುಮ್ಮಕ್ಕಿನ ಪ್ರತಿಭಟನೆ.

ಕೇಂದ್ರ ಸರ್ಕಾರ ಹಲವು ಬಾರಿ ರೈತರನ್ನು ಮಾತುಕತೆಗೆ ಆಹ್ವಾನಿಸಿದೆ. ಆದರೆ, ಸರ್ಕಾರದ ಯಾವುದೇ ಪ್ರಸ್ತಾವನೆಯನ್ನು ರೈತರು ಒಪ್ಪುತ್ತಿಲ್ಲ. ಉತ್ತರ ಪ್ರದೇಶದಲ್ಲಿ ನಡೆದ ಹಿಂಸಾಚಾರಕ್ಕೆ ಕಾಂಗ್ರೆಸ್ ಹೊಣೆಯಾಗಿದೆ. ಮುಂಬರುವ ವಿಧಾನಸಭೆ ಚುನಾವಣೆ ದೃಷ್ಟಿಯಿಟ್ಟುಕೊಂಡು ಬಿಜೆಪಿ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಈ ಹಿಂಸಾಚಾರ ನಡೆಸಲಾಗಿದೆ.

ಖಾಲಿಸ್ತಾನಿ ಹೋರಾಟಗಾರರು ಈ ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದಾರೆ. ಹೀಗಾಗಿ, ಇದಕ್ಕೆ ರೈತ ಚಳವಳಿ ಎಂದು ಹೇಗೆ ಕರೆಯುವುದು? ಸಂಸತ್‌ನಲ್ಲಿ ವಿರೋಧ ಪಕ್ಷಗಳ ಜತೆ ಚರ್ಚೆ ನಡೆಸಿಲ್ಲ. ಕಾಯ್ದೆಯಲ್ಲಿನ ಲೋಪಗಳ ಬಗ್ಗೆ ಸಂಸತ್‌ನಲ್ಲಿ ಚರ್ಚಿಸಬಹುದಿತ್ತು. ಕನಿಷ್ಠ ಬೆಂಬಲ ಬೆಲೆ ರದ್ದು ಮಾಡಲಾಗುತ್ತದೆ ಎಂದು ವಿರೋಧ ಪಕ್ಷಗಳು ಹುಯಿಲೆಬ್ಬಿಸಿವೆ. ಆದರೆ, ಅಕ್ಕಿ ಮತ್ತು ಗೋಧಿಗೆ ಅತಿ ಹೆಚ್ಚು ಕನಿಷ್ಠ ಬೆಂಬಲ ಬೆಲೆ ಘೋಷಿಸಲಾಗಿದೆ.

ಅಶ್ವತ್ಥನಾರಾಯಣಗೌಡ
ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ

'ಎನ್‌ಇಪಿ: ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಂಧಕಾರ'

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸಿ ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಭವಿಷ್ಯವನ್ನು ಅಂಧಕಾರಕ್ಕೆ ತಳ್ಳಿದೆ' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ದೂರಿದ್ದಾರೆ. 'ಅಕ್ಟೋಬರ್ ಆದರೂ ಶೈಕ್ಷಣಿಕ ವರ್ಷ ಆರಂಭಗೊಂಡಿಲ್ಲ. ಪಠ್ಯಕ್ರಮ ತಯಾರಿ ಆಗದಿರುವುದೇ ಇದಕ್ಕೆ ಕಾರಣ' ಎಂದಿದ್ದಾರೆ.

KARNATAKA GRAMIN BANK
Head Office: Ballari
TENDER NOTICE
Karnataka Gramin Bank, Head Office Ballari invites sealed Tenders from the dealers/ suppliers for supply of papers for Printing Books and Forms, Continuous stationery paper & Computer Stationary for a period from 01-11-2021 to 31.10.2022.The interested dealers / suppliers may contact the following address immediately and collect the Tender forms. They may also download the Tender form from our website: www. karnatakagraminbank.com. The last date for submission of duly filled in and sealed Tenders to the following address is 27-10-2021, 5.30 pm.
The Chief Manager, G.A Wing, Premises &Stock Section, Karnataka Gramin Bank, Head Office, No-32,Sanganakal Road, Gandhinagar, Ballari -583103 Ph: 08392-236461, 236418.
For details of Tender visit our website: **www.karnatakagraminbank.com**

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು – 560 009.
ದೂರವಾಣಿ ಸಂಖ್ಯೆ: 080–29710021/ 22/ 23/ 24 ಫ್ಯಾಕ್ಸ್: 080–29710025
ಇ–ಮೇಲ್: coo.krrda.karbng@kar.nic.in ವೆಬ್‌ಸೈಟ್: http://www.krrda.in
ಸಂಖ್ಯೆ: ಕೆಆರ್‌ಆರ್‌ಡಿಎ/ತಾಂತ್ರಿಕ/02/208/ಟೆಂಡರ್/ನೋ–2/2021–22/2916
ದಿನಾಂಕ: 05–10–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ: 1) ಕೆಆರ್‌ಆರ್‌ಡಿಎ/ತಾಂತ್ರಿಕ/11/208/ಟೆಂಡರ್/ನೋ–1/2021–22/2520, ದಿನಾಂಕ: 15–09–2021
ತಾಂತ್ರಿಕ ಕಾರಣಗಳಿಂದಾಗಿ ಉಲ್ಲೇಖಿತ ಟೆಂಡರ್ ಪ್ರಕಟಣೆಯನ್ವಯ ಆಹ್ವಾನಿಸಲಾದ ಕಾಮಗಾರಿಗಳ ಪೈಕಿ ಒಟ್ಟು 8 ಸಂಖ್ಯೆ ಪ್ಯಾಕೇಜ್ ಕಾಮಗಾರಿಗಳ ಹೊರತುಪಡಿಸಿ ಉಳಿದ ಪ್ಯಾಕೇಜು ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಮುಂದೂಡಿದ್ದು, ಪರಿಷ್ಕೃತ ಟೆಂಡರ್ ವೇಳಾಪಟ್ಟಿಯ ವಿವರಗಳು ಈ ಮುಂದಿನಂತಿವೆ. 1) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: **21–10–2021ರಂದು 16.30 ಗಂಟೆಯವರೆಗೆ. 2)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **22–10–2021ರಂದು 16.35 ಗಂಟೆಗೆ. 3)** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.** ಟೆಂಡರ್ ವೇಳಾಪಟ್ಟಿಯ ಪ್ರಕ್ರಿಯೆ ಹೊರತುಪಡಿಸಿ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲ ಮತ್ತು ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಟೆಂಡರಿಂಗ್ ಅಧಿಕಾರಿ,
ಕ.ಗ್ರಾ.ರ.ಅ.ಸಂಸ್ಥೆ, ಆರ್.ಡಿ.ಪಿ.ಆರ್., ಬೆಂಗಳೂರು.
ವಾಸಾಸಂಇ/ಬೆಂ.ನ/ಅಡ್ವರ್ಟೋರ್/1808/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)
ಇ–ಟೆಂಡರ್ ಅಧಿಸೂಚನೆ
ನಂ.ಎಚಡಿಎಂಸಿ/63/04/2021–22 ದಿ:07–10–2021
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/ CPWD/ HDMC/ ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಸನ್ 2020–21ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ. 81897/ ರೂ. **85.84** ಲಕ್ಷ/ 6ತಿಂಗಳು/ ಸಾಮಾನ್ಯ, ಇಂಡೆಂಟ್ ನಂ. 116583/ ರೂ. **87.34** ಲಕ್ಷ/ 6ತಿಂಗಳು/ಸಾಮಾನ್ಯ ಕಾಮಗಾರಿಗಳಿಗೆ ಇ–ಪ್ರೋಕ್ಯೂರಮೆಂಟ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು http:/ www.eproc.karnataka.gov.in ರಲ್ಲಿ ಪಡೆಯಬಹುದು. ಸದರ ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ : **12–10–2021** ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
(1) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **29/10/2021** ಸಂಜೆ 4.00 ಘಂಟೆ ವರೆಗೆ
(2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30/10/2021** ಸಂಜೆ 4.30 ಘಂಟೆ ನಂತರ
(3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **06/11/2021** ಬೆಳಿಗ್ಗೆ:11.00 ಘಂಟೆ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ)
ಹು.ಧಾ.ಮ.ಪಾಲಿಕೆ, ಹುಬ್ಬಳ್ಳಿ.
ವಾಸಾಸಂಇ/ಧಾ/ಎಂಸಿಎ/584/2021–22

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಕಾರ್ಪೊರೇಟ್ ಕಛೇರಿ, ಮೆಸ್ಕಾಂ ಭವನ, ಬಿಜೈ, ಮಂಗಳೂರು – 575 004.
ದೂರವಾಣಿ: 0824–2885795, CIN: U40109 KA 2002 SGC 030425
ಕ್ರ. ಸಂಖ್ಯೆ: MESCOM-PROCOPURC/275/2021- PROC ದಿನಾಂಕ: 04.10.2021
ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)
ಮ.ವಿ.ಸ.ಕಂ.ಯು ಈ ಕೆಳಗಿನ ಸಾಮಾಗ್ರಿಯ ತಯಾರಿಕೆ ಹಾಗೂ ಸರಬರಾಜಿಗಾಗಿ ಟೆಂಡರನ್ನು ಆಹ್ವಾನಿಸುತ್ತದೆ.

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಾಗ್ರಿಯ ವಿವರ	ಪ್ರಮಾಣ
MESCOM/2021-22/ IND784	ಜಿಐ ಗ್ರೌಂಡಿಂಗ್ ಪೈಪ್	12,000 ಸಂಖ್ಯೆಗಳು

ಆಸಕ್ತ ಅರ್ಹ ಬಿಡ್ದುದಾರರು ದಿನಾಂಕ **08.10.2021** ಅಥವಾ ನಂತರ ವೆಬ್‌ಸೈಟ್ www.eproc.karnataka.gov.in ಗೆ ಲಾಗಾನ್ ಮಾಡಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ), ಕಾರ್ಪೊರೇಟ್ ಕಛೇರಿ
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.
No.PCB/18/INFRA/EPH/21/3306 Date : 5-10-2021
ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಹರಳೂರು ಕೈಗಾರಿಕಾ ಪ್ರದೇಶ, ಪಾಳ್ಯ ಹತ್ತಿರ, ನಾಗನಾಯಕನಹಳ್ಳಿ, ಮುದ್ದೇನಹಳ್ಳಿ, ಹರಳೂರು ಮತ್ತು ಪೋಲ್ಲನಹಳ್ಳಿ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿದೆ. ಪ್ರಸ್ತಾವಿತ ಕೈಗಾರಿಕಾ ಪ್ರದೇಶವು ಒಟ್ಟು ಭೂಮಿಯ ವಿಸ್ತೀರ್ಣವು 1210.85 ಎಕರೆ (490 ಹೆಕ್ಟೇರ್) ಹೊಂದಿರುತ್ತದೆ. ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.9.2006ರ (ತಿದ್ದುಪಡಿ ದಿನಾಂಕ 1.12.2009) ಪ್ರಕಾರ ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಾಗಿರುತ್ತದೆ. ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ, ಇವರ Terms of Reference (TOR) Vide No.F.No.21-68/2020-IA.III ದಿನಾಂಕ 10.11.2020 ರಂತೆ ಮತ್ತು ಉದ್ದಿಮೆದಾರರ ಪತ್ರ ಸಂಖ್ಯೆ– No.KIADB/EE-III/EIA/Haraluru/231/2021-22 ದಿನಾಂಕ 30.07.2021, ನಿವೇದನೆಯ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿಯವತಿಯಿಂದ ನಡೆಸಲಾಗುತ್ತಿದೆ. ಯೋಜನೆಯ ವಿವರಗಳು ಕಳಕಂಡಂತಿವೆ.ಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿಯವತಿಯಿಂದ ನಡೆಸಲಾಗುತ್ತಿದೆ.
ಯೋಜನೆಯ ವಿವರಗಳು ಕೆಳಕಂಡಂತಿವೆ.
1. **ಕಂಪನಿಯ ಹೆಸರು ಮತ್ತು ವಿಳಾಸ :** ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಮಹರ್ಷಿ ಅರವಿಂದ್ ಭವನ, 14/3, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು – 560 001.
2. **ಉದ್ದೇಶಿತ ಯೋಜನೆಯ ಸ್ಥಳ :** ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಹರಳೂರು ಕೈಗಾರಿಕಾ ಪ್ರದೇಶ, ಪಾಳ್ಯ ಹತ್ತಿರ, ನಾಗನಾಯಕನಹಳ್ಳಿ, ಮುದ್ದೇನಹಳ್ಳಿ, ಹರಳೂರು ಮತ್ತು ಪೋಲ್ಲನಹಳ್ಳಿ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿದೆ. ಪ್ರಸ್ತಾವಿತ ಕೈಗಾರಿಕಾ ಪ್ರದೇಶವು ಒಟ್ಟು ಭೂಮಿಯ ವಿಸ್ತೀರ್ಣವು 1210.85 ಎಕರೆ (490 ಹೆಕ್ಟೇರ್) ಹೊಂದಿರುತ್ತದೆ.
3. **ಯೋಜನೆಯ ಕಾರ್ಯಚಟುವಟಿಕೆ.:** ಕೈಗಾರಿಕಾ ಪ್ರದೇಶವು ಬಹು ಉತ್ಪನ್ನಗಳಾದ ಕೈಗಾರಿಕೆಗಳಾದ ಉಡುಪಿಗೆ ಸಂಬಂಧಿಸಿದ ಗಾರ್ಮೆಂಟ್ ಹೊಲಿಗೆಗಳು, ಶೂ ಮೇಲ್ಭಾಗಗಳ ಹೊಲಿಗೆಗಳು, ಹತ್ತಿ ಹೆಣಿಗೆಗಳು ಮತ್ತು ಕಾಲುಚೀಲಗಳು, ಶೂ ಧಾರಗಳು, ಸಿದ್ದಪಡಿಸಿದ ಚರ್ಮದ ಬಟ್ಟೆಗಳು, ವಿದ್ಯುತ್ ಲೈನ್ ವಸ್ತುಗಳು, ಯಂತ್ರ ಇಂಜಿನಿಯರಿಂಗ್ ಕೈಗಾರಿಕೆಗಳು, ಉಕ್ಕಿನ ಬಾಗಿಲು ತಯಾರಿಕೆ, ಕಿಟಕಿ ಚೌಕಟ್ಟುಗಳು, ಕಬ್ಬಿಣದ ಗೇಟ್‌ಗಳು, ಕಬ್ಬಿಣದ ಪಿಠೋಪಕರಣಗಳು, ಸ್ಟೀಲ್ ಬೆಂಚ್, ಕೊಕ್ಕೆಗಳು, ಮುದ್ರಣಾಲಯ, ಸ್ಕ್ರೀನ್ ಪ್ರಿಂಟಿಂಗ್, ಕೈಗಾರಿಕಾ ತಯಾರಿಕೆ ಮತ್ತು ಆಟೋಮೊಬೈಲ್ ಬಾಡಿ ಬಿಲ್ಡಿಂಗ್, ಟೈರ್ಸ್ & ಟ್ಯೂಬ್ ಘಟಕಗಳು, ಮಿನರಲ್ ವಾಟರ್ ಪ್ಲಾಂಟ್ ಇನ್ನು ಮುಂತಾದವುಗಳು.
4 **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ. 08.11.2021 ರಂದು ಬೆಳಿಗ್ಗೆ 11.00 ಘಂಟೆಗೆ ನವಾಬ್ ಫಾರಂ, ಸರ್ವೆ ನಂ. 123, ಪೊಲ್ಲನಹಳ್ಳಿ ಗ್ರಾಮ, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.**
6. **ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ** (ಅ) ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ಈ) ನಗರಸಭೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಪೋಲನಹಳ್ಳಿ ಗ್ರಾಮ. (ಊ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹೊಸಕೋಟೆ, ನೆಲ ಮಹಡಿ, ನಿಸರ್ಗ ಭವನ, 7ನೇ ಮಹಡಿ, 'ಡಿ' ಮುಖ್ಯರಸ್ತೆ, ತಿಮ್ಮಯ್ಯ ರಸ್ತೆ, ಸಾಣೆಗುರುವನಹಳ್ಳಿ, ಶಿವನಗರ, ಬೆಂಗಳೂರು – 560 010. (ಋ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. (ೠ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.
ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : http://kspcb.karnataka.gov.in ನಲ್ಲಿ ಪಡೆಯಬಹುದು.
ಸಹಿ/–
ಸದಸ್ಯ ಕಾರ್ಯದರ್ಶಿ
"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"
ಕೋವಿಡ್-19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಇಷ್ಟವಾದ ಕೋರ್ಸ್ ಮುಕ್ತ ಆಯ್ಕೆಗೆ ಅವಕಾಶ– ಸಚಿವ ಅಶ್ವತ್ಥನಾರಾಯಣ

‘ಎನ್ಇಪಿ ವಿದ್ಯಾರ್ಥಿ ಕೇಂದ್ರಿತ’

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ಫೋನ್–ಇನ್

ಬೆಂಗಳೂರು: ‘ರಾಷ್ಟ್ರೀಯ ಶಿಕ್ಷಣ ನೀತಿ (ಎನ್ಇಪಿ) ವಿದ್ಯಾರ್ಥಿ ಕೇಂದ್ರಿತ. ತಮಗಿಷ್ಟವಾದ ಕೋರ್ಸ್‌ಗಳನ್ನು ಮುಕ್ತವಾಗಿ ಆಯ್ಕೆ ಮಾಡಿಕೊಳ್ಳುವ ಬಹುಆಯ್ಕೆಯ ಮತ್ತು ಬಹುಶಿಸ್ತೀಯ ವ್ಯವಸ್ಥೆ. ಈ ಬಗ್ಗೆ ಗೊಂದಲ ಬೇಡ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

‘ಪ್ರಜಾವಾಣಿ’ ಕಚೇರಿಯಲ್ಲಿ ಗುರುವಾರ ನಡೆದ ‘ಫೋನ್ ಇನ್’ನಲ್ಲಿ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ‘ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಯ ಜತೆಗೆ, ಜ್ಞಾನ ಮತ್ತು ಕೌಶಲ ಆಧಾರಿತ ಶಿಕ್ಷಣ ನೀತಿ ಜಾರಿ ಸದ್ಯದ ಅಗತ್ಯ’ ಎಂದು ಪ್ರತಿಪಾದಿಸಿದರು. ಆಯ್ದ ಕೆಲವು ಪ್ರಶ್ನೆಗಳು ಮತ್ತು ಉತ್ತರಗಳು ಇಲ್ಲಿವೆ.

- **ಮೇಲ್ನೋಟಕ್ಕೆ ಈ ನೀತಿ ತಳಹದಿ ಇಲ್ಲದೆ ಕಟ್ಟಿದ ಕಟ್ಟಡದಂತಿದೆ. ಏನೆನ್ನುತ್ತೀರಿ**

ಶಿವಾನಂದಪ್ಪ, ಶಿವಮೊಗ್ಗ

2015ರಿಂದ ಈ ನೀತಿಯ ಬಗ್ಗೆ ಸಮಾಲೋಚನೆ ನಡೆದಿದೆ. ವಿಷಯವಾರು ತಜ್ಞರು, ವಿಜ್ಞಾನಿಗಳು, ತಂತ್ರಜ್ಞರು, ಭಾಷಾತಜ್ಞರು, ವಿವಿಧ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವವರಿಂದ ಅಭಿಪ್ರಾಯ ಪಡೆಯಲಾಗಿದೆ. ಪ್ರಸಕ್ತ ವರ್ಷ ಪದವಿ ತರಗತಿಗೆ ನೀತಿ ಅನುಷ್ಠಾನಗೊಳ್ಳುತ್ತಿದೆ. ಮುಂದೆ ಪ್ರಾಥಮಿಕ ಹಂತದಿಂದಲೇ ಜಾರಿಗೆ ಬರಲಿದೆ. ಒಂದರ್ಥದಲ್ಲಿ ಈ ನೀತಿ, ಹಳೆಬೇರು ಹೊಸ ಚಿಗುರು.

- **ತರಾತುರಿಯಲ್ಲಿ ನೀತಿ ಅನುಷ್ಠಾನದ ಅಗತ್ಯವೇನು?–**

ಪ್ರಭಾಕರ ದೊಡ್ಡಮನಿ, ಕಲಬುರಗಿ

ಆತುರದಲ್ಲಿ ಜಾರಿ ಮಾಡಲಾಗಿದೆ ಎಂಬ ಮಾತಿನಲ್ಲಿ ಸತ್ಯಾಂಶವಿಲ್ಲ. ಅಧ್ಯಯನ, ಮಾಹಿತಿ ಸಂಗ್ರಹ, ಚರ್ಚೆ, ಸಂವಾದ, ಟೀಕೆ-ಟಿಪ್ಪಣಿ ಸಹಿತ ಐದೂವರೆ ಲಕ್ಷಕ್ಕೂ ಹೆಚ್ಚು ಸಲಹೆಗಳನ್ನು ಪಡೆದು ನೀತಿ ರೂಪಿಸಲಾಗಿದೆ. ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಬೇಕು ಎನ್ನುವ ಉದ್ದೇಶದಿಂದ ಈ ನೀತಿ ರೂಪಿಸಲಾಗಿದೆ.

- **ಪದವಿಯಲ್ಲಿ ವಿಷಯ ಆಯ್ಕೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಇನ್ನೂ ಗೊಂದಲವಿದೆಯಲ್ಲ**

ಪ್ರದೀಪ್, ಮೈಸೂರು

ಪ್ರಸಕ್ತ ವರ್ಷ ಬಿಎ, ಬಿಎಸ್ಸಿ ಪದವಿ ಅಧ್ಯಯನಕ್ಕೆ ಆಯಾ ಕಾಲೇಜುಗಳಲ್ಲಿ ಲಭ್ಯ ಎರಡು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಮೂರನೇ ವರ್ಷದ ಆರಂಭದಲ್ಲಿ ಒಂದು ವಿಷಯವನ್ನು ಮೇಜರ್, ಇನ್ನೊಂದು ವಿಷಯ ಮೈನರ್ ಅಥವಾ ಎರಡೂ ವಿಷಯಗಳನ್ನು ಮೇಜರ್ ಆಗಿ ಆಯ್ಕೆ ಮಾಡಿಕೊಳ್ಳಬಹುದು. ಜೊತೆಗೆ, ಕನ್ನಡ ಮತ್ತು ಇನ್ನೊಂದು ಭಾಷಾ ವಿಷಯವನ್ನು, ಪ್ರೋಗ್ರಾಮ್ ವಿನ್ಯಾಸಕ್ಕೆ ಅನುಗುಣವಾಗಿ ಮುಕ್ತ ಆಯ್ಕೆಗಳು ಮತ್ತು ಬಹುಶಿಸ್ತೀಯ ಆಯ್ಕೆಗಳನ್ನು ಮಾಡಿಕೊಳ್ಳಬೇಕು. ಪಿಯುಸಿ ಅಥವಾ 10 + 2 ಹಂತದಲ್ಲಿ ಕನ್ನಡ ಕಲಿಯದವರಿಗೆ ಅಥವಾ ಕನ್ನಡ ಮಾತೃ ಭಾಷೆಯಲ್ಲದವರಿಗೆ ಕನ್ನಡದ ಬೇರೆ ಪಠ್ಯಕ್ರಮ ರೂಪಿಸಿ ಬೋಧಿಸಲು ಅವಕಾಶವಿದೆ.

- **ನೀತಿಯಡಿ ಕಲಿಕೆ ಮತ್ತು ವಿಷಯ ಆಯ್ಕೆ ಹೇಗೆ?**

ನೇಸರ, ಶಿವಮೊಗ್ಗ

ಕಲಿಕೆ ಮತ್ತು ವಿಷಯ ಆಯ್ಕೆಯಲ್ಲಿ ಮುಕ್ತ ಸ್ವಾತಂತ್ರ್ಯವಿದೆ. ಈ ಹಿಂದಿನಂತೆ, ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ಓದಿದವರು ಪದವಿಯಲ್ಲಿ ಕಲೆ ವಿಷಯ ಆಯ್ಕೆ ಮಾಡಬಹುದು. ಮೊದಲ ಎರಡು ವರ್ಷಗಳ ನಾಲ್ಕು ಸೆಮಿಸ್ಟರ್‌ಗಳಲ್ಲಿ ಕನ್ನಡದ ಜೊತೆಗೆ ಆಯ್ಕೆಯ ಮತ್ತೊಂದು ಭಾಷೆ ಕಲಿಯಬಹುದು. ಹೊರರಾಜ್ಯದ ಮತ್ತು ಕನ್ನಡವನ್ನೇ ಕಲಿಯದವರು ಮೊದಲ ಎರಡು ವರ್ಷಗಳ ನಾಲ್ಕು ಸೆಮಿಸ್ಟರ್‌ಗಳ ಪೈಕಿ ಒಂದು ಸೆಮಿಸ್ಟರ್‌ನಲ್ಲಿ ವ್ಯಾವಹಾರಿಕ ಕನ್ನಡ ಮತ್ತು ತಮ್ಮ ಇಚ್ಛೆಯ ಮತ್ತೊಂದು ಭಾಷೆ ಕಲಿಯಬಹುದು. ಉಳಿದ ಮೂರು ಸೆಮಿಸ್ಟರ್‌ಗಳಲ್ಲಿ ಯಾವುದೇ ಎರಡು ಭಾಷೆಗಳನ್ನು ಕಲಿಯಬಹುದು.

- **ಬಹುಶಿಸ್ತೀಯ ಶಿಕ್ಷಣ ನೀಡುವುದರಿಂದ ವಿದ್ಯಾರ್ಥಿಗೆ ಯಾವ ಕೋರ್ಸ್‌ನಲ್ಲಿ ಪದವಿ ಸಿಗುತ್ತದೆ?**

ಧನ್ಯಪ್ರಸಾದ್, ಮೈಸೂರು

ವಿದ್ಯಾರ್ಥಿ ಆಯ್ಕೆ ಮಾಡಿಕೊಂಡ ಕೋರ್ಸ್‌ನಲ್ಲಿಯೇ ಪದವಿ ಸಿಗುತ್ತದೆ. ಕಲೆ ಆಯ್ಕೆ ಮಾಡಿಕೊಂಡರೆ ಬಿಎ, ವಿಜ್ಞಾನವಾದರೆ ಬಿಎಸ್ಸಿ, ವಾಣಿಜ್ಯ ಆಯ್ಕೆ ಮಾಡಿಕೊಂಡರೆ ಬಿ.ಕಾಂ. ಆಯ್ಕೆ ಮಾಡಿಕೊಂಡ ಕೋರ್ಸ್ ವಿಷಯ ಕಲಿಯುವ ಜೊತೆಗೆ, ಇತರ ವಿಷಯಗಳನ್ನು ಆಸಕ್ತಿಗೆ ಅನುಗುಣವಾಗಿ, ಉದ್ಯೋಗಾವಕಾಶದ ಅವಶ್ಯಕತೆಗನುಗುಣವಾಗಿ ಅಭ್ಯಾಸ ಮಾಡುವ ವ್ಯವಸ್ಥೆಯಿದೆ.

- **ಬಹು ಶಿಸ್ತೀಯ ಶಿಕ್ಷಣದಲ್ಲಿ ಆಯ್ಕೆ ಮಾಡಿಕೊಳ್ಳುವ ಕೋರ್ಸ್‌ನಲ್ಲಿ ವಿಸ್ತಾರವಾದ ಅಧ್ಯಯನಕ್ಕೆ ಅವಕಾಶ ಇಲ್ಲವಂತೆ ಹೌದೇ?**

ರತ್ನಮ್ಮ, ಕೊಪ್ಪಳ

ಇದು ನಿಜವಲ್ಲ. ಆಯ್ಕೆ ಮಾಡಿಕೊಂಡ ಕೋರ್ಸ್‌ನಲ್ಲಿನ ವಿಷಯಗಳನ್ನೇ ಪ್ರಮುಖವಾಗಿ ಅಭ್ಯಾಸ ಮಾಡುವ ಜೊತೆಗೆ ಪ್ರತಿ ಸೆಮಿಸ್ಟರ್‌ನಲ್ಲಿ ಒಂದು ವಿಷಯವನ್ನು ಮಾತ್ರ ತನ್ನದೇ ಕೋರ್ಸ್‌ನಿಂದ ಅಥವಾ ಇನ್ನಾವುದೇ ಕೋರ್ಸ್‌ನಿಂದ ಒಂದು ವಿಷಯ ಆಯ್ಕೆ ಮಾಡಿಕೊಳ್ಳಬಹುದು. ವಿದ್ಯಾರ್ಥಿಯ ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸುವಂಥ, ಉದ್ಯೋಗಾವಕಾಶ ಹೆಚ್ಚಿಸುವ ಕೌಶಲ ಮತ್ತು ಸಾಮರ್ಥ್ಯ ವೃದ್ಧಿಯ ಕೋರ್ಸ್‌ಗಳನ್ನು ಕಲಿಸಲಾಗುತ್ತದೆ.

- **‘ಅಂಗವಿಕಲರ ಹಕ್ಕುಗಳ ಕಾಯ್ದೆ 2016’ರಲ್ಲಿರುವ ಅಂಶಗಳನ್ನೂ ಅಳವಡಿಸಿಕೊಳ್ಳಲಾಗಿದೆಯೇ?**

ರಾಮಚಂದ್ರ ಕಾಂಬ್ಳೆ, ಧಾರವಾಡ

ಈ ಕಾಯ್ದೆಯಲ್ಲಿರುವ ಅಂಶಗಳೂ ನೀತಿಯಲ್ಲಿದೆ. ಸಮಾನ ಶಿಕ್ಷಣ ನೀತಿಯಡಿ ಅಂಗವಿಕಲರ ಹಿತವನ್ನೂ ಗಮನಿಸಿ ನೀತಿ ರೂಪಿಸಲಾಗಿದೆ. ಸಾಮಾಜಿಕ ಭದ್ರತೆಯ ಕೌಶಲ ಅಭಿವೃದ್ಧಿಗೂ ಒತ್ತು ನೀಡಲಾಗಿದೆ.

- **ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ನೀಡಲು ಬ್ಯಾಂಕುಗಳು ಹಿಂದೇಟು ಹಾಕುತ್ತಿವೆಯಲ್ಲ**

ನವೀನ್, ಬೆಂಗಳೂರು

ಶೈಕ್ಷಣಿಕ ಸಾಲ ನೀಡಲು ಬ್ಯಾಂಕುಗಳ ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಸಭೆ ಕರೆದು ಸ್ಪಷ್ಟ ಸೂಚನೆ ನೀಡುತ್ತೇನೆ.

- **ಐಟಿಐ ಕೋರ್ಸ್‌ನ್ನು ಪಿಯುಸಿಗೆ ಸಮಾನವಾಗಿ ಪರಿಗಣಿಸಬಾರದೇಕೆ?**

ಶಿವಲಿಂಗಯ್ಯ ಕೊಡಲಿ, ರಾಯಚೂರು

ಐಟಿಐ ಕಲಿತವರು ಡಿಪ್ಲೊಮಾ ಓದಬಹುದು. ಆ ಮೂಲಕ, ಎಂಜಿನಿಯರಿಂಗ್ ಕೋರ್ಸ್‌ಗೆ ಸೇರಲು ಅವಕಾಶವಿದೆ. ಐಟಿಐ ಕೋರ್ಸ್‌ನ್ನು ಪಿಯುಸಿಗೆ ಸಮಾನವಾಗಿ ಪರಿಗಣಿಸಲು ಬ್ರಿಡ್ಜ್ ಕೋರ್ಸ್ ನಡೆಸಲು ಪ್ರಯತ್ನಿಸಲಾಗುತ್ತಿದೆ.



ಡಾ.ಸಿ.ಎನ್. ಅಶ್ವತ್ಥನಾರಾಯಣ

‘ಪ್ರಾಧ್ಯಾಪಕರ ನೇಮಕಾತಿ: ಅಂಕಗಳೇ ಮಾನದಂಡ’

‘ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಅರ್ಹತೆ ಮಾತ್ರ ಮಾನದಂಡ. ರಾಜಕೀಯ, ಸ್ವಜನ ಪಕ್ಷಪಾತ, ಹಸ್ತಕ್ಷೇಪ ಯಾವುದಕ್ಕೂ ಅವಕಾಶ ಇಲ್ಲ’ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ನೇಮಕಾತಿ ಅಧಿಸೂಚನೆ ಈಗಾಗಲೇ ಹೊರಡಿಸಲಾಗಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಆರಂಭವಾಗಲಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಲಿಖಿತ ಪರೀಕ್ಷೆ ನಡೆಸಲಿದೆ. ಈ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳೇ ನೇಮಕಾತಿಗೆ ಅರ್ಹತೆ. ಸಂದರ್ಶನ ಇರುವುದಿಲ್ಲ’ ಎಂದರು.

‘ನೇಮಕಾತಿ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿ ನಡೆಯಲಿದೆ. ಯಾರೇ ಆಗಲಿ ಆಮಿಷ, ಪ್ರಲೋಭನೆಗಳಿಗೆ ಒಳಗಾಗಬಾರದು. ಪ್ರಭಾವ ಬಳಸಿ ಉದ್ಯೋಗ ಕೊಡಿಸುವುದಾಗಿ ಭರವಸೆ ಕೊಡುವವರನ್ನು ನಂಬಿ ಹಣ ಕಳೆದುಕೊಳ್ಳಬೇಡಿ’ ಎಂದು ಸಲಹೆ ನೀಡಿದರು.

‘ಡಿಸೆಂಬರ್‌ನಲ್ಲಿ ಪರೀಕ್ಷೆ ನಡೆಯಲಿದೆ. ಫೆಬ್ರುವರಿಯಲ್ಲಿ ಅರ್ಹರನ್ನು ನೇಮಿಸಿಕೊಳ್ಳಲಾಗುವುದು.ಖಾಲಿ ಇರುವ ಇತರ ವಿಷಯಗಳ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

- **ಶಿಕ್ಷಕರ ಕೊರತೆ ಇರುವಾಗ ನೀತಿಯ ಅನುಷ್ಠಾನ ಹೇಗೆ?**

ಮಹಂತೇಶ್, ಬೆಳಗಾವಿ

ಬೋಧಕ, ಬೋಧಕೇತರ ಸಿಬ್ಬಂದಿ ನೇಮಕ, ತರಬೇತಿ ಬಗ್ಗೆ ಕ್ರಮ ವಹಿಸಲಾಗುತ್ತಿದೆ. ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಶೀಘ್ರದಲ್ಲಿ ಆರಂಭವಾಗಲಿದ್ದು, ಮುಖ್ಯಮಂತ್ರಿಯವರೇ ಸ್ಪಷ್ಟವಾಗಿ ಹೇಳಿದ್ದಾರೆ. ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ತುಂಬಲು ಪ್ರಕ್ರಿಯೆ ಆರಂಭವಾಗಿದೆ.

ಪ್ರಜಾವಾಣಿ
ಫೋನ್–ಇನ್ ಕಾರ್ಯಕ್ರಮ
ಕರೆ ಮಾಡಿ–ಸಮಸ್ಯೆ ಹೇಳ್ಕೊಳ್ಳಿ

- ‘ಉದ್ಯಮಿಯಾಗಿ, ಉದ್ಯೋಗ ಕೊಡು’ ಎಂಬ ಯೋಜನೆಯ ಪರಿಕಲ್ಪನೆ ಹೇಗೆ?
- ಉದ್ಯಮಿಯಾಗಲು ಸರ್ಕಾರದಿಂದ ಯಾವ ರೀತಿಯ ನೆರವು ಸಿಗಲಿದೆ?
- ಬಹು ಹಂತದ ಅನುಮತಿ ಪ್ರಕ್ರಿಯೆಗಳಿಂದಾಗಿ ಕೈಗಾರಿಕೆಗಳ ಸ್ಥಾಪನೆ ವಿಳಂಬವಾಗುತ್ತಿದೆಯೇ?
- ಉದ್ಯಮ ಸ್ಥಾಪನೆಗೆ ಕಿರಿಕಿರಿ ಇದೆಯೇ?
- ಮೂಲಸೌಕರ್ಯ ಸಮಸ್ಯೆಯಿಂದ ಯೋಜನೆ ಅನುಷ್ಠಾನಕ್ಕೆ ಅಡ್ಡಿಯಾಗಿದೆಯೇ

ನಿಮ್ಮ ಅಹವಾಲುಗಳಿಗೆ ಸ್ಪಂದಿಸಲಿದ್ದಾರೆ



ಮುರುಗೇಶ ಆರ್ ನಿರಾಣಿ,
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ


10.10.2021, ಭಾನುವಾರ
ಸಮಯ: ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ
ದೂರವಾಣಿ ಸಂಖ್ಯೆ 08045557230

facebook LIVE Prajavani
ಫೇಸ್‌ಬುಕ್, ಯೂಟ್ಯೂಬ್‌ನಲ್ಲಿ ನೇರ ಪ್ರಸಾರ

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಪಾಡ್‌ಕಾಸ್ಟ್: ಈದಿನದ ವಿಶೇಷ : ಸಂಜೆ 4 ಸಿನಿ ಮ್ಯಾಟನಿ, ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 9 ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ
ಸೆಲೆಬ್ರಿಟಿ LIVE
ಸಂಜೆ 4 ರಿಂದ 5
ಮುಖಾಮುಖಿ: ಕವಿ, ನಾಟಕಕಾರ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಅವರ ಜೊತೆಗೆ



ಶಕ್ತಿ ಕೇಂದ್ರದಲ್ಲಿ ಪ್ರಭಾವಿ ‘ಚಾಲಕ’!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ತೆರಿಗೆ ಇಲಾಖೆ ಗುರುವಾರ ನಡೆಸಿದ ಶೋಧದ ಕೇಂದ್ರ ಬಿಂದುವಾದ ಉಮೇಶ್ ಬಿಎಂಟಿಸಿಯ ಪುಟ್ಟೇನಹಳ್ಳಿ ಡಿಪೊದ ಚಾಲಕ ಕಂ. ನಿರ್ವಾಹಕ. ಬಸ್ ಓಡಿಸುವುದನ್ನು ಬಿಟ್ಟು ಶಕ್ತಿ ಕೇಂದ್ರದತ್ತ ಜಿಗಿದ ಅವರು ಕೆಲವು ವರ್ಷಗಳಿಂದ ‘ಪ್ರಭಾವಿ’ ವ್ಯಕ್ತಿಯಾಗಿ ಬೆಳೆದಿದ್ದರು.

ಶಿವಮೊಗ್ಗ ಜಿಲ್ಲೆ ಆಯನೂರಿನ ನಿವಾಸಿ ಉಮೇಶ್ 2007ರಲ್ಲಿ ಬಿಎಂಟಿಸಿಯ ಚಾಲಕ ಕಂ ನಿರ್ವಾಹಕ ಹುದ್ದೆಗೆ ಆಯ್ಕೆಯಾದರು. ಆದರೆ, ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡಿದ್ದು ಒಂದೇ ವರ್ಷ. 2008ರಲ್ಲಿ ಆಗಿನ ಶಿವಮೊಗ್ಗ ಸಂಸದ ಆಯನೂರು ಮಂಜುನಾಥ ಅವರ ಆಪ್ತ ಸಹಾಯಕನಾಗಿ ನಿಯೋಜನೆ ಮೇರೆಗೆ ತೆರಳಿದ್ದರು. ಮತ್ತೆ ಮರಳಿ ಮಾತೃ ಇಲಾಖೆಗೆ ಹೋಗಲೇ ಇಲ್ಲ.

ಅನ್ಯ ಕಾರ್ಯನಿಮಿತ್ತ ನಿಯೋಜನೆಯಲ್ಲೇ (ಒಒಡಿ) ಮುಂದುವರಿದ ಉಮೇಶ್, ನಂತರ ಶಿವಮೊಗ್ಗ ಸಂಸದರಾದ ಬಿ.ವೈ. ರಾಘವೇಂದ್ರ ಅವರ ಆಪ್ತ ಸಹಾಯಕರಾದರು. ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದಿಂದಲೂ ಯಡಿಯೂರಪ್ಪ ಅವರ ಆಪ್ತ ಕಾರ್ಯದರ್ಶಿಯಂತೆಯೇ ಕೆಲಸ ಮಾಡುತ್ತಿದ್ದಾರೆ.

2019ರಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಮುಖ್ಯಮಂತ್ರಿ ಸಚಿವಾಲಯದ ಸಿಬ್ಬಂದಿಯಾಗಿ ಒಒಡಿ ಮೇಲೆ ನೇಮಕಗೊಂಡರು. ಯಡಿಯೂರಪ್ಪ ರಾಜೀನಾಮೆ ಬಳಿಕವೂ ಉಮೇಶ್ ಅದೇ ಹುದ್ದೆಯಲ್ಲಿ ಮುಂದುವರಿದಿದ್ದಾರೆ. ಮುಖ್ಯಮಂತ್ರಿ ಸಚಿವಾಲಯದಲ್ಲಿದ್ದರೂ ಯಡಿಯೂರಪ್ಪ ಅವರ ಮಗ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಣತಿಯಂತೆ ಕೆಲಸ ಮಾಡುತ್ತಿರುವ ಆರೋಪ ಹಲವು ಬಾರಿ ಕೇಳಿಬಂದಿತ್ತು.

ಧವಳಗಿರಿ ಮೇಲೆ ಪ್ರೀತಿ: ಬಿಎಂಟಿಸಿಯಿಂದ ಮಾಸಿಕ ₹ 32,000 ನಿವ್ವಳ ವೇತನ ಪಡೆಯುವ ಉಮೇಶ್, ಬೆಂಗಳೂರಿನ ನಾಗಸಂದ್ರ ಬಳಿ ಬೃಹತ್ ಮನೆಯೊಂದನ್ನು ನಿರ್ಮಿಸಿರುವುದನ್ನು ಆದಾಯ ತೆರಿಗೆ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ. ಯಡಿಯೂರಪ್ಪ ಅವರ ಮನೆಯ ಹೆಸರು ‘ಧವಳಗಿರಿ’. ಅವರ ಕುಟುಂಬದವರು ಹೊಂದಿರುವ ಕಂಪನಿಯ ಹೆಸರೂ ‘ಧವಳಗಿರಿ ಡೆವಲಪರ್ಸ್’. ಅದೇ ರೀತಿ ಉಮೇಶ್ ತನ್ನ ಮನೆಗೆ ‘ಧವಳಗಿರಿ’ ಎಂದು ಹೆಸರಿಟ್ಟಿದ್ದಾರೆ.

‘ಸರ್ಕಾರಿ ಕಾಮಗಾರಿಗಳ ಗುತ್ತಿಗೆ ಪಡೆಯುವ ಗುತ್ತಿಗೆದಾರರ ಮೇಲೆ ದಾಳಿ ಮಾಡಿ, ಶೋಧ ನಡೆಸುವುದು ಸಾಮಾನ್ಯ. ಆದರೆ, ಅವರ ಜತೆಗೆ ಉಮೇಶ್ ಮೇಲೂ ದಾಳಿ ನಡೆದಿರುವುದು ಈ ಬಾರಿಯ ಕಾರ್ಯಾಚರಣೆಯ ವಿಶೇಷ. ಗುತ್ತಿಗೆದಾರರು ಮತ್ತು ಅಧಿಕಾರಸ್ಥರ ನಡುವೆ ಉಮೇಶ್ ಕೊಂಡಿಯಂತೆ ಕೆಲಸ ಮಾಡಿರುವ ಆರೋಪದ ಬಗ್ಗೆ ತನಿಖೆ ನಡೆಯುತ್ತಿದೆ’ ಎಂದು ಮೂಲಗಳು ತಿಳಿಸಿವೆ.



ಉಮೇಶ್‌ಗೆ ಸೇರಿದ್ದು ಎನ್ನಲಾದ ರಾಜಾಜಿನಗರದಲ್ಲಿರುವ ಮನೆ

ಕಾರ್ಯಾಚರಣೆಗೆ 120 ವಾಹನ

ಗುರುವಾರ ನಡೆದ ಶೋಧ ಕಾರ್ಯಾಚರಣೆಗೆ ಆದಾಯ ತೆರಿಗೆ ಇಲಾಖೆ ಕರ್ನಾಟಕ ಮತ್ತು ಗೋವಾ ವಲಯದ ಅಧಿಕಾರಿಗಳು ಹಲವು ದಿನಗಳಿಂದ ಸಿದ್ಧತೆ ನಡೆಸಿದ್ದರು. ಬೃಹತ್ ಕಾರ್ಯಾಚರಣೆಗಾಗಿ 120 ವಾಹನಗಳನ್ನು ಬಾಡಿಗೆಗೆ ಪಡೆಯಲಾಗಿತ್ತು ಎಂಬ ಮಾಹಿತಿ ಲಭಿಸಿದೆ.

ಬುಧವಾರವೇ ಅಧಿಕಾರಿಗಳೆಲ್ಲರೂ ತಮ್ಮ ಕಾರ್ಯಾಚರಣೆಯ ಸಮೀಪದ ಸ್ಥಳಗಳನ್ನು ತಲುಪಿದ್ದರು. ಗುರುವಾರ ನಸುಕಿನಿಂದಲೇ ಕಾರ್ಯಾಚರಣೆ ಆರಂಭಿಸಲಾಯಿತು ಎಂದು ಮೂಲಗಳು ಹೇಳಿವೆ.

ಉಪ ಚುನಾವಣೆ: ಸಜ್ಜನರ, ಭೂಸನೂರಗೆ ಬಿಜೆಪಿ ಟಿಕೆಟ್

ಒಂದನೇ ಪುಟದಿಂದ

ರಾಜ್ಯ ರಾಜಕಾರಣ ಪ್ರವೇಶಿಸುವ ಅಪೇಕ್ಷೆಯೊಂದಿಗೆ ಟಿಕೆಟ್ ಕೋರಿದ್ದ ಸಂಸದ ಶಿವಕುಮಾರ್ ಉದಾಸಿ ಅವರ ಬೇಡಿಕೆಯನ್ನು ತಿರಸ್ಕರಿಸಿರುವ ಹೈಕಮಾಂಡ್, ‘ಹಾವೇರಿ ಲೋಕಸಭೆ ಕ್ಷೇತ್ರದ ಉಪ ಚುನಾವಣೆ ಅನಗತ್ಯ’ ಎಂಬ ಕಾರಣ ಮುಂದಿರಿಸಿದೆ.

ಅವರ ಪತ್ನಿಗೂ ಟಿಕೆಟ್ ನೀಡಲು ನಿರಾಕರಿಸುವ ಮೂಲಕ ಮತ್ತೊಮ್ಮೆ ‘ಅಚ್ಚರಿಯ ಅಭ್ಯರ್ಥಿ’ ಆಯ್ಕೆಯತ್ತಲೇ ಒಲವು ತೋರಿರುವ ಹೈಕಮಾಂಡ್, ಕ್ಷೇತ್ರ ಉಳಿಸಿಕೊಳ್ಳುವ ಹೊಣೆಯನ್ನು ಬೊಮ್ಮಾಯಿ ಅವರಿಗೆ ವಹಿಸಿದೆ.

ಬಿಎಸ್‌ವೈ ಸುತ್ತ ಐಟಿ ಬಲೆ

ಒಂದನೇ ಪುಟದಿಂದ

ದಾಳಿಗೊಳಗಾಗಿರುವ ಗುತ್ತಿಗೆದಾರರ ಪೈಕಿ ಹಲವರು ಯಡಿಯೂರಪ್ಪ ಅವರ ಮಗ ಬಿ.ವೈ. ವಿಜಯೇಂದ್ರ ಮತ್ತು ಕೆಲವು ಸಚಿವರಿಗೆ ನಿಕಟವರ್ತಿಗಳು. ಉಮೇಶ್, ಅರವಿಂದ್, ಪ್ರಸನ್ನ ಸೇರಿದಂತೆ ಯಡಿಯೂರಪ್ಪ ಕುಟುಂಬದ ಜತೆ ನಿಕಟವಾಗಿದ್ದ ಹಲವರ ಮನೆ, ಕಚೇರಿಗಳಲ್ಲಿ ಶೋಧ ನಡೆದಿದೆ. 2019ರಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾದ ಬಳಿಕ ಜಲ ಸಂಪನ್ಮೂಲ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನಡೆದಿರುವ ₹ 25 ಕೋಟಿಗಿಂತ ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಸಂಬಂಧಿಸಿದ ವಹಿವಾಟುಗಳ ಪರಿಶೀಲನೆಗಾಗಿ ಈ ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬೃಹತ್ ಕಾಲುವೆಗಳು, ಸೇತುವೆಗಳು, ರಸ್ತೆಗಳ ಕಾಮಗಾರಿಗಳು ಮತ್ತು ಒಂದು ವಿಮಾನ ನಿಲ್ದಾಣ ನಿರ್ಮಾಣದ ಕಾಮಗಾರಿ ಗುತ್ತಿಗೆ ಪಡೆದಿರುವ ವ್ಯಕ್ತಿಗಳನ್ನೇ ಕೇಂದ್ರೀಕರಿಸಿ ಶೋಧ ನಡೆಸಲಾಗಿದೆ. ದಾಳಿಗೊಳಗಾದ ಗುತ್ತಿಗೆದಾರರ ಪೈಕಿ ಕೆಲವರು ಉತ್ತರ ಕರ್ನಾಟಕದ ಪ್ರಭಾವಿ ರಾಜಕಾರಣಿಗಳಿಗೆ ನಿಕಟವರ್ತಿಗಳಾಗಿದ್ದಾರೆ.

ಉಮೇಶ್ ಈ ಕಾಮಗಾರಿಗಳ ಗುತ್ತಿಗೆ ಪಡೆಯಲು ಗುತ್ತಿಗೆದಾರರು ಮತ್ತು ಅವರ ನಿಕಟವರ್ತಿಗಳಿಗೆ ನೆರವಾಗಿರುವ ಆರೋಪದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಉಮೇಶ್ ದಾಳಿಯ ಕೇಂದ್ರ: ಐ.ಟಿ ಅಧಿಕಾರಿಗಳ ಕಾರ್ಯಾಚರಣೆಯು ನಿಯೋಜನೆ ಮೇರೆಗೆ ಮುಖ್ಯಮಂತ್ರಿ ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ಬಿಎಂಟಿಸಿ ಚಾಲಕ ಕಂ ನಿರ್ವಾಹಕ ಉಮೇಶ್ ಸುತ್ತವೇ ಕೇಂದ್ರೀಕರಿಸಿತ್ತು. ರಾಜಾಜಿನಗರದ ಭಾಷ್ಯಂ ವೃತ್ತದಲ್ಲಿರುವ ಅವರ ಬಾಡಿಗೆ ಮನೆ, ನಾಗಸಂದ್ರದಲ್ಲಿರುವ ಉಮೇಶ್ ಮನೆ ‘ಧವಳಗಿರಿ’, ಅವರೊಂದಿಗೆ ನಿಕಟವಾಗಿದ್ದ ಅರವಿಂದ್ ನೆಲೆಸಿರುವ ಎಂಬೆಸಿ ಅಪಾರ್ಟ್‌ಮೆಂಟ್, ಪ್ರಸನ್ನ ಅವರ ಮನೆಗಳಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದೀರ್ಘಕಾಲದಿಂದ ಉಮೇಶ್, ಯಡಿಯೂರಪ್ಪ ಆಪ್ತ ಸಹಾಯಕನ ಹುದ್ದೆಯಲ್ಲಿದ್ದರು. ಜಲ ಸಂಪನ್ಮೂಲ, ಲೋಕೋಪಯೋಗಿ ಸೇರಿದಂತೆ ಪ್ರಮುಖ ಇಲಾಖೆಗಳ ಮೇಲೆ ಹಿಡಿತ ಸಾಧಿಸಿದ್ದರು. ಬೃಹತ್ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ, ಅಧಿಕಾರಿಗಳ ಮೇಲೆ ಒತ್ತಡ ಹೇರಿ ಕೆಲಸ ಮಾಡಿಸಿಕೊಳ್ಳುತ್ತಿದ್ದ ದೂರುಗಳಿದ್ದವು.

ಮುಖ್ಯಮಂತ್ರಿ ಸಚಿವಾಲಯದ ಸಿಬ್ಬಂದಿಯಾಗಿದ್ದರೂ ವಿಜಯೇಂದ್ರ ಅವರ ಪ್ರತಿನಿಧಿಯಾಗಿ ಸರ್ಕಾರಿ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಜತೆ ಉಮೇಶ್ ವ್ಯವಹರಿಸುತ್ತಿದ್ದರು ಎಂಬ ದೂರುಗಳಿದ್ದವು. ಈ ಕಾರಣಕ್ಕಾಗಿಯೇ ಅವರ ಮೇಲೆ ದಾಳಿ ನಡೆದಿದೆ ಎಂಬ ಮಾಹಿತಿ ಲಭಿಸಿದೆ.

ಉಮೇಶ್ ಮನೆಯಿಂದ ಎರಡು ಮೂಟೆ ಮತ್ತು ಒಂದು ಸೂಟ್‌ಕೇಸ್‌ಗಳಷ್ಟು ದಾಖಲೆಗಳನ್ನು ಐ.ಟಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಗುತ್ತಿಗೆದಾರರ ಜತೆಗಿನ ಒಡನಾಟ, ಸರ್ಕಾರದ ಕಾಮಗಾರಿಗಳಿಗೆ ಸಂಬಂಧಿಸಿದ ಕಡತಗಳು, ಆಸ್ತಿ ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ. ಮನೆಯಲ್ಲೇ ಅವರನ್ನು ವಿಚಾರಣೆ ನಡೆಸಿದ ಅಧಿಕಾರಿಗಳು, ಕೆಲವು ಮಾಹಿತಿ ಸಂಗ್ರಹಿಸಿದ್ದಾರೆ.

ಅರವಿಂದ್ ಮತ್ತು ಪ್ರಸನ್ನ ಕೂಡ ಯಡಿಯೂರಪ್ಪ ಕುಟುಂಬದ ಆಪ್ತ ವಲಯದಲ್ಲಿದ್ದರು. ಈ ಇಬ್ಬರ ಮನೆಗಳಲ್ಲೂ ಶೋಧ ನಡೆದಿದ್ದು, ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಸಂಜೆಯ ವೇಳೆಗೆ ಅರವಿಂದ್ ಅವರನ್ನು ವಶಕ್ಕೆ ಪಡೆದ ಅಧಿಕಾರಿಗಳು, ವಿಚಾರಣೆಗಾಗಿ ಕರೆದೊಯ್ದಿದ್ದಾರೆ.

ಜಲ ಸಂಪನ್ಮೂಲ ಇಲಾಖೆಯ ಅಧೀನದಲ್ಲಿರುವ ಕೃಷ್ಣ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಮತ್ತು ವಿಶ್ವೇಶ್ವರಯ್ಯ ನೀರಾವರಿ ನಿಗಮದಲ್ಲಿ ಬೃಹತ್ ಮೊತ್ತದ ಕಾಮಗಾರಿಗಳ ಗುತ್ತಿಗೆ ಪಡೆದಿರುವವರನ್ನೇ ಗುರಿಯಾಗಿಸಿ ದಾಳಿ ನಡೆದಿದೆ. ಗುತ್ತಿಗೆದಾರರ ಮನೆ, ಕಚೇರಿಗಳು ಮತ್ತು ಅವರ ಜತೆ ವ್ಯಾವಹಾರಿಕ ನಂಟು ಹೊಂದಿರುವ ವ್ಯಕ್ತಿಗಳ ಮನೆ, ಕಚೇರಿಗಳಲ್ಲಿ ಶೋಧ ನಡೆದಿದೆ.

ಬೃಹತ್ ಕಾಮಗಾರಿಗಳಿಗೆ ಸಿಮೆಂಟ್, ಕಬ್ಬಿಣ ಮತ್ತಿತರ ಸಾಮಗ್ರಿಗಳ ಸಗಟು ಪೂರೈಕೆ ಮಾಡುವ ಬೆಂಗಳೂರಿನ ಸಹಕಾರ ನಗರದ ರಾಹುಲ್ ಎಂಟರ್‌ಪ್ರೈಸಸ್ ಮೇಲೂ ದಾಳಿ ನಡೆಸಲಾಗಿದೆ. ತಡ ರಾತ್ರಿಯವರೆಗೂ ಶೋಧ ನಡೆಸಿದ್ದು, ಬೃಹತ್ ಪ್ರಮಾಣದ ದಾಖಲೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಎಂಜಿನಿಯರ್‌ಗೆ ಹಂಚಿಕೆಯಾಗಿದ್ದ ಕಾರು ಬಳಕೆ

ಉಮೇಶ್ ಅವರು ಸಚಿವಾಲಯದ ಸಾಮಾನ್ಯ ನೌಕರರಾಗಿದ್ದರೂ ಸರ್ಕಾರಿ ಕಾರನ್ನು(ಕೆಎ 37 ಜಿ 0523) ಬಳಸುತ್ತಿದ್ದರು ಎಂದು ಗೊತ್ತಾಗಿದೆ.

ಈ ಕಾರು ಕೆಬಿಜೆಎನ್ಎಲ್ ಮುನಿರಾಬಾದ್ ವಲಯದ ಕಾರ್ಯನಿರ್ವಾಹಕ ಎಂಜಿನಿಯರ್ ಒಬ್ಬರಿಗೆ ಹಂಚಿಕೆಯಾಗಿತ್ತು. ಅದನ್ನೇ ಉಮೇಶ್ ಸ್ವಂತ ಬಳಕೆಗೆ ಇಟ್ಟುಕೊಂಡಿದ್ದರು ಎಂದು ತಿಳಿದುಬಂದಿದೆ.

ಶಿಕಾರಿಪುರದಲ್ಲಿ ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿಕೆ

‘ಐಟಿ ದಾಳಿ ರಾಜಕೀಯಕ್ಕೆ ಲಿಂಕ್ ಮಾಡಲ್ಲ’

ಪ್ರಜಾವಾಣಿ ವಾರ್ತೆ




ಶಿಕಾರಿಪುರ: ‘ಐಟಿ ದಾಳಿಯನ್ನು ರಾಜಕೀಯಕ್ಕೆ ಲಿಂಕ್ ಮಾಡುವುದಿಲ್ಲ. ಚುನಾವಣೆಯೇ ಬೇರೆ, ಐಟಿ ದಾಳಿಯೇ ಬೇರೆ’ ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಐಟಿ ದಾಳಿಗಳು ನಡೆಯುವುದು ಸಾಮಾನ್ಯ. ಅದೇ ರೀತಿ ಉಮೇಶ್ ಮನೆ ಮೇಲೂ ದಾಳಿ ನಡೆದಿದೆ. ವಾಸ್ತವ ಸಂಗತಿಗಳು ಬಹಿರಂಗಗೊಂಡ ನಂತರ ಈ ಕುರಿತು ಪ್ರತಿಕ್ರಿಯಿಸುವೆ’ ಎಂದರು.

‘ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಉಮೇಶ್ ನನ್ನ ಜತೆ ಕೆಲಸ ಮಾಡಿದ್ದರು. ಐಟಿ ದಾಳಿ ಕುರಿತು ಮಾಧ್ಯಮದ ಮೂಲಕ ತಿಳಿದುಕೊಂಡಿದ್ದೇನೆ. ಯಾರೇ ತಪ್ಪು ಮಾಡಿದರೂ ಕಾನೂನು ಕ್ರಮ ತೆಗೆದುಕೊಳ್ಳುವುದು ಸರಿಯಷ್ಟೆ’ ಎಂದೂ ಹೇಳಿದರು.

ಕಾಂಗ್ರೆಸ್ ಏಕೆ ಖಂಡಿಸಿಲ್ಲ (ಶಿವಮೊಗ್ಗ): ‘ಯಾರ ಮೇಲೆ ಐಟಿ ದಾಳಿ ಮಾಡಿದರೂ ಕಾಂಗ್ರೆಸ್ ನಾಯಕರ ಮೇಲೆ ಐಟಿ ದಾಳಿ ಮಾಡುತ್ತಾರೆ ಎಂದು ಬೊಬ್ಬಿಡುತ್ತಿದ್ದರು. ಉಮೇಶ್ ಮನೆ ಮೇಲೆ ನಡೆದ ಐಟಿ ದಾಳಿಯನ್ನು ಏಕೆ ಖಂಡಿಸಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಪ್ರಶ್ನಿಸಿದರು.

‘ಯಡಿಯೂರಪ್ಪ, ವಿಜಯೇಂದ್ರ ಅವರ ಆಪ್ತರ ಮೇಲಿನ ದಾಳಿ ಎಂದು ಮಾಧ್ಯಮದವರು ಹೇಳುತ್ತಿದ್ದಾರೆ. ಹಾಗಾದರೆ ಕಾಂಗ್ರೆಸ್ ಈ ದಾಳಿ ಖಂಡಿಸಬೇಕು ಅಲ್ಲವೇ? ನಾನು ಯಾರ ಮೇಲೆ ಐಟಿ ದಾಳಿ ಮಾಡಿದರೂ ಸಮರ್ಥಿಸುವುದಿಲ್ಲ. ಇಲಾಖೆ ತನ್ನ ಕೆಲಸ ಮಾಡುತ್ತದೆ’ ಎಂದರು.



ಐ.ಟಿ ದಾಳಿ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ. ಪೂರ್ಣ ಮಾಹಿತಿ ಪಡೆದು ಮಾತನಾಡುತ್ತೇನೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ



ವ್ಯಕ್ತಿ ಮನೆ ಮೇಲೆ ನಡೆದಿರುವ ಐಟಿ ದಾಳಿಗೆ ಅವರು ಯಡಿಯೂರಪ್ಪ ಆಪ್ತ ಎಂದು ನಾನು ಸರ್ಟಿಫಿಕೇಟ್ ಕೊಡುವುದಿಲ್ಲ.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ರಾಜಕೀಯ ಇರಬಹುದೇನೋ



ಹುಬ್ಬಳ್ಳಿ:‘ಬಿ.ಎಸ್. ಯಡಿಯೂರಪ್ಪ ಅವರ ಆಪ್ತನ ಮೇಲೆ ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆಂದರೆ ಇದರಲ್ಲಿ ರಾಜಕೀಯ ಇರಬಹುದೇನೋ; ನನಗೆ ಗೊತ್ತಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

‘ದಾಳಿ ಬಗ್ಗೆ ಯಡಿಯೂರಪ್ಪ ಅವರನ್ನೇ ಕೇಳಬೇಕು. ಯಡಿಯೂರಪ್ಪನವರ ಆಪ್ತನ ಮೇಲೆಯೇ ದಾಳಿಯಾಗಿದೆ ಅಂದ್ರೆ ಏನೋ ರಾಜಕೀಯ ಇದ್ದರೂ ಇರಬಹುದು. ಯಡಿಯೂರಪ್ಪ ಆಪ್ತರನ್ನು ಬಿಟ್ಟು ಬಸವರಾಜ ಬೊಮ್ಮಾಯಿ ಅಥವಾ ಸಚಿವರ ಮನೆ ಮೇಲೆ ದಾಳಿ ಮಾಡಲು ಆಗುತ್ತದೆಯೇ’ ಎಂದು ಪ್ರಶ್ನಿಸಿದರು.

ಭ್ರಷ್ಟಾಚಾರದ ಕಾರಣ: ‘ಭ್ರಷ್ಟಾಚಾರದ ಕಾರಣಕ್ಕಾಗಿಯೇ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕೆ ಇಳಿಸಲಾಗಿದೆ ಎಂಬುದು ಅವರ ಆಪ್ತರ ಮೇಲೆ ನಡೆಸಲಾದ ಐಟಿ ದಾಳಿ ಮೂಲಕ ಸಾಬೀತಾಗಿದೆ’ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಆಂತರಿಕ ವಿಷಯ ಇರಬಹುದು



ಕಲಬುರಗಿ: ‘ಯಡಿಯೂರಪ್ಪ ಅವರು ಎರಡು ವರ್ಷ ಮುಖ್ಯಮಂತ್ರಿಯಾಗಿದ್ದಾಗ ಅವರ ಪುತ್ರನ ಜತೆ ಕೆಲಸ ಮಾಡಿದ್ದ ಆಪ್ತನ ಮನೆ ಮೇಲೆ ದಾಳಿ ಆಗಿರುವುದು ಎಲ್ಲೋ ಒಂದು ಕಡೆ ಬಿಜೆಪಿ ಆಂತರಿಕ ವಿಷಯಗಳಿಗೆ ಸಂಬಂಧಪಟ್ಟಿರಬಹುದು. ಅವರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ನಡೆದಿರುವ ದಾಳಿ ಇದಾಗಿರಲೂಬಹುದು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಉಪ ಚುನಾವಣೆ ವೇಳೆಯಲ್ಲಿ ಈ ದಾಳಿ ನಡೆದಿದೆ. ಬಹುಶಃ ತಮಗೆ ಸಿಕ್ಕಿರುವ ಮಾಹಿತಿ ಆಧಾರದ ಮೇಲೆ ಅಧಿಕಾರಿಗಳು ದಾಳಿ ನಡೆಸಿರಬಹುದೇನೋ ಎಂದರು.

ಎಚ್.ಡಿ ಕುಮಾರಸ್ವಾಮಿಗೆ ಸಿ.ಟಿ.ರವಿ ತಿರುಗೇಟು

‘ದೇವೇಗೌಡರೇ ಸಂಘದ ಸಿದ್ಧಾಂತ ಒಪ್ಪಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುಮಾರಸ್ವಾಮಿಯವರೇ ನಿಮಗೆ ಆರ್‌ಎಸ್‌ಎಸ್ ಬಗ್ಗೆ ಅನುಮಾನಗಳಿದ್ದರೆ, ನಿಮ್ಮ ತಂದೆ ದೇವೇಗೌಡರಲ್ಲಿ ಕೇಳಿ. ಅವರೇ ಆರ್‌ಎಸ್‌ಎಸ್ ಸಿದ್ಧಾಂತ ಒಪ್ಪಿಕೊಂಡಿದ್ದಾರೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಆರ್‌ಎಸ್‌ಎಸ್ ಕುರಿತು ನೀಡಿರುವ ಹೇಳಿಕೆಗಳ ಬಗ್ಗೆ ರವಿ ಮತ್ತೊಮ್ಮೆ ಸರಣಿ ಟ್ವೀಟ್‌ಗಳ ಮೂಲಕ ತಿರುಗೇಟು ನೀಡಿದ್ದಾರೆ.

‘ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಚಾಮುಂಡೇಶ್ವರಿ ಚುನಾವಣಾ ಪ್ರಚಾರದ ವೇಳೆ ನಿಮ್ಮ ತಂದೆ ಆರ್‌ಎಸ್‌ಎಸ್ ಉತ್ತಮ ಸಂಘಟನೆ, 1977ರಲ್ಲಿ ತುರ್ತುಪರಿಸ್ಥಿತಿಯಲ್ಲಿ ಬಂಧನಕ್ಕೆ ಒಳಗಾದ ಸಂದರ್ಭದಲ್ಲಿ ಎಲ್.ಕೆ.ಆಡ್ವಾಣಿ ಮತ್ತಿತರರು ನಡೆದುಕೊಂಡ ರೀತಿ ಮೆಚ್ಚುಗೆಯಾಗಿತ್ತು. ಹೀಗಾಗಿ ನಾನು ಆರ್‌ಎಸ್‌ಎಸ್ ಹೊಗಳುತ್ತೇನೆ ಎಂದಿದ್ದರು’ ಎಂದಿದ್ದಾರೆ.

‘1977ರಲ್ಲಿ ಬೆಂಗಳೂರಿನಲ್ಲಿ ನಡೆದ ಸಂಘದ ಕಾರ್ಯಕ್ರಮದಲ್ಲಿ ಅಂದಿನ ಸರಸಂಘ ಚಾಲಕ ಬಾಳಾಸಾಹೇಬ್ ದೇವರಸ್, ಕೆ.ಎಸ್.ಹೆಗ್ಡೆ, ಡಾ.ಜಾನ್ ಜತೆಯಲ್ಲಿ ದೇವೇಗೌಡರೂ ಉಪಸ್ಥಿತರಿದ್ದರು. ಅಂದರೆ ದೇವೇಗೌಡರಿಗೆ ಆರ್‌ಎಸ್‌ಎಸ್ ಸಿದ್ಧಾಂತದಲ್ಲಿ ನಂಬಿಕೆ ಇದೆ ಎಂದು ಅರ್ಥವಲ್ಲವೇ’ ಎಂದು ರವಿ ಪ್ರಶ್ನಿಸಿದ್ದಾರೆ.

‘ಭಾರತೀಯರನ್ನು ಭಾರತಕ್ಕಾಗಿ ಮಿಡಿಯುವಂತೆ ಮಾಡಬಲ್ಲ ಸಂಸ್ಥೆ ಆರ್‌ಎಸ್‌ಎಸ್ ಎಂದೇ ವಿಶ್ವ ಖ್ಯಾತಿ ಆಗಿದೆ. ಮನೆ- ಮಠ ಬಿಟ್ಟು ಸಂಘ ಬಯಸುತ್ತಿರುವ, ಸಮಾಜ ನಿರ್ಮಾಣಕ್ಕಾಗಿ ಶ್ರಮಿಸುತ್ತಿರುವ ತ್ಯಾಗಿಗಳ ಪಡೆಯೇ ಇಲ್ಲಿದೆ’ ಎಂದು ಹೇಳಿದ್ದಾರೆ.

ದೇಶದಲ್ಲಿ ಆರ್‌ಎಸ್‌ಎಸ್ ಕಪಿಮುಷ್ಠಿಯಲ್ಲಿ ಇರುವ ಸರ್ಕಾರವಿದೆ. ಇಂದಿನ ಆರ್‌ಎಸ್‌ಎಸ್ ಚಟುವಟಿಕೆಗಳ ಬಗ್ಗೆ ಕಾಂಗ್ರೆಸ್‌ನ ಯಾರಿಗಾದರೂ ಧ್ವನಿ ಎತ್ತುವ ಧೈರ್ಯವಿದೆಯೇ?

ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಪ್ರಚಾರಕ್ಕಾಗಿ ಟೀಕೆ ಸಲ್ಲದು: ಸಚಿವ ಆರಗ ಜ್ಞಾನೇಂದ್ರ

ಆರ್‌ಎಸ್‌ಎಸ್ ಬಗ್ಗೆ ಕುಮಾರಸ್ವಾಮಿಯವರಿಗೆ ಲವಲೇಶವೂ ಗೊತ್ತಿಲ್ಲ. ಹೀಗಾಗಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ರಾಜಕಾರಣ ಮಾಡಲು ಸಾಕಷ್ಟು ವಿಷಯಗಳಿವೆ. ಆದರೆ ಪ್ರಚಾರಕ್ಕಾಗಿ ಅಥವಾ ರಾಜಕಾರಣಕ್ಕಾಗಿ ದೇಶ ಭಕ್ತ ಸಂಘಟನೆ ಕುರಿತು ಆಧಾರ ರಹಿತ ಆರೋಪ ಮಾಡುವುದು ಸರಿಯಲ್ಲ ಎಂದೂ ತಿಳಿಸಿದ್ದಾರೆ.

‘ಮುಸ್ಲಿಮರ ಮತಕ್ಕಾಗಿ ಆರ್‌ಎಸ್‌ಎಸ್ ಟೀಕೆ’

ಹುಬ್ಬಳ್ಳಿ: ‘ಚುನಾವಣೆಯಲ್ಲಿ ಮುಸ್ಲಿಮರ ಮತಗಳನ್ನು ಸೆಳೆಯಲು ಎಚ್.ಡಿ. ಕುಮಾರಸ್ವಾಮಿ ಹಾಗೂ ಸಿದ್ದರಾಮಯ್ಯ ಅವರು ಆರ್‌ಎಸ್‌ಎಸ್ ಅನ್ನು ಟೀಕಿಸುತ್ತಿದ್ದಾರೆ. ಇದರಿಂದ ಅವರಿಗೆ ಲಾಭವಾಗುವುದಿಲ್ಲ’ ಎಂದು ಶಾಸಕ ಜಗದೀಶ ಶೆಟ್ಟರ್ ಹೇಳಿದರು.

ವಾರ್ಷಿಕ ಆದಾಯ: ಮಾನದಂಡದ ಹಿಂದಿರುವ ಕಾರಣ ವಿವರಿಸಲು ಸೂಚನೆ

ನೀಟ್: ಇಡಬ್ಲ್ಯುಎಸ್ ಅಭ್ಯರ್ಥಿಗಳಿಗೆ ಮೀಸಲಾತಿ

ಪ್ರಜಾವಾಣಿ ವಾರ್ತೆ



ನವದೆಹಲಿ: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ (ನೀಟ್) ರಾಷ್ಟ್ರೀಯ ಕೋಟಾದಡಿ ಮೀಸಲಾತಿ ಪಡೆಯಲು ಆರ್ಥಿಕ ದುರ್ಬಲ ವರ್ಗದ (ಇಡಬ್ಲ್ಯುಎಸ್) ಅಭ್ಯರ್ಥಿಗಳ ವಾರ್ಷಿಕ ₹ 8 ಲಕ್ಷ ಆದಾಯ ಇರಬೇಕು ಎಂಬ ಮಾನದಂಡ ನಿಗದಿಪಡಿಸಲಾಗಿದೆ. ಈ ಮಾನದಂಡ ನಿಗದಿಯ ಹಿಂದಿರುವ ಕಾರಣಗಳನ್ನು ವಿವರಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಗುರುವಾರ ಸೂಚಿಸಿದೆ.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ನೀಡಲು, 'ನೀಟ್'ನ ರಾಷ್ಟ್ರೀಯ ಕೋಟಾದಲ್ಲಿ ಒಬಿಸಿ ಹಾಗೂ ಇಡಬ್ಲ್ಯುಎಸ್ ಅಭ್ಯರ್ಥಿಗಳಿಗೆ ಮೀಸಲಾತಿ ಜಾರಿಗೊಳಿಸಿ ಜುಲೈ 29ರಂದು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಔರೆಲಿಯೊ ನ್ಯೂನ್ಸ್ ಹಾಗೂ ಇತರರು ಅರ್ಜಿಗಳನ್ನು ಸಲ್ಲಿಸಿದ್ದರು.

'ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ವಾರ್ಷಿಕ ಆದಾಯ ₹ 8 ಲಕ್ಷ ಇರಬೇಕು ಎಂಬುದನ್ನು ನಿಗದಿ ಮಾಡುವಾಗ ಯಾವ ರೀತಿಯ ಪರಿಶೀಲನೆ ನಡೆಸಿದ್ದೀರಿ. ಒಬಿಸಿಗಳಿಗೆ ಅನ್ವಯವಾಗುವಂಥ ಮಾನದಂಡಗಳನ್ನೇ ಇಲ್ಲಿ ಅನ್ವಯಿಸಲಾಗಿದೆಯೇ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಅವರನ್ನು ನ್ಯಾಯಪೀಠ ಪ್ರಶ್ನಿಸಿತು.

'ಆದಾಯಕ್ಕೆ ಸಂಬಂಧಿಸಿದ ಮಾನದಂಡಗಳನ್ನು ದೇಶದಾದ್ಯಂತ ಏಕರೂಪವಾಗಿ ಅನ್ವಯಿಸಲಾಗದು. ಮುಂಬೈ ಮತ್ತು ಬೆಂಗಳೂರಿನಂಥ ನಗರಗಳಲ್ಲಿ ವಾಸಿಸುವ ವ್ಯಕ್ತಿಯ ವಾರ್ಷಿಕ ಆದಾಯವನ್ನು ಉತ್ತರ ಪ್ರದೇಶದ ಕೊನೆಯ ಗ್ರಾಮವೊಂದರ ನಿವಾಸಿಯ ಆದಾಯದೊಂದಿಗೆ ಹೋಲಿಸಲಾಗದು' ಎಂದೂ ನ್ಯಾಯಪೀಠ ಅಭಿಪ್ರಾಯ ಪಟ್ಟಿತು.

ಈ ಕುರಿತು ಅಫಿಡವಿಟ್ ಸಲ್ಲಿಸಲು ಅವಕಾಶ ನೀಡುವಂತೆ ನಟರಾಜ್ ಮನವಿ ಮಾಡಿದರು. ಇದಕ್ಕೆ ಒಪ್ಪಿದ ನ್ಯಾಯಪೀಠ ವಿಚಾರಣೆಯನ್ನು ಅ.20ಕ್ಕೆ ಮುಂದೂಡಿತು.

ಹೆತ್ತವರು ಕೋವಿಡ್‌ಗೆ ಬಲಿಯಾದ ಮಕ್ಕಳಿಗೆ ಪಿಎಂ ಕೇರ್ಸ್ ನಿಧಿ ನೆರವು: ಮಾರ್ಗಸೂಚಿ ಪ್ರಕಟ

ಶಿಕ್ಷಣಕ್ಕೆ ಸಹಾಯ; ಸ್ವಾವಲಂಬನೆಗೆ ಹಣ

• ಶೆಮಿನ್ ಜಾಯ್

ನವದೆಹಲಿ: ಕೋವಿಡ್–19 ಸಾಂಕ್ರಾಮಿಕದಿಂದ ಹೆತ್ತವರನ್ನು ಅಥವಾ ಪಾಲಕರನ್ನು ಕಳೆದುಕೊಂಡ ಮಕ್ಕಳ ಸುಸ್ಥಿರ ಬೆಳವಣಿಗೆಗೆ ಸಮಗ್ರ ಬೆಂಬಲ ನೀಡಲು ಯೋಜನೆ ರೂಪಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಇದೇ ವರ್ಷ ಮೇ 29ರಂದು ಘೋಷಿಸಿದ್ದರು. ಯೋಜನೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ ಗುರುವಾರ ಬಿಡುಗಡೆ ಮಾಡಿದೆ.

ಮಕ್ಕಳನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶ ಇರಿಸಿಕೊಂಡು ಈ ಯೋಜನೆ ಜಾರಿಗೆ ತರಲಾಗಿದೆ. ಅದರಂತೆ ಪಿಎಂ ಕೇರ್ಸ್‌ನ ಮಕ್ಕಳ ಯೋಜನೆಗಳ ಅಡಿ ನೋಂದಾಯಿಸಿಕೊಂಡಿರುವ ಮಕ್ಕಳು ಈ ಯೋಜನೆಯ ಫಲಾನುಭವಿಗಳು ಆಗಿರುತ್ತಾರೆ. ಹೆತ್ತವರನ್ನು ಅಥವಾ ಪೋಷಕರನ್ನು ಕಳೆದುಕೊಂಡ ಮಕ್ಕಳು 18 ವರ್ಷ ವಯಸ್ಸಿನವರಾಗುತ್ತಿದ್ದಂತೆ ಅವರಿಗೆ ನೆರವು ಭತ್ಯೆ ನೀಡಲಾಗುವುದು. ಅವರು 23 ವರ್ಷಕ್ಕೆ ಕಾಲಿಡುವ ವರೆಗೆ ಈ ಭತ್ಯೆ ಸಿಗಲಿದೆ. ಅವರು 23 ವರ್ಷ ತುಂಬಿದ ಬಳಿಕ ಒಟ್ಟಿಗೇ ₹10 ಲಕ್ಷ ಪಡೆಯುತ್ತಾರೆ. ಇದರ ಜೊತೆಗೆ ಶಿಕ್ಷಣ ಮತ್ತು ಆರೋಗ್ಯ ವಿಮೆಗಳೂ ಅವರಿಗೆ ದೊರಕುತ್ತವೆ.

ಯೋಜನೆಯ ಮಾರ್ಗಸೂಚಿಗಳು ಹೀಗಿವೆ

- 2020ರ ಮಾ.11ರಿಂದ ಈ ವರ್ಷ ಡಿಸೆಂಬರ್ 31ರ ವರೆಗೆ ತಮ್ಮ ಇಬ್ಬರೂ ಹೆತ್ತವರು ಕಾನೂನುಬದ್ಧವಾಗಿ ದತ್ತು ಪಡೆದಿದ್ದ ಪೋಷಕರು, ಕಾನೂನುಬದ್ಧವಾಗಿ ದತ್ತು ಪಡೆದಿದ್ದ ಒಬ್ಬಂಟಿ ಪೋಷಕರನ್ನು ಕಳೆದುಕೊಂಡ ಮಕ್ಕಳು ಈ ಯೋಜನೆಯ ಫಲಾನುಭವಿಗಳು ಆಗಲಿದ್ದಾರೆ
- ಫಲಾನುಭವಿಗಳ ಅಂಚೆ ಕಚೇರಿ ಖಾತೆಗಳಿಗೆ ನಿಗದಿತ ಮೊತ್ತದ ಹಣ ನೇರವಾಗಿ ವರ್ಗಾವಣೆ ಆಗುತ್ತದೆ. ಫಲಾನುಭವಿಗೆ 18 ವರ್ಷ ಆದಾಗ ಅವರ ಖಾತೆಯಲ್ಲಿ ಒಟ್ಟು ₹10 ಲಕ್ಷ ಹಣ ಸಂಗ್ರಹವಾಗಲು (ಬಡ್ಡಿ ಸೇರಿ) ಎಷ್ಟು ಮೊತ್ತ ಬೇಕೋ ಅಷ್ಟು ಮೊತ್ತವನ್ನು ಅಂಚೆ ಕಚೇರಿ ಖಾತೆಯಲ್ಲಿ ಇರಿಸಲಾಗುತ್ತದೆ. 18 ವರ್ಷಕ್ಕೆ ಕಾಲಿಡುತ್ತಿದ್ದಂತೆ ಅವರಿಗೆ ಪ್ರತಿ ತಿಂಗಳು ಭತ್ಯೆ ದೊರಕಲಿದೆ. 23 ವರ್ಷ ತುಂಬುವವರೆಗೂ ಅವರಿಗೆ ಭತ್ಯೆ ದೊರಕಲಿದೆ
- ಎಲ್ಲಾ ಫಲಾನುಭವಿಗಳನ್ನೂ ಆಯುಷ್ಮಾನ್ ಭಾರತ ಯೋಜನೆ ಅಡಿ ಸೇರಿಸಲಾಗುವುದು. ಅದರ ಅಡಿ ಅವರಿಗೆ ಐದು ಲಕ್ಷ ರೂಪಾಯಿ ಆರೋಗ್ಯ ವಿಮೆ ನೀಡಲಾಗುವುದು
- ಈ ಯೋಜನೆಯ ಫಲಾನುಭವಿಗಳಿಗೆ ಪೂರ್ವ ಪ್ರಾಥಮಿಕದಿಂದ ಉನ್ನತ ಶಿಕ್ಷಣದ ವರೆಗೂ ನೆರವು ನೀಡಲಾಗುವುದು. ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಪೋಷಕಾಂಶ ಒದಗಿಸುವ ಮತ್ತು ಇತರ ಸಹಾಯಗಳನ್ನು ಅಂಗನವಾಡಿ ಕಾರ್ಯಕರ್ತರು ಮಾಡುತ್ತಾರೆ
- ಮಕ್ಕಳನ್ನು ಅವರು ವಾಸವಾಗಿರುವ ಸ್ಥಳಕ್ಕೆ ಹತ್ತಿರದಲ್ಲಿರುವ ಕೇಂದ್ರೀಯ ವಿದ್ಯಾಲಯ ಮತ್ತು ಇತರ ಖಾಸಗಿ ಶಾಲೆಗಳಿಗೆ ಸೇರಿಸಲಾಗುವುದು. ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ಶಿಕ್ಷಣದ ಹಕ್ಕಿನ ಅಡಿ ಬೋಧನಾ ಶುಲ್ಕ ತೆಗೆದುಕೊಳ್ಳುವಂತಿಲ್ಲ. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ 10 ವರ್ಷ ವಯಸ್ಸಿಗಿಂತ ಚಿಕ್ಕ ಮಕ್ಕಳಿಗೆ ಸಮಗ್ರ ಶಿಕ್ಷಣ ಅಭಿಯಾನದ ಅಡಿ ಎರಡು ಜೊತೆ ಸಮವಸ್ತ್ರಗಳು ಮತ್ತು ಉಚಿತ ಪಠ್ಯ ಪುಸ್ತಕಗಳನ್ನು ನೀಡಲಾಗುವುದು
- ಸಂಬಂಧಿಗಳ ಜೊತೆ ವಾಸಿಸುತ್ತಿರುವ 11ರಿಂದ 18ರ ಒಳಗಿನ ಮಕ್ಕಳನ್ನು ಸರ್ಕಾರಿ, ಸರ್ಕಾರಿ ಅನುದಾನಿತ, ಕೇಂದ್ರೀಯ ವಿದ್ಯಾಲಯ ಅಥವಾ ಖಾಸಗಿ ಶಾಲೆಗಳಿಗೆ ಸೇರಿಸಲಾಗಿದೆ ಎಂಬುದನ್ನು ಜಿಲ್ಲಾಡಳಿತದಿಂದ ದೃಢೀಕರಿಸಬೇಕು
- ಫಲಾನುಭವಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಶಿಕ್ಷಣ ಸಾಲ ನೀಡಲಾಗುತ್ತದೆ. ಒಂದು ವೇಳೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಯೋಜನೆಗಳ ಅಡಿ ಅವರಿಗೆ ಬಡ್ಡಿ ವಿನಾಯಿತಿ ಸಿಗದಿದ್ದರೆ, ಆ ಬಡ್ಡಿಯನ್ನು ಪಿಎಂ ಕೇರ್ಸ್‌ನ ಮಕ್ಕಳ ಯೋಜನೆ ಅಡಿ ತುಂಬಲಾಗುತ್ತದೆ

ಲಖಿಂಪುರ–ಖೇರಿ ಹಿಂಸಾಚಾರ: ಆಶಿಶ್ ಮಿಶ್ರಾಗೆ ಸಮನ್ಸ್ ಜಾರಿ, ಇಬ್ಬರು ಆರೋಪಿಗಳ ಬಂಧನ

ಪೊಲೀಸರಿಗೆ ಸಿಗದ ಕೇಂದ್ರ ಸಚಿವರ ಮಗ ಆಶಿಶ್

ಪ್ರಜಾವಾಣಿ ವಾರ್ತೆ

ಲಖನೌ: ಲಖಿಂಪುರ-ಖೇರಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ವಾಹನ ಹರಿಸಿದ ಪ್ರಕರಣದಲ್ಲಿ, ಆಶಿಶ್ ಪಾಂಡೆ ಮತ್ತು ಲವಕುಶ ಎಂಬ ಇಬ್ಬರು ಆರೋಪಿಗಳನ್ನು ಗುರುವಾರ ಬಂಧಿಸಲಾಗಿದೆ.

ಪ್ರಮುಖ ಆರೋಪಿಯಾಗಿರುವ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ತಮ್ಮ 'ಕೈಗೆ ಸಿಗುತ್ತಿಲ್ಲ' ಎಂದಿರುವ ಉತ್ತರ ಪ್ರದೇಶ ಪೊಲೀಸರು, ಆತನಿಗೆ ಸಮನ್ಸ್ ಜಾರಿ ಮಾಡಿದ್ದಾಗಿ ತಿಳಿಸಿದ್ದಾರೆ. ಆತ ಎಲ್ಲಿದ್ದಾನೆಂಬ ಮಾಹಿತಿಯೂ ಸಿಕ್ಕಿಲ್ಲ ಎಂದು ಲಖಿಂಪುರ- ಖೇರಿಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಆದರೆ, ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿರುವ ಆಶಿಶ್ ಮಿಶ್ರಾ, ಈ ಸಂಬಂಧ ಮಂಗಳವಾರದವರೆಗೂ ಸ್ಥಳೀಯ ಮಾಧ್ಯಮಗಳಿಗೆ ಸಂದರ್ಶನ ನೀಡಿದ್ದಾರೆ.

ಆರೋಪಿ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ. ಪ್ರತಿಭಟನನಿರತರ ಮೇಲೆ ವಾಹನ ಹರಿಸಿರುವ ದೃಶ್ಯಗಳಿದ್ದ ಎರಡು ವಿಡಿಯೊಗಳು ಲಭ್ಯವಾಗಿವೆ. ಹಾಗಿದ್ದರೂ ಆಶಿಶ್‌ನನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿಲ್ಲ ಎಂಬ ಆಕ್ಷೇಪ ಕೇಳಿಬಂದಿದೆ.

ಈ ಪ್ರಕರಣವನ್ನು ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡಿದ್ದು, ಎಷ್ಟು ಜನ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ತರಾಟೆಗೆ ತೆಗೆದುಕೊಂಡಿದೆ. ಹೀಗಾಗಿ, ಇದೀಗ ಪ್ರಮುಖ ಆರೋಪಿ ಆಶಿಶ್‌ನನ್ನು ಶೀಘ್ರದಲ್ಲೇ ಬಂಧಿಸುವುದಾಗಿ ಸರ್ಕಾರ ಹೇಳಿದೆ. ಸ್ಥಳೀಯ ಮಾಧ್ಯಮವೊಂದರಲ್ಲಿ ಹೇಳಿಕೆ ನೀಡಿರುವ ಮೂಲಗಳ ಪ್ರಕಾರ, ಆಶಿಶ್ ಸದ್ಯದಲ್ಲಿಯೇ ಶರಣಾಗಲಿದ್ದಾರೆ ಎನ್ನಲಾಗಿದೆ.

ಆಶಿಶ್‌ನನ್ನು ಬಂಧಿಸದೇ ಇರುವುದಕ್ಕಾಗಿ ರಾಜ್ಯ ಸರ್ಕಾರವನ್ನು ಪ್ರತಿಪಕ್ಷಗಳು ತರಾಟೆಗೆ ತೆಗೆದುಕೊಂಡಿದ್ದವು.

'ಪ್ರಕರಣದಲ್ಲಿ, ಆರೋಪಿಯ ಪಾತ್ರ ಇರುವುದನ್ನು ಪುಷ್ಟೀಕರಿಸುವ ವಿಡಿಯೊಗಳು ಕಣ್ಮುಂದೆ ಇದ್ದಾಗಲೂ ಸರ್ಕಾರ ಕಾರ್ಯಪ್ರವೃತ್ತವಾಗುತ್ತಿಲ್ಲ. ಇಷ್ಟೊಂದು ಸ್ಪಷ್ಟವಾಗಿರುವ ವಿಷಯ ದುರಹಂಕಾರದ ಬಿಜೆಪಿ ಸರ್ಕಾರದ ಕಣ್ಣಿಗೆ ಕಾಣುವುದಿಲ್ಲ' ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಟೀಕಿಸಿದ್ದಾರೆ.

ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿನ ಸಂತ್ರಸ್ತ ಕುಟುಂಬದವರನ್ನು ಗುರುವಾರ ಭೇಟಿ ಮಾಡಿದ ಅಖಿಲೇಶ್, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿದ್ದಾರೆ.

ಅ. 3ರಂದು ನಡೆದ ಈ ಹಿಂಸಾಚಾರದಲ್ಲಿ ನಾಲ್ವರು ರೈತರು, ಒಬ್ಬ ಪತ್ರಕರ್ತ ಸೇರಿದಂತೆ ಎಂಟು ಮಂದಿ ಮೃತಪಟ್ಟಿದ್ದರು. ಹಲವಾರು ಜನರು ಗಾಯಗೊಂಡಿದ್ದರು.



ಲಖಿಂಪುರ–ಖೇರಿ ಹಿಂಸಾಚಾರದಲ್ಲಿ ಮೃತಪಟ್ಟ ರೈತರೊಬ್ಬರ ಕುಟುಂಬದ ಸದಸ್ಯರನ್ನು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಗುರುವಾರ ಭೇಟಿಯಾದರು —ಪಿಟಿಐ ಚಿತ್ರ

ತನಿಖಾ ಆಯೋಗ ರಚನೆ

ಲಖಿಂಪುರ ಖೇರಿ ಜಿಲ್ಲೆಯಲ್ಲಿ ಅ.3ರಂದು ನಡೆದ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿ, ಉತ್ತರ ಪ್ರದೇಶ ಸರ್ಕಾರವು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಏಕಸದಸ್ಯ ತನಿಖಾ ಆಯೋಗವನ್ನು ರಚಿಸಿದೆ.

ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪ್ರದೀಪ್ ಕುಮಾರ್ ಶ್ರೀವಾತ್ಸವ್ ಅವರು ಆಯೋಗದ ನೇತೃತ್ವ ವಹಿಸಿದ್ದು, ಎರಡು ತಿಂಗಳ ಒಳಗಾಗಿ ತನಿಖೆ ಪೂರ್ಣಗೊಳಿಸಿ, ವರದಿ ಸಲ್ಲಿಸಬೇಕಿದೆ.

ಮಹಾರಾಷ್ಟ್ರ: ಅಜಿತ್ ಪವಾರ್ ಕುಟುಂಬ ಸದಸ್ಯರ ಉದ್ದಿಮೆಗಳ ಮೇಲೆ ಐ.ಟಿ ದಾಳಿ

ಮುಂಬೈ(ಪಿಟಿಐ): ತೆರಿಗೆ ವಂಚನೆ ಆರೋಪದ ಮೇಲೆ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಕೆಲವು ರಿಯಲ್ ಎಸ್ಟೇಟ್ ಡೆವಲಪರ್‌ಗಳ ಕುಟುಂಬ ಸದಸ್ಯರಿಗೆ ಸಂಬಂಧಿಸಿದ ಕೆಲವು ವ್ಯವಹಾರ ಉದ್ದಿಮೆಗಳ ಮೇಲೆ ಆದಾಯ ತೆರಿಗೆ ಇಲಾಖೆ ಗುರುವಾರ ದಾಳಿ ನಡೆಸಿದೆ.

ಮುಂಬೈ, ಪುಣೆ, ಸತಾರಾ ಸೇರಿದಂತೆ ಮಹಾರಾಷ್ಟ್ರ ಮತ್ತು ಗೋವಾದ ಕೆಲವು ನಗರಗಳಲ್ಲಿ ಐ.ಟಿ ಅಧಿಕಾರಿಗಳು ಶೋಧ ನಡೆಸುತ್ತಿದ್ದಾರೆ. ಕೆಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದ್ದು, ಅವುಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಡಿಬಿ ರಿಯಾಲ್ಟಿ, ಶಿವಾಲಿಕ್, ಜರಂಡೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ (ಜರಂಡೇಶ್ವರ ಎಸ್‌ಎಸ್‌ಕೆ) ಮತ್ತು ಪವಾರ್ ಸಹೋದರಿಯರ ವ್ಯವಹಾರ– ವ್ಯಾಪಾರ ಉದ್ದಿಮೆಗಳ ಗ್ರೂಪ್‌ಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಐ.ಟಿ ದಾಳಿ ನಡೆದಿದ್ದು, ದಾಖಲೆಗಳ ಪರಿಶೀಲನೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಇದೇ ಜುಲೈನಲ್ಲಿ ಜಾರಿ ನಿರ್ದೇಶನಾಲಯವು (ಇಡಿ) ಅಕ್ರಮ ಹಣ ವರ್ಗಾವಣೆ ಆರೋಪದ ಪ್ರಕರಣದಲ್ಲಿ ಸತಾರಾದ ಚಿಮಾಂಗಾವ್-ಕೋರೆಗಾಂವ್‌ನಲ್ಲಿರುವ ಜರಂಡೇಶ್ವರ ಎಸ್‌ಎಸ್‌ಕೆಗೆ ಸಂಬಂಧಿಸಿದ ಸುಮಾರು ₹65 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಂಡಿತ್ತು. ಈ ಸಕ್ಕರೆ ಕಾರ್ಖಾನೆಯು ಪವಾರ್ ಮತ್ತು ಅವರ ಕುಟುಂಬದ ಸದಸ್ಯರೊಂದಿಗೆ ಸಂಪರ್ಕ ಹೊಂದಿದೆ ಎಂದು ಇ.ಡಿ ಆಪಾದಿಸಿತ್ತು.

'ನನ್ನ ಸಹೋದರಿಯರನ್ನು ಗುರಿಯಾಗಿಸಿರುವುದು ಸರಿಯಲ್ಲ': 'ತನ್ನೊಂದಿಗೆ ಸಂಬಂಧ ಹೊಂದಿರುವ ಕಂಪನಿಗಳ ಮೇಲೆ ಆದಾಯ ತೆರಿಗೆ ಇಲಾಖೆಯು ದಾಳಿ ನಡೆಸಿರುವುದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಆದರೆ ನನ್ನ ಮೂವರು ಸಹೋದರಿಯರನ್ನು ಇದರಲ್ಲಿ ಗುರಿಯಾಗಿಸಿಕೊಂಡಿರುವುದು ಸರಿಯಲ್ಲ' ಎಂದು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಗುರುವಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತಮ್ಮ ಕುಟುಂಬ ಸದಸ್ಯರಿಗೆ ಸಂಬಂಧಿಸಿದ ಉದ್ದಿಮೆಗಳ ಮೇಲೆ ತೆರಿಗೆ ವಂಚನೆ ಆರೋಪದ ಮೇಲೆ ಐ.ಟಿ ದಾಳಿ ನಡೆದಿರುವುದಕ್ಕೆ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ.

ಲಖಿಂಪುರ: ಪಂಜಾಬ್‌ನಲ್ಲಿ ಕಾಂಗ್ರೆಸ್‌ಗೆ ಲಾಭ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಲಖನೌ: ಲಖಿಂಪುರ್-ಖೇರಿ ಜಿಲ್ಲೆಯಲ್ಲಿ ನಾಲ್ವರು ರೈತರ ಹತ್ಯೆ ಹಾಗೂ ಹಿಂಸಾಚಾರ ಘಟನೆಯ ಬಳಿಕ ತಾನು ರೈತರ ಪರ ಎಂದು ಬಿಂಬಿಸಿಕೊಳ್ಳುವ ಅವಕಾಶವನ್ನು ಕಾಂಗ್ರೆಸ್, ಇತರ ವಿರೋಧ ಪಕ್ಷಗಳನ್ನು ಮೀರಿ ಬಳಸಿಕೊಂಡಿದೆ. ಈ ಮೂಲಕ ಉತ್ತರ ಪ್ರದೇಶದಲ್ಲಿ ತನ್ನ ಚುನಾವಣಾ ಭವಿಷ್ಯಕ್ಕೆ ಉತ್ತೇಜನ ನೀಡುವ ನಿರೀಕ್ಷೆಯಲ್ಲಿ ಪಕ್ಷ ಇದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ. ಆದರೆ ಈ ಬೆಳವಣಿಗೆಯು ಕಾಂಗ್ರೆಸ್‌ಗೆ ಉತ್ತರ ಪ್ರದೇಶಕ್ಕಿಂತ ಹೆಚ್ಚಾಗಿ ಗುಂಪುಗಾರಿಕೆ, ಬಂಡಾಯವನ್ನು ಎದುರಿಸುತ್ತಿರುವ ಪಂಜಾಬ್‌ನಲ್ಲಿ ಹೆಚ್ಚಿನ ಲಾಭವನ್ನು ತಂದುಕೊಡಬಹುದು ಎನ್ನಲಾಗಿದೆ.

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಸಾಂಸ್ಥಿಕ ನೆಲೆಯನ್ನು ಹೊಂದಿಲ್ಲ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ಅದರ ಪ್ರಭಾವ ಸೀಮಿತವಾಗಿ ಇರುವುದರಿಂದ ಲಖಿಂಪುರ ಘಟನೆಯಿಂದ ಚುನಾವಣಾ ಲಾಭ ಪಡೆಯಲು ಪಕ್ಷಕ್ಕೆ ಕಷ್ಟವಾಗಬಹುದು ಎಂದು ಮತ್ತೊಬ್ಬ ವಿಶ್ಲೇಷಕರು ಅಭಿಪ್ರಾಯಪಡುತ್ತಾರೆ.

ಪಂಜಾಬ್‌ಮುಖ್ಯಮಂತ್ರಿಚರಣಜಿತ್ ಸಿಂಗ್ ಚನ್ನಿ ಅವರು ಲಖಿಂಪುರ್ ಖೇರಿಗೆ ಭೇಟಿ ನೀಡಿ, ಮೃತಪಟ್ಟ ನಾಲ್ವರು ರೈತರ ಕುಟುಂಬಗಳಿಗೆ ಪರಿಹಾರ ಘೋಷಿಸಿದ್ದರು. ಈ ಬೆಳವಣಿಗೆಯು ವಿಧಾನಸಭಾ ಚುನಾವಣೆಯ ಮೇಲೆ ಪರಿಣಾಮ ಬೀರಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

> **ಉತ್ತರ ಪ್ರದೇಶ ಮತ್ತು ಉತ್ತರಾಖಂಡ ಚುನಾವಣೆಯಲ್ಲಿ ಲಖಿಂಪುರ ಘಟನೆ ಮಹತ್ವದ ಪರಿಣಾಮ ಬೀರುವುದಿಲ್ಲ. ಇದು ಪಂಜಾಬ್‌ನಲ್ಲಿ ಹೆಚ್ಚು ಪ್ರತಿಧ್ವನಿಸಬಹುದು**
> **ಜೆ.ಪಿ. ಶುಕ್ಲಾ,** ರಾಜಕೀಯ ವಿಶ್ಲೇಷಕ ಮತ್ತು ಹಿರಿಯ ಪತ್ರಕರ್ತ

ಲಖಿಂಪುರ್ ಖೇರಿ ಜಿಲ್ಲೆಯನ್ನು ಉತ್ತರ ಪ್ರದೇಶದ 'ತರಾಯಿ' ಪ್ರದೇಶ ಎಂದು ಕರೆಯಲಾಗುತ್ತದೆ. ಶಾಜಹಾನ್‌ಪುರ, ಪಿಲಿಭಿತ್, ಸೀತಾಪುರ ಮತ್ತು ಬಹರೈಚ್ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಲಖಿಂಪುರ ಖೇರಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯ ಸಿಖ್ ರೈತರು ಇರುವುದರಿಂದ ಇದು ಉತ್ತರ ಪ್ರದೇಶದ ಪುಟ್ಟ ಪಂಜಾಬ್ ಎಂದೇ ಪ್ರಸಿದ್ಧವಾಗಿದೆ.

ಪಂಜಾಬಿನ ಮಾಲ್ವಾ, ದೋಬಾ ಮತ್ತು ಮಾಝಾ ಪ್ರದೇಶಗಳಿಂದ ಬಂದ ಸಿಖ್ಖರು ಸರ್ಕಾರದ ಆಹ್ವಾನದ ಮೇರೆಗೆ ಸುಮಾರು ಐದಾರು ದಶಕಗಳ ಹಿಂದೆ ಈ ಭಾಗಕ್ಕೆ ವಲಸೆ ಬಂದಿದ್ದರು. ಬರಡು ಭೂಮಿಯನ್ನು ಕೃಷಿ ಹೊಲಗಳಾಗಿ ಪರಿವರ್ತಿಸಲು ಅವರನ್ನು ಆಹ್ವಾನಿಸಲಾಗಿತ್ತು. ಸೀತಾಪುರದಿಂದ ಪಿಲಿಭಿತ್ ಮತ್ತು ಬರೇಲಿಗೆ ಪ್ರಯಾಣಿಸುವಾಗ ಪಂಜಾಬಿಗಳ ತೋಟಗಳನ್ನು ನೋಡಬಹುದು. ಇಲ್ಲಿ ಹೆಚ್ಚಿನ ಸಂಖ್ಯೆಯ ಗುರುದ್ವಾರಗಳನ್ನು ಕೂಡ ನೋಡಬಹುದು.

ಈ ಭಾಗದಿಂದ ಬಂದ ಬಹುತೇಕ ರೈತರು ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಯ ಮುಂಚೂಣಿಯಲ್ಲಿದ್ದಾರೆ. ರಾಜ್ಯದ ಪೂರ್ವ ಜಿಲ್ಲೆಗಳ ರೈತರು ಪ್ರತಿಭಟನೆಯಲ್ಲಿ ಅಷ್ಟಾಗಿ ತೊಡಗಿಸಿಕೊಂಡಿಲ್ಲ.



ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಮತ್ತು ಇತರರು ಲಖಿಂಪುರ–ಖೇರಿಗೆ ಗುರುವಾರ ಹೊರಟಿರುವುದು — ಪಿಟಿಐ ಚಿತ್ರ

ಅಜಯ್ ವಿರುದ್ಧ ಕೊಲೆ ಪ್ರಕರಣ: ತೀರ್ಪು ಇನ್ನಷ್ಟೇ ಬರಬೇಕಿದೆ

ಲಖನೌ (ಪಿಟಿಐ): ಲಖಿಂಪುರ–ಖೇರಿ ಹಿಂಸಾಚಾರದಿಂದಾಗಿ ಸುದ್ದಿಯಲ್ಲಿರುವ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು 17 ವರ್ಷ ಹಳೆಯದಾದ ಕೊಲೆ ಪ್ರಕರಣದಲ್ಲಿ ಖುಲಾಸೆ ಮಾಡಿದ್ದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ಇನ್ನಷ್ಟೇ ನೀಡಬೇಕಿದೆ.

ಲಖಿಂಪುರ–ಖೇರಿ ಜಿಲ್ಲೆಯ ತಿಕೋನಿಯಾ ಪ್ರದೇಶದಲ್ಲಿ ಪ್ರಭಾತ್ ಗುಪ್ತಾ ಎಂಬ 23 ವರ್ಷದ ಯುವಕನನ್ನು 2003ರಲ್ಲಿ ಗುಂಡಿಟ್ಟು ಕೊಂದ ಪ್ರಕರಣದಲ್ಲಿ ಅಜಯ್ ಅವರು ಆರೋಪಿ ಆಗಿದ್ದರು. ಆದರೆ, ಸಾಕ್ಷ್ಯಗಳಿಲ್ಲ ಎಂಬ ಕಾರಣಕ್ಕೆ 2004ರಲ್ಲಿ ಅಜಯ್ ಸೇರಿ ಎಲ್ಲ ಆರೋಪಿಗಳನ್ನು ಖುಲಾಸೆ ಮಾಡಲಾಗಿತ್ತು. ರಾಜ್ಯ ಸರ್ಕಾರ ಮತ್ತು ಮೃತ ವ್ಯಕ್ತಿಯ ಕುಟುಂಬದವರು ಮೇಲ್ಮನವಿ ಸಲ್ಲಿಸಿದ್ದರು.

ಮೇಲ್ಮನವಿಯ ವಿಚಾರಣೆ ನಡೆಸಿದ್ದ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು 2018ರ ಮಾರ್ಚ್ 12ರಂದು ತೀರ್ಪು ಕಾಯ್ದಿರಿಸಿತ್ತು.

ನ್ಯಾಯಮೂರ್ತಿಗಳಾದ ದೇವೇಂದ್ರ ಕುಮಾರ್ ಉಪಾಧ್ಯಾಯ ಮತ್ತು ದಿನೇಶ್ ಕುಮಾರ್ ಸಿಂಗ್ ಅವರಿದ್ದ ಪೀಠವು ತೀರ್ಪು ನೀಡಲು ಮುಂದಾಗಿತ್ತು. ಆದರೆ, ಪ್ರಕರಣವನ್ನು ಮರು ವಿಚಾರಣೆಗೆ ಎತ್ತಿಕೊಳ್ಳಲಾಯಿತು. ನ್ಯಾಯಾಲಯದ ವೆಬ್‌ಸೈಟ್ ಮಾಹಿತಿ ಪ್ರಕಾರ, 2020ರ ಫೆಬ್ರುವರಿ 25ರಂದು ವಿಚಾರಣೆ ನಿಗದಿಯಾಗಿತ್ತು.

ನವಜೋತ್ ಸಿಧು ಪೊಲೀಸ್ ವಶಕ್ಕೆ

ಚಂಡೀಗಡ (ಪಿಟಿಐ): ನವಜೋತ್ ಸಿಂಗ್ ಸಿಧು ಸೇರಿ ಪಂಜಾಬ್ ಕಾಂಗ್ರೆಸ್‌ನ ಹಲವು ಮುಖಂಡರನ್ನು ಲಖಿಂಪುರ-ಖೇರಿಗೆ ಹೋಗುವ ದಾರಿಯಲ್ಲಿ ಸಹರಣಪುರದಲ್ಲಿ ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ.

ಪಂಜಾಬ್‌ನ ಕೆಲವು ಸಚಿವರು, ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ಮೊಹಾಲಿಯಲ್ಲಿ ಗುರುವಾರ ಜಮಾಯಿಸಿದರು. ನಂತರ ಅವರು ಸಿಧು ನೇತೃತ್ವದಲ್ಲಿ ಲಖಿಂಪುರ-ಖೇರಿಯತ್ತ ಸಾಗಿದರು. ಆದರೆ, ಹರಿಯಾಣ-ಉತ್ತರ ಪ್ರದೇಶ ಗಡಿಯಲ್ಲಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿದ್ದರು. ಪೊಲೀಸರು ಮತ್ತು ಕಾಂಗ್ರೆಸ್ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು.

ಲಖಿಂಪುರ-ಖೇರಿಗೆ ಐವರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ಇದೆ ಎಂದು ಪೊಲೀಸರು ವಾದಿಸಿದರು. ಆದರೆ, ಸಚಿವರು ಮತ್ತು ಶಾಸಕರಿಗೆ ಅವಕಾಶ ಕೊಡಲೇಬೇಕು ಎಂದು ಸಿಧು ಪಟ್ಟು ಹಿಡಿದರು. ಪೊಲೀಸರು ಒಪ್ಪಲಿಲ್ಲ. ಸಿಧು ಮತ್ತು ಇತರ ಮುಖಂಡರನ್ನು ಪೊಲೀಶರು ವಶಕ್ಕೆ ಪಡೆದರು.

ಬಿಜೆಪಿ ಮುಖಂಡರ ಕಾರು ರೈತನಿಗೆ ಡಿಕ್ಕಿ

ಅಂಬಾಲಾ (ಪಿಟಿಐ): ಬಿಜೆಪಿ ಮುಖಂಡರು ಸಂಚರಿಸುತ್ತಿದ್ದ ಕಾರು ಅಂಬಾಲಾ ಸಮೀಪ ನಾರಾಯಣಗಡ ಎಂಬಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರಿಗೆ ಡಿಕ್ಕಿ ಹೊಡೆದಿದೆ. ಬಿಜೆಪಿ ಸಂಸದ ನಾಯಬ್ ಸಿಂಗ್ ಸೈನಿ ಮತ್ತು ಹರಿಯಾಣದ ಕ್ರೀಡಾ ಸಚಿವ ಸಂದೀಪ್ ಸಿಂಗ್ ಅವರು ಕಾರಿನಲ್ಲಿ ಸಂಚರಿಸುತ್ತಿದ್ದರು.

ಬಿಜೆಪಿ ಮುಖಂಡರ ಕಾರು ಭವನ್ ಪ್ರೀತ್ ಎಂಬ ರೈತನಿಗೆ ಡಿಕ್ಕಿ ಹೊಡೆದಿದೆ. ಅವರ ಕಾಲಿಗೆ ಗಾಯ ಆಗಿದೆ ಎಂದು ಪ್ರತಿಭಟನೆನಿತರ ರೈತರು ಹೇಳಿದ್ದಾರೆ. ಘಟನೆಯ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿದೆ ಎಂದು ಭಾರತೀಯ ಕಿಸಾನ್ ಯೂನಿಯನ್ ಹೇಳಿದೆ.

ಆರ್ಯನ್ ಜಾಮೀನು ಅರ್ಜಿ ಇಂದು ವಿಚಾರಣೆ

ಮುಂಬೈ (ಪಿಟಿಐ): ಮಾದಕದ್ರವ್ಯ ಸೇವನೆ ಆರೋಪದಲ್ಲಿ ಬಾಲಿವುಡ್ ನಟ ಶಾರುಕ್ ಖಾನ್ ಅವರ ಪುತ್ರ ಆರ್ಯನ್ ಖಾನ್ ಮತ್ತು ಇತರ ಏಳು ಜನರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇವರ ಜಾಮೀನು ಅರ್ಜಿಯ ವಿಚಾರಣೆ ಶುಕ್ರವಾರ ನಡೆಯಲಿದೆ ಎಂದು ಕೋರ್ಟ್ ತಿಳಿಸಿದೆ.

ಆರೋಪಿಗಳನ್ನು ಪುನಃ ತಮ್ಮ ಕಸ್ಟಡಿಗೆ ಒಪ್ಪಿಸುವಂತೆ ರಾಷ್ಟ್ರೀಯ ಮಾದಕದ್ರವ್ಯ ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ಮಾಡಿದ್ದ ಮನವಿಯನ್ನು ಕೋರ್ಟ್ ತಿರಸ್ಕರಿಸಿದೆ. ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಆರ್.ಎಂ. ನೆರ್ಲಿಕರ್ ಅವರ ಮುಂದೆ ಆರೋಪಿಗಳನ್ನು ಹಾಜರುಪಡಿಸಲಾಯಿತು. ಅಕ್ಟೋಬರ್ 11ರವರೆಗೆ ವಶಕ್ಕೆ ನೀಡುವಂತೆ ತನಿಖಾ ಸಂಸ್ಥೆಯು ಕೋರಿತ್ತು.



ಆರ್ಯನ್ ಖಾನ್ ಅವರನ್ನು ಮುಂಬೈನ ಎನ್‌ಸಿಬಿ ಕಚೇರಿಯಿಂದ ಕಿಲ್ಲಾ ಕೋರ್ಟ್‌ಗೆ ಗುರುವಾರ ಕರೆದೊಯ್ಯಲಾಯಿತು–ಪಿಟಿಐ ಚಿತ್ರ

ಆರ್ಯನ್ ಖಾನ್, ಮುನ್ಮುನ್ ಧಮೇಚಾ ಮತ್ತು ಅರ್ಬಾಜ್ ಮರ್ಚೆಂಟ್ ಅವರನ್ನು ಅಕ್ಟೋಬರ್ 3ರಂದು ಐಷಾರಾಮಿ ಹಡಗಿನಲ್ಲಿ ಬಂಧಿಸಲಾಗಿತ್ತು. ಉಳಿದ ಐವರನ್ನು ಮರುದಿನ ಬಂಧಿಸಲಾಗಿತ್ತು.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಪ್ರಕಟ

ಮೇನಕಾ, ವರುಣ್‌ಗಾಂಧಿ, ಸ್ವಾಮಿಗೆ ಕೊಕ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಸಂಸದೆ ಮೇನಕಾ ಗಾಂಧಿ ಹಾಗೂ ಅವರ ಪುತ್ರ, ಸಂಸದ ವರುಣ್ ಗಾಂಧಿ ಅವರನ್ನು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಿಂದ ಕೈಬಿಡಲಾಗಿದೆ.

80 ಸದಸ್ಯರನ್ನು ಒಳಗೊಂಡಿರುವ ಸಮಿತಿಯ ಪಟ್ಟಿಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಗುರುವಾರ ಪ್ರಕಟಿಸಿದ್ದು, ಪ್ರಧಾನಿ ನರೇಂದ್ರ ಮೋದಿ, ಹಿರಿಯ ಮುಖಂಡರಾದ ಎಲ್.ಕೆ. ಅಡ್ವಾಣಿ ಹಾಗೂ ಮುರಳಿ ಮನೋಹರ ಜೋಶಿ ಅವರಿಗೆ ಸ್ಥಾನ ನೀಡಲಾಗಿದೆ.

ಮೇನಕಾ ಗಾಂಧಿ ಅವರು 2019ರ ಲೋಕಸಭೆ ಚುನಾವಣೆ ನಂತರ ಕೇಂದ್ರ ಸಂಪುಟದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದರೆ, ವರುಣ್ ಗಾಂಧಿ ಅವರು ರೈತರ ಪ್ರತಿಭಟನೆಗೆ ಸಂಬಂಧಿಸಿದ ಪಕ್ಷದ ನಡೆಯನ್ನು ಇತ್ತೀಚೆಗಷ್ಟೇ ಟೀಕಿಸಿದ್ದರು.

ಅಲ್ಲದೆ, ಅವಕಾಶ ಸಿಕ್ಕಾಗಲೆಲ್ಲ ಕೇಂದ್ರ ಸರ್ಕಾರದ ನಿರ್ಧಾರಗಳನ್ನು ಟೀಕಿಸುವ ರಾಜ್ಯಸಭೆ ಸದಸ್ಯ ಸುಬ್ರಮಣಿಯನ್ ಸ್ವಾಮಿ ಅವರನ್ನೂ ಸಮಿತಿಯಿಂದ ಕೈಬಿಡಲಾಗಿದೆ. ಮುಖಂಡರಾದ ವಿನಯ್ ಕಟಿಯಾರ್, ಸಿ.ಪಿ. ಠಾಕೂರ್, ವಿಜಯ್ ಗೋಯೆಲ್, ಪ್ರಹ್ಲಾದ ಸಿಂಗ್ ಪಟೇಲ್, ಹುಕುಮ್‌ದೇವ ನಾರಾಯಣ ಯಾದವ್ ಅವರನ್ನೂ ಸಮಿತಿಗೆ ಪರಿಗಣಿಸಲಾಗಿಲ್ಲ.

ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ ಸಿಂಗ್, ನಿತಿನ್ ಗಡ್ಕರಿ, ಪೀಯೂಷ್ ಗೋಯೆಲ್, ಎಸ್. ಜೈಶಂಕರ್, ಜ್ಯೋತಿರಾದಿತ್ಯ ಸಿಂಧಿಯಾ, ಅಶ್ವಿನಿ ವೈಷ್ಣವ್, ದಿನೇಶ್ ತ್ರಿವೇದಿ ಹಾಗೂ ಇತ್ತೀಚೆಗಷ್ಟೇ ಪಕ್ಷ ಸೇರಿರುವ ಚಿತ್ರನಟ ಮಿಥುನ್ ಚಕ್ರವರ್ತಿ, ಈ. ಶ್ರೀಧರನ್ ಸಮಿತಿಯಲ್ಲಿ ಸ್ಥಾನ ಪಡೆದಿದ್ದಾರೆ.

14 ಜನ ಮಹಿಳೆಯರಿಗೆ ಸ್ಥಾನ ದೊರೆತಿದೆ. ಕೇಂದ್ರ ಸಚಿವೆಯರಾದ ಸ್ಮೃತಿ ಇರಾನಿ, ನಿರ್ಮಲಾ ಸೀತಾರಾಮನ್, ಮೀನಾಕ್ಷಿ ಲೇಖಿ, ಚಿತ್ರನಟಿಯರಾದ ಖುಷ್ಬೂ ಸುಂದರ್, ವಿಜಯಶಾಂತಿ ಪ್ರಮುಖರಾಗಿದ್ದಾರೆ.

ಕೇಂದ್ರ ಸಂಪುಟದಿಂದ ಸ್ಥಾನ ಕಳೆದುಕೊಂಡಿರುವ ಪ್ರಕಾಶ್ ಜಾವಡೇಕರ್, ರವಿಶಂಕರ್ ಪ್ರಸಾದ್, ಸಂತೋಷ್ ಗಂಗ್ವಾರ್ ಅವರೂ ಸಮಿತಿಯಲ್ಲಿದ್ದಾರೆ.

ಕೊರೊನಾ ಕಾರಣದಿಂದಾಗಿ ಮುಂದೂಡಲಾಗಿದ್ದ ಕಾರ್ಯಕಾರಿ ಸಮಿತಿ ಸಭೆಯನ್ನು ನವೆಂಬರ್ 7ರಂದು ಕರೆಯಲಾಗಿದೆ.

ರಾಜ್ಯದ ಹಲವರಿಗೆ ಸ್ಥಾನ

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಹಾಗೂ ನಿರ್ಮಲಾ ಸೀತಾರಾಮನ್ ಅವರು ಬಿಜೆಪಿ ಕಾರ್ಯಕಾರಿ ಸಮಿತಿಯಲ್ಲಿ ಅವಕಾಶ ಪಡೆದಿರುವ ರಾಜ್ಯದ ಪ್ರಮುಖರಾಗಿದ್ದಾರೆ.

ಕಲಬುರಗಿ ಸಂಸದ ಡಾ.ಉಮೇಶ್ ಜಾಧವ್ ಅವರನ್ನು ಸಮಿತಿಯ ವಿಶೇಷ ಆಹ್ವಾನಿತರ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದಗೌಡ, ಜಗದೀಶ ಶೆಟ್ಟರ್, ಸಚಿವರಾದ ಕೆ.ಎಸ್. ಈಶ್ವರಪ್ಪ, ಆರ್.ಅಶೋಕ, ಗೋವಿಂದ ಕಾರಜೋಳ, ಲಕ್ಷ್ಮಣ ಸವದಿ, ಡಾ.ಸಿ.ಎನ್.ಅಶ್ವತ್ಥ ನಾರಾಯಣ, ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಸಿ.ಟಿ. ರವಿ, ಬಿ.ಎಲ್. ಸಂತೋಷ್, ಯುವ ಮೋರ್ಚಾ ರಾಷ್ಟ್ರೀಯ ಘಟಕದ ಅಧ್ಯಕ್ಷ ತೇಜಸ್ವಿ ಸೂರ್ಯ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಪಿ. ಅರುಣ್ ಕುಮಾರ್ ಅವರು ಸಮಿತಿಯಲ್ಲಿ ಸ್ಥಾನ ಪಡೆದಿದ್ದಾರೆ.

ಬಿಜೆಪಿ ನಾಯಕರಿಂದ ಮೋದಿ ಗುಣಗಾನ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಸರ್ಕಾರದ ಮುಖ್ಯಸ್ಥರಾಗಿ ಸಾರ್ವಜನಿಕ ಸೇವೆಗೆ ಪ್ರವೇಶಿಸಿ ಗುರುವಾರಕ್ಕೆ (ಅ.7) 20 ವರ್ಷಗಳು (ಗುಜರಾತಿನಲ್ಲಿ 13 ವರ್ಷಗಳು ಸಿ.ಎಂ ಆಗಿದ್ದೂ ಸೇರಿದಂತೆ) ಪೂರೈಸಿವೆ. ಈ ಸಂದರ್ಭದಲ್ಲಿ ಬಿಜೆಪಿಯ ಹಿರಿಯ ನಾಯಕರು ಮೋದಿಯವರ ನಾಯಕತ್ವ, ಉತ್ತಮ ಆಡಳಿತ ಮತ್ತು ಅವರ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಶ್ಲಾಘಿಸಿದ್ದಾರೆ.

ಮೂರು ದಶಕಗಳಿಂದ ಮೋದಿಯವರ ಆಪ್ತರಾಗಿರುವ ಗೃಹ ಸಚಿವ ಅಮಿತ್ ಶಾ, '2001ರ ಇದೇ ದಿನದಂದು ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದಿನದಿಂದಲೂ ಉತ್ತಮ ಆಡಳಿತ ಮತ್ತು ಅಭಿವೃದ್ಧಿಯ ಪಯಣವು ಯಾವುದೇ ಅಡೆತಡೆಯಿಲ್ಲದೇ ನಿರಂತರವಾಗಿ ಸಾಗುತ್ತಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪ್ರಧಾನಿ ಮೋದಿಯವರನ್ನು ಅಭಿನಂದಿಸಿದ್ದಾರೆ.

ಟಿಎಂಸಿಗೆ ಮರಳಿದ ಬಿಜೆಪಿ ನಾಯಕ ಸವ್ಯಸಾಚಿ ದತ್ತ

ಕೋಲ್ಕತ್ತ (ಪಿಟಿಐ): ಬಿಜೆಪಿ ರಾಜ್ಯ ಕಾರ್ಯದರ್ಶಿ ಮತ್ತು ಬಿಧನ್ ನಗರ ಪಾಲಿಕೆಯ (ಬಿಎಂಸಿ) ಮಾಜಿ ಮೇಯರ್ ಸವ್ಯಸಾಚಿ ದತ್ತ ಗುರುವಾರ ಮತ್ತೆ ಟಿಎಂಸಿ ಪಕ್ಷಕ್ಕೆ ಮರಳಿದ್ದಾರೆ.

ಸವ್ಯಸಾಚಿ ಅವರು ಎರಡು ವರ್ಷಗಳ ಹಿಂದೆ ಬಿಜೆಪಿ ಸೇರಲು ಟಿಎಂಸಿ ಪಕ್ಷವನ್ನು ತೊರೆದಿದ್ದರು.

ಬಿಜೆಪಿ ಎಲ್ಲೆಲ್ಲಿ ಅಧಿಕಾರದಲ್ಲಿಯೋ ಅಲ್ಲೆಲ್ಲ ತಾಲಿಬಾನ್ ಮಾದರಿ ಸರ್ಕಾರ ನಡೆಸುತ್ತಿದೆ ಎಂದು ಸವ್ಯಸಾಚಿ ದತ್ತ ಆರೋಪಿಸಿದ್ದಾರೆ.

ಟಿಎಂಸಿ ಪ್ರಧಾನ ಕಾರ್ಯದರ್ಶಿ ಮತ್ತು ಸಂಪುಟ ಸಚಿವ ಪಾರ್ಥ ಚಟರ್ಜಿ ಅವರು ತಮ್ಮ ಕಚೇರಿಯಲ್ಲಿ ಇತರ ಹಿರಿಯ ನಾಯಕರ ಸಮ್ಮುಖದಲ್ಲಿ ಸವ್ಯಸಾಚಿ ಅವರನ್ನು ಸ್ವಾಗತಿಸಿದರು.

'ನಮ್ಮ ನಾಯಕಿ ಮಮತಾ ಬ್ಯಾನರ್ಜಿ ಅವರು ಶಾಸಕಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನವೇ ಸವ್ಯಸಾಚಿ ಅವರ ಕೋರಿಕೆಯಂತೆ ನಾವು ಅವರನ್ನು ಪಕ್ಷಕ್ಕೆ ಸೇರಿಸಿಕೊಂಡೆವು. ಅವರ ಸೇರ್ಪಡೆಗೆ ಮಮತಾ ಅವರು ಅನುಮೋದನೆ ನೀಡಿದ್ದಾರೆ' ಎಂದು ಚಟರ್ಜಿ ಹೇಳಿದರು.

ಟಿಎಂಸಿ ನೀಡುವ ಯಾವುದೇ ಜವಾಬ್ದಾರಿಯನ್ನು ವಿನಮ್ರವಾಗಿ ನಿಭಾಯಿಸುವುದಾಗಿ ಸವ್ಯಸಾಚಿ ಹೇಳಿದರು.

'ಕೆಲವು ತಪ್ಪು ತಿಳುವಳಿಕೆಗಳಿಂದ ನಾನು ಟಿಎಂಸಿ ತೊರೆಯಬೇಕಾಯಿತು. ಆದರೆ ಅದೆಲ್ಲ ಈಗ ನಿವಾರಣೆಯಾಗಿದೆ. ಟಿಎಂಸಿ ಜೊತೆ ಇಂದು ನನ್ನ ಹೊಸ ಪ್ರಯಾಣ ಆರಂಭವಾಗಿದೆ' ಎಂದೂ ಹೇಳಿದರು.



ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ವಿಧಾನಸಭೆಯ ಸದಸ್ಯರಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದ ನಂತರ ರಾಜ್ಯಪಾಲ ಜಗದೀಪ್ ಧನಕರ್ ಅವರಿಗೆ ಶುಭಾಶಯ ಕೋರಿದರು —ಪಿಟಿಐ ಚಿತ್ರ

ಗೃಹ ಸಚಿವರ ಜೊತೆ ಮಕ್ಕಳ ಸಂವಾದ ● ಪೊಲೀಸರ ವರ್ತನೆಗೆ ಬೇಸರ ವ್ಯಕ್ತಪಡಿಸಿದ ಚಿಣ್ಣರು

‘ವಾಹನದ ಕೀ ಕಿತ್ತುಕೊಳ್ಳುವ ಅಧಿಕಾರವಿದೆಯಾ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಡುರಸ್ತೆಯಲ್ಲಿ ವಾಹನಗಳನ್ನು ಅಡ್ಡಗಟ್ಟಿ ಕೀ ಕಿತ್ತುಕೊಳ್ಳುವ ಅಧಿಕಾರ ಪೊಲೀಸರಿಗೆ ಇದೆಯಾ ? ಜನಸಾಮಾನ್ಯರ ದಿನದ ದುಡಿಮೆಗಿಂತಲೂ ನಿಯಮ ಉಲ್ಲಂಘನೆ ದಂಡ ಹೆಚ್ಚಿರುವುದು ಏಕೆ ? ಮಕ್ಕಳು ವಾಹನ ಚಲಾಯಿಸಿದರೆ ಏನು ಶಿಕ್ಷೆ ?... ಇವು, ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಮಕ್ಕಳು ಕೇಳಿದ ಪ್ರಶ್ನೆಗಳು.

ನಗರದ ಸೇಂಟ್ ಮಾರ್ಕ್ಸ್ ರಸ್ತೆಯ ಎಸ್‌ಬಿಐ ವೃತ್ತದ ಉದ್ಯಾನದಲ್ಲಿ ಸಂಚಾರ ಪೊಲೀಸರು ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಕ್ಕಳು, ತಮ್ಮ ಪ್ರಶ್ನೆಗಳಿಗೆ ಗೃಹ ಸಚಿವರಿಂದ ಉತ್ತರ ಪಡೆದುಕೊಂಡರು.

ಸಂಚಾರ ನಿಯಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಫ್ರೇಜರ್‌ಟೌನ್ ಸರ್ಕಾರಿ ಶಾಲೆ ಸೇರಿದಂತೆ ನಗರ ನಾಲ್ಕು ಶಾಲೆಗಳ 30ಕ್ಕೂ ಹೆಚ್ಚು ಮಕ್ಕಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಬಾಲಕನೊಬ್ಬ, ‘ದಟ್ಟಣೆ ಇರುವ ರಸ್ತೆಯಲ್ಲಿ ವಾಹನಗಳನ್ನು ಏಕಾಏಕಿ ಪೊಲೀಸರು ಅಡ್ಡಗಟ್ಟುತ್ತಾರೆ. ಒತ್ತಾಯದಿಂದ ಕೀ ಕಸಿದುಕೊಂಡು ಇಟ್ಟುಕೊಳ್ಳುತ್ತಾರೆ. ಅವರಿಗೆ ಈ ಅಧಿಕಾರ ಇದೆಯಾ’ ಎಂದು ಪ್ರಶ್ನಿಸಿದ.

ಆರಗ ಜ್ಞಾನೇಂದ್ರ, ‘ಪ್ರತಿಯೊಬ್ಬ ಪೊಲೀಸರು ಜನರ ಸುರಕ್ಷತೆಗಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನೀವು ಹೆಚ್ಚು ಗೌರವ ನೀಡಬೇಕು. ಕಣ್ಣಿಗೆ ಕಾಣುವ ನಿಯಮ ಉಲ್ಲಂಘನೆಯಾದರೆ ಮಾತ್ರ ವಾಹನ ತಡೆಯುವಂತೆ ಪೊಲೀಸರಿಗೆ ಹೇಳಲಾಗಿದೆ. ಆಕಸ್ಮಾತ್ ಯಾರಾದರೂ ಕರ್ತವ್ಯಲೋಪ ಎಸಗಿದರೆ ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಬಾಲಕಿಯೊಬ್ಬಳು, ‘ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸಿದರೆ ₹500 ದಂಡ ಹಾಕುತ್ತಾರೆ. ಜನಸಾಮಾನ್ಯರ ದಿನದ ದುಡಿಮೆಗಿಂತಲೂ ದಂಡದ ಮೊತ್ತ ಏಕೆ ಹೆಚ್ಚಿದೆ’ ಎಂದು ಪ್ರಶ್ನಿಸಿದಳು.



ಸಂವಾದದಲ್ಲಿ ಪಾಲ್ಗೊಂಡಿದ್ದ ಮಕ್ಕಳನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಮಾತನಾಡಿಸಿದರು – ಪ್ರಜಾವಾಣಿ ಚಿತ್ರ

ನಿಯಮಗಳ ತಿಳಿವಳಿಕೆ, ರಸಪ್ರಶ್ನೆ

‘ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಇದೊಂದು ವಿನೂತನ ಕಾರ್ಯಕ್ರಮ. ಉದ್ಯಾನದಲ್ಲಿ ಮಕ್ಕಳಿಗೆ ಸಂಚಾರ ನಿಯಮಗಳ ಬಗ್ಗೆ ತಿಳಿಸಲಾಯಿತು. ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಿ, ಗೆದ್ದವರಿಗೆ ಬಹುಮಾನವನ್ನು ವಿತರಿಸಲಾಯಿತು’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದರು.

ಆರಗ ಜ್ಞಾನೇಂದ್ರ, ‘ದಂಡ ಸಂಗ್ರಹ ಮಾಡುವುದು ಸರ್ಕಾರದ ಉದ್ದೇಶವಲ್ಲ. ಎಲ್ಲರೂ ನಿಯಮ ಪಾಲಿಸಿದರೆ, ದಂಡ ಪಾವತಿಸುವ ಸಂದರ್ಭವೇ ಬರುವುದಿಲ್ಲ’ ಎಂದರು.

‘ತಂದೆ–ತಾಯಿ ಊರಿಗೆ ಹೋದಾಗ, ಅವರ ದ್ವಿಚಕ್ರ ವಾಹನಗಳನ್ನು ನಾವೇ ಚಲಾಯಿಸುತ್ತೇವೆ’ ಎಂದು ಕೆಲ ಮಕ್ಕಳು ಹೇಳಿದರು.

ತಿಳಿಹೇಳಿದ ಗೃಹ ಸಚಿವ, ‘ಕಾನೂನು ಪ್ರಕಾರ 18 ವರ್ಷದ ಒಳಗಿನವರು ಚಾಲನೆ ಮಾಡುವಂತಿಲ್ಲ. ಆಕಸ್ಮಾತ್, ಚಾಲನೆ ಮಾಡಿ ಸಿಕ್ಕಿಬಿದ್ದರೆ ನಿಮ್ಮ (ಮಕ್ಕಳ) ಜೊತೆಯಲ್ಲಿ ಪೋಷಕರ ವಿರುದ್ಧವೂ ಪ್ರಕರಣ ದಾಖಲಾಗುತ್ತದೆ. ಹೀಗಾಗಿ, ಮಕ್ಕಳು ಚಾಲನೆ ಮಾಡಬಾರದು’ ಎಂದರು.

ನಗರಕ್ಕಷ್ಟೇ ಒತ್ತು ಏಕೆ?: ಬಾಲಕನೊಬ್ಬ, ‘ಭಾರತ ಹಳ್ಳಿಗಳ ದೇಶ. ಇತ್ತೀಚಿನ ದಿನಗಳಲ್ಲಿ ಎಲ್ಲರೂ ನಗರವನ್ನಷ್ಟೇ ಅಭಿವೃದ್ಧಿ ಮಾಡುತ್ತಿದ್ದಾರೆ. ಹಳ್ಳಿಗಳ ಅಭಿವೃದ್ಧಿಗೆ ಒತ್ತು ನೀಡುತ್ತಿಲ್ಲ ಏಕೆ’ ಎಂದು ಪ್ರಶ್ನಿಸಿದ.

ಆರಗ ಜ್ಞಾನೇಂದ್ರ, ‘ಹಳ್ಳಿಗಳಲ್ಲಿ ಆರಂಭದಲ್ಲಿ ಶಾಲೆಗಳು ಇರಲಿಲ್ಲ. ಈಗ ಶಾಲೆಗಳು ಆಗಿವೆ. ದಿನದಿಂದ ದಿನಕ್ಕೆ ಹಳ್ಳಿಯೂ ಅಭಿವೃದ್ಧಿ ಆಗುತ್ತಿದೆ. ಅದರ ನಡುವೆಯೇ ಆರ್ಥಿಕತೆಗೆ ಹೆಚ್ಚು ಕೊಡುಗೆ ನೀಡುವ ನಗರವನ್ನೂ ಅಭಿವೃದ್ಧಿ ಮಾಡಲಾಗುತ್ತಿದೆ. ಎರಡರ ನಡುವೆ ಯಾವುದೇ ತಾರತಮ್ಯವಿಲ್ಲ’ ಎಂದರು.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹಾಗೂ ಪೂರ್ವ ವಿಭಾಗದ (ಸಂಚಾರ) ಡಿಸಿಪಿ ಕೆ.ಎಂ. ಶಾಂತರಾಜು ಕಾರ್ಯಕ್ರಮದಲ್ಲಿದ್ದರು.

ಸುದ್ದಿ 2 ನಿಮಿಷ

ವಂಡರ್‌ಲಾದಲ್ಲಿ ಆಹಾರ ಉತ್ಸವ

ರಾಮನಗರ: ದಸರಾ ಹಬ್ಬದ ಪ್ರಯುಕ್ತ ಬಿಡದಿಯ ವಂಡರ್‌ಲಾ ಮನೋರಂಜನಾ ಪಾರ್ಕ್‌ನಲ್ಲಿ ಇದೇ 17ರವರೆಗೆ ಆಹಾರ ಮೇಳ ಏರ್ಪಡಿಸಲಾಗಿದೆ.

‘ಪ್ರತಿ ವರ್ಷ ವಂಡರ್ ಲಾದಲ್ಲಿ ದಸರಾ ಆಚರಣೆಯನ್ನು ಸ್ಮರಣೀಯಗೊಳಿಸುವ ಉದ್ದೇಶದಿಂದ ಸಾಂಸ್ಕೃತಿಕ ಉತ್ಸವಗಳನ್ನು ಆಯೋಜಿಸಲಾಗುತ್ತದೆ. ಡೊಳ್ಳುಕುಣಿತ, ಡಿ.ಜೆ. ಸಂಗೀತ ಸೇರಿದಂತೆ ಹಲವು ರೀತಿಯ ಮನರಂಜನಾ ಕಾರ್ಯಕ್ರಮಗಳು ಇರಲಿವೆ. ಇಲ್ಲಿನ ಗ್ರಾಹಕರ ಆಸಕ್ತಿಗೆ ಅನುಗುಣವಾಗಿ ಆಹಾರ ಉತ್ಸವ ಇರಲಿದ್ದು, ಎಲ್ಲಾ ಭಾಗದ ವಿಶೇಷ ಆಹಾರಗಳನ್ನು ಇಲ್ಲಿ ಸವಿಯಬಹುದು’ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ಡಿ. ಅರುಣ್ ಚಿಟ್ಟಿಲಪಿಲ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್: ಪರ್ಜನ್ಯ ಪೂಜೆ ನಡೆಸಿದ ಸಿಎಂ ಬೊಮ್ಮಾಯಿ



ಶ್ರೀರಂಗಪಟ್ಟಣ (ಮಂಡ್ಯ): ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಬಳಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಳೆಗಾಗಿ ಪ್ರಾರ್ಥಿಸಿ ಗುರುವಾರ ಬೆಳಿಗ್ಗೆ ಪರ್ಜನ್ಯ ಪೂಜೆ ನೆರವೇರಿಸಿದರು.

ಅಣೆಕಟ್ಟೆಯ ಕಾವೇರಿ ಪ್ರತಿಮೆ ಬಳಿ ಪರ್ಜನ್ಯ ಕಳಸಗಳನ್ನು ಪೂಜಿಸಿ, ಹೋಮ ಕುಂಡಕ್ಕೆ ಪೂರ್ಣಾಹುತಿ ಅರ್ಪಿಸಿದರು. ಪತ್ನಿ ಚೆನ್ನಮ್ಮ ಹಾಗೂ ಸಚಿವರ ಜತೆಗೂಡಿ ಪರ್ಜನ್ಯ ಪೂಜೆಯ ವಿಧಿ, ವಿಧಾನಗಳನ್ನು ಪೂರೈಸಿದರು.

ಜ್ಯೋತಿಷಿ ಡಾ.ಭಾನುಪ್ರಕಾಶ್ ಶರ್ಮಾ ಅವರ ಸಲಹೆಯಂತೆ ಹೋಮ, ಹವನ ನಡೆಸಿ ಕಾವೇರಿ ಮಾತೆ ಪ್ರತಿಮೆಗೆ ಪೂಜೆ ಸಲ್ಲಿಸಿದರು.

ಸಚಿವರಾದ ಆರ್.ಅಶೋಕ, ಕೆ.ಸಿ.ನಾರಾಯಣಗೌಡ, ಬೈರತಿ ಬಸವರಾಜ್, ಸುನಿಲ್‌ಕುಮಾರ್, ಶಾಸಕ ಅರವಿಂದ ಬೆಲ್ಲದ, ಜಿಲ್ಲಾಧಿಕಾರಿ ಎಸ್.ಅಶ್ವತಿ, ಉಪ ವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಅದಕ್ಕೂ ಮುನ್ನ ಡಾ.ಭಾನುಪ್ರಕಾಶ್ ಶರ್ಮಾ ನೇತೃತ್ವದ ವೈದಿಕರ ತಂಡ ಕಾವೇರಿ ಪ್ರತಿಮೆ ಎದುರು ಎರಡೂವರೆ ತಾಸು ಪರ್ಜನ್ಯ ಜಪ ನಡೆಸಿತು. ಮುಂಜಾನೆ 4ರಿಂದ 6.30ರ ವರೆಗೆ ಬ್ರಾಹ್ಮೀ ಮುಹೂರ್ತದಲ್ಲಿ ಸಾಮೂಹಿಕ ಜಪ ನಡೆಯಿತು. ಪರ್ಜನ್ಯ ಕಲಸ ಸ್ಥಾಪನೆ, ಸಂಕಲ್ಪ ಪೂಜೆ, ಗಣಪತಿ ಪೂಜೆ, ಪುಣ್ಯಾಹ, ಆದಿತ್ಯ ಉದಯ ಪೂಜೆ ನಡೆಯಿತು.

ಮನೆ ಕಳವು: ಸ್ನೇಹಿತೆ ಸಮೇತ ರೌಡಿ ಸೆರೆ

ಬೆಂಗಳೂರು: ಬಾಡಿಗೆ ಕೇಳುವ ನೆಪದಲ್ಲಿ ಮನೆಗಳಿಗೆ ಹೋಗಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ರೌಡಿ ವಿನಯ್ ಹಾಗೂ ಆತನ ಸ್ನೇಹಿತೆ ಕೀರ್ತನಾಳನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜಾಜಿನಗರ ಠಾಣೆಯ ರೌಡಿ ಪಟ್ಟಿಯಲ್ಲಿ ವಿನಯ್ ಹೆಸರಿದೆ. ಆತ, ಕೀರ್ತನಾ ಜೊತೆ ಹಲವು ದಿನಗಳಿಂದ ಸ್ನೇಹ ಹೊಂದಿದ್ದ. ಅವರಿಬ್ಬರು ಪರಸ್ಪರ ಪ್ರೀತಿಸುತ್ತಿದ್ದರೆಂಬ ಮಾಹಿತಿ ಇದೆ’ ಎಂದು ಪೊಲೀಸರು ಹೇಳಿದರು.

‘ಚಂದ್ರಾಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ಬಾಡಿಗೆ ಕೇಳುವ ನೆಪದಲ್ಲಿ ಆರೋಪಿಗಳು ಇತ್ತೀಚೆಗೆ ಹೋಗಿದ್ದರು. ಮನೆಯಲ್ಲಿದ್ದ ಲ್ಯಾಪ್‌ಟಾಪ್ ಕದ್ದುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ತಿಳಿಸಿದರು.

‘ರೌಡಿ ವಿನಯ್ ವಿರುದ್ಧ ರಾಜಾಜಿನಗರ ಹಾಗೂ ಬಸವೇಶ್ವರನಗರ ಠಾಣೆಯಲ್ಲಿ ಏಳು ಪ್ರಕರಣಗಳು ದಾಖಲಾಗಿದ್ದವು. 10ನೇ ತರಗತಿ ಅನುತ್ತೀರ್ಣಳಾಗಿದ್ದ ಕೀರ್ತನಾ, ಆತನ ಜೊತೆ ಓಡಾಡುತ್ತಿದ್ದಳು. ಇಬ್ಬರೂ ಸೇರಿ ಕೃತ್ಯ ಎಸಗುತ್ತಿದ್ದರೆಂಬ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ. ಸದ್ಯ ಅವರಿಬ್ಬರು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದೂ ಹೇಳಿದರು.

ನೈಋತ್ಯ ರೈಲ್ವೆ
Tender Notice No. Tal-San_Tele-2021-22-03 Dated: 04.10.2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈರುತ್ಯ ರೈಲ್ವೆಯ ಗದಗ (ತಳಕಲ್) – ವಾಡಿ ವಿಭಾಗದ ನ್ಯೂ ಲೈನ್ ಕಾಮಗಾರಿಗೆ ಸಂಬಂಧಿಸಿದಂತೆ ತಳಕಲ್ – ಸಂಗನಾಳ ವಿಭಾಗದಲ್ಲಿ (21 ಕಿಮೀಗಳು) ಓಎಫ್‌ಸಿ ಮತ್ತು 6 ಕ್ವಾಡ್ ಬೇಸಡ್ ಕಮ್ಯುನಿಕೇಷನ್ ಸಿಸ್ಟಮ್ ಒದಗಿಸುವುದು.	Rs. 1,59,97,097/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27–10–2021, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನೀಯರ್ ಐ / ನಿರ್ಮಾಣ / ಹುಬ್ಬಳ್ಳಿ
PUB/220/AAV/PRB/SWR/2021-22
S.W.Railways SWRRLY SWRRLY

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಟ್ಟಿ – 584 115, ಲಿಂಗಸುಗೂರು–ತಾ., ರಾಯಚೂರು ಜಿಲ್ಲೆ , ಕರ್ನಾಟಕ.
ದೂರವಾಣಿ: 08537-275740/276339/275463,
ಇ–ಮೇಲ್: material276339@gmail.com ವೆಬ್‌ಸೈಟ್: www.huttigold.co.in
TNO.37/21-22 No.HGML/EOI/04/2021-22 Date: 06.10.2021
ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ (EOI) ಟೆಂಡರ್ ಪ್ರಕಟಣೆ
ಹಟ್ಟಿ ಚಿನ್ನದ ಗಣಿಗಳಲ್ಲಿ ಚಿನ್ನವನ್ನು ಮರುಪಡೆಯಲು ಮತ್ತು ಇತರೆ ಯಾವುದೇ ಅಮೂಲ್ಯ ಖನಿಜಗಳು ಮತ್ತು ಲೋಹಗಳ ಅದಿರು ಚೂರುಪಾರನ್ನು ಸುರಿಯುವುದಕ್ಕಾಗಿ ಸಲಹಾ ಸೇವೆಗಳನ್ನು ಬಾಡಿಗೆ ಪಡೆಯಲು ಆಸಕ್ತ ವ್ಯಕ್ತಪಡಿಸುವಿಕೆ(ಇಓಐ).
ಆಸಕ್ತ ಸಲಹೆಗಾರರು/ಸಲಹಾ ಸಂಸ್ಥೆಗಳು/ವೈಯಕ್ತಿಕ ಸಲಹೆಗಾರರು ಸಾಮಾನ್ಯ ಷರತ್ತುಗಳು, ಅರ್ಹತಾ ಮಾನದಂಡ ಮುಂತಾದ ಅಗತ್ಯ ವಿವರಗಳಿಗಾಗಿ ವೆಬ್‌ಸೈಟ್ www.eproc.karntaka.gov.inಗೆ ಭೇಟಿ ನೀಡುವುದು. ಆಸಕ್ತ ಏಜೆನ್ಸಿಗಳು ಇಓಐನಲ್ಲಿ ಭಾಗವಹಿಸಲು ಜಿಕೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದು.
ಟೆಂಡರ್ ವೇಳಾಪಟ್ಟಿ:
ಪ್ರಿ–ಬಿಡ್ ಸಭೆ (Zoom): 18.10.2021 ಬೆಳಿಗ್ಗೆ 11.30 ಗಂಟೆಗೆ
ಬಿಡ್ ಸ್ವೀಕರಿಸುವ ಕಡೆಯ ದಿನಾಂಕ : 20.10.2021 ಸಂಜೆ 4.00 ಗಂಟೆಗೆ
ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 23.10.2021 ಬೆಳಿಗ್ಗೆ 10.00 ಗಂಟೆಗೆ
ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು(ಸರಕು)
ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, “ಜಲಭವನ” ವಿಭಾಗ, 3ನೇ ಮಹಡಿ, 1ನೇ ಘಟ್ಟ, 1ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟರಸ್ತೆ, ಬೆಂಗಳೂರು–560029
ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
1) KWB/EE/BNG/AE-2/O&M/RMG/1356/2021-22, Dtd: 04.10.2021 ಮತ್ತು ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ: 3051
ಕಾಮಗಾರಿಯ ವಿವರ : 2021–22ನೇ ಸಾಲಿನ ರಾಮನಗರ ಮತ್ತು ಚನ್ನಪಟ್ಟಣ ನಗರದ ವಾರ್ಷಿಕ ನೀರು ಸರಬರಾಜು ನಿರ್ವಹಣೆಯಡಿ ರಾಮನಗರ ನಗರ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳಿಗೆ ಅಳವಡಿಸಿರುವ ಮುಳುಗು ಯಂತ್ರಗಳು ಮತ್ತು ಇತರೆ ಪರಿಕರಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ.
ಟೆಂಡರ್‌ಗಿಟ್ಟ ಮೊತ್ತ : ರೂ. 43,81,690/– (ಜಿ.ಎಸ್.ಟಿ ಹೊರತುಪಡಿಸಿ)
2) KWB/EE/BNG/AE-2/O&M/CPT/1357/2021-22, Dtd: 04.10.2021 ಮತ್ತು ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ: 3052
ಕಾಮಗಾರಿಯ ವಿವರ : 2021–22ನೇ ಸಾಲಿನ ರಾಮನಗರ ಮತ್ತು ಚನ್ನಪಟ್ಟಣ ನಗರದ ವಾರ್ಷಿಕ ನೀರು ಸರಬರಾಜು ನಿರ್ವಹಣೆಯಡಿ ಚನ್ನಪಟ್ಟಣ ನಗರ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳಿಗೆ ಅಳವಡಿಸಿರುವ ಮುಳುಗು ಯಂತ್ರಗಳು ಮತ್ತು ಇತರೆ ಪರಿಕರಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ.
ಟೆಂಡರ್‌ಗಿಟ್ಟ ಮೊತ್ತ : ರೂ. 36,73,085/– (ಜಿ.ಎಸ್.ಟಿ ಹೊರತುಪಡಿಸಿ)
ಭದ್ರತಾ ಠೇವಣಿ: ಇಲ್ಲ. ಗುತ್ತಿಗೆ ಕಾಲಾವಧಿ: 12 ತಿಂಗಳು (ಮಳೆಗಾಲ ಸೇರಿದಂತೆ)
(1) ಟೆಂಡರ್ ಪ್ರಾರಂಭ ದಿನಾಂಕ ಮತ್ತು ಸಮಯ : 08–10–2021 ರ ಬೆಳಿಗ್ಗೆ 11.00 ಗಂಟೆಯ ನಂತರ. (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 22–10–2021 ರ ಸಂಜೆ 5.30ರ ವರೆಗೆ. (3) ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 26–10–2021 ರ ಬೆಳಿಗ್ಗೆ 11.00 ಗಂಟೆಯ ನಂತರ.
ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರವರ ಕಛೇರಿ ದೂರವಾಣಿ 080–41106536 ಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯಿಂದ ಪಡೆಯಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ ವಿಭಾಗ,
ಬೆಂಗಳೂರು
ವಾ.ಸಂ.ಇ/ಬೆಂ.ನಗರ/RO. No. 1802/2021–22
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಫಲಾನುಭವಿಗಳಿಗೆ ಸಿಗದ ಸೌಲಭ್ಯ: ಪಾಲಿಕೆ ಅಧಿಕಾರಿಗಳ ಧೋರಣೆಗೆ ಖಂಡನೆ

ಸಫಾಯಿ ಕರ್ಮಚಾರಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೌಚಗುಂಡಿ ಸ್ವಚ್ಛತಾ ಕಾರ್ಮಿಕರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಇರುವ ಸೌಲಭ್ಯಗಳು ಸಿಗದಿರಲು ಪಾಲಿಕೆಯ ವಿಳಂಬ ಧೋರಣೆಯೇ ಕಾರಣ’ ಎಂದು ಆರೋಪಿಸಿ ಸಫಾಯಿ ಕರ್ಮಚಾರಿಗಳ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಶೌಚಗುಂಡಿ ಸ್ವಚ್ಛತಾ ಕಾರ್ಮಿಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

‘ಸಫಾಯಿ ಕರ್ಮಚಾರಿ ಫಲಾನುಭವಿಗಳಿಗೆ ಎಲ್ಲ ಸೌಲಭ್ಯ ಒದಗಿಸುವುದಾಗಿ ಸುಪ್ರೀಂಕೋರ್ಟ್ ಮುಂದೆ ಪಾಲಿಕೆ ಒಪ್ಪಿಕೊಂಡಿತ್ತು. ಆದರೆ, ಈವರೆಗೆ ಯಾವುದೇ ಸೌಲಭ್ಯಗಳನ್ನು ನೀಡಿಲ್ಲ. ಫಲಾನುಭವಿಗಳ ಪಟ್ಟಿ ಮತ್ತು ಕಡತಗಳನ್ನು ನವದೆಹಲಿಯ ಎನ್‌ಎಸ್‌ಕೆಡಿಸಿ ಕಚೇರಿಗೂ ಕಳುಹಿಸಿಲ್ಲ’ ಎಂದು ಸಫಾಯಿ ಕರ್ಮಚಾರಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಂಗಳೂರು ಘಟಕದ ಅಧ್ಯಕ್ಷ ಜಿ.ಎನ್.ನಾಗೇಂದ್ರ ಆರೋಪಿಸಿದರು.

‘ಸೌಲಭ್ಯಕ್ಕಾಗಿ ಪಾಲಿಕೆ ಅಧಿಕಾರಿಗಳನ್ನು ಕೇಳಿದರೆ, ಕಡತಗಳು ಕಾಣೆಯಾಗಿವೆ. ಮತ್ತೊಮ್ಮೆ ಸಲ್ಲಿಸಿ’ ಎಂದು ಬೇಜವಾಬ್ದಾರಿಯಿಂದ ಉತ್ತರಿಸುತ್ತಾರೆ. ಕೋಟಿಗಟ್ಟಲೆ ಅನುದಾನ ಫಲಾನುಭವಿಗಳ ಕೈಸೇರಬಾರದು ಎಂದು ಅಧಿಕಾರಿಗಳು ಹಾಗೂ ರಾಜಕಾರಣಿಗಳು ಷಡ್ಯಂತ್ರ ನಡೆಸಿದ್ದಾರೆ. ಈ ವಿಳಂಬ ಧೋರಣೆಯಿಂದಾಗಿ ನಗರದ ಸಫಾಯಿ ಕರ್ಮಚಾರಿಗಳು ಈಗಲೂ ಸೌಲಭ್ಯ ವಂಚಿತರಾಗಿ ಉಳಿದಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಪಾಲಿಕೆ ಈ ಕೂಡಲೇ ಸಫಾಯಿ ಕರ್ಮಚಾರಿಗಳಿಗೆ ಅನುದಾನ ಬಿಡುಗಡೆ, ಗುರುತಿನ ಚೀಟಿ ವಿತರಣೆ ಸೇರಿದಂತೆ ಸರ್ಕಾರಗಳಿಂದ ಸಿಗಬೇಕಾದ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು. ನಮ್ಮ ಬೇಡಿಕೆಗಳು ಈಡೇರದಿದ್ದರೆ, ಪಾಲಿಕೆ ಕಚೇರಿಗೆ ಮುತ್ತಿಗೆ ಹಾಕಲಾಗುವುದು’ ಎಂದೂ ಎಚ್ಚರಿಸಿದರು.



ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಸಫಾಯಿ ಕರ್ಮಚಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು. ಸಫಾಯಿ ಕರ್ಮಚಾರಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಇದ್ದರು –ಪ್ರಜಾವಾಣಿ ಚಿತ್ರ

ಮಿಸ್–ಸಿ: ಮಗುವಿಗೆ ಚಿಕಿತ್ಸೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹು ಅಂಗಾಂಗ ಉರಿಯೂತ ಸಮಸ್ಯೆಯಿಂದ (ಮಿಸ್–ಸಿ) ಪಾರ್ಶ್ವವಾಯುವಿಗೆ ಒಳಗಾಗಿದ್ದ ಒಂದು ವರ್ಷದ ಮಗುವಿಗೆ ಆಸ್ಟರ್ ಆರ್‌ವಿ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದಾರೆ.

ಬಾಲಕಿಯ ಪಾಲಕರು ಕೋವಿಡ್ ಪೀಡಿತರಾಗಿ ಚೇತರಿಸಿಕೊಂಡಿದ್ದರು. ಮೂರು ವಾರಗಳ ಬಳಿಕ ಮಗುವಿಗೆ ಕೆಮ್ಮು, ನೆಗಡಿ ಸೇರಿದಂತೆ ವಿವಿಧ ಅನಾರೋಗ್ಯ ಲಕ್ಷಣಗಳು ಕಾಣಿಸಿಕೊಂಡವು. ಕೋವಿಡ್ ಸೇರಿದಂತೆ ವಿವಿಧ ಪರೀಕ್ಷೆಗಳನ್ನು ನಡೆಸಿದಾಗ ಕೊರೊನಾ ಸೋಂಕು ತಗುಲಿಲ್ಲ ಎನ್ನುವುದು ದೃಢಪಟ್ಟಿತು. ಆದರೆ, ದೇಹದಲ್ಲಿ ಪ್ರತಿಕಾಯಗಳು ವೃದ್ಧಿಯಾಗಿದ್ದವು. ಮಿಸ್–ಸಿ ಸಮಸ್ಯೆಯನ್ನು ಮಗು ಎದುರಿಸುತ್ತಿತ್ತು ಎಂದು ಆಸ್ಪತ್ರೆ ತಿಳಿಸಿದೆ.

‘ಚಿಕಿತ್ಸೆ ಪಡೆದ ಆರು ವಾರಗಳ ಅವಧಿಯಲ್ಲಿ ಮಗುವಿನ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿಕೊಂಡಿತು’ ಎಂದು ವೈದ್ಯೆ ಡಾ. ಸುಜಾತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸಿಷ್ಠ ಸೊಸೈಟಿ ವಂಚನೆ: ಸಿಬಿಐ ತನಿಖೆಗೆ ಆಗ್ರಹ

ಬೆಂಗಳೂರು: ‘ಹನುಮಂತನಗರದ ವಸಿಷ್ಠ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ವಂಚನೆ ಪ್ರಕರಣ ಬೆಳಕಿಗೆ ಬಂದು ಆರು ತಿಂಗಳು ಕಳೆದರೂ ಸರಿಯಾಗಿ ತನಿಖೆ ನಡೆದಿಲ್ಲ. ಸರ್ಕಾರ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಕೆಪಿಸಿಸಿ ವೈದ್ಯಕೀಯ ಘಟಕದ ಪ್ರಧಾನ ಕಾರ್ಯದರ್ಶಿ ಶಂಕರ್ ಗುಹಾ ದ್ವಾರಕನಾಥ್ ಆಗ್ರಹಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಸೊಸೈಟಿಯಲ್ಲಿ ₹500 ಕೋಟಿಯಷ್ಟು ವಂಚನೆ ನಡೆದಿದೆ. ಇಲ್ಲಿ ಠೇವಣಿ ಇಟ್ಟಿರುವ ಬಹುತೇಕರು 70 ವರ್ಷ ಮೇಲ್ಪಟ್ಟವರು. ಇವರೆಲ್ಲ ತಮ್ಮ ಹಣ ಕೈಸೇರುವುದೋ ಇಲ್ಲವೋ ಎಂಬ ಆತಂಕದಲ್ಲಿದ್ದಾರೆ. ಕೂಡಲೇ ಸ್ವತಂತ್ರ ಸಂಸ್ಥೆಯಿಂದ ಸೊಸೈಟಿಯ ಆಡಿಟ್ ನಡೆಸಬೇಕು ಹಾಗೂ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಬೇಕು’ ಎಂದು ಒತ್ತಾಯಿಸಿದರು.

‘ಸೊಸೈಟಿ ಅಧ್ಯಕ್ಷರ ಕುಟುಂಬಕ್ಕೆ ₹100 ಕೋಟಿಗಳಷ್ಟು ಸಾಲ ನೀಡಲಾಗಿದೆ. ಯಾವುದೇ ದಾಖಲೆಗಳನ್ನು ಪಡೆಯದೆ, ಅವರ ಮಗನ ಹೆಸರಿನಲ್ಲೇ ಹೆಚ್ಚಿನ ಸಾಲ ನೀಡಲಾಗಿದೆ. ಬ್ಯಾಂಕ್ ಕಟ್ಟಡದಲ್ಲೇ ಇರುವ ಸಣ್ಣ ಕಚೇರಿಗೆ ₹37 ಕೋಟಿ ಸಾಲ ನೀಡಲಾಗಿದೆ’ ಎಂದು ಆರೋಪಿಸಿದರು.

‘ಈ ಹಗರಣದ ತನಿಖೆಯನ್ನು ಸದ್ಯ ಸಿಐಡಿಗೆ ವಹಿಸಲಾಗಿದೆ. ಆದರೆ, ರಾಜಕೀಯ ಒತ್ತಡಗಳಿಂದಾಗಿ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗುವ ಸಾಧ್ಯತೆ ಕಡಿಮೆ. ಹಾಗಾಗಿ, ಈ ಪ್ರಕರಣವನ್ನು ಕೂಡಲೇ ಸಿಬಿಐಗೆ ವಹಿಸುವುದು ಸೂಕ್ತ. ಈ ಬಗ್ಗೆ ಸರ್ಕಾರ ಮಧ್ಯಪ್ರವೇಶಿಸಿ, ಗ್ರಾಹಕರಿಗೆ ಹಣ ವಾಪಸ್ ಕೊಡಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು’ ಎಂದು ಆಗ್ರಹಿಸಿದರು.

ವಾಹನ ಕದ್ದಿದ್ದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ ಆರೋಪದಡಿ ತೌಸಿಫ್ ಎಂಬಾತನನ್ನು ಜ್ಞಾನಭಾರತಿ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ತೌಸಿಫ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 2 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಜ್ಞಾನಭಾರತಿ ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ತರಕಾರಿ ತರಲು ಮಾರುಕಟ್ಟೆಗೆ ಹೋಗಿದ್ದರು. ದ್ವಿಚಕ್ರ ವಾಹನವನ್ನು ರಸ್ತೆಬದಿಯಲ್ಲಿ ನಿಲ್ಲಿಸಿ ಅಂಗಡಿಗೆ ತೆರಳಿದ್ದರು. ಇದೇ ಸಂದರ್ಭದಲ್ಲೇ ಆರೋಪಿ, ದ್ವಿಚಕ್ರ ವಾಹನ ಕದ್ದುಕೊಂಡು ಪರಾರಿಯಾಗಿದ್ದ. ಈ ಬಗ್ಗೆ ಪ್ರಕರಣ ದಾಖಲಾಗಿತ್ತು’ ಎಂದೂ ತಿಳಿಸಿದರು.

‘ಪದೇ ಪದೇ ಅಪರಾಧ ಎಸಗುತ್ತಿದ್ದ ತೌಸಿಫ್, ದ್ವಿಚಕ್ರ ವಾಹನಗಳನ್ನು ಕದ್ದು ಬಳಸುತ್ತಿದ್ದ. ಕೆಲ ವಾಹನಗಳನ್ನು ಮಾರಾಟ ಮಾಡಿ ಹಣ ಪಡೆದಿದ್ದ’ ಎಂದೂ ಹೇಳಿದರು.

ವಜಾಗೊಂಡಿದ್ದ ಬಿಎಂಟಿಸಿ ನೌಕರ ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಕೆಲಸದಿಂದ ವಜಾಗೊಂಡಿದ್ದ ಬಿಎಂಟಿಸಿ ನೌಕರ ಕೇಶವ್ ಎಂಬುವರು ಇಂದಿರಾನಗರದ ಡಿಪೊ–6ರಲ್ಲಿ ಕ್ರಿಮಿನಾಶಕ ಸೇವಿಸಿ ಗುರುವಾರ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಅಸ್ವಸ್ಥಗೊಂಡಿರುವ ಕೇಶವ್ ಅವರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ವೈದ್ಯರು ನೀಡಿದ್ದ ಮಾಹಿತಿಯಂತೆ ಆಸ್ಪತ್ರೆಗೆ ಹೋಗಿದ್ದ ಇಂದಿರಾನಗರ ಪೊಲೀಸರು, ಕೇಶವ್ ನೀಡಿದ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

‘ಬೈಯಪ್ಪನಹಳ್ಳಿ ನಿವಾಸಿ ಕೇಶವ್, ಬಿಎಂಟಿಸಿ ಬಸ್ ಚಾಲಕರಾಗಿ ಡಿಪೊ–6ರಲ್ಲಿ ಕೆಲಸ ಮಾಡುತ್ತಿದ್ದರು. ಈ ಹಿಂದೆ ನಡೆದಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು, ಕೆಲಸಕ್ಕೆ ಗೈರು ಹಾಜರಾಗಿದ್ದ ಕಾರಣಕ್ಕೆ ಅವರನ್ನು ವಜಾ ಮಾಡಲಾಗಿತ್ತು. ಕೆಲಸ ಹೋಗಿದ್ದರಿಂದ ಕೇಶವ್ ನೊಂದಿದ್ದರು. ಬೇರೆಡೆಯೂ ಅವರಿಗೆ ಕೆಲಸ ಸಿಕ್ಕಿರಲಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಡಿಪೊದಲ್ಲಿ ವ್ಯವಸ್ಥಾಪಕರ ಎದುರೇ ಆತ್ಮಹತ್ಯೆಗೆ ಯತ್ನಿಸಿದ್ದ ಕೇಶವ್ ಅವರ ಹೇಳಿಕೆ ಪಡೆಯಲಾಗಿದೆ. ಪರಿಶೀಲನೆ ನಡೆಸಿ, ಕಾನೂನು ಕ್ರಮ ಜರುಗಿಸಲಾಗುವುದು’ ಎಂದೂ ತಿಳಿಸಿದರು.

ಮಾಡದ ತಪ್ಪಿಗೆ ವಜಾ: ಆಸ್ಪತ್ರೆಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಕೇಶವ್, ‘ಡಿಪೊ–6ರಲ್ಲಿ ಕೆಲಸ ಮಾಡುತ್ತಿದ್ದ ನಾನು ಸೇರಿದಂತೆ 26 ಮಂದಿಯನ್ನು ಏಕಾಏಕಿ ವಜಾ ಮಾಡಲಾಗಿದೆ. ನಾವು ಯಾವುದೇ ತಪ್ಪು ಮಾಡಿಲ್ಲ. ಮಾಡದ ತಪ್ಪಿಗೆ ನಮ್ಮನ್ನು ವಜಾ ಮಾಡಲಾಗಿದೆ’ ಎಂದರು.

‘ಜೀವನ ನಡೆಸುವುದು ಕಷ್ಟವಾಗಿದೆ. ನೋವು ತಡೆಯಲಾಗದೇ ಕ್ರಿಮಿನಾಶಕ ಕುಡಿದೆ. ನನ್ನ ಜೀವ ಹೋದರೂ ಪರವಾಗಿಲ್ಲ, ಬೇರೆ ನೌಕರರಿಗಾದರೂ ನ್ಯಾಯ ಸಿಗಲಿ’ ಎಂದೂ ಹೇಳಿದರು.

PUBLIC NOTICE

My client (**‘Client’**) is desirous of purchasing all that piece and parcel of immovable property comprising of Land with residential building thereon constructed on Ground and First Floors bearing Municipal No.188/1, (PID No. 74-2-188/1) issued by the BBMP, Defence Colony, in Ward No.74, Jeevan Bheemanagar, Bangalore, which is morefully described in the **‘Schedule’** hereto and hereinafter referred to as **‘Schedule Property’** from **Mr. Mukarram Syed** and **Mr. Rehan Reddy,** both **S/o of Mrs. Mumtaz Reddy** have represented to my Client that they are the absolute owners of the Schedule Property **(‘Owners’)**.

Notice is hereby given to the general public that any person/s other than the Owner, asserting any right, title, charge, lien, or any other interest whatsoever in respect of the Schedule Properties are hereby called upon to submit to the undersigned, their objections, if any, to the aforesaid purchase, in writing, together with documentary proof of such claim/s, so as to reach us at the address given below within a period of **15 (fifteen) days** from the date of publication of this Notice. If no such objections are received, it shall be deemed that none else other than the aforesaid Owner, has / have any right, title, interest or claim whatsoever in respect of the Schedule Property and my Client would be at liberty to proceed at his option with the aforesaid purchase of the Schedule Property.

SCHEDULE

All that piece and parcel of immovable property comprising of Land with residential building thereon comprising of Ground and First Floors bearing Municipal No.188/1,(PID No. 74-2-188/1) issued by the BBMP, Defence Colony, in Ward No.74, Jeevan Bheemanagar, Bangalore, measuring East to West 50 feet and North to South 80 feet, totally measuring 4,000 sft and bounded on the:

East by:	Property No. 188;
West by:	Property No. 189;
North by:	Property No. 185;
South by:	60 feet Road;

Jali. Harsha Vardhana
Advocate
No.28, Silver Spring Layout, Munnekolala,
Marathalli, Bangalore – 560 037
Mob: 7348899929
jharshavardhana.harsha@gmail.com
Place: Bangalore
Date: 08.10.2021

PUBLIC NOTICE

My client (**‘Client’**) is desirous of purchasing all that piece and parcel of immovable property comprising of Land with building thereon constructed in Basement, Ground and upper floors bearing Municipal No. 74, (PID No: 67-3-74), issued by the BBMP, situated at Industrial Layout Koramangala, Bangalore in Ward No.67, which is morefully described in the **‘Schedule’** hereto and hereinafter referred to as **‘Schedule Property’** from **M/s. A.N. Properties, represented by its Partners (1) Mr. Narasipuram Saketh and (2) Mrs. Penjuri Navyatha** have represented to my Client that they are the absolute owner of the Schedule Property **(‘Owner’)**.

Notice is hereby given to the general public that any person/s other than the Owner, asserting any right, title, charge, lien, or any other interest whatsoever in respect of the Schedule Properties are hereby called upon to submit to the undersigned, their objections, if any, to the aforesaid purchase, in writing, together with documentary proof of such claim/s, so as to reach us at the address given below within a period of **15 (fifteen) days** from the date of publication of this Notice. If no such objections are received, it shall be deemed that none else other than the aforesaid Owner, has / have any right, title, interest or claim whatsoever in respect of the Schedule Property and my Client would be at liberty to proceed at his option with the aforesaid purchase of the Schedule Property.

SCHEDULE

All that piece and parcel of immovable property comprising of Land with building thereon constructed in Basement, Ground and upper floors bearing Municipal No. 74,(PID No: 67-3-74),issued by the BBMP, situated at Industrial Layout Koramangala, Bangalore in Ward No.67, measuring East to West 45 feet and North to South 71’6” feet and bounded on the:

East by:	Property No. 73;
West by:	Property No. 75;
North by:	Property No. 25;
South by:	Road;

Jali. Harsha Vardhana
Advocate
No.28, Silver Spring Layout, Munnekolala,
Marathalli, Bangalore – 560 037
Mob: 7348899929
jharshavardhana.harsha@gmail.com
Place: Bangalore
Date: 08.10.2021

ನಗರದಲ್ಲಿ ಇಂದು

ಸಂಪ್ರೋಕ್ಷಣೆ ಮತ್ತು ಮಹಾಕಲಶಾಭಿಷೇಕ ಮಹೋತ್ಸವ: ಪ್ರಾರ್ಥನೆ, ಪುಣ್ಯಾಹ, ಗಾಯತ್ರಿ ಜಪ, ಹೋಮ, ಸಾನ್ನಿಧ್ಯ–ವಿದ್ಯಾಶ್ರೀಶ ತೀರ್ಥರು, ಆಯೋಜನೆ, ಸ್ಥಳ–ಪ್ರಸನ್ನ ಆಂಜನೇಯ ಮತ್ತು ಕಲ್ಯಾಣ ಸೀತಾರಾಮ ದೇವಸ್ಥಾನ, ಕತ್ರಿಗುಪ್ಪೆ, ಬೆಳಿಗ್ಗೆ 6ರಿಂದ

ಶತಚಂಡಿಕಾ ಹೋಮ ಹಾಗೂ ಶರನ್ನವರಾತ್ರಿ ಸಂಗೀತ ನೃತ್ಯೋತ್ಸವ: ಆಯೋಜನೆ, ಸ್ಥಳ–ಮಹಾಯಾಗ ಕ್ಷೇತ್ರ ಶ್ರೀಗಾಯತ್ರಿ ದೇವಸ್ಥಾನ, ಯಶವಂತಪುರ ವೃತ್ತ, ಬೆಳಿಗ್ಗೆ 7 ಮತ್ತು ಸಂಜೆ 6.30

ಹೈಲೈಫ್ ಫ್ಯಾಷನ್ ಪ್ರದರ್ಶನ: ಸ್ಥಳ–ಲಲಿತ್ ಅಶೋಕ್, ಬೆಳಿಗ್ಗೆ 10ರಿಂದ ರಾತ್ರಿ 8 (ಅ.10ರವರೆಗೆ ಪ್ರದರ್ಶನ ನಡೆಯಲಿದೆ)

ಜಾನಪದ ದಸರಾ–ನವರಾತ್ರಿ ಕಾರ್ಯಕ್ರಮ: ವಿವಿಧ ತಂಡಗಳಿಂದ ವೀರಗಾಸೆ, ಭಜನೆ ಮತ್ತು ತತ್ವಪದ, ಆಯೋಜನೆ–ಕರ್ನಾಟಕ ಜಾನಪದ ಅಕಾಡೆಮಿ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

ಕ್ಲೀನ್ ಇಂಡಿಯಾ ಸೈಕಲ್ ಜಾಥಾ: ಚಾಲನೆ–ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಅತಿಥಿಗಳು–ಶೇಷಾದ್ರಿಪುರ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಕ್ರೀಡಾ ಇಲಾಖೆ ಆಯುಕ್ತ ಆರ್.ವೆಂಕಟೇಶ್ ಕುಮಾರ್, ಎಸ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯದ ನಿರ್ದೇಶಕ ಕೆ.ವಿ.ಖಾದ್ರಿ ನರಸಿಂಹಯ್ಯ, ಪ್ರತಾಪ್ ಲಿಂಗಯ್ಯ, ಗೋವಿಂದೇಗೌಡ, ಸ್ಥಳ–ಶೇಷಾದ್ರಿಪುರ ಕಾಲೇಜು ಆವರಣ, ಬೆಳಿಗ್ಗೆ 9


‘ಪಬ್ಲಿಕ್ ಪಾಲಿಸಿ ಇನ್ ಇಂಡಿಯಾ’ ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣ: ಅಧ್ಯಕ್ಷತೆ–ಪ್ರೊ.ಅಬ್ದುಲ್ ಅಜೀಜ್, ಪುಸ್ತಕ ಬಿಡುಗಡೆ–ಸುಖದೇವ್ ಥೋರಟ್, ಆಯೋಜನೆ, ಸ್ಥಳ–ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಆ್ಯಂಡ್ ಎಕನಾಮಿಕ್ ಚೇಂಜ್, ವಿ.ಕೆ.ಆರ್.ವಿ.ರಾವ್ ರಸ್ತೆ, ನಾಗರಬಾವಿ, ಬೆಳಿಗ್ಗೆ 10

ಮೊದಲ ವರ್ಷದ ಬಿ.ಕಾಂ ಮತ್ತು ಬಿಬಿಎ ತರಗತಿಗಳ ಉದ್ಘಾಟನೆ: ಅತಿಥಿಗಳು–ಸಂಸದ ತೇಜಸ್ವಿ ಸೂರ್ಯ, ಎಪಿಎಸ್ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಟಿ.ವಿ. ಮಾರುತಿ, ಆಯೋಜನೆ, ಸ್ಥಳ–ಎಪಿಎಸ್ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ರಂಗಕರ್ಮಿ ಪ್ರಸನ್ನ, ಕಲಾವಿದ ನಿರಂಜನ್ ಅವರ ‘ಸರಳತೆಯ ಸೌಂದರ್ಯ’ ಚಿತ್ರಕಲಾ ಪ್ರದರ್ಶನ: ಅತಿಥಿ–ಕಲಾ ನಿರ್ದೇಶಕ ಎಂ.ಎಸ್. ಸತ್ಯು, ಆಯೋಜನೆ–ಚರಕ–ದೇಸಿ ಸಂಸ್ಥೆ ಮತ್ತು ಗ್ರಾಮ ಸೇವಾ ಸಂಘ, ಸ್ಥಳ–ಚಿತ್ರಕಲಾ ಪರಿಷತ್, ಬೆಳಿಗ್ಗೆ 11

‘ತರಾತುರಿಯಲ್ಲಿ ಜಾರಿಯಾಗುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಇದರ ಸಮಸ್ಯೆಗಳು’ ಕುರಿತು ಚರ್ಚೆ: ಮಾತನಾಡುವವರು–ಪ್ರೊ.ಎ.ಮುರಿಗೆಪ್ಪ, ಪ್ರೊ. ಸೋಮಶೇಖರಪ್ಪ, ಅಲ್ಲಮಪ್ರಭು ಬೆಟ್ಟದೂರು, ಪ್ರೀತಿ ಶುಭಚಂದ್ರ, ಅಧ್ಯಕ್ಷತೆ–ಎಚ್.ಟಿ.ಭರತ್ ಕುಮಾರ್, ಆಯೋಜನೆ–ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಡಾ.ಕೆ.ಶಿವರಾಮ ಕಾರಂತ ಅವರ ಜೀವನ ಚರಿತ್ರೆ ಕುರಿತು ಅವರ ಮಕ್ಕಳು ಬರೆದಿರುವ ‘ಗ್ರೋಯಿಂಗ್ ಅಪ್ ಕಾರಂತ’ ಕೃತಿ ಬಿಡುಗಡೆ: ರಚನೆ–ಉಲ್ಲಾಸ ಕಾರಂತ, ಮಾಳವಿಕಾ ಕಪೂರ್ ಹಾಗೂ ಕ್ಷಮಾ ರಾವ್, ಸ್ಥಳ–ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ (ಬಿಐಸಿ), ಸಂಜೆ 6



‘ಗ್ರೋಯಿಂಗ್ ಅಪ್ ಕಾರಂತ’ ಪುಸ್ತಕದ ಮುಖಪುಟ

ರಸ್ತೆಗುಂಡಿ ಕಳಪೆ ಕಾಮಗಾರಿ ಸಲ್ಲ: ಬಿಬಿಎಂಪಿಗೆ ಎಚ್ಚರಿಕೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು' ಎಂದು ಹೈಕೋರ್ಟ್ ಬಿಬಿಎಂಪಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದೆ.

ಬೆಂಗಳೂರಿನ ರಸ್ತೆಗಳ ನಿರ್ವಹಣೆಗೆ ಸಂಬಂಧಿಸಿದಂತೆ 2015ರಲ್ಲಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಕೇವಲ ಸಚಿವರ ಮನೆಗಳ ಮುಂದಿನ ರಸ್ತೆ ಉತ್ತಮವಾಗಿದ್ದರೆ ಸಾಲದು, ಸಾಮಾನ್ಯ ಜನರ ಮನೆಗಳ ಬಳಿಯೂ ರಸ್ತೆಗಳು ಉತ್ತಮ ಸ್ಥಿತಿಯಲ್ಲಿರಬೇಕು. ಪದೇಪದೇ ರಸ್ತೆಗಳಲ್ಲಿ ಗುಂಡಿ ಬೀಳದ ರೀತಿಯಲ್ಲಿ ಗುಣಮಟ್ಟದ ಕಾಮಗಾರಿ ನಡೆಸಬೇಕು' ಎಂದು ನ್ಯಾಯಪೀಠ ಪಾಲಿಕೆಗೆ ತಾಕೀತು ಮಾಡಿದೆ.

ಶ್ರೀ ಸಾಮಾನ್ಯರ ಮನೆ ರಸ್ತೆಗಳನ್ನೂ ನೋಡಿ: ಬಿಬಿಎಂಪಿ ಪರ ವಕೀಲರು ನ್ಯಾಯಪೀಠಕ್ಕೆ, 'ಬೆಂಗಳೂರಿನ ರಸ್ತೆಗುಂಡಿಗಳನ್ನು ಮುಚ್ಚಲು ಒಂದೇ ಏಜೆನ್ಸಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ನಗರದಾದ್ಯಂತ ಪ್ರತಿದಿನ ಗುಂಡಿ ಮುಚ್ಚುವ ಕಾಮಗಾರಿ ನಡೆಯುತ್ತಿದೆ. ಆದರೆ, ಭಾರಿ ಮಳೆಯ ಕಾರಣದಿಂದ ಕೆಲಸ ನಿರೀಕ್ಷಿತ ಮಟ್ಟದಲ್ಲಿ ಸಾಗುತ್ತಿಲ್ಲ. ಎಲ್ಲೆಲ್ಲಿ ಹೆಚ್ಚು ಅಗತ್ಯವಿದೆಯೋ ಅಲ್ಲಿ ಗುಂಡಿ ಮುಚ್ಚುವ ಕೆಲಸವಾಗುತ್ತಿದೆ. ಈ ಬಗ್ಗೆ ಮುಂದಿನ ವಿಚಾರಣೆ ವೇಳೆ ಫೋಟೋ ಸಹಿತ ವಸ್ತುಸ್ಥಿತಿ ವರದಿ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಬಿಬಿಎಂಪಿ ಕಣ್ಣಿಗೆ ಕೇವಲ ಸಚಿವರ ಬಂಗಲೆಗಳ ಮುಂದಿನ ಕುಮಾರಕೃಪ ರಸ್ತೆ, ಹೈಕೋರ್ಟ್ ಹಾಗೂ ವಿಧಾನಸೌಧದ ರಸ್ತೆಗಳಲ್ಲಿರುವ ಗುಂಡಿಗಳು ಮಾತ್ರ ಕಾಣುತ್ತವೆ. ಆದರೆ, ಶ್ರೀಸಾಮಾನ್ಯರು ವಾಸಿಸುವ ಪ್ರದೇಶಗಳ ರಸ್ತೆ ಗುಂಡಿಗಳು ಕಾಣಿಸುವುದಿಲ್ಲ' ಎಂದು ಕುಟುಕಿತು.

'ಕಾಮಗಾರಿಗೆ ಸಂಬಂಧಿಸಿದ ವಸ್ತುಸ್ಥಿತಿ ವರದಿಯನ್ನು 2 ವಾರಗಳ ಒಳಗೆ ಸಲ್ಲಿಸಬೇಕು ಹಾಗೂ ಗುಂಡಿಗಳನ್ನು ಮುಚ್ಚಲು ಅಳವಡಿಸಿಕೊಂಡ ಕಾರ್ಯ ವಿಧಾನಗಳಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನೂ ಒದಗಿಸಬೇಕು' ಎಂದು ಪಾಲಿಕೆ ಪರ ವಕೀಲರಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ನವೆಂಬರ್ 11ಕ್ಕೆ ಮುಂದೂಡಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.73 ಕೋಟಿ ▲	3.39 ಕೋಟಿ ▲
ಸಕ್ರಿಯ ಪ್ರಕರಣ	1.80 ಕೋಟಿ ▲	2.34 ಲಕ್ಷ ▼
ಗುಣಮುಖ	21.44 ಕೋಟಿ ▲	3.32 ಕೋಟಿ ▲
ಸಾವು	48.44 ಲಕ್ಷ ▲	4.50 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.55 ಲಕ್ಷ ▲	21,013 ▼
ಗುಣಮುಖ	5.04 ಲಕ್ಷ ▲	24,032 ▲
ಸಾವು	8,255 ▲	268 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

1.07ಲಕ್ಷ ▲ ಅಮೆರಿಕ | 30,438 ▲ ಟರ್ಕಿ | 39,527 ▲ ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

97.98 ▲ ಅಮೆರಿಕ | 6.71 ▲ ರಷ್ಯಾ | 13.39 ▲ ಬ್ರಿಟನ್

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.39 ಲಕ್ಷ ಮಹಾರಾಷ್ಟ್ರ | 35,734 ▲ ತಮಿಳುನಾಡು | 25,952 ▲ ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

65.70 ಮಹಾರಾಷ್ಟ್ರ ▲ | 47.63 ಕೇರಳ ▲ | 26.74 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್



ಐಸಿಯು ಘಟಕಕ್ಕೆ ಡಾ. ರಾಮಕೃಷ್ಣಪ್ಪ ಚಾಲನೆ ನೀಡಿದರು. ಮುದಿತ್ ದಂಡ್ವಾತೆ ಇದ್ದರು.

ಜಯನಗರ ಆಸ್ಪತ್ರೆ: ಐಸಿಯು ಹಾಸಿಗೆಗಳ ಅಳವಡಿಕೆ

ಬೆಂಗಳೂರು: ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ 50 ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳನ್ನು ಅಳವಡಿಸುವ ಮೂಲಕ ಸ್ಮಾರ್ಟ್ ವಾರ್ಡ್ ನಿರ್ಮಾಣ ಮಾಡಲಾಗಿದೆ.

ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ನೂತನ ಐಸಿಯು ಘಟಕಕ್ಕೆ ಚಾಲನೆ ನೀಡಲಾಯಿತು. ಡೋಜಿ ನವೋದ್ಯಮವು ಐಸಿಯು ಘಟಕವನ್ನು ನಿರ್ಮಿಸಿದ್ದು, 24x7 ಕೇಂದ್ರೀಕೃತ ಮೇಲ್ವಿಚರಣಾ ಘಟಕವನ್ನೂ ಸ್ಥಾಪಿಸಲಾಗಿದೆ. ಪ್ರತಿ ಎರಡು ಗಂಟೆಗಳಿಗೆ ಒಮ್ಮೆ ರೋಗಿಗಳ ಮೇಲ್ವಿಚಾರಣೆಯನ್ನು ದೂರದಿಂದಲೇ ನಡೆಸಲು ಈ ವ್ಯವಸ್ಥೆ ಸಹಕಾರಿಯಾಗಿದೆ.

'ವೈದ್ಯರು ಮತ್ತು ಶುಶ್ರೂಷಕರು ರೋಗಿಗಳಿಗೆ ಉತ್ತಮ ವೈದ್ಯಕೀಯ ಸೇವೆ ಒದಗಿಸಲು ನೂತನ ಕೇಂದ್ರೀಕೃತ ಮೇಲ್ವಿಚರಣಾ ಘಟಕವು ಸಹಕಾರಿಯಾಗಲಿದೆ. ರೋಗಿಗಳ ಚಲನವಲನಗಳ ಮೇಲೆಯೂ ನಿಗಾ ಇಡಬಹುದಾಗಿದೆ' ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಮಕೃಷ್ಣ ತಿಳಿಸಿದರು.

'ಚರಕ, ವಿಕ್ಟೋರಿಯಾ ಸೇರಿದಂತೆ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಐಸಿಯು ಹಾಸಿಗೆಗಳನ್ನು ಅಳವಡಿಕೆ ಮಾಡಲಾಗಿದೆ. ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ನೀಗಿಸಲು ಹಾಗೂ ಮೂಲಸೌಕರ್ಯ ವೃದ್ಧಿಸಲು ಅತ್ಯಾಧುನಿಕ ವ್ಯವಸ್ಥೆಗಳನ್ನು ಪರಿಚಯಿಸಲಾಗಿದೆ' ಎಂದು ಡೋಜಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುದಿತ್ ದಂಡ್ವಾತೆ ಹೇಳಿದರು.

ಕೋವಿಡ್ ಅಪಾಯ ಭತ್ಯೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಸೇವೆ ಬಹಿಷ್ಕರಿಸಿದ ಸ್ಥಾನಿಕ ವೈದ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಅಪಾಯ ಭತ್ಯೆ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದ ಸ್ಥಾನಿಕ ವೈದ್ಯರು, ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಸೇವೆ ಬಹಿಷ್ಕರಿಸುವ ಮೂಲಕ ಪ್ರತಿಭಟಿಸಿದರು.

ತುರ್ತು ಚಿಕಿತ್ಸೆ, ತೀವ್ರ ನಿಗಾ ಘಟಕ (ಐಸಿಯು) ಸೇವೆ ಹಾಗೂ ಕೋವಿಡ್ ಚಿಕಿತ್ಸೆಯಲ್ಲಿರುವ ವೈದ್ಯರು ಎಂದಿನಂತೆ ಸೇವೆ ಸಲ್ಲಿಸಿದರು. ಹೀಗಾಗಿ, ಈ ಸೇವೆಗಳಲ್ಲಿ ವ್ಯತ್ಯಯವಾಗಲಿಲ್ಲ.

ರಾಜ್ಯದಲ್ಲಿ 5 ಸಾವಿರ ಸ್ಥಾನಿಕ ವೈದ್ಯರಿದ್ದು, ಕರ್ನಾಟಕ ಸ್ಥಾನಿಕ ವೈದ್ಯರ ಸಂಘದ ನೇತೃತ್ವದಲ್ಲಿ ವೈದ್ಯರು ಜಾಥಾ, ಬೀದಿ ನಾಟಕ ಹಾಗೂ ರಕ್ತದಾನ ಶಿಬಿರ ನಡೆಸುವ ಮೂಲಕ ಬೇಡಿಕೆಗಳ ಈಡೇರಿಕೆಗೆ ಸರ್ಕಾರಕ್ಕೆ ಒತ್ತಾಯಿಸಿದರು.

ಸ್ಥಾನಿಕ ವೈದ್ಯರ ಮುಷ್ಕರದಿಂದ ಹೊರರೋಗಿ ವಿಭಾಗಗಳ (ಒಪಿಡಿ) ಸೇವೆಯಲ್ಲಿ ಕೆಲವೆಡೆ ವ್ಯತ್ಯಯವಾಗಿತ್ತು. ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರನ್ನು ಮೈಸೂರಿನಲ್ಲಿ ಭೇಟಿ ಮಾಡಿದ ಸ್ಥಾನಿಕ ವೈದ್ಯರು, 'ಕೂಡಲೇ ಕೋವಿಡ್ ಅಪಾಯ ಭತ್ಯೆಯನ್ನು ಬಿಡುಗಡೆ ಮಾಡಬೇಕು. ಶೈಕ್ಷಣಿಕ ಶುಲ್ಕವನ್ನು 2018ರಂತೆ ಪುನರ್ ಪರಿಷ್ಕರಿಸಬೇಕು. ಕಿರಿಯ ವೈದ್ಯರು ಮತ್ತು ಶಿಕ್ಷುಗಳಿಗೆ ಶಿಷ್ಯವೇತನವನ್ನು ಸಕಾಲಕ್ಕೆ ಪಾವತಿಸಬೇಕು' ಎಂದು ಆಗ್ರಹಿಸಿದರು.

'ಕೋವಿಡ್ ಅಪಾಯ ಭತ್ಯೆ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಕ್ರಮಕೈಗೊಳ್ಳಲಾಗುವುದು ಎಂದು ಡಾ.ಕೆ. ಸುಧಾಕರ್ ಭರವಸೆ ನೀಡಿದ್ದಾರೆ. ಹೀಗಾಗಿ, ಮುಷ್ಕರವನ್ನು ಒಂದು ದಿನಕ್ಕೆ ಮಾತ್ರ ಸೀಮಿತಗೊಳಿಸಲಾಯಿತು. ಬೇಡಿಕೆಗಳ ಈಡೇರಿಕೆಗೆ ಸ್ವಲ್ಪ ದಿನ ಕಾಲಾವಕಾಶ ನೀಡಲಾಗುತ್ತದೆ. ಇಷ್ಟಾಗಿಯೂ ಕ್ರಮಕೈಗೊಳ್ಳದಿದ್ದರೆ ಮತ್ತೆ ಮುಷ್ಕರದ ಹಾದಿ ಹಿಡಿಯಬೇಕಾಗುತ್ತದೆ' ಎಂದು ಸಂಘದ ಅಧ್ಯಕ್ಷೆ ಡಾ. ನಮ್ರತಾ ಸಿ. ತಿಳಿಸಿದರು.

'ಕೋವಿಡ್ ಪೀಡಿತರಿಗೆ ಗುಣಮಟ್ಟದ ಚಿಕಿತ್ಸೆ ನೀಡಿ, ಸಾವಿನ ಪ್ರಮಾಣ ತಗ್ಗಿಸುವಲ್ಲಿ ಸ್ಥಾನಿಕ ವೈದ್ಯರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಸರ್ಕಾರ ಕೂಡಲೇ ಕೋವಿಡ್ ಅಪಾಯ ಭತ್ಯೆ ಬಿಡುಗಡೆಗೊಳಿಸಬೇಕು' ಎಂದು ಆಗ್ರಹಿಸಿದರು.



ಕೋವಿಡ್ ಅಪಾಯ ಭತ್ಯೆ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸ್ಥಾನಿಕ ವೈದ್ಯರು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಕೋವಿಡ್: ರಾಜ್ಯದಲ್ಲಿ ಮೃತರ ಸಂಖ್ಯೆ 37,861ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ, ಏಳು ಮಂದಿ ಮೃತಪಟ್ಟಿರುವುದು ಗುರುವಾರ ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 37,861ಕ್ಕೆ ಏರಿಕೆಯಾಗಿದೆ.

ಹೊಸದಾಗಿ 442 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಾದವರ ಒಟ್ಟು ಸಂಖ್ಯೆ 29.79 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.22 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.36ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ, ಕೊಪ್ಪಳ, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 43 ಹಾಗೂ ಮೈಸೂರಿನಲ್ಲಿ 31 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 166 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 635 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.30 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 11,619ಕ್ಕೆ ಇಳಿಕೆಯಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

- 29,79,773 ▲ ಒಟ್ಟು ಸೋಂಕಿತರು (29,79,331 ನಿನ್ನೆಯ ವಿವರ)
- 11,619 ▼ ಸಕ್ರಿಯ ಪ್ರಕರಣಗಳು
- 29,30,264 ▲ ಗುಣಮುಖರಾದವರು
- 37,861 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	442	▼
ಗುಣಮುಖ	635	▲
ಸಾವು	07	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

- 12,47,830 ▲ ಒಟ್ಟು ಸೋಂಕಿತರು (12,47,664 ನಿನ್ನೆಯ ವಿವರ)
- 7,563 ▼ ಸಕ್ರಿಯ ಪ್ರಕರಣ
- 12,24,089 ▲ ಗುಣಮುಖ ಆದವರು
- 16,177 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	166	▼
ಗುಣಮುಖ	173	▼
ಸಾವು	02	

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ತಾತ್ಕಾಲಿಕ ನೌಕರರು ಸೇವೆ ಕಾಯಂಗೆ ಕೋರುವಂತಿಲ್ಲ'

ನವದೆಹಲಿ (ಪಿಟಿಐ): 'ಅರೆಕಾಲಿಕ ನೌಕರರು ಮಂಜೂರಾತಿಯಾಗಿರುವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವುದಿಲ್ಲ. ಈ ಕಾರಣದಿಂದ ಅವರು ಸೇವೆ ಕಾಯಂಗೊಳಿಸುವಂತೆ ಕೋರಲು ಅರ್ಹರಲ್ಲ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

'ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾಯಂ ನೀತಿಗೆ ಅನುಗುಣವಾಗಿ ಸೇವೆಯನ್ನು ಕಾಯಂ ಮಾಡಬಹುದು. ನೀತಿ ಹೊರತುಪಡಿಸಿ ಕಾಯಂ ತಮ್ಮ ಹಕ್ಕು ಎಂಬಂತೆ ಯಾರೊಬ್ಬರೂ ಪ್ರತಿಪಾದಿಸಲಾಗದು' ಎಂದು ಸ್ಪಷ್ಟಪಡಿಸಿತು.

ಸರ್ಕಾರದ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅರೆಕಾಲಿಕ, ತಾತ್ಕಾಲಿಕ ನೌಕರರು, 'ಸಮಾನ ಕೆಲಸಕ್ಕೆ ಸಮಾನ ವೇತನ' ನೀತಿಗೆ ಅನುಗುಣವಾಗಿ ಕಾಯಂ ನೌಕರರಿಗೆ ಸಮಾನವಾದ ವೇತನ ನಿರೀಕ್ಷಿಸಲಾಗದು ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ನ್ಯಾಯಪೀಠ ಅಭಿಪ್ರಾಯಪಟ್ಟಿತು. ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿಯ ಆದೇಶ ಪರಿಷ್ಕರಿಸಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡಸಿತು.

ಈ ಕುರಿತು ಆದೇಶದಲ್ಲಿ ನ್ಯಾಯಮಂಡಳಿಯು ಕೇಂದ್ರಕ್ಕೆ ಇಡೀ ಪ್ರಕರಣ ಮರುಪರಿಶೀಲಿಸಬೇಕು. ಸಕ್ರಮ, ಕಾಯಂ ನೀತಿಯನ್ನು ಪರಿಷ್ಕರಿಸಿ ಹಂತಹಂತವಾಗಿ ಹುದ್ದೆ ಮಂಜೂರಾತಿ ಕುರಿತು ತೀರ್ಮಾನಿಸಬೇಕು ಎಂದಿತ್ತು.

ಸಂವಿಧಾನದ 226ನೇ ವಿಧಿಯನ್ವಯ ನಿರ್ದಿಷ್ಟವಾದ ಸಕ್ರಮ ನೀತಿ ಕುರಿತು ಹೈಕೋರ್ಟ್ ಕೇಂದ್ರಕ್ಕೆ ನಿರ್ದೇಶನ ನೀಡಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿತು.

ಭಾರತೀಯರಿಗೆ ಕ್ವಾರಂಟೈನ್ ನಿಯಮ ಕೈಬಿಟ್ಟ ಬ್ರಿಟನ್

ನವದೆಹಲಿ (ಪಿಟಿಐ): ಲಸಿಕೆ ಪ್ರಮಾಣೀಕರಣ ವಿವಾದಕ್ಕೆ ತೆರೆ ಎಳೆದಿರುವ ಬ್ರಿಟನ್, ಕೋವಿಶೀಲ್ಡ್ ಲಸಿಕೆ ಪಡೆದಿರುವ ಭಾರತೀಯರು ಅಕ್ಟೋಬರ್ 11ರಿಂದ ಜಾರಿಗೆ ಬರುವಂತೆ ದೇಶಕ್ಕೆ ಪ್ರಯಾಣಿಸಿದ ಬಳಿಕ ಸುದೀರ್ಘಾವಧಿಯ ಕ್ವಾರಂಟೈನ್‌ಗೆ ಒಳಗಾಗುವ ಅಗತ್ಯವಿಲ್ಲ ಎಂದು ಪ್ರಕಟಿಸಿದೆ.

ಭಾರತದಲ್ಲಿನ ಬ್ರಿಟನ್ ರಾಯಭಾರಿ ಅಲೆಕ್ಸ್ ಎಲಿಸ್ ಈ ವಿಷಯ ಪ್ರಕಟಿಸಿದರು. 'ಭಾರತದ ಪ್ರಯಾಣಿಕರು ಕೋವಿಶೀಲ್ಡ್ ಲಸಿಕೆ ಪಡೆದಿದ್ದಲ್ಲಿ ಕ್ವಾರಂಟೈನ್‌ಗೆ ಒಳಗಾಗುವ ಅಗತ್ಯವಿಲ್ಲ. ಕಳೆದ ಒಂದು ತಿಂಗಳು ಈ ಸಂಬಂಧ ಭಾರತ ಸರ್ಕಾರ ನೀಡಿದ ಸಹಕಾರಕ್ಕೆ ಕೃತಜ್ಞತೆಗಳು' ಎಂದು ತಿಳಿಸಿದ್ದಾರೆ.



ನವರಾತ್ರಿಯ ಅಂಗವಾಗಿ ಹೆಬ್ಬಾಳದ ಸೀತಪ್ಪ ಬಡಾವಣೆಯ ಗಾಯತ್ರಿ ದೇವಸ್ಥಾನದಲ್ಲಿ ಗುರುವಾರ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಬೈರತಿ ಸುರೇಶ್ ದಂಪತಿ ಗಾಯತ್ರಿ ವಿಗ್ರಹಕ್ಕೆ ಬೆಳ್ಳಿ ಕವಚವನ್ನು ಕೊಡುಗೆಯಾಗಿ ನೀಡಿದರು.

'ಎಚ್‌ಡಿಕೆ ಹೇಳಿಕೆ ವಾಪಸ್ ಪಡೆಯಲಿ'

ಚಿಕ್ಕಮಗಳೂರು: 'ಆರ್‌ಎಸ್‌ಎಸ್ ಬಗ್ಗೆ ಎಚ್.ಡಿ.ಕುಮಾರಸ್ವಾಮಿ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಆ ಹೇಳಿಕೆಯನ್ನು ಅವರು ವಾಪಸ್ ಪಡೆಯಬೇಕು' ಎಂದು ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಒತ್ತಾಯಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಆರ್‌ಎಸ್‌ಎಸ್ ಸಾಂಸ್ಕೃತಿಕ ಮತ್ತು ದೇಶಭಕ್ತ ಸಂಘಟನೆ. ಇದರ ವಿರುದ್ಧ ಎಚ್‌ಡಿಕೆ ಅನಗತ್ಯ ಆರೋಪ ಮಾಡಿದ್ದಾರೆ' ಎಂದರು.



ಶೋಭಾ ಕರಂದ್ಲಾಜೆ

'ಒಂದು ಕೋಮಿನವರು ಮತ್ತೊಂದು ಕೋಮಿನವರ ಅಂಗಡಿಗಳಿಗೆ ವ್ಯಾಪಾರಕ್ಕೆ ಹೋಗಬಾರದು ಎಂದು ಫತ್ವಾ ಹೊರಡಿಸಿದರೆ ದೇಶದ್ರೋಹವಾಗುತ್ತದೆ. ಉಡುಪಿ ಜಿಲ್ಲೆಯ ಗಂಗೊಳ್ಳಿಯಲ್ಲಿ ಇಂಥ ಆಜ್ಞೆ ಮಾಡಿರುವವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದ್ದೇವೆ. ದತ್ತಪೀಠ ವಿಚಾರಕ್ಕೆ ಸಂಬಂಧಿಸಿದಂತೆ ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸಲು ಸರ್ಕಾರ ಪ್ರಯತ್ನಿಸಲಿದೆ' ಎಂದು ಶೋಭಾ ಹೇಳಿದರು.

23 ಎಕರೆ ಪ್ರದೇಶದಲ್ಲಿ ನಿರ್ಮಾಣ: ಅತ್ಯಾಧುನಿಕ ಸೌಲಭ್ಯಗಳು

ಏರ್‌ಪೋರ್ಟ್ ಸಿಟಿಯಲ್ಲಿ ಮನರಂಜನಾ ಗ್ರಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದಲ್ಲಿ ತಲೆ ಎತ್ತುತ್ತಿರುವ 'ಏರ್‌ಪೋರ್ಟ್ ಸಿಟಿ' ಭಾಗವಾಗಿ 'ರೀಟೇಲ್ ಡೈನಿಂಗ್ ಎಂಟರ್‌ಟೈನ್‌ಮೆಂಟ್' (ಆರ್‌ಡಿಇ) ಗ್ರಾಮವನ್ನು (ಮನರಂಜನಾ ಗ್ರಾಮ) ನಿರ್ಮಿಸಲಾಗುತ್ತಿದೆ.

ಈ ಗ್ರಾಮದ ವಾಸ್ತುಶಿಲ್ಪದ ವಿನ್ಯಾಸಕ್ಕಾಗಿ 'ಡಿಪಿ ಆರ್ಕಿಟೆಕ್ಟ್ಸ್ ಸಿಂಗಪುರ ಆ್ಯಂಡ್ ಪೋರ್ಟ್‌ಲ್ಯಾಂಡ್ ಡಿಸೈನ್ ಯುಕೆ' ಸಂಸ್ಥೆಯನ್ನು ನೇಮಕ ಮಾಡಲಾಗಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್‌ನ (ಬಿಐಎಲ್) ಅಧೀನ ಸಂಸ್ಥೆಯಾದ ಬೆಂಗಳೂರು ಏರ್‌ಪೋರ್ಟ್ ಸಿಟಿ ಲಿಮಿಟೆಡ್ (ಬಿಎಸಿಎಲ್) ಈಗಾಗಲೇ ಏರ್‌ಪೋರ್ಟ್ ಸಿಟಿ ನಿರ್ಮಾಣದ ಕೆಲಸ ಪ್ರಾರಂಭಿಸಿದೆ. ಇದರ ಭಾಗವಾಗಿ ಮನರಂಜನಾ ಗ್ರಾಮವನ್ನು 23 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದೆ. ಈ ಜವಾಬ್ದಾರಿಯನ್ನು 'ಪೋರ್ಟ್‌ಲ್ಯಾಂಡ್ ಡಿಸೈನ್ ಯುಕೆ' ಸಂಸ್ಥೆಗೆ ನೀಡಲಾಗಿದೆ. ಈ ಭಾಗದಲ್ಲಿ ಶಾಪಿಂಗ್ ಸೆಂಟರ್, ಮಾಲ್, ಅತ್ಯಾಧುನಿಕ ಚಿತ್ರಮಂದಿರ ಸೇರಿದಂತೆ ಇತರೆ ಮನರಂಜನಾ ಸ್ಥಳಗಳನ್ನು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ನಿರ್ಮಾಣ ಮಾಡಲಾಗುತ್ತಿದೆ.

ಈ ಬಗ್ಗೆ ವಿವರ ನೀಡಿರುವ ಬಿಎಸಿಎಲ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಮ್ ಮುನುಕುಟ್ಲಾ, 'ಸಿಂಗಪುರ ಮಾದರಿಯ ನಗರ ನಿರ್ಮಾಣದ ಕನಸಿನಂತೆ ಈ ಭಾಗದಲ್ಲಿ 'ಏರ್‌ಪೋರ್ಟ್ ಸಿಟಿ' ನಿರ್ಮಿಸಲಾಗುತ್ತಿದೆ. ಮನರಂಜನಾ ಗ್ರಾಮವನ್ನು ನಿರ್ಮಿಸಲು ಈಗಾಗಲೇ ಟೆಂಡರ್ ನೀಡಲಾಗಿದೆ. ಕೆಲವೇ ವರ್ಷಗಳಲ್ಲಿ ಈ ತಾಣ ತಲೆ ಎತ್ತಲಿದೆ' ಎಂದು ತಿಳಿಸಿದ್ದಾರೆ.

'ಈ ಮನರಂಜನಾ ಗ್ರಾಮಕ್ಕೆ ಬಿಎಂಟಿಸಿ, ಮೆಟ್ರೊ ಸೇರಿದಂತೆ ಎಲ್ಲಾ ರೀತಿಯ ಸಾರಿಗೆ ಸಂಪರ್ಕ ಸಹ ಇರಲಿದೆ. ಈ ಹೈಟೆಕ್ ನಗರದಲ್ಲಿ ಬ್ಯುಸಿನೆಸ್ ಪಾರ್ಕ್, ಐಟಿ ಪಾರ್ಕ್, ಹಾಸ್ಪಿಟಲ್ ಸೆಂಟರ್, ಶಾಲಾ ಕಾಲೇಜುಗಳು, ಪ್ರದರ್ಶನ ಕೇಂದ್ರಗಳು ಸ್ಥಾಪನೆಯಾಗಲಿವೆ. ಇದೊಂದು ದೇಶದಲ್ಲೇ ಮಾದರಿ ಹೈಟೆಕ್ ನಗರವಾಗಲಿದೆ' ಎಂದು ತಿಳಿಸಿದ್ದಾರೆ.

'ಅಂತರರಾಷ್ಟ್ರೀಯ ಮಟ್ಟದ ವಾಸ್ತುಶಿಲ್ಪಕ್ಕೆ ಅನುಗುಣವಾಗಿ ಮನರಂಜನಾ ಗ್ರಾಮವನ್ನು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದು ಡಿ.ಪಿ. ಆರ್ಕಿಟೆಕ್ಟ್ಸ್‌ನ ಅಧ್ಯಕ್ಷೆ ಎ.ಆರ್. ಏಂಜಲೀನ್ ತಿಳಿಸಿದ್ದಾರೆ.

ಮಲ್ಲೇಶ್ವರ: ಪಾಲಿಕೆಯೊಂದಿಗೆ ಮಣಿಪಾಲ್ ಆಸ್ಪತ್ರೆ ಒಪ್ಪಂದ

ವೈದ್ಯಕೀಯ ಪರೀಕ್ಷೆಗಳ ಹೈಟೆಕ್ ಲ್ಯಾಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡವರಿಗೆ ರಿಯಾಯಿತಿ ದರದಲ್ಲಿ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲು ಮಲ್ಲೇಶ್ವರದಲ್ಲಿ ಹೈಟೆಕ್ ಡಯಾಗ್ನಾಸ್ಟಿಕ್ ಕೇಂದ್ರ ಸ್ಥಾಪಿಸುವ ಉದ್ದೇಶದಿಂದ ಪಾಲಿಕೆ ಮತ್ತು ಮಣಿಪಾಲ್ ಹೆಲ್ತ್ ಒಪ್ಪಂದ ಮಾಡಿಕೊಂಡಿವೆ. ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಸಮ್ಮುಖದಲ್ಲಿ ಒಪ್ಪಂದಕ್ಕೆ ಗುರುವಾರ ಸಹಿ ಹಾಕಲಾಯಿತು.

ಬಳಿಕ ಮಾತನಾಡಿದ ಸಚಿವರು, 'ಮಲ್ಲೇಶ್ವರದ ಬೆಂಗಳೂರು ಒನ್ ಕಟ್ಟಡದ ಮೊದಲ ಮಹಡಿಯಲ್ಲಿ 45 ದಿನಗಳಲ್ಲಿ ಸ್ಥಾಪನೆಯಾಗಲಿರುವ ಈ ಲ್ಯಾಬ್, 140 ವಿಧದ ವೈದ್ಯಕೀಯ ಪರೀಕ್ಷೆಗಳ ಸೌಲಭ್ಯ ಹೊಂದಿರಲಿದೆ. ದರವು ಶೇ 30ರಷ್ಟು ಕಡಿಮೆ ಇರಲಿದೆ' ಎಂದರು.

'ಬಿಪಿಎಲ್ ಕಾರ್ಡ್ ಇರುವವರಿಗೆ ಶೇ 50ರಷ್ಟು ರಿಯಾಯಿತಿ ಹಾಗೂ ಎಪಿಎಲ್ ಕಾರ್ಡ್ ಹೊಂದಿರುವವರಿಗೆ ಶೇ 40ರಷ್ಟು ರಿಯಾಯಿತಿ ದರದಲ್ಲಿ ಪರೀಕ್ಷೆ ಮಾಡಲಾಗುವುದು. ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಸರ್ಕಾರಿ ಆಸ್ಪತ್ರೆಯ ಅಧಿಕೃತ ಸಲಹೆ ಪಡೆದು ಬರುವವರಿಗೂ ಈ ರಿಯಾಯಿತಿ ಅನ್ವಯ' ಎಂದು ವಿವರಿಸಿದರು.

'ಈ ಲ್ಯಾಬ್‌ಗೆ ಕಟ್ಟಡದ ಜಾಗವನ್ನು ಪಾಲಿಕೆ ಒದಗಿಸಲಿದೆ. ಉಳಿದ ವ್ಯವಸ್ಥೆಗಳನ್ನು ಮಣಿಪಾಲ್ ಸಂಸ್ಥೆ ಮಾಡಿಕೊಳ್ಳಲಿದೆ. ಮುಂದಿನ ದಿನಗಳಲ್ಲಿ ನಗರದ ಬೇರೆ ಕಡೆಗಳಲ್ಲೂ ಇಂತಹ ಹೈಟೆಕ್ ಲ್ಯಾಬ್ ಸ್ಥಾಪಿಸಲಾಗುವುದು' ಎಂದು ಹೇಳಿದರು.



ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ, ವಿಶೇಷ ಆಯುಕ್ತ ರಂದೀಪ್, ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ.ವಿಜಯೇಂದ್ರ, ಮಣಿಪಾಲ್ ಹೆಲ್ತ್‌ನ ಪ್ರಾದೇಶಿಕ ಮುಖ್ಯ ನಿರ್ವಹಣಾಧಿಕಾರಿ ದೀಪಕ್ ವೇಣುಗೋಪಾಲನ್, ಕ್ಲಿನಿಕಲ್ ಆಪರೇಷನ್ ಮುಖ್ಯಸ್ಥ ಡಾ.ಮುರಳಿ ಹಾಗೂ ಇತರರು ಇದ್ದರು.

ವಾಂತಿ, ಭೇದಿ ಪ್ರಕರಣ: ತನಿಖೆ

ಹೂವಿನಹಡಗಲಿ: ತಾಲ್ಲೂಕಿನ ಮಕರಬ್ಬಿ ಗ್ರಾಮದಲ್ಲಿ ಕಲುಷಿತ ನೀರು ಸೇವನೆಯಿಂದ ಆರು ಮಂದಿ ಮೃತಪಟ್ಟ ಪ್ರಕರಣದ ತನಿಖೆಗಾಗಿ ಗುರುವಾರ ವಿಶೇಷ ತನಿಖಾಧಿಕಾರಿ ಮನೀಷ್ ಮೌದ್ಗಿಲ್, ಜಿಲ್ಲಾಧಿಕಾರಿ ಅನಿರುದ್ಧ ಶ್ರವಣ್, ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಪ್ರಕರಣದ ತನಿಖೆ ನಡೆಸುವಂತೆ ಮುಖ್ಯಮಂತ್ರಿ ಬೊಮ್ಮಾಯಿ ಈಚೆಗೆ ಆದೇಶಿಸಿ, ಮನೀಶ್ ಮೌದ್ಗಿಲ್ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಿದ್ದರು. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಮನೀಶ್ ಮೌದ್ಗಿಲ್ ಅವರು ಅಧಿಕಾರಿಗಳು, ಜನಪ್ರತಿನಿಧಿಗಳ ಸಭೆ ನಡೆಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಹಾಗೂ ಸದಸ್ಯರು ವಾಂತಿ, ಭೇದಿ ಉಲ್ಬಣಿಸಿದ ರೀತಿ ವಿವರಿಸಿದರು. ಇದೇ ಸಂದರ್ಭದಲ್ಲಿ ಅಧಿಕಾರಿಗಳಿಂದ ಜಲಜೀವನ್ ಮಿಷನ್ ಕಾಮಗಾರಿಯ ಬಗ್ಗೆ ಮಾಹಿತಿ ಪಡೆದರು.



ನಿಸರ್ಗದ ಅತ್ಯುತ್ತಮ ಪೌಷ್ಟಿಕ ಆಹಾರ

ಮೊಟ್ಟೆ

ವಿವಿಧ ಆಹಾರಗಳಲ್ಲಿರುವಂತಹ ಪೌಷ್ಟಿಕಾಂಶಗಳು, ವಿಟಾಮಿನ್‌ಗಳು ಮತ್ತು ಖನಿಜಗಳನ್ನು ಮೊಟ್ಟೆಯೊಂದು ಸಮಗ್ರವಾಗಿ ಒದಗಿಸುತ್ತದೆ. 14 ಪ್ರಮುಖ ಪೋಷಕಾಂಶಗಳನ್ನು ಹೊಂದಿರುವ ಮೊಟ್ಟೆ, ಸಾಕಷ್ಟು ಪೌಷ್ಟಿಕಾಂಶಭರಿತ ಆಹಾರವಾಗಿದೆ ಮತ್ತು ಮಿತವ್ಯಯಕಾರಿ ಕೂಡ ಆಗಿದೆ. ಪ್ರತಿದಿನ ಮೊಟ್ಟೆ ಸೇವಿಸುವುದರಿಂದ ನೀವು ಸದೃಢ, ಬಲಿಷ್ಠ, ಆರೋಗ್ಯವಂತರಾಗುವಿರಿ ಮತ್ತು ವಿಜಯಶಾಲಿಯಂತೂ ಖಂಡಿತ ಆಗುತ್ತೀರಿ. ಇಂದಿನ ವಿಶ್ವ ಮೊಟ್ಟೆ ದಿನದಂದು, ಪ್ರತಿದಿನ ಒಂದು ಮೊಟ್ಟೆ ಸೇವಿಸುವ ಸಂಕಲ್ಪ ಮಾಡೋಣ.

ವಿಶ್ವ ಮೊಟ್ಟೆ ದಿನದ ಅಂಗವಾಗಿ,
ಎನ್‌ಇಸಿಸಿ ಪ್ರತಿಯೊಬ್ಬರಿಗೂ ಬಲಿಷ್ಠ ಮತ್ತು ಆರೋಗ್ಯವಂತ ಜೀವನವನ್ನು ಆಶಿಸುತ್ತದೆ.

NECC
ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿ

ಸಂಡೇ ಹೊ ಯಾ ಮಂಡೇ,
ರೋಜ್ ಖಾವೊ ಅಂಡೆ.

16x25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಬಾಲ್ಯ ಎಂದರೆ ಸರಳತೆ. ಪ್ರಪಂಚವನ್ನು ಮಗುವಿನ ಕಣ್ಣಿನಿಂದ ನೋಡಿ- ಅದು ತುಂಬಾ ಸುಂದರವಾಗಿರುತ್ತದೆ.

-ಕೈಲಾಶ್ ಸತ್ಯಾರ್ಥಿ

ಗಾರ್ಮೆಂಟ್ಸ್ ಕಾರ್ಮಿಕರಿಗೆ ತುಟ್ಟಿಭತ್ಯೆ ಸರ್ಕಾರದ ವಿಳಂಬ ನೀತಿ ಸಲ್ಲದು

ಸಿದ್ಧ ಉಡುಪು ತಯಾರಿಕಾ ಘಟಕಗಳ ನೌಕರರಿಗೆ ಹೈಕೋರ್ಟ್ ನಿರ್ದೇಶನದ ನಂತರವೂ ತುಟ್ಟಿಭತ್ಯೆ ಹೆಚ್ಚಳದ ಅನುಕೂಲ ದೊರಕಿಸಿಕೊಡುವಲ್ಲಿ ರಾಜ್ಯ ಸರ್ಕಾರ ತೋರಿಸುತ್ತಿರುವ ನಿರ್ಲಕ್ಷ್ಯ ದುರದೃಷ್ಟಕರ. ಕೊರೊನಾ ನಿಯಂತ್ರಣಕ್ಕಾಗಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್ ಸಮಯದಲ್ಲಿ ಹೆಚ್ಚು ತೊಂದರೆ ಅನುಭವಿಸಿದವರಲ್ಲಿ ಗಾರ್ಮೆಂಟ್ಸ್ ಕಾರ್ಮಿಕರೂ ಸೇರಿದ್ದಾರೆ. ಕನಿಷ್ಠ ವೇತನ ಪಡೆಯುವ ಈ ನೌಕರರು, ಗಾರ್ಮೆಂಟ್ಸ್ ಘಟಕಗಳು ಬಾಗಿಲು ಮುಚ್ಚಿದ ಸಮಯದಲ್ಲಿ ದುಡಿಮೆಯಿಲ್ಲದೆ ಜೀವನೋಪಾಯ-ಕ್ಕಾಗಿ ಪರಿತಪಿಸಿದ್ದರು. ಈಗ ಗಾರ್ಮೆಂಟ್ಸ್ ಉದ್ಯಮದ ಚಟುವಟಿಕೆಗಳು ಮತ್ತೆ ಶುರುವಾಗಿದ್ದರೂ, ಒಂದೂವರೆ ವರ್ಷದಿಂದ ಮರೀಚಿಕೆಯಾಗಿರುವ ತುಟ್ಟಿಭತ್ಯೆ ಹೆಚ್ಚಳ ಇನ್ನೂ ಜಾರಿಗೊಂಡಿಲ್ಲ. 2020–21ರ ಗ್ರಾಹಕ ಸೂಚ್ಯಂಕ ದರ ಪರಿಷ್ಕರಣೆ ಪ್ರಕಾರ, ಗಾರ್ಮೆಂಟ್ಸ್ ಕಾರ್ಮಿಕರ ತುಟ್ಟಿಭತ್ಯೆಯು 2020ರ ಏಪ್ರಿಲ್‌ನಿಂದಲೇ ದಿನಕ್ಕೆ ₹16.06ರಂತೆ ಏರಿಕೆ ಆಗಬೇಕಾಗಿತ್ತು. ಆದರೆ, ಕೋವಿಡ್ ಲಾಕ್‌ಡೌನ್ ಕಾರಣ ನೀಡಿ ತುಟ್ಟಿಭತ್ಯೆ ಏರಿಕೆ ಪ್ರಕ್ರಿಯೆಯನ್ನು ಮುಂದೂಡುವಂತೆ ಗಾರ್ಮೆಂಟ್ಸ್ ಘಟಕಗಳ ಮಾಲೀಕರು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಆ ಕೋರಿಕೆಯನ್ನು ಪುರಸ್ಕರಿಸಿದ್ದ ಸರ್ಕಾರ, 2021ರ ಮಾರ್ಚ್ 31ರವರೆಗೆ ತುಟ್ಟಿಭತ್ಯೆ ಏರಿಕೆ ಪ್ರಕ್ರಿಯೆಯನ್ನು ಮುಂದೂಡಿತ್ತು. ಇದನ್ನು ಪ್ರಶ್ನಿಸಿ ಕಾರ್ಮಿಕ ಸಂಘಟನೆಗಳು ಹೈಕೋರ್ಟ್ ಮೊರೆ ಹೋಗಿದ್ದವು. ಕಾರ್ಮಿಕರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪರಿಗಣಿಸಿದ ನ್ಯಾಯಾಲಯವು ಸರ್ಕಾರದ ಆದೇಶಕ್ಕೆ 2020ರ ಸೆಪ್ಟೆಂಬರ್ 11ರಂದು ತಡೆಯಾಜ್ಞೆ ನೀಡಿ, ಆದೇಶ ವಾಪಸ್ ಪಡೆದು ತುಟ್ಟಿಭತ್ಯೆ ಹೆಚ್ಚಳದ ಬಗ್ಗೆ ಕೂಡಲೇ ನಿರ್ಧಾರ ಕೈಗೊಳ್ಳುವಂತೆ ತಿಳಿಸಿತ್ತು. ಹೈಕೋರ್ಟ್ ನಿರ್ದೇಶನ ನೀಡಿ ವರ್ಷ ಕಳೆದರೂ ಕಾರ್ಮಿಕರಿಗೆ ಹೆಚ್ಚುವರಿ ತುಟ್ಟಿಭತ್ಯೆ ಪಾವತಿಯಾಗಿಲ್ಲ. ತುಟ್ಟಿಭತ್ಯೆ ನೀಡುವುದರಿಂದಾಗಿ ಕಾರ್ಮಿಕರಿಗೆ ತಿಂಗಳಿಗೆ ₹417.56 ದೊರೆಯಲಿದೆ. ₹7,098 ಹಿಂಬಾಕಿ ಕೂಡ ಅವರಿಗೆ ಬರಬೇಕಾಗಿದೆ. ಗಾರ್ಮೆಂಟ್ಸ್ ವಲಯದಲ್ಲಿ ಸುಮಾರು 4 ಲಕ್ಷ ಕಾರ್ಮಿಕರು ದುಡಿಯುತ್ತಿದ್ದು, ಒಟ್ಟು ₹283 ಕೋಟಿಗೂ ಹೆಚ್ಚಿನ ಮೊತ್ತವನ್ನು ಘಟಕಗಳು ಉಳಿಸಿಕೊಂಡಿವೆ. ‘ಗಾರ್ಮೆಂಟ್ಸ್ ಕಾರ್ಮಿಕರ ತುಟ್ಟಿಭತ್ಯೆ ಹೆಚ್ಚಳದ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ; ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು’ ಎಂದು ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಹೇಳಿದ್ದಾರೆ. ಕಾರ್ಮಿಕರ ಬದುಕಿಗೆ ಸಂಬಂಧಿಸಿದ ವಿಷಯದ ಬಗ್ಗೆ ತೀರ್ಮಾನ ಕೈಗೊಳ್ಳಲು ಇನ್ನೆಷ್ಟು ಸಮಯ ಬೇಕು?



ಕನಿಷ್ಠ ವೇತನವನ್ನೇ ನೆಚ್ಚಿಕೊಂಡಿರುವ ಗಾರ್ಮೆಂಟ್ಸ್ ಕಾರ್ಮಿಕರ ಸಂಕಷ್ಟಗಳಿಗೆ ಸರ್ಕಾರ ವಿಳಂಬವಿಲ್ಲದೆ ಸ್ಪಂದಿಸಬೇಕು

ಕನಿಷ್ಠ ವೇತನ ಪಡೆಯುತ್ತಿರುವ ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರಿಗೆ ತುಟ್ಟಿಭತ್ಯೆಯ ಪ್ರತಿಯೊಂದು ರೂಪಾಯಿ ಕೂಡ ಮುಖ್ಯವಾದುದು. ಕಾರ್ಮಿಕರ ಕನಿಷ್ಠ ವೇತನದ ಭಾಗವಾದ ತುಟ್ಟಿಭತ್ಯೆಯನ್ನು ಸಮಯಕ್ಕೆ ಸರಿಯಾಗಿ ಪಾವತಿಸದಿರುವುದು ‘ಕನಿಷ್ಠ ವೇತನ ಕಾಯ್ದೆ’ಯ ಉಲ್ಲಂಘನೆಯೂ ಹೌದು. ಕೊರೊನಾ ಉಂಟು ಮಾಡಿದ ಬಿಕ್ಕಟ್ಟಿನಿಂದಾಗಿ ಒಂದೂವರೆ ವರ್ಷದಿಂದ ಗಾರ್ಮೆಂಟ್ಸ್ ಉದ್ಯಮ ದೊಡ್ಡ ಹೊಡೆತ ಅನುಭವಿಸಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಬಿಸಿ ಕೂಡ ಕಾರ್ಮಿಕರ ಜೀವನವನ್ನು ದುಸ್ತರಗೊಳಿಸಿದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ, ಕಾರ್ಮಿಕರಿಗೆ ನ್ಯಾಯಬದ್ಧವಾಗಿ ದೊರೆಯಬೇಕಾದ ತುಟ್ಟಿಭತ್ಯೆ ನೀಡಿಕೆಯನ್ನು ಮುಂದೂಡುತ್ತಾ ಹೋಗುವುದು ಸರಿಯಲ್ಲ. ಗಾರ್ಮೆಂಟ್ಸ್ ಘಟಕಗಳ ಮಾಲೀಕರು ನೌಕರರ ಹಿತಾಸಕ್ತಿಯನ್ನು ರಕ್ಷಿಸದೇ ಹೋದಾಗ, ಸರ್ಕಾರ ಮಧ್ಯಪ್ರವೇಶಿಸುವುದು ಅಗತ್ಯ. ಆದರೆ, ಪ್ರಸಕ್ತ ಪ್ರಕರಣದಲ್ಲಿ ಹೈಕೋರ್ಟ್ ಮಾತನ್ನು ಕೂಡ ಕೇಳಿಸಿಕೊಳ್ಳದಷ್ಟು ಕಿವುಡುತನವನ್ನು ಸರ್ಕಾರ ಪ್ರದರ್ಶಿಸು-ತ್ತಿದೆ. ಲಾಕ್‌ಡೌನ್ ಕಾರಣದಿಂದಾಗಿ ಗಾರ್ಮೆಂಟ್ಸ್ ಉದ್ಯಮವೇ ಸಂಕಷ್ಟಕ್ಕೆ ಸಿಲುಕಿದೆ. ಬಟ್ಟೆ ಅಂಗಡಿಗಳು ಮುಚ್ಚಿದ್ದ ಪರಿಣಾಮವಾಗಿ, ಉದ್ಯಮದಲ್ಲಿ ನಗದು ಹರಿವು ತಗ್ಗಿದೆ. ಜನರ ಕೊಳ್ಳುವ ಶಕ್ತಿ ಕುಗ್ಗಿರುವ ಕಾರಣದಿಂದಾಗಿ ಉದ್ಯಮದ ಉತ್ಪನ್ನಗಳು ಮೊದಲಿನ ರೀತಿಯಲ್ಲಿ ಮಾರಾಟ ಆಗುತ್ತಿಲ್ಲ ಎಂಬ ವರದಿಗಳಿವೆ. ಆದರೆ, ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರ ತುಟ್ಟಿಭತ್ಯೆ ವಿಚಾರವಾಗಿ ತ್ವರಿತವಾಗಿ ತೀರ್ಮಾನ ಕೈಗೊಳ್ಳಬೇಕಿರುವುದು ಸರ್ಕಾರದ ಕರ್ತವ್ಯ.

ತುಟ್ಟಿಭತ್ಯೆ ಏರಿಕೆ ಪ್ರಕ್ರಿಯೆಯನ್ನು ಮುಂದೂಡಿದ್ದ ಆದೇಶವನ್ನು ಸರ್ಕಾರ ತಕ್ಷಣ ಹಿಂದಕ್ಕೆ ಪಡೆಯುವ ಮೂಲಕ ಗಾರ್ಮೆಂಟ್ಸ್ ನೌಕರರ ನೆರವಿಗೆ ಧಾವಿಸಬೇಕಾಗಿದೆ. ಬಾಕಿ ಉಳಿದಿರುವ ಮೊತ್ತವನ್ನೂ ಕಾರ್ಮಿಕರಿಗೆ ಆದಷ್ಟು ಬೇಗ ದೊರಕಿಸಿಕೊಡುವ ಬದ್ಧತೆ ಪ್ರದರ್ಶಿಸಬೇಕಾಗಿದೆ. ಜೊತೆಯಲ್ಲೇ, ಉದ್ಯಮಕ್ಕೆ ಅಗತ್ಯ ನೆರವು ನೀಡುವ ಬಗ್ಗೆಯೂ ಆಲೋಚಿಸಬೇಕು. ತುಟ್ಟಿಭತ್ಯೆ ಬಾಕಿ ಮಾತ್ರವಲ್ಲದೆ, ಗಾರ್ಮೆಂಟ್ಸ್ ಕಾರ್ಮಿಕರನ್ನು ಹಲವು ಸಮಸ್ಯೆಗಳು ಕಾಡುತ್ತಿವೆ. ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಜವಳಿ ಉದ್ಯಮದ ನೂರಾರು ಘಟಕಗಳು ಮುಚ್ಚುವುದರೊಂದಿಗೆ ಸಾವಿರಾರು ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಅದರಲ್ಲೂ ಮಹಿಳಾ ನೌಕರರು ದೊಡ್ಡ ಸಂಖ್ಯೆಯಲ್ಲಿ ಕೆಲಸ ಕಳೆದುಕೊಂಡಿದ್ದಾರೆ. ಉಳಿದಿರುವ ಕಾರ್ಮಿಕರಿಗೆ ಕೂಡ ಸೌಲಭ್ಯಗಳನ್ನು ಕಡಿತಗೊಳಿಸಲಾಗಿದೆ. ಕೆಲವು ಗಾರ್ಮೆಂಟ್ಸ್ ಘಟಕಗಳು ಕಾರ್ಮಿಕರಿಗೆ ಒದಗಿಸುತ್ತಿದ್ದ ಸಾರಿಗೆ ಸೌಲಭ್ಯವನ್ನು ನಿಲ್ಲಿಸಿದ್ದರೆ, ಮತ್ತೆ ಕೆಲವು ಘಟಕಗಳು ಕಾರ್ಮಿಕರ ಸಂಬಳವನ್ನು ಕಡಿತಗೊಳಿಸಿವೆ. ತಿಂಗಳಿಗೊಂದು ಸಾಂದರ್ಭಿಕ ರಜೆ, ವೈದ್ಯಕೀಯ ರಜೆ, ಮಹಿಳೆಯರಿಗೆ ವಿಶ್ರಾಂತಿ ಕೊಠಡಿ, 8 ಗಂಟೆಗೂ ಹೆಚ್ಚಿನ ಅವಧಿಯ ದುಡಿಮೆಗೆ ಹೆಚ್ಚುವರಿ ವೇತನ ಸೇರಿದಂತೆ ಕಾರ್ಮಿಕರಿಗೆ ದೊರೆಯಬೇಕಾದ ಅನೇಕ ಸವಲತ್ತುಗಳು ಬಹುತೇಕ ಘಟಕಗಳಲ್ಲಿ ಕಾಗದದ ಮೇಲಷ್ಟೇ ಉಳಿದಿವೆ. ಕನಿಷ್ಠ ವೇತನವನ್ನೇ ನೆಚ್ಚಿಕೊಂಡಿರುವ ಗಾರ್ಮೆಂಟ್ಸ್ ಕಾರ್ಮಿಕರ ಸಂಕಷ್ಟಗಳಿಗೆ ಸರ್ಕಾರ ವಿಳಂಬವಿಲ್ಲದೆ ಸ್ಪಂದಿಸಬೇಕು.

ದಿನದ ಟ್ವೀಟ್

ಉಗ್ರ ಕ್ರಮ ಅಗತ್ಯ



ಜಮ್ಮು ಮತ್ತು ಕಾಶ್ಮೀರದಲ್ಲಿ ನಿರ್ಣಾಯಕ ಹೆಜ್ಜೆಗಳನ್ನು ಇಡಲು ಇದು ಸಕಾಲ. 370ನೇ ವಿಧಿ ರದ್ದುಪಡಿಸಿದ್ದು ದೊಡ್ಡ ತೀರ್ಮಾನವೇ ಆದರೂ ಅದು ಸಾಕಾಗುತ್ತಿಲ್ಲ. ಭಾರತವು ತನ್ನ ಮುಗ್ಧ ನಾಗರಿಕರ ಹತ್ಯೆಗೀಡಾಗುವುದನ್ನು ನೋಡುತ್ತಾ ಕೂರಲು ಸಾಧ್ಯವಿಲ್ಲ.

ಇಶ್ಕರಣ್ ಸಿಂಗ್ ಭಂಡಾರಿ, ವಕೀಲ

ಕಿಡಿನುಡಿ



ಕಾಂಗ್ರೆಸ್ ನಾಯಕರ ಅನುಮತಿ ಪಡೆದು ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಿತ್ತೇ? ಬಿಜೆಪಿಯೊಂದಿಗೆ ಒಳಒಪ್ಪಂದ ಮಾಡಿಕೊಂಡು ಉಪಚುನಾವಣೆಗೆ ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇ ಆಗಿದ್ದರೆ ನಾನೇಕೆ ಬಿಜೆಪಿ,ಆರ್‌ಎಸ್‌ಎಸ್ ವಿರುದ್ಧ ಮಾತನಾಡುತ್ತಿದ್ದೆ?

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಮಂಗಳವಾರ, 8-10-1996

● **ಸಿಬಿಐ ನಿರ್ದೇಶಕರ ವರ್ತನೆಗೆ ಪಟ್ನಾ ಹೈಕೋರ್ಟ್ ತರಾಟೆ**

ಪಟ್ನಾ, ಅ. 7 (ಯುಎನ್‌ಐ, ಪಿಟಿಐ)– ಬಿಹಾರದ ಪಶುಸಂಗೋಪನ ಇಲಾಖೆಯಲ್ಲಿ ನಡೆದಿರುವ ಕೋಟ್ಯಂತರ ರೂಪಾಯಿಗಳ ಮೇವು ಹಗರಣದ ತನಿಖೆಯಲ್ಲಿ ಸಿಬಿಐ ನಿರ್ದೇಶಕ ಜೋಗಿಂದರ್ ಸಿಂಗ್ ಅವರು ಹಸ್ತಕ್ಷೇಪ ನಡೆಸುತ್ತಿದ್ದಾರೆ ಎಂಬುದರ ಬಗ್ಗೆ ಪಟ್ನಾ ಹೈಕೋರ್ಟ್ ಇಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಸಿಬಿಐನ ಜಂಟಿ ನಿರ್ದೇಶಕ ಯು.ಎನ್. ಬಿಸ್ವಾಸ್ ಅವರು ನಡೆಸುತ್ತಿರುವ ಈ ಹಗರಣದ ತನಿಖೆಯಲ್ಲಿ, ಜೋಗಿಂದರ್ ಸಿಂಗ್ ಅವರು ಒತ್ತಡ ತಂದು ತನಿಖೆಯಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದಾರೆ ಎಂಬುದರ ಹಿನ್ನೆಲೆಯಲ್ಲಿ ಅವರನ್ನು ತಪ್ಪಿತಸ್ಥ ಎಂದು ಪರಿಗಣಿಸಿರುವ ಕೋರ್ಟ್, ‘ನಿರ್ದೇಶಕರು ತನಿಖೆಯಿಂದ ದೂರವಿರಬೇಕು. ಅಲ್ಲದೆ ತನಿಖಾ ತಂಡವು ನಿರ್ದೇಶಕರ ಸಲಹೆ ಹಾಗೂ ನಿರ್ದೇಶನವಿಲ್ಲದೆ ತನಿಖೆ ನಡೆಸಬೇಕು’ ಎಂದು ಸೂಚಿಸಿದೆ.

50 ವರ್ಷಗಳ ಹಿಂದೆ
ಶುಕ್ರವಾರ, 8-10-1971

● **ಭಾರತದ ದಮನ ಯಾರಿಂದಲೂ ಸಾಧ್ಯವಿಲ್ಲ: ಇಂದಿರಾ**

ಚಂಡೀಗಡ, ಅ. 7– ಭಾರತವನ್ನು ದಮನ ಮಾಡುವುದಾಗಲಿ, ಅದನ್ನು ಹಿಂದಿನ ಸಾಲಿಗೆ ತಳ್ಳುವುದಾಗಲಿ ಈ ಭೂಮಿಯ ಮೇಲಣ ಯಾವ ಶಕ್ತಿಗೂ ಸಾಧ್ಯವಿಲ್ಲ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಘೋಷಿಸಿದರು.

‘ಎಲ್ಲ ಅಪಾಯಗಳನ್ನೂ ನಾವು ಒಗ್ಗಟ್ಟಿನಿಂದ ಎದುರಿಸುತ್ತೇವೆ. ವಿವಿಧ ಎಡರುತೊಡರುಗಳನ್ನು ದಾಟಿ ಮುನ್ನಡೆಯುತ್ತೇವೆ’ ಎಂದೂ ಅವರು ನುಡಿದರು.

● **ಆಡಳಿತ ಕಾಂಗ್ರೆಸ್ ಸ್ಥಾನ ಈಗ ಮತ್ತಷ್ಟು ಭದ್ರ: ಕಾರ್ಯದರ್ಶಿಗಳ ಸಮೀಕ್ಷೆ**

ಶಿಮ್ಲಾ, ಅ. 7– ಚುನಾವಣೆಯ ಕಾಲದಲ್ಲಿ ನೀಡಲಾದ ಆಶ್ವಾಸನೆಗಳನ್ನು ಶೀಘ್ರಗತಿಯಲ್ಲಿ ಜಾರಿಗೆ ತಂದದ್ದು, ರಾಜಸ್ಥಾನ, ಬಿಹಾರ ಮತ್ತು ಆಂಧ್ರ ಪ್ರದೇಶಗಳಲ್ಲಿ ರಾಜಕೀಯ ಬಿಕ್ಕಟ್ಟುಗಳನ್ನು ಯಶಸ್ವಿಯಾಗಿ ಪರಿಹರಿಸಿದ್ದು ಹಾಗೂ ಪಕ್ಷದ ಆಡಳಿತ ಯಂತ್ರವನ್ನು ಏಕಮುಖಗೊಳಿಸಲು ಕೈಗೊಂಡ ಸತ್ವಪೂರ್ಣ ಕ್ರಮಗಳು ಆಡಳಿತ ಕಾಂಗ್ರೆಸ್ ಪಕ್ಷ ತನ್ನ ಸ್ಥಾನವನ್ನು ಲೋಕಸಭೆ ಚುನಾವಣೆಯಲ್ಲಿ ಭಾರೀ ವಿಜಯ ಗಳಿಸಿದ ನಂತರ ಮತ್ತಷ್ಟು ಭದ್ರಪಡಿಸಿಕೊಳ್ಳಲು ಸಹಾಯಕವಾಗಿವೆ.

ಜಗತ್ತಿನ ಅರ್ಧದಷ್ಟು ಭಾಷೆಗಳನ್ನು ಹೊಂದಿರುವ ಭಾರತಕ್ಕೆ ಸಮರ್ಪಕವಾದ ಭಾಷಾ ನೀತಿ ಬೇಕಿದೆ

ಶಿಕ್ಷಣ ನೀತಿ ಮತ್ತು ಭಾರತೀಯ ಭಾಷೆ



ವಿಶ್ಲೇಷಣೆ

ಪುರುಷೋತ್ತಮ ಬಿಳಿಮಲೆ

ಹೊಸ ಶಿಕ್ಷಣ ನೀತಿಯ 22ನೇ ಅಧ್ಯಾಯದಲ್ಲಿ ಭಾಷೆಯ ಮಹತ್ವ ಕುರಿತು ಈ ಕೆಳಗಿನ ಮಾತುಗಳಿವೆ-

‘ಭಾಷೆಗಳು ಜಗತ್ತನ್ನು ಭಿನ್ನ ರೀತಿಯಲ್ಲಿ ನೋಡುತ್ತವೆ. ಒಂದು ಭಾಷೆಯು ಅದನ್ನು ಮಾತಾಡುವ ಸ್ಥಳೀಯರ ಅನುಭವದ ಗ್ರಹಿಕೆಯನ್ನು ನಿರ್ಧರಿಸುತ್ತದೆ. ಸಂಸ್ಕೃತಿಯನ್ನು ಸಂರಕ್ಷಿಸಲು ಮತ್ತು ಪ್ರೋತ್ಸಾಹಿಸಲು ಒಂದು ಸಂಸ್ಕೃತಿಯ ಭಾಷೆಗಳನ್ನು ಕೂಡಾ ಸಂರಕ್ಷಿಸಬೇಕು ಮತ್ತು ಪ್ರೋತ್ಸಾಹಿಸಬೇಕು. ದುರದೃಷ್ಟದ ಸಂಗತಿಯೆಂದರೆ, ಭಾರತೀಯ ಭಾಷೆಗಳಿಗೆ ನಿಜಕ್ಕೂ ಸಿಗಬೇಕಾದ ಮಾನ್ಯತೆ ಮತ್ತು ಕಾಳಜಿ ಸಿಕ್ಕಿಲ್ಲ. ಈಗಾಗಲೇ ದೇಶವು 220ಕ್ಕೂ ಹೆಚ್ಚು ಭಾಷೆಗಳನ್ನು ಕಳೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಶಾಲೆ ಮತ್ತು ಉನ್ನತ ಶಿಕ್ಷಣದಲ್ಲಿ ಭಾರತೀಯ ಭಾಷೆಗಳ ಬೋಧನೆ ಮತ್ತು ಕಲಿಕೆಯನ್ನು ಗಟ್ಟಿಗೊಳಿಸಬೇಕಾದ ಅಗತ್ಯವಿದೆ’.

ಈ ಮಾತುಗಳು ಭಾಷೆಯ ಕುರಿತಾಗಿ ಕಾಳಜಿ ಇರುವ ಯಾರಿಗೇ ಆದರೂ ಸಂತೋಷ ಕೊಡಬಲ್ಲವು. ಆದರೆ ವಾಸ್ತವವಾಗಿ ಸರ್ಕಾರಗಳು ಭಾಷಾ ಅಧ್ಯಯನವನ್ನು ‘ಅನುತ್ಪಾದಕ’ ಎಂದೇ ಭಾವಿಸಿವೆ. ಜನರೂ ಭಾಷಾ ಕಲಿಕೆಯಿಂದ ದೂರ ಹೋಗುತ್ತಿದ್ದಾರೆ. ಸ್ಪರ್ಧಾತ್ಮಕ ಆರ್ಥಿಕತೆಯ ಬೆನ್ನು ಹತ್ತಿರುವ ಜನರಿಗೆ ಭಾಷೆ ಮತ್ತು ಸಾಹಿತ್ಯ ಬೇಡವಾಗಿದೆ. ಸಾಮಾಜಿಕ ಜಾಲತಾಣಗಳೂ ಸೇರಿದಂತೆ, ಮಾಧ್ಯಮಗಳು ಭಾಷೆಗಳ ಸಾವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಇದರ ಒಟ್ಟು ಪರಿಣಾಮವಾಗಿ ಶಿಕ್ಷಣ ಕ್ಷೇತ್ರದಲ್ಲಿ ಭಾಷಾಧ್ಯಯನ ಕಳೆಗುಂದುತ್ತಿದೆ. ಈ ಗ್ರಹಿಕೆಯಲ್ಲಿ ಹೊಸ ಶಿಕ್ಷಣ ನೀತಿಯು ಭಾರತೀಯ ಭಾಷೆಗಳನ್ನು ಸಬಲೀಕರಣಗೊಳಿಸಲು ತನ್ನ ನೀತಿಯ ಪರಿಚ್ಛೇದ 4.11ರಲ್ಲಿ ಈ ಕೆಳಗಿನ ಸಲಹೆಗಳನ್ನು ನೀಡಿದೆ-

‘ಚಿಕ್ಕ ಮಕ್ಕಳು ತಮ್ಮ ಮನೆಯ ಭಾಷೆಯಲ್ಲಿ/ ಮಾತೃಭಾಷೆಯಲ್ಲಿ ಅರ್ಥಸಹಿತವಾದ ಮಾತುಗಳನ್ನು ಮತ್ತು ಪರಿಕಲ್ಪನೆಗಳನ್ನು ಹೆಚ್ಚು ಬೇಗ ಕಲಿಯುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆ. ಮನೆಭಾಷೆಯೆಂದರೆ ಸಾಧಾರಣವಾಗಿ ಮಾತೃಭಾಷೆ ಅಥವಾ ಸ್ಥಳೀಯ ಸಮುದಾಯಗಳು ಆಡುವ ಭಾಷೆಗಳಾಗಿರುತ್ತವೆ. ಇಷ್ಟಾದರೂ ವಾಸ್ತವ ಸಂಗತಿ ಏನೆಂದರೆ, ಅನೇಕ ವೇಳೆ ಬಹುಭಾಷಿಕ ಕುಟುಂಬಗಳಲ್ಲಿ ಮನೆಯ ಕೆಲವರು ತಮ್ಮದೇ ವಿಶಿಷ್ಟವಾದ ಮನೆಮಾತು ಬಳಕೆ ಮಾಡಬಹುದು. ಈ ಭಾಷೆಯು ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಗಿಂತ ಬೇರೆಯದೇ ಆಗಿರಬಹುದು. ಸಾಧ್ಯವಾದ ಮಟ್ಟಿಗೆ ಕಡೇ ಪಕ್ಷ ಐದನೆಯ ತರಗತಿವರೆಗೆ ಅಥವಾ ಅದಕ್ಕಿಂತ ಮುಂದೆ ಎಂಟನೆಯ ತರಗತಿವರೆಗೆ ಅಥವಾ ಅದಕ್ಕಿಂತಲೂ ಮುಂದೆ ಶಿಕ್ಷಣದ ಮಾಧ್ಯಮ ಮನೆಭಾಷೆ/ ಪ್ರಾದೇಶಿಕ ಭಾಷೆ/ ಮಾತೃಭಾಷೆ/ ಸ್ಥಳೀಯ ಭಾಷೆ ಆಗಿರಬೇಕಾಗುತ್ತದೆ. ಇದಾದ ನಂತರ ಸಾಧ್ಯವಾದಷ್ಟೂ ಮಟ್ಟಿಗೆ ಮನೆಭಾಷೆಯನ್ನು/ ಸ್ಥಳೀಯ ಭಾಷೆಯನ್ನು ಒಂದು ಭಾಷೆಯಾಗಿ ಓದುವಂತಹ ಅವಕಾಶ ಇರತಕ್ಕದ್ದು. ವಿಜ್ಞಾನ ಸೇರಿದಂತೆ ಎಲ್ಲ ವಿಷಯಗಳಲ್ಲೂ ಉಚ್ಚ ಮಟ್ಟದ ಪಠ್ಯಪುಸ್ತಕಗಳನ್ನು ಮನೆಭಾಷೆಯಲ್ಲಿ/ ಮಾತೃಭಾಷೆಯಲ್ಲಿ ದೊರಕಿಸಿ ಕೊಡಲಾಗುವುದು. ಒಂದು ವೇಳೆ ಮಗು ಆಡುವ ಭಾಷೆ ಹಾಗೂ ಶಿಕ್ಷಣ ಮಾಧ್ಯಮ ಇವೆರಡೂ ಎಲ್ಲಿಯೇ ಆದರೂ ಬೇರೆ ಬೇರೆಯಾಗಿದ್ದರೆ ಅಂತೆಡೆಗಳಲ್ಲಿ ಆ ಕೊರತೆಯನ್ನು ತುಂಬುವ ಎಲ್ಲ ಪ್ರಯತ್ನ ಮಾಡಲಾಗುವುದು. ಮನೆಭಾಷೆಯಲ್ಲಿ ಒಂದು ವೇಳೆ ಪಠ್ಯಸಾಮಗ್ರಿ ದೊರೆಯದೇ ಇರುವಂಥ ಸಂದರ್ಭಗಳಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ಸಂಭಾಷಣೆ ರೂಪದಲ್ಲಾದರೂ ಮನೆಭಾಷೆಯನ್ನು ಬಳಕೆಗೆ ತರಲಾಗುತ್ತದೆ. ಬೋಧನೆ ಮತ್ತು ಕಲಿಕೆ ಎರಡರಲ್ಲೂ ಬಹುಭಾಷೀಯತೆ ಮತ್ತು ಭಾಷಾ ಶಕ್ತಿ ಇವುಗಳಿಗೆ ಪ್ರೋತ್ಸಾಹ ನೀಡಲಾಗುವುದು’.

ಭಾಷೆಗಳ ಉಳಿಯುವಿಕೆ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಮೇಲಿನ ಮಾತುಗಳು ಸಮರ್ಪಕವಾಗಿವೆ. ಇದರ ಪ್ರಕಾರ, ಮಂಗಳೂರಿನಲ್ಲಿರುವ ವಿದ್ಯಾರ್ಥಿಯೊಬ್ಬನು ರಾಜ್ಯಭಾಷೆಯಾದ ಕನ್ನಡದಲ್ಲಿ ಕನಿಷ್ಠ ಐದನೇ ತರಗತಿವರೆಗೆ ಓದುತ್ತಾನೆ. ಹಾಗೆ ಓದುವಾಗ ಪ್ರಾದೇಶಿಕ ಭಾಷೆಯಾದ ತುಳುವಿಗೂ ಅಲ್ಲಿ ಒಂದು ಸ್ಥಾನವಿರುತ್ತದೆ ಮತ್ತು ತಾಯ್ನುಡಿಯಾದ ಬ್ಯಾರಿ ಭಾಷೆ, ಅರೆ ಭಾಷೆ ಅಥವಾ ಹವ್ಯಕ ಕನ್ನಡಕ್ಕೂ ಅವಕಾಶ ಲಭಿಸುತ್ತದೆ. ಇವೆಲ್ಲವೂ ಸಾಧ್ಯವಾಗಬೇಕಾದರೆ ಸುದೀರ್ಘಾವಧಿಯ ದೃಷ್ಟಿಕೋನ, ತಜ್ಞರ ಜೊತೆ ಸಮಾಲೋಚನೆ ಮತ್ತು ಸಾಂಸ್ಥಿಕ ಪ್ರಯತ್ನಗಳ ಅಗತ್ಯವಿದೆ ಎಂದು ನೀತಿಯ ಪರಿಚ್ಛೇದ 25.1ರಲ್ಲಿ ಹೇಳಲಾಗಿದೆ ಮತ್ತು ಇವೆಲ್ಲ ಸಾಧ್ಯವಾಗಲು ಜಿಡಿಪಿಯ ಆರು ಶೇಕಡ ಹಣವನ್ನೂ ಶಿಕ್ಷಣಕ್ಕಾಗಿ ತೆಗೆದಿಡಬೇಕೆಂದೂ ಅದು ಹೇಳುತ್ತದೆ.

ಮೇಲ್ನೋಟಕ್ಕೆ ಸರಿಯಾಗಿಯೇ ಕಾಣುವ ಈ ಶಿಫಾರಸುಗಳನ್ನು ಜಾರಿಗೆ ತರುವುದು ಅಸಾಧ್ಯ ಎಂದು ಗೊತ್ತಿರುವುದರಿಂದಲೇ ಕರ್ನಾಟಕ ಸರ್ಕಾರವು ಶಿಕ್ಷಣದ ಬುಡವನ್ನು ಹಾಗೇ ಬಿಟ್ಟು ಮೇಲಿನಿಂದ ನೀತಿಯನ್ನು ಜಾರಿಗೆ ತರಲು ಹೊರಟಿದೆ. ಇಲ್ಲಿ ಸಮಸ್ಯೆ ಇರುವುದು 2015ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಮಾನ. ರಾಜ್ಯ/ ಪ್ರಾದೇಶಿಕ/ ತಾಯ್ನುಡಿಗಳಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸುವುದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಹಾಗಾಗಿ ಸಂವಿಧಾನದಲ್ಲಿ ಸೂಕ್ತ ತಿದ್ದುಪಡಿ ತಾರದ ಹೊರತು ಕನ್ನಡದಲ್ಲಿ ಬೋಧನೆಯನ್ನು ಕಡ್ಡಾಯಗೊಳಿಸಲು ಸಾಧ್ಯವಿಲ್ಲ. ಹೀಗಾಗಿ ಶಿಕ್ಷಣ ನೀತಿಯ ಶಿಫಾರಸು ಮತ್ತು ಸುಪ್ರೀಂ ಕೋರ್ಟಿನ ತೀರ್ಮಾನಗಳ ನಡುವೆ ತಾಳಮೇಳ ಇಲ್ಲವಾಗಿದೆ.

ಶಿಕ್ಷಣ ನೀತಿಯ ಶಿಫಾರಸು ಮತ್ತು ಅನುಷ್ಠಾನದ ಗೊಂದಲಗಳ ನಡುವೆ ನಾವಿರುವಾಗ, ಇನ್ನೊಂದೆಡೆ ಉನ್ನತ ಶಿಕ್ಷಣದ ಅಂತರರಾಷ್ಟ್ರೀಕರಣವೂ ಜೋರಾಗಿ ನಡೆಯುತ್ತಿದೆ. ಖಾಸಗೀಕರಣ, ವ್ಯಾಪಾರೀಕರಣ ಹಾಗೂ ಮಾರುಕಟ್ಟೆಯ ನೀತಿಗಳು ಶಿಕ್ಷಣದ ವ್ಯಾಕರಣವನ್ನೇ ಬದಲಾಯಿಸಲಾರಂಭಿಸಿವೆ. ಇಂಥ ಸಂದರ್ಭದಲ್ಲಿ ನಮ್ಮ ಭಾಷೆಗಳನ್ನು ಉಳಿಸಿಕೊಳ್ಳುವ ಬಗೆ ಹೇಗೆ ಎಂಬುದನ್ನು ಯಾರೂ ಹೇಳುತ್ತಿಲ್ಲ.

2011ರ ಜನಗಣತಿಯು ಒಟ್ಟು 19,569 ಭಾಷೆಗಳನ್ನು ತಾಯ್ನುಡಿಗಳೆಂದು ಮನ್ನಿಸುತ್ತದೆ. ಇವುಗಳಲ್ಲಿ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿದ ಭಾಷೆಗಳ ಸಂಖ್ಯೆ ಕೇವಲ 22. ಅವುಗಳಲ್ಲಿ ಉತ್ತರ ಭಾರತದ ಭಾಷೆಗಳು 18. ದಕ್ಷಿಣ ಭಾರತದ್ದು 4. ಸಂವಿಧಾನದ ಮನ್ನಣೆ ಪಡೆಯಲು ಹೋರಾಡುತ್ತಿರುವ ಭಾಷೆಗಳು 99. ಕಳೆದ 40 ವರ್ಷಗಳಲ್ಲಿ ಕನ್ನಡ ಮಾತನಾಡುವವರ ಸಂಖ್ಯೆಯಲ್ಲಿ ಅತ್ಯಂತ ಕಡಿಮೆ ಎಂದರೆ ಶೇಕಡ 3.75 ಮಾತ್ರ ಏರಿಕೆ ಆಗಿದೆ. ಹಿಂದಿ ಮಾತಾಡುವವರ ಸಂಖ್ಯೆಯಲ್ಲಿ ಶೇಕಡ 56.6ರಷ್ಟು ಏರಿಕೆಯಾಗಿದೆ. ಸುಮಾರು ಮೂರು ಕೋಟಿ ಅರವತ್ತು ಲಕ್ಷ ಜನರ ತಾಯ್ನುಡಿಗಳು ಋಣಾತ್ಮಕ ಬೆಳವಣಿಗೆಯನ್ನು ತೋರಿಸುತ್ತಿವೆ. ಆಶ್ಚರ್ಯವೆಂದರೆ, ಇಷ್ಟೊಂದು ಸಮಸ್ಯೆಗಳಿದ್ದರೂ ನಮ್ಮ ಸರ್ಕಾರಗಳು ಅದರ ಕಡೆಗೆ ಗಂಭೀರವಾಗಿ ಗಮನ ಕೊಡದಿರುವುದು.

ಜಗತ್ತಿನ ಅರ್ಧದಷ್ಟು ಭಾಷೆಗಳನ್ನು ಹೊಂದಿರುವ ಭಾರತಕ್ಕೆ ಒಂದು ಸಮರ್ಪಕವಾದ ಭಾಷಾ ನೀತಿಯೇ ಇಲ್ಲ. ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ರಾಜ್ಯ ಭಾಷೆಯ ಆಶ್ರಯದಲ್ಲಿರುವ ಅನೇಕ ಸಣ್ಣ ಭಾಷೆಗಳು ತೀವ್ರ ಉಪೇಕ್ಷೆಗೆ ಒಳಗಾದುವು. ಇವತ್ತು ತೆಲಂಗಾಣವು ತೆಲುಗುವಿನ ಜೊತೆಗೆ ಉರ್ದುವನ್ನು, ಬಿಹಾರವು ಬಿಹಾರಿ ಭಾಷೆಯ ಜೊತೆಗೆ ಬಾಂಗ್ಲಾವನ್ನು, ಪಶ್ಚಿಮ ಬಂಗಾಳವು ಬಾಂಗ್ಲಾ ಜೊತೆಗೆ ಉರ್ದು, ಪಂಜಾಬಿ, ನೇಪಾಲಿ, ಒರಿಯಾ ಮತ್ತು ಹಿಂದಿಯನ್ನು, ದೆಹಲಿ ಸರ್ಕಾರವು ಹಿಂದಿಯ ಜೊತೆಗೆ ಪಂಜಾಬಿ ಮತ್ತು ಉರ್ದುವನ್ನು ಅಧಿಕೃತ ಭಾಷೆಗಳೆಂದು ಘೋಷಿಸಿವೆ. ಆದರೆ ಕರ್ನಾಟಕ ಸರ್ಕಾರವು ಕೊಡವ, ತುಳು ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಮಾನ್ಯ ಮಾಡಿಲ್ಲ.

ಹೀಗಾಗಿ ನಾವೀಗ ರಾಷ್ಟ್ರೀಯ ಭಾಷಾ ನೀತಿಯೊಂದಕ್ಕಾಗಿ ಹೋರಾಡಬೇಕಾಗಿದೆ.



ಚುರುಮುರಿ



ಮೆಗಾಫೋನ್ ಬವಣೆ!

● ಚಂದ್ರಕಾಂತ ವಡ್ಡು

ತಿಂಗಳೇಶ ದಿನಪತ್ರಿಕೆಯಲ್ಲಿ ತುಂಬಿಕೊಂಡಿದ್ದ, ಮುಖ್ಯಮಂತ್ರಿಗಳಿಂದ ಉದ್ಘಾಟನೆ, ಆಶ್ವಾಸನೆ ಸುದ್ದಿ ಓದಿ ಮುಗಿಸಿದ. ಏನಾದರೂ ಮಾಡಬೇಕೆಂಬ ಅವರ ಕಳಕಳಿ ಹಿಡಿಸಿತು. ಆದರೆ ಪ್ರತೀ ಭಾಷಣದಲ್ಲೂ ರಾಜಾಹುಲಿಯ ಕಡ್ಡಾಯ ಶ್ಲಾಘನೆಯ ಹಿಂದಿನ ರಾಜಕೀಯ ತಂತ್ರ ಅರ್ಥವಾಗದೆ ತಲೆ ಕೆರೆದುಕೊಂಡ.

ಅಷ್ಟೊತ್ತಿಗೆ ಒಂಬತ್ತು ಹೊಡೆದರೂ ಸೌಟು ಕುಕ್ಕುವ ಸಪ್ಪಳವಾಗಲೀ ಒಗ್ಗರಣೆ ಪರಿಮಳವಾಗಲೀ ಅಡುಗೆಮನೆ ಹೊಸ್ತಿಲು ದಾಟಲಿಲ್ಲ. ‘ಹೆಂಡತಿಯೊಬ್ಬಳು ಮನೆಯೊಳಗಿ-ದ್ದರೆ ನನಗದೆ ಕೋಟಿ ರೂಪಾಯಿ…’ ಹಾಡು ಗುನುಗಿದ. ಮೆಗಾ ಸೇಲ್ ಜಾಹೀರಾತುಗಳ ಅಬ್ಬರದ ಮಧ್ಯೆ ಅಲ್ಲಲ್ಲಿ ಅಡಗಿಕುಳಿತ ಸುದ್ದಿಗಳನ್ನು ಹುಡುಕಿಹುಡುಕಿ ಓದುವುದರಲ್ಲಿ ಇನ್ನೊಂದು ಗಂಟೆ ಕಳೆಯಿತು.

ತಿಂಗಳೇಶನ ತಲೆಯೇನೋ ಪ್ರೇಮಗೀತೆಯಲ್ಲಿ ಓಲಾಡುತ್ತಿತ್ತು. ಆದರೆ ಹೊಟ್ಟೆ ಅದಕ್ಕೆ ತಕ್ಕಂತೆ ತಾಳ ಹಾಕುವಂತಿರಲಿಲ್ಲ. ಮಡದಿಯ ಸುಳಿವೇ ಇಲ್ಲ. ಅಷ್ಟರಲ್ಲಿ, ಪದುಮಳು ಬಂದಳು ಕೈಯಲ್ಲಿ ಕೊತ್ತಂಬರಿ ಶಿವುಡು ಹಿಡಿದು, ಬಾಯಲ್ಲಿ ಪೊಲೀಸರ ಗುಣಗಾನ.

‘ಈ ಪೊಲೀಸರದು ಅತಿಯಾಯ್ತು. ಕಂಡಲ್ಲೆಲ್ಲಾ, ಕಂಡವರಿಂದ, ಕಂಡಾಪಟ್ಟೆ ದಂಡ ವಸೂಲಿಯೇನೋ ಸರಿ, ಅದು ಸರ್ಕಾರದ ಬೊಕ್ಕಸ ತುಂಬಿಸುವ ಕ್ರಮ. ಇವರಿಗೆ ನಮ್ಮಂತಹ ಹೆಣ್ಣು ಮಕ್ಕಳ ಮೇಲೇಕೆ ಕಣ್ಣು…?’

ಹಸಿವೆಯಿಂದ ತತ್ತರಿಸಿದ್ದ ತಿಂಗಳೇಶ ಅವಳ ರೌದ್ರಾವತಾರ ಕಂಡು ಬೆದರಿದ. ‘ಏನಾಯ್ತು…?’ ಎಂದು ಕೇಳಲು ಹೋಗಿ, ‘ಜಾಲಿಬಾಗ್… ಜಾವೆಲಿನ್‌ವಾಲಾ… ಜನವಾಲಾ… ಅದಕ್ಕಿನ್ನ ಹೀನವಾದ ಪರಿಸ್ಥಿತಿ…’ ಎಂದು ತನ್ನ ಹೊಟ್ಟೆ ಮುಟ್ಟಿಕೊಂಡು ಏನೇನೋ ಬಡಬಡಿಸಿದ.

‘ಅಲ್ರೀ… ಪೊಲೀಸರಿಗೆ ತರಕಾರಿ ಮಾರೋರ ಮೆಗಾ ಫೋನ್ ಕಿತ್ತುಕೊಳ್ಳಲು ಯಾರು ಅಧಿಕಾರ ಕೊಟ್ಟದ್ದು? ತರಕಾರಿ ಮಾರೋರು ತಂತ್ರಜ್ಞಾನ ಅಳವಡಿಸಿಕೊಂಡರೆ ತಪ್ಪೇನು? ನಮ್ಮ ಮಾರಣ್ಣ ಮೆಗಾಫೋನ್‌ನಲ್ಲಿ ತಾನು ತಂದ ತಾಜಾ ತರಕಾರಿ ಹೆಸರು ಕೂಗದಿದ್ದರೆ ಒಳಗೆ ಕೆಲಸದಲ್ಲಿ ಮಗ್ನಳಾದ ನನಗೆ ಆತ ಬಂದದ್ದು ಹೇಗೆ ಗೊತ್ತಾಗಬೇಕು? ತಿಂಡಿ ಲೇಟಾಯ್ತು ಅಂತ ನನ್ನ ಮೇಲೆ ರೇಗಬೇಡಿ!’

ಸಂಗತ

ಮನೆಯೆಂಬ ಸಂಸ್ಕಾರದ ಪಾಠಶಾಲೆ

ಉತ್ತಮ ಸಂಸ್ಕಾರವನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುವುದು ಪೋಷಕರ ಹೊಣೆ

● ನಳಿನಿ ಟಿ. ಭೀಮಪ್ಪ

‘ಲೇ… ಈ ಟಿಕೆಟ್ ಹೆಂಗೆ ಸ್ಕ್ಯಾನ್ ಮಾಡ್ತಾರೆ?’ ಅಂತ ಆ ಹುಡುಗಿ, ಸ್ಕ್ಯಾನ್ ಮಾಡಿಕೊಂಡು ಮುಂದೆ ಹೋದ ಗೆಳತಿಯನ್ನು ಕೇಳುತ್ತಾ, ಅಲ್ಲಿಯೇ ತಡವರಿಸುತ್ತ ನಿಂತದ್ದು ಕಂಡುಬಂದಿದ್ದು ಹುಬ್ಬಳ್ಳಿ- ಧಾರವಾಡದ ನಡುವೆ ಸಂಚರಿಸುವ ‘ಚಿಗರಿ’ ಬಸ್‌ಸ್ಟಾಪಿನಲ್ಲಿ. ‘ಆ ಪ್ಲಸ್ ಚಿಹ್ನೆ ಮೇಲೆ ಟಿಕೆಟ್ ಇಡ್ವಾ, ಡೋರ್ ಓಪನ್ ಆಕ್ಕೇತಿ’ ಅಂತ ಗೆಳತಿ ಹೇಳಿದ ಮೇಲೆ, ಅದೇ ತರಹ ಮಾಡಿಬಂದು ಇವಳ ಜೊತೆಯಾದಳು.

‘ನಾ ಎಂದೂ ಬಸ್ಸಿಗೆ ಓಡಾಡೇ ಇಲ್ಲ ಕಣ್ಲೇ, ಏನಿದ್ರೂ ಕಾರ್, ಫ್ಲೈಟ್ ಮಾತ್ರ’ ಎಂದವಳು ಹೇಳಿದಾಗ, ಮತ್ತೊಬ್ಬಳು ‘ಎಲ್ಲಾ ಗೊತ್ತಿರಬೇಕ್ಲೇ’ ಅಂತ ಹೇಳುತ್ತಿದ್ದಳು. ಆ ಕಾಲೇಜು ಹುಡುಗಿಯರ ಮಾತು ನಗು ತರಿಸುತ್ತಿತ್ತು. ಇವೆಲ್ಲಾ ತುಂಬಾ ಸಾಮಾನ್ಯ ಸಂಗತಿಗಳು ಎನಿಸಿದರೂ ಇಂತಹ ಹೊರಗಿನ ಅನುಭವಗಳಿಗೆ ಪೋಷಕರು ಆಗಾಗ ಮಕ್ಕಳನ್ನು ಪಕ್ಕಾ ಮಾಡುತ್ತಿದ್ದರೆ ಒಳಿತು ಎನಿಸಿದ್ದು ಸುಳ್ಳಲ್ಲ.

ಎಷ್ಟೋ ಮನೆಗಳಲ್ಲಿ ಮಕ್ಕಳಿಗೆ ಮನೆಯಲ್ಲಿನ ಸಾಮಾನ್ಯ ವಿಷಯಗಳ ಬಗ್ಗೆ ಗೊತ್ತೇ ಇರುವುದಿಲ್ಲ. ಕರೆಂಟ್ ಚಾರ್ಜ್, ನೀರಿನ ಬಿಲ್ಲು, ಫೋನ್ ಬಿಲ್ಲು, ಬ್ಯಾಂಕಿನ ವ್ಯವಹಾರ, ಸಣ್ಣ ಪುಟ್ಟ ಹಣದ ವ್ಯವಹಾರ, ಮನೆಯ ಖರ್ಚು ವೆಚ್ಚದಂತಹ ಸಂಗತಿಗಳನ್ನು ಪೋಷಕರು ಮಕ್ಕಳಿಗೆ ತಿಳಿಸುವ ಗೋಜಿಗೇ ಹೋಗುವುದಿಲ್ಲ. ಅಷ್ಟೇ ಯಾಕೆ, ಮನೆಯ ಬಾಡಿಗೆ, ಗ್ಯಾಸ್ ಕನೆಕ್ಷನ್, ನಳದ ವಾಲ್ವ್, ಸೆಪ್ಟಿಕ್ ಟ್ಯಾಂಕ್, ಬೋರ್‌ವೆಲ್ ಕನೆಕ್ಷನ್‌ಗಳ ಬಗ್ಗೆ… ಊಹ್ಞೂಂ… ಇವುಗಳ ಬಗ್ಗೆಯಂತೂ ಕೇಳಲೇಬೇಡಿ.

ಇನ್ನು ತಮ್ಮ ಮನೆಯ ಹೆಬ್ಬಾಗಿಲು ಯಾವ ದಿಕ್ಕಿಗೆ ಇದೆ ಅಂತಾನಾದ್ರೂ ಗೊತ್ತಿದೆಯಾ ಈಗಿನ ಮಕ್ಕಳಿಗೆ? ಸ್ವಿಚ್ ಒತ್ತಿದರೆ ಕರೆಂಟ್, ನಲ್ಲಿ ತಿರುಗಿಸಿದರೆ ಬಿಸಿನೀರು, ಕರೆನ್ಸಿ, ಬ್ಯಾಕಪ್, ಬೇಕಿದ್ದನ್ನು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿ ತರಿಸಿಕೊಳ್ಳುವ ಸೌಕರ್ಯ, ಪಾಕೆಟ್ ಮನಿ, ಫೋನ್ ಪೇ, ಗೂಗಲ್ ಪೇ, ಎಟಿಎಮ್ ಕಾರ್ಡುಗಳ ಮೂಲಕ ಸರಾಗವಾಗಿ ಹಣ ವರ್ಗಾವಣೆಯ ಸವಲತ್ತು ಸಿಗುವುದರಿಂದ ಅದರ ಮಹತ್ವ ಅರಿತವರು ಕಡಿಮೆ. ದುಡ್ಡು ಕೊಟ್ಟು ಅಂಗಡಿಯಿಂದ ಏನಾದರೂ ತಾ ಎಂದರೆ ತಡವರಿ-ಸುತ್ತವೆ. ಎಷ್ಟು ಬೆಲೆ, ಉಳಿದ ಚಿಲ್ಲರೆಯ ಬಗ್ಗೆಯೆಲ್ಲಾ ತಲೆಕೆಡಿಸಿಕೊಳ್ಳುವುದೇ ಇಲ್ಲ. ‘ಅಂಗಡಿಯವನು ಕೊಟ್ಟ, ನಾ ತಂದೆ’ ಅಷ್ಟೇ.

ಹೊರಗೆ ಹೋಗುವಾಗ ಮಕ್ಕಳಿಗೆ ತಿಳಿಸಿ ಹೋಗದೇ ಇರುವ ತಂದೆ ತಾಯಿ ಎಷ್ಟೋ ಜನ ಇದ್ದಾರೆ. ಅದೆಲ್ಲಾ ಮಕ್ಕಳಿಗ್ಯಾಕೆ ಹೇಳಬೇಕು ಎನ್ನುವ ಉಡಾಫೆ. ಕೆಲವು ಮನೆಗಳಲ್ಲಿ ಮಕ್ಕಳು ಕುತೂಹಲದಿಂದ ವಿಚಾರಿಸಿದರೂ ಹೇಳದಿದ್ದಾಗ ಮಕ್ಕಳೂ ಮುಂದೆ ಹಾಗೇ ನಡೆಯುವ ಸಂಭವವಿರು-ತ್ತದೆಯಲ್ಲವೇ?

ಇನ್ನು ಮನೆಗೆ ಬಂದ ಅತಿಥಿಗಳಿಗೆ ತಾವೇ ಬಾಗಿಲು ತೆರೆದರೂ ಮುಖ ತಿರುಗಿಸಿಕೊಂಡು ‘ಅಮ್ಮಾ, ಯಾರೋ ಬಂದಿದ್ದಾರೆ’ ಅಂತ ಹೇಳಿ ಒಳಹೋಗಿ ಬಿಡುತ್ತಾರೆ. ತಂದೆ ತಾಯಿ ಅವರನ್ನು ಆದರಿಸುತ್ತಿದ್ದರೂ ತಮ್ಮ ಪಾಡಿಗೆ ತಾವು ಟಿ.ವಿ. ನೋಡುವುದರ-ಲ್ಲಿಯೋ, ಮೊಬೈಲು ತೀಡುವುದರಲ್ಲಿಯೋ ಮಗ್ನರಾಗಿರುತ್ತಾರೆ. ಅವರೆಡೆಗೆ ಒಂದು ಸ್ನೇಹಪರ ನೋಟ, ಮುಗುಳ್ನಗೆಯ ವಿನಿಮಯ, ಚೆನ್ನಾಗಿದ್ದೀರಾ ಎಂದು ಕೇಳುವ ಔಪಚಾರಿಕತೆ, ಯಾವುದೆಂದರೆ ಯಾವುದೂ ಇಲ್ಲ. ಬಂದವರೇ ಅವರನ್ನು ಮಾತನಾಡಿಸಿದರೂ ಹ್ಞೂಂ, ಉಹ್ಞೂಂ… ಎನ್ನುವುದರಲ್ಲಿಯೇ ಮಾತು ಮುಗಿಸಿಬಿಡುವುದುಂಟು. ಇದು ಅಸಭ್ಯತೆ ಹಾಗೂ ಅನಾಗರಿಕ ನಡವಳಿಕೆ. ವಿಚಿತ್ರ ಎಂದರೆ ಪೋಷಕರ ಗಮನಕ್ಕೆ ಇವೆಲ್ಲಾ ಬರುತ್ತಿದ್ದರೂ ತಿದ್ದುವ ಗೊಡವೆಗೆ ಹೋಗುವುದಿಲ್ಲ. ‘ಅಯ್ಯೋ, ನಮ್ಮ ಮಗ ಹಿಂಗೇ, ಈಗಿನ ಕಾಲದ ಮಕ್ಳು ಯಾರ ಮಾತು ಕೇಳ್ತಾರೆ ಹೇಳಿ’ ಎಂದು ತಿಪ್ಪೆ ಸಾರಿಸಿಬಿಡುವ ಜನರೇ ಹೆಚ್ಚು. ಹೀಗಾದರೆ ಸಾಮಾಜಿಕವಾಗಿ ಎಲ್ಲರೊಡನೆ ಬೆರೆಯುವ ಗುಣ ಕಲಿಯುವುದು ಹೇಗೆ?



ಹಿಂದೆಲ್ಲಾ ಮನೆಗೆ ಅತಿಥಿಗಳು ಬಂದಾಗ, ‘ಚೆನ್ನಾಗಿದ್ದೀರಾ, ಬನ್ನಿ ಒಳಗೆ, ಕುಳಿತುಕೊಳ್ಳಿ, ದೊಡ್ಡವರನ್ನು ಕರೆಯುತ್ತೇವೆ, ನೀರು ಬೇಕಾ’ ಅಂತೆಲ್ಲ ಕೇಳಿಯೇ ಒಳಗೆ ಹೋಗುತ್ತಿದ್ದುದು. ಹಾಗೆ ಮಾಡದಿದ್ದರೆ ಹಿರಿಯರ ಗಮನಕ್ಕೆ ಸಲೀಸಾಗಿ ಬಂದು ‘ಮನೆಗೆ ಬಂದವರನ್ನು ಹೀಗಾ ನೋಡಿಕೊಳ್ಳುವುದು’ ಎಂದು ಅವರು ಹೋದ ಮೇಲೆ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಮತ್ತೊಬ್ಬರ ಮನೆಗೆ ಹೋದಾಗಲೂ ಆ ಮನೆಯಲ್ಲಿ ಇದ್ದವರನ್ನೆಲ್ಲ ಒಂದು ರೌಂಡ್ ಮಾತನಾಡಿಸಿಯೇ ಮುಂದಿನ ಕೆಲಸ. ಇಲ್ಲದಿದ್ದರೆ ‘ಏನು ಕಲಿಸಿದ್ದೀಯವ್ವಾ ಮಕ್ಕಳಿಗೆ’ ಎನ್ನುವ ಮಾತು ಬಂದುಬಿಡುತ್ತಿತ್ತು. ಅದು ಒಂದು ರೀತಿಯಲ್ಲಿ ಹಿರಿಯರ ಬಗ್ಗೆ ಗೌರವ, ಕಿರಿಯರ ಬಗ್ಗೆ ಪ್ರೀತಿ, ಸಮವಯಸ್ಕರ ಬಗ್ಗೆ ಸ್ನೇಹದ ಭಾವನೆ ಮೂಡಿಸುವಲ್ಲಿ ಸಹಾಯಕವಾಗುತ್ತಿತ್ತು.

ಆಯಾ ವಯಸ್ಸಿಗನುಗುಣವಾಗಿ ಮಕ್ಕಳಿಗೆ ತಿಳಿವಳಿಕೆ ಕೊಡುತ್ತಾ ಹೋಗಬೇಕು. ಚಿಕ್ಕವರಿ-ದ್ದಾಗಿನಿಂದಲೇ ಇದಕ್ಕೆ ಅಡಿಪಾಯ ಹಾಕಬೇಕು. ಉತ್ತಮ ಸಂಸ್ಕಾರವನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುವುದಕ್ಕೆ ಈ ರೀತಿಯ ಮನೆಯ ಆಗುಹೋಗುಗಳು, ಸಾಮಾನ್ಯಜ್ಞಾನ, ಸಂವಹನ ಕೌಶಲದ ಬಗ್ಗೆ ಪೋಷಕರು ಎಚ್ಚರ ವಹಿಸಿದರೆ, ಮುಂದಿನ ಭಾವೀ ಪ್ರಜೆಗಳಿಗೆ ಒಳ್ಳೆಯ ಸಂಸ್ಕಾರ ಕೊಟ್ಟ ಸಮಾಧಾನವಿರುತ್ತದೆ.

ವಾಚಕರ ವಾಣಿ

ನಾಡಗೀತೆ: ತರಾತುರಿ ಏಕೆ?

ನಾಡಗೀತೆ ಹಾಡುವ ಧಾಟಿ ಹೇಗಿರಬೇಕು ಮತ್ತು ಎಷ್ಟು ಸಮಯ ಹಾಡಬೇಕೆಂಬ ಬಗ್ಗೆ ಸರ್ಕಾರ ರಚಿಸಿರುವ ಸಮಿತಿ, ಈ ಸಂಬಂಧ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನೀಡಿರುವುದು ವರದಿಯಾಗಿದೆ. ನಾಡಗೀತೆಯ ಬಗ್ಗೆ ಬಹಳಷ್ಟು ಚರ್ಚೆ ನಡೆದು ನಂತರ ಅಂತಿಮಗೊಳಿಸಿದ್ದು, ಒಂದು ಜನಪ್ರಿಯ ಧಾಟಿಯಲ್ಲಿ ಹಾಡಲಾಗುತ್ತಿದೆ. ಹೀಗಿರುವಾಗ ಅದರ ಬಗ್ಗೆ ಸಲಹೆ ನೀಡಲು ಹೊಸದಾಗಿ ಸಮಿತಿ ರಚಿಸುವ ಅಗತ್ಯವೇನಿತ್ತು? ಯಾವುದೇ ಸಮಿತಿ ರಚನೆಯಾದಾಗ ಅದು ಸಾರ್ವಜನಿಕರ ಅಭಿಪ್ರಾಯ ಪಡೆದು ಅದರ ಆಧಾರದಲ್ಲಿ ವರದಿ ನೀಡಬೇಕು. ಆದರೆ ಈ ಸಮಿತಿ ತರಾತುರಿಯಲ್ಲಿ ವರದಿ ನೀಡಿದೆ. ಇಂಥ ತುರ್ತು ಬೇಕಿರಲಿಲ್ಲ.

ಈ.ಬಸವರಾಜು, ಬೆಂಗಳೂರು

ಪಿಎಂ ಕೇರ್ಸ್: ಪಾರದರ್ಶಕತೆ ಅಗತ್ಯ

‘ಪಿಎಂ ಕೇರ್ಸ್’ ನಿಧಿಗೆ ಸಂಬಂಧಿಸಿದ ಮಾಹಿತಿಯನ್ನು ಸರ್ಕಾರ ಮುಚ್ಚಿಡುವುದು ಸರಿಯಲ್ಲ. ಈ ನಿಧಿ ಸ್ಥಾಪಿಸಿರುವ ಬಗ್ಗೆ ಪ್ರಧಾನಿಯು ಮಾಹಿತಿ ನೀಡಿ, ದೇಣಿಗೆ ನೀಡುವಂತೆ ಮನವಿ ಮಾಡಿದಾಗ ಬಹಳಷ್ಟು ಸಾರ್ವಜನಿಕರು ಮತ್ತು ಉದ್ಯಮ ಸಂಸ್ಥೆಗಳು ಕೋಟಿಗಟ್ಟಲೆ ಹಣ ದೇಣಿಗೆ ನೀಡಿವೆ. ಈ ಹಣ ಕೋವಿಡ್‌ನಂತಹ ಮಹಾಮಾರಿಯ ವಿರುದ್ಧ ಹೋರಾಡಲು ಉಪಯೋಗ ಆಗಬೇಕೆಂಬ ಸದುದ್ದೇಶ ದಾನಿಗಳಿಗೆ ಇತ್ತು. ತಾವು ಕೊಟ್ಟ ಹಣ ಒಳ್ಳೆಯ ಕೆಲಸಕ್ಕೆ ವಿನಿಯೋಗ ಆಗಿದೆ ಎಂದರೆ ಕೊಟ್ಟವರಿಗೆ ಆತ್ಮಸಂತೃಪ್ತಿ ಸಿಗುತ್ತದೆ ಮತ್ತು ಇನ್ನೊಮ್ಮೆ ದೇಣಿಗೆ ನೀಡಲು ಮನಸ್ಸು ಬಯಸುತ್ತದೆ.

ಪ್ರಧಾನಿ ನರೇಂದ್ರ ಮೋದಿಯವರೇ ಈ ನಿಧಿಯ ಪದನಿಮಿತ್ತ ಅಧ್ಯಕ್ಷರಾಗಿದ್ದು, ಪ್ರಧಾನಿ ಕಾರ್ಯಾಲಯವೇ ನಿಧಿಯನ್ನು ನಿರ್ವಹಣೆ ಮಾಡುವಾಗ ಪಾರದರ್ಶಕತೆ ಕಾಪಾಡಲೇಬೇಕು. ವಿರೋಧಿಗಳು ಲೆಕ್ಕ ಕೇಳುತ್ತಾರೆ, ಅವರಿಗೇನು ಲೆಕ್ಕ ಕೊಡುವುದು ಎಂಬ ಧೋರಣೆ ಸಲ್ಲ. ಸದುದ್ದೇಶದಿಂದ ಕೊಟ್ಟ ದೇಣಿಗೆಯು ದುರ್ಬಳಕೆ ಆಗಿರಬಹುದೇ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಲು ಎಡೆ ಮಾಡಿಕೊಡುವುದು ಒಳ್ಳೆಯ ಲಕ್ಷಣ ಅಲ್ಲ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ರಂಗಸಮಸ್ಯೆ: ಈಗಲಾದರೂ ಬಗೆಹರಿಯಲಿ

‘ಕಲಾಪ್ರದರ್ಶನಕ್ಕಿಲ್ಲ ಸುಸಜ್ಜಿತ ರಂಗಮಂದಿರ’ ಎಂಬ ಸಾಂಸ್ಕೃತಿಕ ವರದಿಯಲ್ಲಿನ (ಪ್ರ.ವಾ., ಅ. 4) ಕಳಕಳಿ ಸ್ವಾಗತಾರ್ಹ. ಆದರೆ ಈ ರಂಗಬೇಡಿಕೆಗಳು ಲಾಗಾಯ್ತಿನಿಂದಲೂ ಪುನರಾವರ್ತನೆಯ ಪ್ರಸ್ತಾವವೇ ಆಗಿವೆ ಎಂಬುದಕ್ಕೆ ನಿರ್ದಿಷ್ಟ ರಂಗದಾಖಲೆಗಳು ಇವೆ. ಈ ಕುರಿತು, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿ-ದ್ದ ಬಿ.ವಿ.ವೈಕುಂಠರಾಜು ಅವರು 1985ರ ಏ. 14ರಂದು ಬರೆದಿರುವ ಲೇಖನದಲ್ಲಿ ಪ್ರಸ್ತಾಪಿಸಿರುವ ಅಂಶಗಳು ಹೀಗಿವೆ: ‘1984ರ ಮಾರ್ಚ್ 28ರಂದು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳನ್ನು ದೇ.ಜ.ಗೌ., ಚನ್ನವೀರ ಕಣವಿ ಮುಂತಾದವರಿಗೆ ಪ್ರದಾನ ಮಾಡಿ ಮಾತನಾಡಿದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು, ನಾಟಕ ಅಕಾಡೆಮಿ ಸೇರಿದಂತೆ 6 ಅಕಾಡೆಮಿಗಳಿಗೆ ಸಮುಚ್ಚಯ ನಿರ್ಮಿಸಲು ಚಿಂತಿಸಿದ್ದು ಅಧಿಕಾರಿಗಳಿಗೆ ಸೂಚಿಸಲಾಗಿದೆ, ನಾಟಕ ಅಕಾಡೆಮಿಯ ಮಹತ್ವದ ಯೋಜನೆಯಾದ ಜಿಲ್ಲಾ ರಂಗಮಂದಿರಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು. ಆದರೆ ಜನತಾ ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡು ವರ್ಷಗಳಾದರೂ ಯಾವುದೇ ಕೆಲಸ ಮಾಡಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲವು ನೌಕರರನ್ನು ನೇಮಿಸಿಕೊಂಡಿರುವ ಸರ್ಕಾರ ಇನ್ನೂ ಅವರನ್ನು ಕಾಯಂಗೊಳಿಸಿಲ್ಲ. ಹಿಂದಿನ ಮುಖ್ಯಮಂತ್ರಿ ಗುಂಡೂರಾಯರು ಕಲಾವಿದರ ಕುರಿತು ನೈಜ ಕಾಳಜಿ ಹೊಂದಿದ್ದರು. ಸಂಸ್ಕೃತಿ ಇಲಾಖೆಗೆ ಹೆಚ್ಚಿನ ಹಣ ಮಂಜೂರು ಮಾಡಿದ್ದರು. ಕೆಲಸ ಆಗದ ಕಾರಣ ಆ ಹಣ ಖಜಾನೆಯಲ್ಲಿಯೇ ಉಳಿದಿರುವುದು ಹೆಗಡೆ ಅವರಿಗೆ ತಿಳಿದಿಲ್ಲವೇ? ಸಾಂಸ್ಕೃತಿಕವಾಗಿ ಸರ್ಕಾರಕ್ಕೆ ಸ್ಪಷ್ಟತೆ ಇಲ್ಲದಿದ್ದರೆ ಹೇಗೆ? ನೂರು ಬಾರಿ ಹೇಳಿದರೂ ಕೇಳದ ಕೆಪ್ಪೆ? ಕಾಣದ ಕುರುಡೆ? ಕೇವಲ ಎರಡು ವರ್ಷಗಳಲ್ಲಿ ಹೆಗಡೆಯವರು ತುಂಬಾ ಬೆಳೆದಿದ್ದಾರೆ. ಕರ್ನಾಟಕವನ್ನು ಎತ್ತರಕ್ಕೆ ಕೊಂಡೊಯ್ಯುವುದಕ್ಕೆ ಅವರು ಪ್ರಯತ್ನಿಸಬೇಕು’.

ಈ ವಯೋವೃದ್ಧ ಸಮಸ್ಯೆಗಳು ಈಗಲಾದರೂ ಬಗೆಹರಿಯಲಿ. ಜೊತೆಗೆ ಹೊಸ ರಂಗಸಮಸ್ಯೆಗಳು, ಸವಾಲುಗಳು ಮತ್ತು ಯುವರಂಗದ ಬೇಡಿಕೆಗಳತ್ತ ಕೂಡ ಸರ್ಕಾರ ಗಮನಹರಿಸಲಿ.

ಆರ್.ವೆಂಕಟರಾಜು, ಬೆಂಗಳೂರು

ವಾಮಾಚಾರ: ಬೇಕು ಜನಜಾಗೃತಿ

ವಾಮಾಚಾರ ಮಾಡಿಸಿದರೆ ಸಮಸ್ಯೆಗಳು ಪರಿಹಾರವಾಗುತ್ತವೆ ಎಂಬುದಾಗಿ ಮಹಿಳೆಯೊಬ್ಬರನ್ನು ನಂಬಿಸಿ, ಪೂಜೆ ನೆಪದಲ್ಲಿ ಹಂತ ಹಂತವಾಗಿ ₹ 4.41 ಕೋಟಿಯಷ್ಟು ಬಹುದೊಡ್ಡ ಮೊತ್ತದ ವಂಚನೆಗೆ ಕಾರಣವಾದದ್ದು (ಪ್ರ.ವಾ., ಅ. 6) ಆಶ್ಚರ್ಯವೆನಿಸುತ್ತದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಪರಿಹಾರ ಮಾಡಿಕೊಳ್ಳಬಹು-ದಾದಷ್ಟು ದೊಡ್ಡ ಸಮಸ್ಯೆಗಳಿವೆಯೇ? ಇಂಥ ಸಮಸ್ಯೆಗಳಿಗೆ ವಾಮಾಚಾರದಲ್ಲಿ ಪರಿಹಾರ ಸಾಧ್ಯವೇ? ಅಷ್ಟಕ್ಕೂ ವಾಮಾಚಾರ ಎಂಬುದು ನಿಜವೇ? ಇಂಥ ಅನೇಕ ಪ್ರಶ್ನೆಗಳಿಗೆ ಈ ಘಟನೆಯಿಂದ ಉತ್ತರ ಕಂಡುಕೊಳ್ಳಬೇಕಿದೆ.

ಮಾಟ, ಮಂತ್ರ ವಾಮಾಚಾರದಂತಹ ಮೌಢ್ಯಗಳನ್ನು ನಂಬುವಂಥ ಅನಿಷ್ಟ ಪದ್ಧತಿಗೆ ವಿದ್ಯಾವಂತರು, ಹಣವಂತರು, ಬಡವರು ಎಲ್ಲರೂ ಬಲಿಯಾಗುತ್ತಿದ್ದಾರೆ. ವಿಜ್ಞಾನ- ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆಯ ಉತ್ತುಂಗ ತಲುಪಿರುವ ಇಂದಿನ ಸಮಾಜ, ವಾಮಾಚಾರವನ್ನು ನಂಬುವಂತಹ ಮನಃಸ್ಥಿತಿಯನ್ನು ಇನ್ನೂ ಉಳಿಸಿಕೊಂಡಿರುವುದು ವಿಷಾದನೀಯ. ನಮ್ಮ ಎಲ್ಲ ಸಾಮಾಜಿಕ ಸಮಸ್ಯೆಗಳ ಪರಿಹಾರವು ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವದಿಂದ ಮಾತ್ರ ಸಾಧ್ಯ ಎನ್ನುವುದಕ್ಕೆ ಅನೇಕ ನಿದರ್ಶನಗಳಿವೆ. ಮೌಢ್ಯ ಆಧಾರಿತ ಪ್ರಕರಣಗಳ ವಿರುದ್ಧ ದೂರು ದಾಖಲಿಸಬಹುದು, ವಂಚಕರಿಗೆ ಶಿಕ್ಷೆಯಾಗಬಹುದು, ಕಳೆದುಕೊಂಡ ಹಣ ಕೂಡ ವಾಪಸ್ ಸಿಗಬಹುದು. ಆದರೆ, ಮೌಢ್ಯಗಳನ್ನು ನಂಬಿ ಮೋಸ ಹೋಗುವುದು ಒಂದು ಸಾಮಾಜಿಕ ಸಮಸ್ಯೆಯಾಗಿರುವುದರಿಂದ, ಈ ಪಿಡುಗನ್ನು ಕೊನೆಗಾಣಿಸಲು, ಅಮಾನವೀಯ ದುಷ್ಟ ಪದ್ಧತಿ, ವಾಮಾಚಾರ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ– 2017ರ ಪ್ರಕಾರ, ವಾಮಾಚಾರ ಶಿಕ್ಷಾರ್ಹ ಅಪರಾಧ ಎಂಬುದನ್ನು ಸರ್ಕಾರವು ಮಾಧ್ಯಮ ಪ್ರಕಟಣೆಗಳ ಮೂಲಕ ವ್ಯಾಪಕವಾಗಿ ಪ್ರಚಾರ ಮಾಡಿ ಜನರಲ್ಲಿ ತಿಳಿವಳಿಕೆ ಮತ್ತು ಜಾಗೃತಿ ಮೂಡಿಸಬೇಕು. ಆ ಮೂಲಕ ವೈಜ್ಞಾನಿಕ ಚಿಂತನೆಯ ಮನೋವೃತ್ತಿಯುಳ್ಳ ಸಮಾಜವನ್ನು ಸೃಷ್ಟಿ ಮಾಡುವುದೇ ನಿಜವಾದ ಪರಿಹಾರ ಹೊರತು, ಕಣ್ಣಿಗೆ ಕಾಣುವ ಒಂದೆರಡು ಪ್ರಕರಣಗಳನ್ನು ದಾಖಲಿಸುವುದರಿಂದ ಸಾಮಾಜಿಕ ಶಿಕ್ಷಣ ಪರಿಪೂರ್ಣವಾಗುವುದಿಲ್ಲ.


ಡಾ. ಜಿ.ಬೈರೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.


ದೇಶದಲ್ಲಿ ಶಿಕ್ಷಣದ ಸ್ಥಿತಿಗತಿ

‘ಶಿಕ್ಷಕರೂ ಇಲ್ಲ, ತರಗತಿಯೂ ಇಲ್ಲ’ (ನೋ ಟೀಚರ್, ನೋ ಕ್ಲಾಸ್) ಎಂಬ ಹೆಸರಿನಲ್ಲಿ ಭಾರತದಲ್ಲಿ ಶಿಕ್ಷಣದ ಸ್ಥಿತಿ 2021ರ ವರದಿಯನ್ನು ಯುನೆಸ್ಕೊ ಬಿಡುಗಡೆ ಮಾಡಿದೆ. ಕೋವಿಡ್ ಕಾಲದಲ್ಲಿ ಶಾಲಾ ಶಿಕ್ಷಣ ಸಂಪೂರ್ಣವಾಗಿ ಸ್ಥಗಿತವಾದ ಹಿನ್ನೆಲೆಯಲ್ಲಿ ವರದಿಗೆ ಈ ಹೆಸರು ಇರಿಸಲಾಗಿದೆ. ಕೋವಿಡ್ ಸಂದರ್ಭದಲ್ಲಿ ಬೋಧನೆ ಮತ್ತು ಕಲಿಕೆಯನ್ನು ಕೇಂದ್ರವಾಗಿ ಇರಿಸಿಕೊಂಡು ವರದಿಯನ್ನು ಸಿದ್ಧಪಡಿಸಲಾಗಿದೆ. ಶಾಲೆಗಳು ಸ್ಥಗಿತವಾದ ಕಾರಣ ಆನ್‌ಲೈನ್ ತರಗತಿಗಳಿಗೆ ಒತ್ತು ಕೊಡಲಾಗಿತ್ತು. ಹಾಗಾಗಿ, ಅಂತರ್ಜಾಲ, ಸ್ಮಾರ್ಟ್ ಫೋನ್ ಮತ್ತು ಇತರ ಸಂವಹನ ಸಾಧನಗಳ ಲಭ್ಯತೆಯ ಬಗ್ಗೆ ವರದಿಯು ಬೆಳಕು ಚೆಲ್ಲಿದೆ. ಶಿಕ್ಷಕರ ಸ್ಥಿತಿ ಹೇಗಿದೆ, ಶಾಲೆಗಳ ಮೂಲಸೌಕರ್ಯದ ಪರಿಸ್ಥಿತಿ ಬಗ್ಗೆಯೂ ವರದಿಯಲ್ಲಿ ವಿವರಗಳು ಇವೆ


ಶಾಲೆಗಳಲ್ಲಿ ಶೌಚಾಲಯಗಳ ಪ್ರಮಾಣ (ಶೇ)



- ಶಾಲೆಗಳು ಹೊಂದಿರಬೇಕಾದ ಅತಿಅಗತ್ಯ ಮೂಲಸೌಭ್ಯಗಳಲ್ಲಿ ಶೌಚಾಲಯ ಪ್ರಮುಖ. ದೇಶದ ಗ್ರಾಮೀಣ ಭಾಗದ ಶೇ 87 ಶಾಲೆಗಳಲ್ಲಿ ಬಾಲಕರಿಗೆ ಈ ಸೌಲಭ್ಯವಿದೆ. ನಗರ ಪ್ರದೇಶದಲ್ಲಿ ಈ ಪ್ರಮಾಣ ಶೇ 89. ಗ್ರಾಮೀಣ ಭಾಗದ 90ರಷ್ಟು ಶಾಲೆಗಳಲ್ಲಿ ಬಾಲಕಿಯರ ಶೌಚಾಲಯಗಳು ಇವೆ. ನಗರ ಪ್ರದೇಶದ ಶೇ 92ರಷ್ಟು ಶಾಲೆಗಳು ಈ ಸೌಲಭ್ಯ ಒದಗಿಸಿವೆ
- ಈಶಾನ್ಯ ರಾಜ್ಯವಾದ ಮೇಘಾಲಯವು ಈ ವಿಚಾರದಲ್ಲಿ ಉಳಿದೆಲ್ಲ ರಾಜ್ಯಗಳಿಗಿಂತ ಹಿಂದಿದೆ. ಜೊತೆಗೆ ಆಂಧ್ರ ಪ್ರದೇಶ, ರಾಜಸ್ಥಾನ, ಛತ್ತೀಸಗಡ ರಾಜ್ಯಗಳಲ್ಲಿ ಇನ್ನೂ ಸುಧಾರಣೆ ಕಾಣಬೇಕಿದೆ
- ಚಂಡೀಗಡ, ಗೋವಾ, ಗುಜರಾತ್, ಬಿಹಾರ, ಕೇರಳ ರಾಜ್ಯಗಳ ಬಹುತೇಕ ಶಾಲೆಗಳಲ್ಲಿ ಶೌಚಾಲಯಗಳಿವೆ.




ತರಗತಿ ಕೋಣೆ ಹೇಗಿದೆ? (ಶೇ)



- ಕಲಿಕಾ ಕೋಣೆಗಳ ಸ್ಥಿತಿಗತಿ ದೇಶದ ವಿವಿಧ ರಾಜ್ಯಗಳಲ್ಲಿ ಭಿನ್ನವಾಗಿದೆ. ದೇಶದ ಒಟ್ಟಾರೆ ತರಗತಿ ಕೋಣೆಗಳ ಗುಣಮಟ್ಟ ಶೇ 65ರಷ್ಟಿದ್ದರೆ, ಕರ್ನಾಟಕದ ಪ್ರಮಾಣ ಶೇ 63 ಮಾತ್ರ. ದಮನ್ ದಿಯು ಎಲ್ಲಕ್ಕಿಂತ ಮುಂದಿದೆ. ಒಡಿಶಾ, ಪುದುಚೇರಿ ಗಮನಾರ್ಹ ಸಾಧನೆ ಮಾಡಿವೆ. ಆದರೆ ಈಶಾನ್ಯ ರಾಜ್ಯಗಳಲ್ಲಿ ಶಾಲಾ ಕೊಠಡಿಗಳ ಗುಣಮಟ್ಟ ಅಷ್ಟಾಗಿಲ್ಲ. ಪಶ್ಚಿಮ ಬಂಗಾಳವೂ ಒಳ್ಳೆಯ ತರಗತಿ ಕೋಣೆಗಳನ್ನು ಒದಗಿಸಲು ವಿಫಲವಾಗಿದೆ

ಆಧಾರ: ಯುನೆಸ್ಕೋದ ಭಾರತದ ಶೈಕ್ಷಣಿಕ ವರದಿ–2021




ಕರ್ನಾಟಕದಲ್ಲಿ ಏಕ ಶಿಕ್ಷಕ ಶಾಲೆಗಳ ಪ್ರಮಾಣ

ಅವುಗಳ ಪೈಕಿ ಗ್ರಾಮೀಣ ಪ್ರದೇಶದಲ್ಲಿ ಇರುವ ಶಾಲೆಗಳ ಪ್ರಮಾಣ

ಸ್ಮಾರ್ಟ್‌ಫೋನ್ ಬಳಕೆ


ಸ್ಮಾರ್ಟ್‌ಫೋನ್ ಬಳಕೆ ವಿಷಯವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶದ ನಡುವೆ ವ್ಯತ್ಯಾಸ ಕಡಿಮೆ ಇದೆ. ಶಿಕ್ಷಕ–ಶಿಕ್ಷಕಿಯರಲ್ಲೂ ಹೆಚ್ಚಿನ ವ್ಯತ್ಯಾಸ ಇಲ್ಲ. ಶೇ 97ರಷ್ಟು ಶಿಕ್ಷಕರು ಹಾಗೂ ಶೇ 95ರಷ್ಟು ಶಿಕ್ಷಕಿಯರು ಸ್ಮಾರ್ಟ್‌ಫೋನ್ ಹೊಂದಿದ್ದಾರೆ. ಆದರೆ, ಮನೆಯಲ್ಲಿ ಕಂಪ್ಯೂಟರ್, ಲ್ಯಾಪ್‌ಟಾಪ್ ಬಳಕೆ ಮಾಡುತ್ತಿರುವ ಶಿಕ್ಷಕಿಯರ ಸಂಖ್ಯೆ (ಶೇ 67), ಶಿಕ್ಷಕರಿಗಿಂತ ಹೆಚ್ಚು (ಶೇ 56) ಇದೆ.

ಸ್ಮಾರ್ಟ್‌ಫೋನ್ ಹೊಂದಿದವರಲ್ಲಿ ವಯಸ್ಸಿನ ಭೇದ ಕಂಡುಬಂದಿಲ್ಲ. ಆದರೆ, ಇಂಟರ್‌ನೆಟ್ ಸೌಲಭ್ಯ ಪಡೆಯುವಲ್ಲಿ ವ್ಯತ್ಯಾಸ ಕಂಡುಬಂದಿದೆ. 49ಕ್ಕಿಂತ ಕಡಿಮೆ ವಯಸ್ಸಿನ ಶಿಕ್ಷಕರಲ್ಲಿ ಶೇ 78–ಶೇ 81ರಷ್ಟು ಮಂದಿ ಇಂಟರ್‌ನೆಟ್ ಬಳಕೆ ಮಾಡುತ್ತಾರೆ; 50 ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಶಿಕ್ಷಕರಲ್ಲಿ ಇಂಟರ್‌ನೆಟ್ ಬಳಕೆ ಪ್ರಮಾಣ ಶೇ 61ರಷ್ಟಿದೆ.




ಲ್ಯಾಪ್‌ಟಾಪ್, ಕಂಪ್ಯೂಟರ್, ಸ್ಮಾರ್ಟ್‌ಫೋನ್, ನಿಯಮಿತ ವಿದ್ಯುತ್ ಪೂರೈಕೆ ಸೌಲಭ್ಯ ಹಾಗೂ ಇಂಟರ್‌ನೆಟ್ ಸಂಪರ್ಕ ಪಡೆಯುವಲ್ಲಿ ನಗರ–ಗ್ರಾಮೀಣ ಶಾಲಾ ಶಿಕ್ಷಕರಲ್ಲಿ ವ್ಯತ್ಯಾಸ ಕಂಡುಬಂದಿದೆ.

ಶಾಲೆಗಳಲ್ಲಿ ಅಂತರ್ಜಾಲ ಸೌಲಭ್ಯ (ಶೇ)



- ಶಾಲೆಗಳಿಗೆ ಅಂತರ್ಜಾಲ ಒದಗಿಸುವ ವಿಚಾರದಲ್ಲಿ ಕರ್ನಾಟಕ ಭಾರಿ ಹಿಂದುಳಿದಿದೆ. ರಾಜ್ಯದ ಒಟ್ಟು ಶಾಲೆಗಳ ಪೈಕಿ ಶೇ 12ರಷ್ಟು ಶಾಲೆಗಳಲ್ಲಿ ಮಾತ್ರ ಈ ಸವಲತ್ತು ಇದೆ. ಗ್ರಾಮೀಣ ಭಾಗದ ಕೇವಲ ಶೇ 7ರಷ್ಟು ಹಾಗೂ ನಗರದ ಶೇ 25ರಷ್ಟು ಶಾಲೆಗಳು ಮಾತ್ರ ಇಂಟರ್ನೆಟ್ ಸಂಪರ್ಕದಲ್ಲಿವೆ. ದುರ್ಗಮ ಕಣಿವೆಗಳು ಹಾಗೂ ಆಗಾಗ್ಗೆ ಭಯೋತ್ಪಾದಕ ದಾಳಿ ಎದುರಿಸುವ ಜಮ್ಮು–ಕಾಶ್ಮೀರದಲ್ಲಿ ಈಗಾಗಲೇ ಶೇ 12ರಷ್ಟು ಶಾಲೆಗಳಿಗೆ ಇಂಟರ್‌ನೆಟ್ ಸೇವೆ ಒದಗಿಸಲಾಗಿದೆ.
- ಬಿಹಾರದಲ್ಲಿ ಶೇ 7ರಷ್ಟು, ಮಧ್ಯಪ್ರದೇಶದಲ್ಲಿ ಶೇ 11ರಷ್ಟು, ಆಂಧ್ರಪ್ರದೇಶದಲ್ಲಿ ಶೇ 17ರಷ್ಟು ಶಾಲೆಗಳು ಮಾತ್ರ ಸವಲತ್ತು ಪಡೆದಿದ್ದು ತೀರಾ ಹಿಂದುಳಿದಿವೆ. ತ್ರಿಪುರಾ, ಛತ್ತೀಸಗಡ, ಅಸ್ಸಾಂ, ಒಡಿಶಾ, ಪಶ್ಚಿಮ ಬಂಗಾಳದಲ್ಲಿ ಇಂಟರ್ನೆಟ್ ಸೌಲಭ್ಯ ತೀರಾ ಕಡಿಮೆ ಮಟ್ಟದಲ್ಲಿದೆ. ದೇಶದಾದ್ಯಂತ ಶೇ 19ರಷ್ಟು ಶಾಲೆಗಳಲ್ಲಿ ಮಾತ್ರ ಈ ಸವಲತ್ತು ಇದೆ

ಶಾಲೆಗಳಲ್ಲಿ ವಿದ್ಯುತ್ ಸಂಪರ್ಕ (ಶೇ)



- ಒಟ್ಟಾರೆ ಭಾರತದ ಶೇ 74ರಷ್ಟು ಶಾಲೆಗಳಲ್ಲಿ ವಿದ್ಯುತ್ ಸಂಪರ್ಕವಿದೆ. ಗ್ರಾಮೀಣ ಭಾಗದ ಶೇ 71ರಷ್ಟು ಹಾಗೂ ನಗರ ಭಾಗದ ಶೇ 91ರಷ್ಟು ಶಾಲೆಗಳು ಈ ಸೌಲಭ್ಯ ಪಡೆದಿವೆ. ಕರ್ನಾಟಕದ ಶೇ 89ರಷ್ಟು ಶಾಲೆಗಳಲ್ಲಿ ವಿದ್ಯುತ್ ಇದೆ.
- ತಮಿಳುನಾಡು, ಪಂಜಾಬ್, ಲಕ್ಷದ್ವೀಪ, ಚಂಡೀಗಡ, ದೆಹಲಿ, ಗೋವಾ, ಗುಜರಾತ್ ರಾಜ್ಯಗಳು ಶೇಕಡ ನೂರಕ್ಕೆ ನೂರರಷ್ಟು ಪ್ರಗತಿ ಸಾಧಿಸಿವೆ.



ಉಗ್ರರ ಗುಂಡಿಗೆ ಬಲಿಯಾದ ಶಿಕ್ಷಕಿ ಸತೀಂದರ್ ಕೌರ್ ಸಂಬಂಧಿಕರು ಘಟನೆಯಿಂದ ಆಘಾತಗೊಂಡಿದ್ದಾರೆ ರಾಯಿಟರ್ಸ್ ಚಿತ್ರ

ನಾಗರಿಕರೇ ಈಗ ಉಗ್ರರ ಗುರಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಸಂವಿಧಾನದ 370ನೇ ವಿಧಿ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನವನ್ನು 2019ರ ಆಗಸ್ಟ್‌ನಲ್ಲಿ ರದ್ದುಗೊಳಿಸಿದ ಬಳಿಕ ಕಾಶ್ಮೀರವು ಸಹಜ ಸ್ಥಿತಿಗೆ ಮರಳಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಆದರೆ, ಕಾಶ್ಮೀರದಲ್ಲಿ ನಿರಂತರವಾಗಿ ನಾಗರಿಕರ ಹತ್ಯೆ ಆಗುತ್ತಿರುವುದು ಬೇರೆಯದೇ ಚಿತ್ರಣ ನೀಡುತ್ತಿದೆ.

ಕಳೆದ ಐದು ದಿನಗಳಲ್ಲಿ ಏಳು ಮಂದಿಯನ್ನು ಉಗ್ರರು ಗುಂಡಿಟ್ಟು ಕೊಂದಿದ್ದಾರೆ. ಈ ವರ್ಷ ಈವರೆಗೆ ಕಣಿವೆಯಲ್ಲಿ ಉಗ್ರರ ಗುಂಡಿಗೆ ಬಲಿಯಾದ ನಾಗರಿಕರ ಸಂಖ್ಯೆ 25ಕ್ಕೂ ಹೆಚ್ಚು. 25 ನಾಗರಿಕರ ಜತೆಗೆ ಭದ್ರತಾ ಪಡೆಯ 20 ಸಿಬ್ಬಂದಿಯೂ ಹುತಾತ್ಮರಾಗಿದ್ದಾರೆ.

ಕೇಂದ್ರ ಸರ್ಕಾರದ ಜನಸಂಪರ್ಕ ಕಾರ್ಯತಂತ್ರದ ಭಾಗವಾಗಿ ಕೇಂದ್ರದ ಸಚಿವರು ಕಣಿವೆಗೆ ನಿರಂತರವಾಗಿ ಭೇಟಿ ನೀಡುತ್ತಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಇದೇ 23ರಿಂದ 25ರವರೆಗೆ ಕಾಶ್ಮೀರದಲ್ಲಿ ಇರಲಿದ್ದಾರೆ. ಹಾಗಾಗಿ, ಕಾಶ್ಮೀರ ಕಣಿವೆಯಲ್ಲಿ ಭದ್ರತೆಯನ್ನು ಗರಿಷ್ಠ ಮಟ್ಟಕ್ಕೆ ಏರಿಸಲಾಗಿದೆ. ಗರಿಷ್ಠ ಭದ್ರತೆ ಇದ್ದರೂ ಹತ್ಯೆಗಳು ನಡೆಯುತ್ತಿರುವುದು ಕಳವಳಕ್ಕೆ ಕಾರಣವಾಗಿದೆ.

ಹತ್ಯೆಯಾದವರಲ್ಲಿ 17 ಮಂದಿ ಬಹುಸಂಖ್ಯಾತ ಸಮುದಾಯದವರಾದರೆ ಎಂಟು ಮಂದಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು. ರಾಜಧಾನಿ ಶ್ರೀನಗರದಲ್ಲಿಯೇ 10 ಮಂದಿ ನಾಗರಿಕರ ಹತ್ಯೆ ಆಗಿದೆ. ಕುಲ್ಗಾಂ ಜಿಲ್ಲೆಯಲ್ಲಿ ಐವರು, ಪುಲ್ವಾಮಾ ಜಿಲ್ಲೆಯಲ್ಲಿ ನಾಲ್ವರು, ಬಾರಾಮುಲ್ಲಾ ಮತ್ತು ಅನಂತನಾಗ್ ಜಿಲ್ಲೆಗಳಲ್ಲಿ ತಲಾ ಇಬ್ಬರು ಉಗ್ರರ ಗುಂಡಿಗೆ ಬಲಿಯಾಗಿದ್ದಾರೆ.

ಭಯೋತ್ಪಾದಕ ಚಟುವಟಿಕೆಗಳ ಕೇಂದ್ರ ಸ್ಥಾನ ಎಂದೇ ಗುರುತಿಸಲಾಗುವ ಶೋಪಿಯಾನ್ ಜಿಲ್ಲೆಯಲ್ಲಿ ಈ ವರ್ಷ ಈ ವರೆಗೆ ನಾಗರಿಕರ ಹತ್ಯೆ ಆಗಿಲ್ಲ.

ಮುಖ್ಯಾಂಶಗಳು

- 33 ನಾಗರಿಕರು ಮತ್ತು 46 ಭದ್ರತಾ ಸಿಬ್ಬಂದಿ 2020ರಲ್ಲಿ ಬಲಿಯಾಗಿದ್ದಾರೆ
- 36 ನಾಗರಿಕರು ಮತ್ತು 78 ಭದ್ರತಾ ಸಿಬ್ಬಂದಿ 2019ರಲ್ಲಿ ಜೀವ ಕಳೆದುಕೊಂಡಿದ್ದಾರೆ

ಟಿಆರ್‌ಎಫ್ ಕೃತ್ಯ

ಪಾಕಿಸ್ತಾನ ಕೇಂದ್ರಿತವಾಗಿ ಕಾರ್ಯಾಚರಣೆ ನಡೆಸುವ ಲಷ್ಕರ್ ಎ ತಯಬಾ ಉಗ್ರಗಾಮಿ ಸಂಘಟನೆಯು ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಎಂಬ ಗುಂಪನ್ನು ಸ್ಥಾಪಿಸಿದೆ. ಈ ವರ್ಷ ಕಾಶ್ಮೀರದಲ್ಲಿ ಆಗಿರುವ ನಾಗರಿಕರ ಹತ್ಯೆಗಳ ಹೊಣೆಯನ್ನು ಟಿಆರ್‌ಎಫ್ ಹೊತ್ತುಕೊಂಡಿದೆ.

ಕಾಶ್ಮೀರಿ ಪಂಡಿತ ಸಮುದಾಯದ ಪ್ರಮುಖ ಉದ್ಯಮಿ ಮಖನ್ ಲಾಲ್ ಬಿಂದ್ರೂ ಮತ್ತು ಇತರ ಹತ್ಯೆಯ ಬಳಿಕ ಟಿಆರ್‌ಎಫ್ ಬುಧವಾರ ಹೇಳಿಕೆ ಬಿಡುಗಡೆ ಮಾಡಿದೆ. ಆರ್‌ಎಸ್‌ಎಸ್ ಮತ್ತು ಗುಪ್ತಚರ ಸಂಸ್ಥೆಗಳ ಪರವಾಗಿ ಕೆಲಸ ಮಾಡಿದ್ದಕ್ಕಾಗಿ ಈ ಮೂವರ ಹತ್ಯೆ ಮಾಡಲಾಗಿದೆ ಎಂದು ಹೇಳಿದೆ.

ಆದರೆ, ಟಿಆರ್‌ಎಫ್‌ನ ಹೇಳಿಕೆ ನಿಜವಲ್ಲ, ಬಿಂದ್ರೂ ಅವರು ಆರ್‌ಎಸ್‌ಎಸ್ ಪರವಾಗಿ ಕೆಲಸ ಮಾಡಿಲ್ಲ ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಮುಖ್ಯಸ್ಥ ದಿಲ್‌ಬಾಗ್ ಸಿಂಗ್ ಸ್ಪಷ್ಟಪಡಿಸಿದ್ದಾರೆ. ಟಿಆರ್‌ಎಫ್ ಕರಾಚಿಯಿಂದ ಕಾರ್ಯನಿರ್ವಹಿಸುತ್ತಿದೆ. ಅದನ್ನು ಮಟ್ಟ ಹಾಕುವ ಕೆಲಸ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

ನವಕಾಶ್ಮೀರ ನಿರ್ಮಾಣವಾಗಿದೆ ಎಂದು ಕೇಂದ್ರ ಹೇಳುತ್ತಿದ್ದರೂ ಇಲ್ಲಿ ನರಕಸೃಷ್ಟಿಯಾಗಿದೆ. ಚುನಾವಣಾ ಲಾಭವಷ್ಟೇ ಕಾಶ್ಮೀರದ ವಿಚಾರದಲ್ಲಿ ಬಿಜೆಪಿಗೆ ಇರುವ ಹಿತಾಸಕ್ತಿ
ಮೆಹಬೂಬಾ ಮುಫ್ತಿ, ಪಿಡಿಪಿ ಅಧ್ಯಕ್ಷೆ

ಪಿವಿ ✓


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಸಾದಾ ಪ್ಯಾಂಟ್,** ಬನಿಯನ್ ಹಾಗೂ ಕೇಸರಿ ಶಾಲು ಧರಿಸಿರುವ ಈ ವ್ಯಕ್ತಿ ಟೀ ಅಂಗಡಿಯೊಂದರ ಮುಂದೆ ನಿಂತಿರುವ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಾಗಿ ಷೇರ್ ಆಗುತ್ತಿದೆ. ಮೇಲ್ನೋಟಕ್ಕೆ ಇವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ರೀತಿ ಕಾಣಿಸುತ್ತಾರೆ. ‘ಇವರು ಯೋಗಿ ಅವರನ್ನು ಹೋಲುತ್ತಿರುವ ಅವರ ಸಹೋದರ. ಟೀ ಅಂಗಡಿ ನಡೆಸುತ್ತಿದ್ದಾರೆ. ಅವರು ಎಷ್ಟೊಂದು ಸರಳ’ ಎಂದು ಟ್ವಿಟರಿಗರು ಉಲ್ಲೇಖಿಸಿದ್ದಾರೆ. ಮಾಯಾವತಿ, ಮಮತಾ, ಅಖಿಲೇಶ್ ಅವರ ಕುಟುಂಬ ಸದಸ್ಯರು ಇವರನ್ನು ನೋಡಿ ಕಲಿಯಬೇಕು ಎಂದು ಕೆಲವರು ಸಲಹೆ ನೀಡಿದ್ದಾರೆ.



✓ **ಸಾಮಾಜಿಕ ಜಾಲತಾಣಗಳಲ್ಲಿ** ಚರ್ಚೆಯಾಗುತ್ತಿರುವ ಹಾಗೆ ಇವರು ಯೋಗಿ ಅವರ ಸಹೋದರ ಅಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಯೋಗಿ ಅವರಿಗೆ ಮೂವರು ಸಹೋದರರಿದ್ದಾರೆ. ಅಣ್ಣ ಮಾನವೇಂದ್ರ ಮೋಹನ್ ಅವರು ಕೃಷಿಕ. ತಮ್ಮ ಶೈಲೇಂದ್ರ ಮೋಹನ್ ಬಿಸ್ತಾ ಅವರು ಸೇನೆಯಲ್ಲಿದ್ದಾರೆ. ಕಿರಿಯ ಸಹೋದರ ಮಹೇಂದ್ರ ಸಿಂಗ್ ಬಿಸ್ತಾ ಅವರು ಪತ್ರಕರ್ತ ಎಂದು ‘ದಿಲಾನ್‌ಸೆಸ್ಟಿ’ ಜಾಲತಾಣ ಮಾಹಿತಿ ನೀಡಿದೆ. ವೈರಲ್ ಆಗಿರುವ ಚಿತ್ರದಲ್ಲಿರುವ ವ್ಯಕ್ತಿ ಯಾರೆಂದು ತಿಳಿದುಬಂದಿಲ್ಲವಾದರೂ, ಅವರಿಗೂ ಯೋಗಿ ಕುಟುಂಬಕ್ಕೂ ಸಂಬಂಧವಿಲ್ಲ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸುಂದರತೆಯ ಕಾರಣಗಳು

ಕವಿ ಚಿತ್ರಕೋವಿದನು ಪರತತ್ವಶೋಧಕನು |
ವಿವಿಧ ವಾದನ ಗೀತ ನೃತ್ಯ ಕುಶಲಿಗಳು ||
ನವನವತೆಯಿಂ ಮನಸಿಗೀವೆಲ್ಲ ಕಲೆಗಾರ |
ರವರಿಂದ ಸುಂದರತೆ – ಮಂಕುತಿಮ್ಮ || 472 ||

ಪದ-ಅರ್ಥ: ಚಿತ್ರಕೋವಿದ = ಚಿತ್ರಕಲೆಯಲ್ಲಿ ಪರಿಣಿತ, ನವನವತೆಯಿಂ = ಹೊಸತನದಿಂದ, ಮನಸಿಗೀವೆಲ್ಲ = ಮನಸಿಗೆ + ಈವ (ಕೊಡುವ) + ಎಲ್ಲ.

ವಾಚ್ಯಾರ್ಥ: ಕವಿ, ಚಿತ್ರಗಾರ, ಪರತತ್ವಶೋಧಕ, ಬೇರೆ ಬೇರೆ ವಾದ್ಯಗಳ ವಾದಕ, ಹಾಡುಗಾರ, ನೃತ್ಯಪಟು, ಇವರೆಲ್ಲ ನಮ್ಮ ಮನಸ್ಸಿಗೆ ಹೊಸ ಹೊಸದನ್ನು ನೀಡುವ ಕಲೆಗಾರರು. ಅವರಿಂದಲೇ ಜಗತ್ತಿಗೆ ಸುಂದರತೆ.

ವಿವರಣೆ: ಒಬ್ಬ ತರುಣನಿಗೆ ಹಣ ಮಾಡುವ ಉಮೇದು ಮೆಟ್ಟಿಕೊಂಡಿತು. ಅವನಿಗೆ ಬೇರೆ ಯಾವುದೂ ಮುಖ್ಯವಲ್ಲ. ಕಲೆ, ಸಾಹಿತ್ಯ, ಸಂಗೀತಗಳೆಲ್ಲ ನಿಷ್ಪ್ರಯೋಜಕ ಎನ್ನುವುದು ಅವನ ವಾದ. ಹಿರಿಯರು ಹಣದ ಹಿಂದೆ ಓಡಬೇಡ ಎಂದು ಹೇಳಿದ್ದು ಅಪಥ್ಯವಾಯಿತು. ಒಂದು ಬಾರಿ ಹಿರಿಯರು ಅವನನ್ನು ಕೇಳಿದರು, ‘ಇಷ್ಟು ದುಡಿದು ಏನು ಮಾಡುತ್ತೀ?’

‘ಸಾಕಷ್ಟು ಹಣ ಗಳಿಸುತ್ತೇನೆ’ ಎಂದ ತರುಣ.

‘ಆಯ್ತು, ಹಣವನ್ನು ಏನು ಮಾಡುತ್ತೀ?’

‘ದೊಡ್ಡ ಬಂಗಲೆ ಕಟ್ಟಿಸುತ್ತೇನೆ, ನಾಲ್ಕಾರು ಕಾರು ಕೊಳ್ಳುತ್ತೇನೆ, ತೋಟ ಮಾಡಿಸುತ್ತೇನೆ’.

‘ಅದೂ ಆಯ್ತು, ಮುಂದೇನು ಮಾಡುತ್ತೀ?’

‘ಮುಂದೇನು ಮಾಡುವುದು? ಆರಾಮವಾಗಿ ಪ್ರಪಂಚವನ್ನು ಸುತ್ತುತ್ತೇನೆ’

‘ಯಾಕೆ ಸುತ್ತುತ್ತೀ? ಏನು ನೋಡಬಯಸುತ್ತೀ?’ ಕೇಳಿದರು ಹಿರಿಯರು

‘ಆತ ಹೇಳಿದ, ‘‘ಹಿಮಾಲಯದ ಬದರಿನಾಥ, ಕೇದಾರ್‌ನಾಥಗಳಿಗೆ ಹೋಗುತ್ತೇನೆ, ಆಗ್ರಾದ ತಾಜಮಹಲ್ ನೋಡುತ್ತೇನೆ, ಚೀನಾದ ಗೋಡೆಯನ್ನು, ರೋಮ್‌ನಲ್ಲಿರುವ ವ್ಯಾಟಿಕನ್, ಈಜಿಪ್ಟ್‌ನ ಪಿರಾಮಿಡ್‌ಗಳನ್ನು, ನಯಾಗರಾ ಜಲಪಾತವನ್ನು ನೋಡುತ್ತೇನೆ. ನಂತರ ರಷ್ಯಾದ ಬ್ಯಾಲೆ ನೃತ್ಯ ನೋಡುತ್ತೇನೆ, ಅತ್ಯದ್ಭುತ ಸಂಗೀತ ಕೇಳುತ್ತೇನೆ’. ಹಿರಿಯರು ನಕ್ಕು ಹೇಳಿದರು. ‘ಎಲ್ಲರೂ ನಿನ್ನ ಹಾಗೆಯೇ ಹಣ ಗಳಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದರೆ, ನೀನು ನೋಡಬೇಕೆಂದಿರುವ ಎಲ್ಲ ಸುಂದರತೆಯ ತಾಣಗಳನ್ನು ಯಾರು ನಿರ್ಮಾಣ ಮಾಡುತ್ತಿದ್ದರು? ಅವರು ಅವನ್ನೆಲ್ಲ ನಿರ್ಮಾಣ ಮಾಡಿರದಿದ್ದರೆ ನಿನ್ನ ಹಣದಿಂದಾಗುವ ಪ್ರಯೋಜನವೇನು?’

ಇದೊಂದು ಕಾಲ್ಪನಿಕ ಸಂಭಾಷಣೆಯೆಂದರೂ ಅದರ ಅರ್ಥ ಆಳವಾದದ್ದು. ಬದುಕಿಗೆ ಹಣ ಬೇಕು ಆದರೆ ಎಲ್ಲವೂ ಹಣದಿಂದಲೇ ಆಗುವುದಿಲ್ಲ. ನಮ್ಮ ಬದುಕಿಗೆ ಸೊಗಸು, ನಾವೀನ್ಯತೆ, ಸಂತೋಷ ದೊರಕುವುದು ಕಲೆಗಾರರ ಕೊಡುಗೆಗಳಿಂದ. ಒಂದು ಅದ್ಭುತ ಚಿತ್ರ ಮನಸ್ಸನ್ನು ಅರಳಿಸಬಲ್ಲದು. ರವಿಶಂಕರ್‌ರವರ ಸಿತಾರ, ಅಮ್ಜದ್ ಅಲಿಖಾನ್‌ರ ಸರೋದ, ಶಿವಕುಮಾರ ಶರ್ಮಾರ ಸಂತೂರ್, ದೊರೆಸ್ವಾಮಿಯವರ ವೀಣೆ, ಹರಿಪ್ರಸಾದ್ ಚೌರಸಿಯಾರ ಕೊಳಲು ಇವೆಲ್ಲ ನಮ್ಮಲ್ಲಿ ನವಚೇತನವನ್ನು ತುಂಬಬಲ್ಲವು. ಅದ್ಭುತ ನೃತ್ಯಪ್ರದರ್ಶನ ಮನವನ್ನು ಹಿಡಿದಿಡಬಲ್ಲದು.

ಬಾಲಮುರಳಿಕೃಷ್ಣ, ಭೀಮಸೇನ್ ಜೋಶಿ, ಲತಾ ಮಂಗೇಶಕರ್‌ರಂಥವರ ಗಾಯನ ಯಾರ ಹೃದಯವನ್ನೂ ಸೂರೆ ಮಾಡುವ ಶಕ್ತಿಯುಳ್ಳವುಗಳು. ಇವರೊಂದಿಗೆ ತತ್ವಜ್ಞಾನಿಗಳ ಮಾತುಗಳು ನಮ್ಮ ದಿನನಿತ್ಯದ ಬದುಕಿಗೆ ಹೊಸ ಅರ್ಥ ನೀಡಿ ಪ್ರಚೋದಿಸಬಲ್ಲವು.

ಈ ಎಲ್ಲವುಗಳು ನಮ್ಮ ಜೀವನಕ್ಕೆ ನವೀನತೆಯನ್ನು ತಂದು ಬದುಕನ್ನು ಸುಂದರಗೊಳಿಸುತ್ತವೆ.

ದಿನ ಭವಿಷ್ಯ

ಶುಕ್ರವಾರ ಅಕ್ಟೋಬರ್ 8, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಹಸ್ತೆ ದ್ವಿತೀಯ ಗಂ. 17-32 (ಹ. 1-17) ಶುಕ್ರವಾರ ನಿತ್ಯ ನಕ್ಷತ್ರ ಸ್ವಾತಿ ಗಂ. 40-46 (ರಾ. 10-34) ವಿಷ್ಕಂಬ ನಾಮ ಯೋಗ ಗಂ. 50-26 ಕೌಲವ ಕರಣ ಗಂ. 17-32 ವಿಷ ಶೇಷ ಗಂ. 1-10 ವಿಷ ಗಂ. 53-55 ಅಮೃತ ಗಂ 19-46 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-13 ಸೂರ್ಯಾಸ್ತ: 6-01 ಅದೃಷ್ಟ ಸಂಖ್ಯೆ 3, 6

ಮೇಷ: ವ್ಯವಹಾರದಲ್ಲಿ ಅನಿರೀಕ್ಷಿತ ತೊಂದರೆಗಳು ಎದುರಾಗುವ ಸಾಧ್ಯತೆ. ಸಂಗಾತಿಯ ಕಡೆಯಿಂದ ಬಂದ ಸಲಹೆಗಳನ್ನು ಪುರಸ್ಕರಿಸುವುದರಿಂದ ಕಾರ್ಯಾನುಕೂಲವಾಗಲಿದೆ. ಮಕ್ಕಳ ವಿವಾಹ ನಿಮಿತ್ತ ವ್ಯವಹರಿಸಲಿದ್ದೀರಿ.

ವೃಷಭ: ಆರೋಗ್ಯದಲ್ಲಿ ಸುಧಾರಣೆ ಉಂಟಾಗುವುದರಿಂದಾಗಿ ಮನೆಯಲ್ಲಿ ನೆಮ್ಮದಿ. ವಾಹನ ಖರೀದಿ ಮಾಡುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಿಂದಾಗಿ ಗೌರವ ಪ್ರಾಪ್ತಿ. ಕಾರ್ಮಿಕ ವರ್ಗದವರಿಗೆ ಅನುಕೂಲ.

ಮಿಥುನ: ಸರ್ಕಾರಿ ಉದ್ಯೋಗಿಗಳಿಗೆ ಬಿಡುವಿಲ್ಲದ ಕೆಲಸ. ಮೇಲಧಿಕಾರಿಗಳಿಂದ ಒತ್ತಡ ಎದುರಿಸಬೇಕಾದ ಪರಿಸ್ಥಿತಿ. ಕೃಷಿಯಲ್ಲಿ ತೊಡಗಿಕೊಂಡವರಿಗೆ ಆತಂಕದ ಕ್ಷಣಗಳು ಎದುರಾಗಲಿವೆ. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಾಧ್ಯತೆ.

ಕರ್ಕಾಟಕ: ನಿರಂತರ ಕೆಲಸಗಳಿಂದಾಗಿ ದೇಹಾಲಸ್ಯ. ಆರೋಗ್ಯದ ನಿಮಿತ್ತ ಧನ ವ್ಯಯ ಮಾಡಬೇಕಾದೀತು. ಮಕ್ಕಳ ಆಗಮನದಿಂದಾಗಿ ಮನೆಯಲ್ಲಿ ಉಲ್ಲಾಸದ ಅನುಭವ ಆಗಲಿದೆ. ಸಾಮಾಜಿಕ ಕಾರ್ಯಕರ್ತರಿಗೆ ಯಶಸ್ಸು.

ಸಿಂಹ: ವಾತಾವರಣದಲ್ಲಿನ ವ್ಯತ್ಯಯದಿಂದಾಗಿ ಉಬ್ಬಸ, ಕೆಮ್ಮು ಮುಂತಾದ ಶ್ವಾಸಸಂಬಂಧಿ ಪೀಡನೆಗೆ ತುತ್ತಾಗಲಿದ್ದೀರಿ. ಸಾಮಾಜಿಕ ಕಾರ್ಯಕರ್ತರಿಗೆ ಬಿಡುವಿಲ್ಲದ ಕಾರ್ಯಕ್ರಮ. ಕೂಲಿ ಕಾರ್ಮಿಕರಿಗೆ ಬಿಡುವಿನ ಅನುಭವ.

ಕನ್ಯಾ: ಸಹೋದ್ಯೋಗಿಗಳಿಂದ ಸಹಕಾರ ಪಡೆದು ಉತ್ತಮ ಕಾರ್ಯ ನಿರ್ವಹಿಸಲಿದ್ದೀರಿ. ಹಿರಿಯ ಅಧಿಕಾರಿಗಳಿಂದ ಪ್ರಶಂಸೆಯ ಮಾತುಗಳನ್ನು ಆಲಿಸುವಿರಿ. ನೀರು, ಸಮುದ್ರ, ನದಿಗಳಲ್ಲಿ ಕೆಲಸ ಮಾಡುವವರಿಗೆ ಗಂಡಾಂತರ ಸಾಧ್ಯತೆ.

ತುಲಾ: ವಾಹನ ಚಾಲನೆ ಅಥವಾ ಪ್ರಯಾಣದಲ್ಲಿ ಅತ್ಯಂತ ಜಾಗರೂಕರಾಗಿರುವುದು ಒಳ್ಳೆಯದು. ವ್ಯವಹಾರದಲ್ಲಿ ಅನುಕೂಲಕರ ವಾತಾವರಣ. ಭೂ ಸಂಬಂಧಿ ವ್ಯವಹಾರದಲ್ಲಿ ಯಶಸ್ಸು. ಕುಶಲಕರ್ಮಿಗಳಿಗೆ ಉತ್ತಮ ಅವಕಾಶ.

ವೃಶ್ಚಿಕ: ಆಹಾರ ಪದಾರ್ಥಗಳ ವ್ಯವಹಾರದಲ್ಲಿ ಅತ್ಯಧಿಕ ಲಾಭ. ಹಣ್ಣು ತರಕಾರಿ, ಹೂವು ವ್ಯಾಪಾರಸ್ಥರಿಗೆ ವ್ಯವಹಾರ ಕುಸಿತ. ಮಿಂಚು ಅಥವಾ ವಿದ್ಯುಚ್ಛಕ್ತಿಯ ವಿಷಯದಲ್ಲಿ ಜಾಗರೂಕರಾಗಿರಿ.

ಧನು: ತಂತ್ರಜ್ಞರಿಗೆ ಬಿಡುವಿಲ್ಲದ ಕೆಲಸದಿಂದಾಗಿ ಉತ್ತಮ ಆದಾಯ. ಯಂತ್ರೋಪಕರಣಗಳ ವ್ಯವಹಾರದಿಂದ ಅಧಿಕ ಲಾಭ ಗಳಿಸಲಿದ್ದೀರಿ. ಹೊಸ ಭೂಮಿ ಅಥವಾ ನಿವೇಶನ ಖರೀದಿ ವಿಚಾರವಾಗಿ ಮಾತುಕತೆ ನಡೆಸಲಿದ್ದೀರಿ.

ಮಕರ: ಪಿತ್ರಾರ್ಜಿತ ಆಸ್ತಿ ವಿಚಾರವಾಗಿ ಮನೆಯಲ್ಲಿ ಮನಸ್ತಾಪ. ಸಂಯಮದಿಂದ ವ್ಯವಹರಿಸುವುದರಿಂದಾಗಿ ತೊಂದರೆಗಳು ನಿವಾರಣೆಯಾಗಲಿವೆ. ಹೊಸದೊಂದು ಯೋಜನೆಯನ್ನು ಸ್ಥಾಪಿಸುವ ಕುರಿತು ಚಿಂತನೆ.

ಕುಂಭ: ದ್ವಿದಳ ಧಾನ್ಯಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ. ರೈತಾಪಿ ವರ್ಗದವರಿಗೆ ಆತಂಕದ ಕ್ಷಣಗಳು ಎದುರಾಗಲಿವೆ. ಗಡ್ಡೆ ಗೆಣಸು ಬೆಳೆಗಾರರಿಗೆ ನಷ್ಟ ಸಾಧ್ಯತೆ. ಕಲಾವಿದರಿಗೆ ಉತ್ತಮ ಅವಕಾಶಗಳು ದೊರೆಯುವವು.


ಮೀನ: ಕುಶಲಕರ್ಮಿಗಳು, ವೈದ್ಯರುಗಳಿಗೆ ಆದಾಯದಲ್ಲಿ ಗಣನೀಯ ಹೆಚ್ಚಳ. ಔಷಧ ವ್ಯಾಪಾರದಲ್ಲಿ ಪ್ರಗತಿ ಸಾಧ್ಯತೆ. ವಿವಾಹ ಸಂಬಂಧಗಳ ವಿಚಾರದಲ್ಲಿ ಅನಿರೀಕ್ಷಿತ ಬೆಳವಣಿಗೆ ನಡೆಯುವ ಸಾಧ್ಯತೆ. ಮಿತ್ರರ ನಡವಳಿಕೆಯಿಂದ ಕುತ್ತು.

ನಿಮ್ಮ ಜನ್ಮದಿನ 8-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕ. ಆರಂಭದಲ್ಲಿ ಅನಾನುಕೂಲತೆಗಳು ಕಂಡುಬಂದರೂ ನಂತರದ ದಿನಗಳಲ್ಲಿ ವ್ಯವಹಾರಗಳು ಅನುಕೂಲಕರವಾಗಿ ಜರುಗಲಿವೆ. ವಿವಾಹಾಕಾಂಕ್ಷಿಗಳಿಗೆ ಅನುಕೂಲಕರ ವಾತಾವರಣ. ಹಣದ ವಿಷಯದಲ್ಲಿ ಸ್ವಲ್ಪ ಮಟ್ಟಿನ ಹಿಡಿತ ಇಟ್ಟುಕೊಳ್ಳುವುದು ಶ್ರೇಯಸ್ಕರ. ಚಿನ್ನಾಭರಣ ಖರೀದಿಸುವ ಸಾಧ್ಯತೆ.

ಪದಬಂಧ 4742 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅನಿರೀಕ್ಷಿತವಾಗಿ ಬಂದವ ಆತಂಕ ಹುಟ್ಟಿಸಿಹನಲ್ಲಾ? (4)
3.ಶ್ರೇಷ್ಠ ನೆಲೆ ಅಥವಾ ಸ್ವರ್ಗ ಎಂದರೂ ಸರಿ (4)
5.ಸತಿಯ ಹತ್ತಿರವೇ ಇದ್ದಾಳೆ ಉಪಪತ್ನಿ! (3)
6.ವನದ ಕೊನೆಗೆ ಮಾಡಿದ ಹೋಮ (3)
8.ಅತ್ತಿಂದಿತ್ತ ತೂಗಾಡುವ ವಸ್ತು (3)
9.ತಾಪತ್ರಯದಲ್ಲಿ ಬಂದಿರುವ ಓಲೆ! (2)
10.ಪಕ್ಷಿಯ ಕೊಕ್ಕು (2)
11.ಧಾನ್ಯ ಶೇಖರಿಸುವ ಸ್ಥಳ (3)
12.ಹೆಚ್ಚು ಪದದ ವಿರುದ್ಧ ಪದ (3)
14.ವರನಲ್ಲಿರುವ ವಾಗ್ಮಿ (3)
16.ಹೂಳಿಟ್ಟ ನಿಧಿಯು ಕರದಲ್ಲಿದೆ (4)
17.ಮಧ್ಯರಾತ್ರಿಯನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಆ ಗ್ರಹವನ್ನು ನೋಡುತ್ತಲೇ ಮಾಡಿದ ಹಟ! (3)
2.ಕನಸಲ್ಲಿರುವ ಕೊಳೆ! (2)
3.ಪದಾತಿ ಜೊತೆಯಿರುವ ಗಂಡ (2)
4.ಕರುವಿಗೆ ತೋರಿದ ದಯೆ (3)
7.ತಾರೆಗಳ ಗುಂಪು (5)
8.ಅಯಸ್ಕಾಂತವನ್ನು ಹೀಗೂ ಕರೆವರು (5)
11.ತಿರುಗಿಸಿದರೂ ಇದು ಚಿನ್ನ (3)
13.ಮೆದು ಮಾತಿನವನ ಮಸ್ತಿಷ್ಕ (3)
14.ವಠಾರದಲ್ಲಿರುವ ಮದುವೆಯ ಗಂಡು (2)
15.ನಗರದಲ್ಲಿರುವ ಮನುಷ್ಯ ತಿರುಗಿದ್ದಾನಲ್ಲಾ?(2)



4741ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಗಂತುಕ 3.ಪರಂಧಾಮ 5.ಸವತಿ 6.ಹವನ 8.ಲೋಲಕ 9.ಪತ್ರ 10.ಚುಂಚು 11.ಕಣಜ 12.ಕಡಿಮೆ 14.ವಕ್ತಾರ 16.ಕಡವರ 17.ನಟ್ಟಿರುಳು

ಮೇಲಿಂದ ಕೆಳಕ್ಕೆ: 1.ಆಗ್ರಹ 2.ಕಸ 3.ಪತಿ 4.ಮರುಕ 7.ನಕ್ಷತ್ರಪುಂಜ 8.ಲೋಹಚುಂಬಕ 11.ಕನಕ 13.ಮೆದುಳು 14.ವರ 15.ರನ

ಸುಡೊಕು 5128

	4				7			
8			1			2		7
		3		8	4		5	
3		6						
				1				5
1		4	3		8		6	
	7			6				
2		8	4		3			1
				2		8		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5127 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ವಿದೇಶಿ ಪ್ರವಾಸಿಗರಿಗೆ ಅ.15ರಿಂದ ಅನುಮತಿ

ನವದೆಹಲಿ: ಅಂತರರಾಷ್ಟ್ರೀಯ ಪ್ರವಾಸೋದ್ಯಮವನ್ನು ಪುನರಾರಂಭಿಸುವುದಾಗಿ ಕೇಂದ್ರ ಸರ್ಕಾರ ಗುರುವಾರ ಘೋಷಿಸಿದೆ. ಬಾಡಿಗೆ (ಚಾರ್ಟರ್) ವಿಮಾನಗಳ ಮೂಲಕ ಭಾರತಕ್ಕೆ ಬರುವವರಿಗೆ ಅ.15ರಿಂದ ಪ್ರವಾಸಿ ವೀಸಾ ನೀಡಲಾಗುವುದು ಎಂದು ಪ್ರಕಟಿಸಿದೆ.

'ಇತರ ವಿಮಾನಗಳ ಮೂಲಕ ಭಾರತಕ್ಕೆ ಬರುವವರಿಗೆ ನವೆಂಬರ್ 15ರ ಪ್ರವಾಸಿ ವೀಸಾ ನೀಡಲಾಗುವುದು' ಎಂದು ಗೃಹ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಕಳೆದ ಮಾರ್ಚ್‌ನಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಿದವು. ಈ ಕಾರಣದಿಂದ ವಿದೇಶ ಪ್ರವಾಸಿಗರ ಭೇಟಿಗೆ ಅವಕಾಶ ನಿರಾಕರಿಸಲಾಗಿತ್ತು. ಈಗ ಪ್ರವಾಸೋದ್ಯಮಕ್ಕೆ ಪುನಶ್ಚೇತನ ನೀಡಲು ಸರ್ಕಾರ ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ಚಳಿಗಾಲ ಆರಂಭವಾದ ನಂತರ ವಿದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾರತಕ್ಕೆ ಭೇಟಿ ನೀಡುತ್ತಾರೆ. ಅದರಲ್ಲೂ ಗೋವಾದ ತೀರಗಳು ವಿದೇಶಿ ಪ್ರವಾಸಿಗರ ಆಕರ್ಷಣೀಯ ತಾಣವಾಗಿವೆ.


ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು



ಶ್ರೀಮತಿ ಎಲ್. ಕಾಂತಾಮಣಿ
25.06.1938 - 08.10.2020
(ಶ್ರೀ ಬಿ.ವಿ.ತಿಮ್ಮಪ್ಪ, ನಿವೃತ್ತ ಪ್ರಾಂಶುಪಾಲರು, ಕೇಂದ್ರೀಯ ವಿದ್ಯಾಲಯ ಇವರ ಧರ್ಮಪತ್ನಿ)
ಬನಶಂಕರಿ 3ನೇ ಹಂತ, ಬೆಂಗಳೂರು–85
ಪ್ರತಿದಿನವೂ ನಾವು ನಿಮ್ಮನ್ನು ನೆನೆಪಿಸಿಕೊಳ್ಳುತ್ತೇವೆ. ನೀವು ನಮ್ಮ ಮನದಾಳದಲ್ಲಿ ಶಾಶ್ವತವಾಗಿದ್ದೀರಿ.
ಪ್ರೀತಿಯ ನೆನೆಪಿನಲ್ಲಿ:
ಪತಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು

ಎರಡನೇ ವರ್ಷದ ಪುಣ್ಯಸ್ಮರಣೆ



ದಿ. ಎಸ್. ಕೋಟೆಪ್ಪನವರು
ಜನನ: 17.03.1965 – ನಿಧನ: 08.10.2019
ಮುಖ್ಯ ಇಂಜಿನಿಯರ್ (ವಿ) ಬೆಸ್ಕಾಂ, ದಾವಣಗೆರೆ
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ ನಿಮ್ಮ ಕುಟುಂಬ ವರ್ಗದವರು.
ಶ್ರೀಮತಿ ದೇವಿರಮ್ಮ, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು, ಸುಂಕದಾರ ವಂಶಸ್ಥರು ಹಾಗೂ ಬಂಧು–ಮಿತ್ರರು, ಹದಡಿ. ದಾವಣಗೆರೆ ಜಿ.

ಚಿರಸ್ಮರಣೆ



ಶ್ರೀ ಬಿ. ಸಿ. ಹನುಮಂತಪ್ಪ
(ವ್ಯವಸ್ಥಾಪಕ ಪಾಲುದಾರರು: ಜಯ ಇಂಜಿನಿಯರಿಂಗ್ ವರ್ಕ್ಸ್)
ಬೆಂಗಳೂರು–09
1929 - 2011
ನೀವು ನಮ್ಮನ್ನಗಲಿ ಹತ್ತು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ಸದಾ ನಿಮ್ಮನ್ನು ಸ್ಮರಿಸುವ
ದುಃಖತಪ್ತರು: ಪತ್ನಿ–ಬಿ.ಎಂ. ಗಂಗಮ್ಮ
ಮಗ– ಬಿ.ಹೆಚ್. ಮಹೇಶ್
ಹಾಗೂ ಕುಟುಂಬವರ್ಗದವರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಅಜ್ಜೇಗೌಡರು
"ನೀವು ನಮ್ಮನ್ನು ಅಗಲಿದರೂ ನಿಮ್ಮ ಪ್ರೀತಿ, ಕರುಣೆ, ಆದರ್ಶಗಳೇ ನಮ್ಮ ಬಾಳಿಗೊಂದು ದಾರಿದೀಪ."
ನಿಮ್ಮ ಪ್ರೀತಿ ಆದರ್ಶಗಳೇ ನಮಗೆ ಎಂದೆಂದಿಗೂ ಸ್ಫೂರ್ತಿ.
ನಿಮ್ಮ ಸವಿನೆನಪಿನಲ್ಲಿ:
ಶ್ರೀಮತಿ ಗಾಯತ್ರಿದೇವಿ
ಶ್ರೀಮತಿ/ಶ್ರೀ ನವೀನ್.ವೈ.ಎ (ಆರ್ಯನ್ ಗೌಡ)
ಹಾಗೂ ಕುಟುಂಬವರ್ಗದವರು
ಯಲಹಂಕ ಉಪನಗರ, ಬೆಂಗಳೂರು–64

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

ಉದ್ಯೋಗಾವಕಾಶ

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

General

ವಿಡಿಯೋಕಾನ್, TVS, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

EDUCATION CORNER
ಕ್ಲಾಸಿಫೈಡ್ಸ್

SVG Centre of Excellence
"A unit of SVG Educational Foundation" Mysore
RESILIENT
A NEET ACADEMY
(AIM THE BULL'S EYE)
START THE NEET PREPARATION AGAIN WITH FRESH HOPE.
A FULLY RESIDENTIAL ONE YEAR LONG TERM NEET (UG) COACHING IN MYSURU.
ADMISSIONS OPEN FOR 2022 (LONG TERM BATCH)
GREATER THAN 90% OF THE QUESTIONS IN NEET 2021 ARE SIMILAR TO THE DIRECT SPEECHES OF OUR FACULTY.
WELL DESIGNATED CLASSROOM NEET COACHING WITH FOOD AND ACCOMMODATION FACILITY
WELL VERSED IN BOTH CBSE AND KARNATAKA PU BOARD CURRICULA
SCIENTIFICALLY DESIGNED TIMETABLE AND PEDAGOGY.
15+ YEARS OF EXPERIENCE IN NEET TRAINING FOR REPEATERS
Bataches start from 10th October 2021. Enroll Immediately
20, RING ROAD, DATTAGALLI 3RD STAGE, MYSORE-23
CONTACT: +91 96327 77519, 93438 87010

ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

ಕುಂದಾಪುರದಲ್ಲಿರುವ (ಉಡುಪಿ) ಕಂಪೆನಿಗೆ ಕೆಲಸಕ್ಕೆ ಯುವಕ-ಯುವತಿಯರು ಬೇಕಾಗಿದ್ದಾರೆ. ವೇತನ 10,000-15,000. ಊಟ, ವಸತಿ ಉಚಿತ. 6364257442

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ, ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ7 ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಭವಿಷ್ಯ

||ಉಚಿತ ಭವಿಷ್ಯ|| ಅಷ್ಟಮಂಗಳ ಪ್ರಶ್ನೆಯಿಂದ ನಿಮ್ಮ ಜೀವನದ ಸಕಲಸಂಕಷ್ಟಗಳು ನಿವಾರಣೆ, ಸ್ತ್ರೀಪುರುಷ ವಶೀಕರಣ ಕೇವಲ 1ಗಂಟೆಯಲ್ಲಿ 101% ಮಾಡಿಕೊಡುತ್ತಾರೆ. ಕರೆಮಾಡಿ.9538486472

Astrology

ಪ್ರವಾಸ

ಕೊಳ್ಳೇಗಾಲದ ಪ್ರಸಿದ್ಧ ತಾಂತ್ರಿಕರು ನುಡಿದಂತೆ ನಡೆಯುವುದು, ಅಸಾಧ್ಯವಾದದ್ದು ಇಲ್ಲಿ ಸಾಧ್ಯ, ದಾಂಪತ್ಯ ಕಲಹ, ಶತ್ರುಗಳ ಕಾಟ, ಮಾಟಮಂತ್ರ, ವಾಮಾಚಾರ, ಸ್ತ್ರೀಪುರುಷ ವಶೀಕರಣ, ಚೌಡಿಮಂತ್ರ ಶಕ್ತಿಯಿಂದ ಸಶ್ಮಾನ ಕಾಳಿಯ ಬಲಿಷ್ಠ ಪ್ರಯೋಗಗಳಿಂದ 3ದಿನದಲ್ಲಿ ಶಾಶ್ವತ ಪರಿಹಾರ ಗ್ಯಾರಂಟಿ ಪ್ರಧಾನ ತಾಂತ್ರಿಕ ವೆಂಕಟೇಶ ಮೂರ್ತಿ: ಉತ್ತರಹಳ್ಳಿ ಬೆಂಗಳೂರು: 9686748656

"ವಶೀಕರಣಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್9686999517

Travel

ವಿಮಾನ, ರೈಲಿನಲ್ಲಿ 13-11-2021, ಪುರಿ, ಕೊನಾರ್ಕ್, ಭುವನೇಶ್ವರ್ 11500/- 22-11-2021, ಹೈದರಾಬಾದ್, 5999/- 29-11-2021 ಕಾಶಿ 3999/- ಅನುಗ್ರಹಯಾತ್ರಾ 9880079351

10.10.2021 5 ದಿನಗಳು ರಾಮೇಶ್ವರಂ ಪ್ರವಾಸ., 15.10.2021 5 ದಿನಗಳು ಅಹೋಬಲಂ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809/ 9902433500

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಐಐಟಿ–ಮದ್ರಾಸ್ ಸಂಶೋಧಕರಿಂದ ಅಧ್ಯಯನ

'ಕಾವೇರಿ: ಮಾಲಿನ್ಯ ಆತಂಕಕಾರಿ'

ಚೆನ್ನೈ (ಪಿಟಿಐ): 'ಹಲವು ಬಗೆಯ ಮಾಲಿನ್ಯಕಾರಕಗಳಿಂದ ಕಾವೇರಿ ನದಿ ಕಲುಷಿತಗೊಂಡಿದೆ' ಎಂದು ಐಐಟಿ-ಮದ್ರಾಸ್‌ನ ಸಂಶೋಧಕರು ಹೇಳಿದ್ದಾರೆ.

ಎರಡು ವರ್ಷಗಳ ಕಾಲ ಈ ಸಂಶೋಧಕರು ಕೈಗೊಂಡ ಅಧ್ಯಯನ ವರದಿಯಲ್ಲಿ ಹಲವಾರು ಆತಂಕಕಾರಿ ಅಂಶಗಳನ್ನು ಉಲ್ಲೇಖಿಸಲಾಗಿದೆ.

'ಸೈನ್ಸ್ ಆಫ್ ದಿ ಟೋಟಲ್ ಎನ್ವಿರಾನ್‌ಮೆಂಟ್' ಎಂಬ ವೈಜ್ಞಾನಿಕ ನಿಯತಕಾಲಿಕದಲ್ಲಿ ಈ ಅಧ್ಯಯನ ವರದಿ ಪ್ರಕಟವಾಗಿದೆ.

ಔಷಧ ಕಂಪನಿಗಳ ತ್ಯಾಜ್ಯಗಳು, ಕಾಂತಿವರ್ಧಕ ಉತ್ಪನ್ನಗಳು, ಪ್ಲಾಸ್ಟಿಕ್, ಭಾರವಾದ ಲೋಹಗಳು, ಕೀಟನಾಶಕಗಳು ಹಾಗೂ ಬೆಂಕಿ ನಂದಿಸಲು ಬಳಸುವ ರಾಸಾಯನಿಕಗಳು ನದಿಗೆ ಸೇರಿರುವುದನ್ನು ಅಧ್ಯಯನ ತಂಡ ಪತ್ತೆ ಮಾಡಿದೆ.

'ಈ ಮಾಲಿನ್ಯಕಾರಕಗಳು ಜಲಚರಗಳಿಗೆ ಹಾಗೂ ನದಿಪಾತ್ರದ ಪರಿಸರಕ್ಕೆ ಭಾರಿ ಅಪಾಯವನ್ನೊಡ್ಡುತ್ತವೆ. ಔಷಧ ಕಾರ್ಖಾನೆಗಳ ತ್ಯಾಜ್ಯಗಳು ಅತ್ಯಲ್ಪ ಪ್ರಮಾಣದಲ್ಲಿ ನದಿಗೆ ಸೇರಿದರೂ, ಅವುಗಳಿಂದ ಜಲಚರಗಳಿಗೆ, ಮನುಷ್ಯರಿಗೆ ದೀರ್ಘಾವಧಿಯ ಹಾನಿ ಉಂಟಾಗುತ್ತದೆ' ಎಂದು ಅಧ್ಯಯನದ ನೇತೃತ್ವ ವಹಿಸಿದ್ದ, ಐಐಟಿಯ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಲಿಜಿ ಫಿಲಿಪ್ ಹೇಳಿದರು.

'ಆರ್ಸೆನಿಕ್, ಜಿಂಕ್, ಕ್ರೋಮಿಯಂ, ಸೀಸ ಹಾಗೂ ನಿಕಲ್‌ನಿಂದ ನೀರು ಕಲುಷಿತವಾಗಿರುವುದು ಕಂಡುಬಂದಿದೆ'.

ನೋವು ಶಮನ ಮಾಡುವ ಔಷಧಿಗಳಾದ 'ಐಬುಪ್ರೊಫೆನ್', 'ಡೈಕ್ಲೋಫೆನಾಕ್', ರಕ್ತದೊತ್ತಡ ಚಿಕಿತ್ಸೆ ಬಳಸುವ 'ಅಟೆನೊಲಾಲ್', 'ಐಸೊಪ್ರಿನಾಲಿನ್', ಖಿನ್ನತೆ ನಿವಾರಕ ಔಷಧಿ 'ಕಾರ್ಬಾಮಝೆಪೈನ್', ಕೆಲ ಆ್ಯಂಟಿಬಯೋಟಿಕ್‌ಗಳ ತಯಾರಿಕೆಯಲ್ಲಿ ಬಳಸುವ ರಾಸಾಯನಿಕಗಳು ನದಿ ನೀರು ಸೇರುತ್ತಿವೆ ಎಂದು ತಂಡ ಹೇಳಿದೆ.

ಮುಖ್ಯಾಂಶಗಳು
- ನದಿ ಪಾತ್ರದ 22 ಸ್ಥಳಗಳಿಂದ ನೀರು ಸಂಗ್ರಹ
- ನದಿಗೆ ತ್ಯಾಜ್ಯ ಸೇರುವ ಸ್ಥಳಗಳಲ್ಲಿ 11 ಮಾದರಿಗಳ ಸಂಗ್ರಹ ಕೇಂದ್ರಗಳ ಸ್ಥಾಪನೆ
- ತ್ಯಾಜ್ಯ ನೀರು ಸಂಸ್ಕರಣಾ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಲು ಶಿಫಾರಸು

ಅಪಘಾತ: 15 ಮಂದಿ ಸಾವು

ಬಾರಾಬಂಕಿ (ಪಿಟಿಐ): ಉತ್ತರ ಪ್ರದೇಶದ ಬಾರಾಬಂಕಿ ಜಿಲ್ಲೆಯ ಬಾಬುರಿ ಗ್ರಾಮದಲ್ಲಿ ಬಸ್ ಮತ್ತು ಮರಳು ತುಂಬಿದ ಲಾರಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ 15 ಮಂದಿ ಮೃತಪಟ್ಟಿದ್ದು, 27 ಮಂದಿ ಗಾಯಗೊಂಡಿರುವ ಘಟನೆ ಗುರುವಾರ ನಡೆದಿದೆ.

70 ಪ್ರಯಾಣಿಕರಿದ್ದ ಬಸ್ ದೆಹಲಿಯಿಂದ ಬಹ್ರೈಚ್‌ಗೆ ಹೋಗುತ್ತಿತ್ತು. ಬಸ್ ಚಾಲಕ, ಅಡ್ಡಬಂದ ಬಿಡಾಡಿ ಹಸುವಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋದಾಗ ಈ ಅಪಘಾತ ಸಂಭವಿಸಿದೆ ಎಂದು ಬಾರಾಬಂಕಿ ಪೊಲೀಸ್ ವರಿಷ್ಠಾಧಿಕಾರಿ ಯಮುನಾ ಪ್ರಸಾದ್ ತಿಳಿಸಿದ್ದಾರೆ.

ಅಪಘಾತದಲ್ಲಿ ಜೀವ ಕಳೆದುಕೊಂಡವರಿಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಂತಾಪ ಸೂಚಿಸಿದ್ದು, ಮೃತರ ಕುಟುಂಬಕ್ಕೆ ₹ 2 ಲಕ್ಷ ಹಾಗೂ ಗಾಯಾಳುಗಳಿಗೆ ₹50,000 ಪರಿಹಾರ ಘೋಷಿಸಿದ್ದಾರೆ.



ನವರಾತ್ರಿ ಉತ್ಸವ

ರಾಜಸ್ಥಾನದ ಬ್ಯಾವರ್ ನಗರದಲ್ಲಿ ನವರಾತ್ರಿ ಉತ್ಸವದ ಮೊದಲ ದಿನವಾದ ಗುರುವಾರ ಹಮ್ಮಿಕೊಂಡಿದ್ದ 'ಕಲಶ ಯಾತ್ರೆ'ಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ನೃತ್ಯ ಮಾಡಿ ಸಂಭ್ರಮಿಸಿದರು

ಪಿಟಿಐ ಚಿತ್ರ

ಉತ್ತರಾಖಂಡ: ಹೃಷಿಕೇಶದ ಎಐಐಎಂಎಸ್‌ನಲ್ಲಿ ಕಾರ್ಯಕ್ರಮ

35 ಆಮ್ಲಜನಕ ಘಟಕಗಳ ಉದ್ಘಾಟನೆ

ಹೃಷಿಕೇಶ (ಉತ್ತರಾಖಂಡ) (ಪಿಟಿಐ): 'ಪಿಎಂ ಕೇರ್ಸ್ ನಿಧಿ' ಅಡಿ ದೇಶದ ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ಥಾಪಿಸಿರುವ 35 ಪಿಎಸ್‌ಎ ಆಮ್ಲಜನಕ ಘಟಕಗಳನ್ನು ಪ್ರಧಾನಿ ನರೇಂದ್ರ ಮೋದಿಯವರು ಗುರುವಾರ ಇಲ್ಲಿನ ಏಮ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಉದ್ಘಾಟಿಸಿದರು.

ದೇಶದಾದ್ಯಂತ 35 ಪಿಎಸ್‌ಎ ಆಮ್ಲಜನಕ ಘಟಕಗಳಿಗೆ ಚಾಲನೆ ನೀಡಲಾಗಿದೆ. ಪಿಎಂ ಕೇರ್ಸ್ ನಿಧಿ ನೆರವಿನಿಂದ 1,150 ಆಮ್ಲಜನಕ ಘಟಕಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಜಿಲ್ಲೆಯೂ ಇಂಥ ಘಟಕ ಹೊಂದಿದಂತಾಗಿದೆ ಎಂದು ಪ್ರಧಾನಿ ಹೇಳಿದರು.

ಕಾರ್ಯಕ್ರಮದಲ್ಲಿ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹಾಜರಿದ್ದರು. ದೇಶದಾದ್ಯಂತ ಮೂಲಸೌಲಭ್ಯಕ್ಕೆ ಒತ್ತು ನೀಡುತ್ತಿರುವ ಮೋದಿಯವರ ಪ್ರಯತ್ನವನ್ನು ಸಚಿವದ್ವಯರು ಶ್ಲಾಘಿಸಿದರು.

ಈವರೆಗೆ ದೇಶದಲ್ಲಿ ಒಟ್ಟು 1,224 ಪಿಎಸ್‌ಎ ವೈದ್ಯಕೀಯ ಆಮ್ಲಜನಕ ಘಟಕಗಳನ್ನು ಪಿಎಂ ಕೇರ್ಸ್ ನಿಧಿ ಅಡಿಯಲ್ಲಿ ಸ್ಥಾಪಿಸಲಾಗಿದೆ. ಇದರಲ್ಲಿ 1,100ಕ್ಕೂ ಹೆಚ್ಚು ಘಟಕಗಳು ಪ್ರತಿ ದಿನ 1,750 ಮೆಟ್ರಿಕ್ ಟನ್‌ನಷ್ಟು ಆಮ್ಲಜನಕವನ್ನು ಉತ್ಪಾದಿಸುತ್ತವೆ.

ಹೊಸ ಎತ್ತರಕ್ಕೆ ಅಭಿವೃದ್ಧಿ: 'ಉತ್ತರಾಖಂಡದ ಆಡಳಿತ ಚುಕ್ಕಾಣಿ ಹಿಡಿದಿರುವ ಹೊಸ ತಂಡಕ್ಕೆ ಕೇಂದ್ರ ಸರ್ಕಾರ ಎಲ್ಲ ರೀತಿಯ ನೆರವು ನೀಡುವುದು. 'ಡಬಲ್ ಎಂಜಿನ್' ಚಾಲಿತ ರಾಜ್ಯದ ಅಭಿವೃದ್ಧಿ ಹೊಸ ಎತ್ತರ ತಲುಪಲಿದೆ' ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

35 ವೈದ್ಯಕೀಯ ಆಮ್ಲಜನಕ ಘಟಕಗಳನ್ನು ವರ್ಚುವಲ್ ಆಗಿ ಉದ್ಘಾಟಿಸಿದ ನಂತರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೋವಿಡ್‌ನ 2ನೇ ಅಲೆ ಸಂದರ್ಭದಲ್ಲಿ ದೇಶದಲ್ಲಿ ವೈದ್ಯಕೀಯ ಆಮ್ಲಜನಕಕ್ಕೆ ಬೇಡಿಕೆ ಹೆಚ್ಚಾಯಿತು. ಇದಕ್ಕೆ ಪ್ರತಿಯಾಗಿ ವೈದ್ಯಕೀಯ ಆಮ್ಲಜನಕದ ಉತ್ಪಾದನೆಯನ್ನು 10 ಪಟ್ಟು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು.

'ಉತ್ತರಾಖಂಡ ರಾಜ್ಯ ರಚನೆಯಾಗಿ ಇನ್ನೇನು 25 ವರ್ಷಗಳು ತುಂಬಲಿವೆ. ಪ್ರಸ್ತುತ ರಾಜ್ಯದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳ ಜೊತೆಗೆ, ಬರುವ ದಿನಗಳಲ್ಲಿ ಆಗಬೇಕಾದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಜನರು ಹೆಜ್ಜೆ ಹಾಕುವುದು ಅಗತ್ಯ' ಎಂದೂ ಹೇಳಿದರು.



ಉತ್ತರಾಖಂಡದ ಹೃಷಿಕೇಶದ ಎಐಐಎಂಎಸ್‌ನಲ್ಲಿ ಪ್ರಧಾನಿ ಮೋದಿ ಅವರು ಆಮ್ಲಜನಕ ಘಟಕಗಳನ್ನು ಉದ್ಘಾಟಿಸಿದರು –ಪಿಟಿಐ ಚಿತ್ರ

ಮಕ್ಕಳಿಗೆ ಮಲೇರಿಯಾ ಲಸಿಕೆ: ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸು

ಜಿನಿವಾ (ಎಎಫ್‌ಪಿ): ಮಲೇರಿಯಾ ವಿರುದ್ಧದ ಮೊದಲ ಲಸಿಕೆಗೆ (ಆರ್‌ಟಿಎಸ್,ಎಸ್/ಎಎಸ್01) ವಿಶ್ವ ಆರೋಗ್ಯ ಸಂಸ್ಥೆ ಅನುಮೋದನೆ ನೀಡಿದೆ. ಅಲ್ಲದೇ, ಮಕ್ಕಳಿಗೆ ಈ ಲಸಿಕೆಯನ್ನು ನೀಡುವಂತೆಯೂ ಶಿಫಾರಸು ಮಾಡಿದೆ.


'ಘಾನಾ, ಕೀನ್ಯಾ ಹಾಗೂ ಮಲಾವಿ ದೇಶಗಳಲ್ಲಿ ಪ್ರಾಯೋಗಿಕವಾಗಿ ಈ ಲಸಿಕೆ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. 20 ಲಕ್ಷಕ್ಕೂ ಅಧಿಕ ಡೋಸ್‌ಗಳನ್ನು ನೀಡಲಾಗಿತ್ತು. ಲಸಿಕೆ ಪರಿಣಾಮಕಾರಿ ಎಂಬುದು ದೃಢಪಟ್ಟ ಕಾರಣ, ಈ ಲಸಿಕೆಯನ್ನು ಮಕ್ಕಳಿಗೆ ನೀಡುವಂತೆ ಶಿಫಾರಸು ಮಾಡಲು ನಿರ್ಧರಿಸಲಾಗಿದೆ' ಎಂದು ಸಂಸ್ಥೆಯ ಪ್ರಧಾನ ನಿರ್ದೇಶಕ ಟೆಡ್ರೊಸ್ ಅಧನೊಮ್ ಗೆಬ್ರೆಯೇಸಸ್ ಹೇಳಿದರು.

'ಮಲೇರಿಯಾ ವಿರುದ್ಧ ಲಸಿಕೆಯನ್ನು ಕಂಡುಹಿಡಿದಿರುವುದು ವೈಜ್ಞಾನಿಕ ಸಂಶೋಧನೆ ದೃಷ್ಟಿಯಿಂದ ಮಹತ್ವದ ಪ್ರಗತಿ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಜಾಗತಿಕ ಮಲೇರಿಯಾ ಕಾರ್ಯಕ್ರಮದ ನಿರ್ದೇಶಕ ಪೆಡ್ರೊ ಅಲಾನ್ಸೊ ಹೇಳಿದರು.

ಔಷಧ ಕಂಪನಿ ಜಿಎಸ್‌ಕೆ ಈ ಲಸಿಕೆಯನ್ನು ಅಭಿವೃದ್ಧಿಪಡಿಸಿದೆ. ಸೋಂಕು ಹೊಂದಿರುವ ಅನಾಫಿಲಿಸ್ ಸೊಳ್ಳೆ ಕಚ್ಚುವುದರಿಂದ ಮಲೇರಿಯಾ ಜ್ವರ ಕಾಣಿಸಿಕೊಳ್ಳುತ್ತದೆ. ವಿಶ್ವದಲ್ಲಿ ಪ್ರತಿ ವರ್ಷ 4 ಲಕ್ಷಕ್ಕೂ ಅಧಿಕ ಮಕ್ಕಳು ಈ ಜ್ವರದಿಂದಾಗಿ ಸಾವನ್ನಪ್ಪುತ್ತಾರೆ. ಅದರಲ್ಲೂ ಆಫ್ರಿಕಾ ದೇಶಗಳಲ್ಲಿಯೇ ಮಕ್ಕಳ ಮರಣ ಪ್ರಮಾಣ ಅಧಿಕ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಸಾಹಿತ್ಯ: ಅಬ್ದುಲ್ ರಜಾಕ್ ಗುರ್ನಾಗೆ ನೊಬೆಲ್ ಪ್ರಶಸ್ತಿ



ಅಬ್ದುಲ್‌ರಜಾಕ್ ಗುರ್ನಾ

ಸ್ಟಾಕ್‌ಹೋಮ್: ತಾಂಜಾನಿಯಾ ಮೂಲದ ಕಾದಂಬರಿಕಾರ ಅಬ್ದುಲ್‌ರಜಾಕ್ ಗುರ್ನಾ ಅವರನ್ನು 2021ನೇ ಸಾಲಿನ ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

'ವಲಸಿಗರ ಜೀವನ ಹಾಗೂ ಸಂಸ್ಕೃತಿ ಮೇಲೆ ವಸಾಹತುಶಾಹಿಯ ಪರಿಣಾಮಗಳೇ ಅಬ್ದುಲ್ ರಜಾಕ್ ಗುರ್ನಾ ಅವರ ಕಾದಂಬರಿಗಳ ಕಥಾವಸ್ತು. ಈ ಪರಿಣಾಮಗಳನ್ನು ಚಿತ್ರಿಸುವಾಗ ರಾಜಿಯಾಗದ ದಿಟ್ಟತನವನ್ನು ಅವರ ಕೃತಿಗಳಲ್ಲಿ ಗುರುತಿಸಬಹುದು' ಎಂದು ನೊಬೆಲ್ ಪ್ರಶಸ್ತಿ ಸಮಿತಿ ಗುರುವಾರ ತಿಳಿಸಿದೆ.

ಅಬ್ದುಲ್‌ರಜಾಕ್ ಗುರ್ನಾ ಅವರು 10 ಕಾದಂಬರಿಗಳನ್ನು ಬರೆದಿದ್ದಾರೆ. 'ಮೆಮೊರಿ ಆಫ್ ಡಿಪಾರ್ಚರ್', 'ಪಿಲಿಗ್ರಿಮ್ಸ್ ವೇ', 'ಬೈ ದ ಸಿ' ಹಾಗೂ 'ಡಸರ್ಷನ್' ಪ್ರಮುಖ ಕೃತಿಗಳಾಗಿವೆ. 'ಪ್ಯಾರಡೈಜ್' ಕೃತಿ 1994ರಲ್ಲಿ ಬೂಕರ್ ಪ್ರಶಸ್ತಿಯ ಅಂತಿಮಪಟ್ಟಿಯಲ್ಲಿ ಸ್ಥಾನ ಪಡೆದಿತ್ತು.

ಗುರ್ನಾ ಅವರು ಬ್ರಿಟನ್‌ನಲ್ಲಿ ನೆಲೆಸಿದ್ದಾರೆ. ಕೆಂಟ್ ವಿಶ್ವವಿದ್ಯಾಲಯದ ಸಾಹಿತ್ಯ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತಿ ಹೊಂದಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬಲೂಚಿಸ್ತಾನ: ಭೂಕಂಪ, 22 ಸಾವು


ಕರಾಚಿ, ಪಾಕಿಸ್ತಾನ (ಪಿಟಿಐ): ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಪರ್ವತ ಪ್ರದೇಶದಲ್ಲಿ ಗುರುವಾರ ಮುಂಜಾನೆ ಸಂಭವಿಸಿದ 5.9 ತೀವ್ರತೆಯ ಪ್ರಬಲ ಭೂಕಂಪದಲ್ಲಿ ಹಲವು ಮನೆಗಳು ಕುಸಿದಿದ್ದು ಕನಿಷ್ಠ 22 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತರಲ್ಲಿ ಆರು ಮಂದಿ ಮಕ್ಕಳು. ದುರಂತದಲ್ಲಿ 300ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮರಣ ಪ್ರಮಾಣ ಹೆಚ್ಚಾಗಬಹುದು ಎಂದು ವಿಪತ್ತು ನಿರ್ವಹಣಾ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಜಿಯೊ ನ್ಯೂಸ್ ವರದಿ ಮಾಡಿದೆ.

ಭೂಕಂಪದ ಕೇಂದ್ರ ಬಿಂದು ಹರ್ನೈ ಬಳಿ ಸುಮಾರು 15 ಕಿ.ಮೀ. ಆಳದಲ್ಲಿತ್ತು ಎಂದು ಇಸ್ಲಾಮಾಬಾದ್‌ನ ರಾಷ್ಟ್ರೀಯ ಭೂಕಂಪನ ಮೇಲ್ವಿಚಾರಣಾ ಕೇಂದ್ರವು ವರದಿ ಮಾಡಿದೆ.

ಘಟನೆಯಲ್ಲಿ ನಿಖರವಾದ ಹಾನಿ ಬಗ್ಗೆ ಇನ್ನೂ ಮಾಹಿತಿ ದೊರೆತಿಲ್ಲ ಎಂದೂ ಅದು ಹೇಳಿದೆ.

ಷೇರುಪೇಟೆ ವಹಿವಾಟು 488



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,646
ಇಂದಿನ ಅಂತ್ಯ	17,790
▲	144
ದಿನದ ಗರಿಷ್ಠ	17,857

ವಿನಿಮಯ ದರ

$ ಡಾಲರ್	74.79
£ ಪೌಂಡ್	101.55
€ ಯುರೊ	86.40
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1475 (1475)
ಸೋಯಾ (ರಿಫೈನ್ಡ್)	₹1357 (1375)
ಸೂರ್ಯಕಾಂತಿ (ರಿಫೈನ್ಡ್)	₹1405(1400)
ಪಾಮೋಲಿನ್	₹1230 (1250)

ಬ್ಯಾಂಕ್, ಗ್ರಾಹಕ ಬಳಕೆ, ವಾಹನ ವಲಯದ ಷೇರುಗಳ ಉತ್ತಮ ಖರೀದಿ

ಷೇರುಪೇಟೆ ವಹಿವಾಟು ಚೇತರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಗುರುವಾರ ಸಕಾರಾತ್ಮಕ ಹಾದಿಗೆ ಮರಳಿದವು. ಬ್ಯಾಂಕ್, ಗ್ರಾಹಕ ಬಳಕೆ ಮತ್ತು ವಾಹನ ವಲಯದ ಷೇರುಗಳು ಉತ್ತಮ ಖರೀದಿ ವಹಿವಾಟು ಕಂಡವು. ಟಿಸಿಎಸ್ ಕಂಪನಿಯು ಶುಕ್ರವಾರ ತನ್ನ ಆರ್ಥಿಕ ಫಲಿತಾಂಶ ಘೋಷಣೆ ಮಾಡಲಿರುವುದರಿಂದ ಐ.ಟಿ. ವಲಯದ ಷೇರುಗಳು ಗಳಿಕೆ ಹಾದಿಯಲ್ಲಿದ್ದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 488 ಅಂಶ ಏರಿಕೆಯಾಗಿ 59,677 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 144 ಅಂಶ ಹೆಚ್ಚಾಗಿ 17,790 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.



ಕಚ್ಚಾ ತೈಲ ದರ ಇಳಿಕೆ ಮತ್ತು ಅಮೆರಿಕದ ಬಾಂಡ್ ಗಳಿಕೆ ಹಾಗೂ ಅಮೆರಿಕದ ಆಡಳಿತವು ಸಾಲದ ಮಿತಿಯನ್ನು ಹೆಚ್ಚಿಸುವ ನಿರ್ಧಾರಕ್ಕೆ ಮುಂದಾಗಿರುವುದು ಜಾಗತಿಕ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟಿಗೆ ಕಾರಣವಾಯಿತು. ಇದು ದೇಶಿ ಷೇರುಪೇಟೆಗಳ ಮೇಲೆಯೂ ಪ್ರಭಾವ ಬೀರಿತು ಎಂದು ಆಶಿಕಾ ಸ್ಟಾಕ್ ಬ್ರೋಕಿಂಗ್‌ನ ಸಂಶೋಧನಾ ಮುಖ್ಯಸ್ಥ ಅರಿಜಿತ್ ಮಲಾಕರ್ ಹೇಳಿದ್ದಾರೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 19 ಪೈಸೆ ಹೆಚ್ಚಾಗಿ ₹ 74.79ರಂತೆ ವಿನಿಮಯಗೊಂಡಿತು.

ಟೈಟಾನ್ ಬಂಡವಾಳ ವೃದ್ಧಿ

ದಿನದ ವಹಿವಾಟಿನಲ್ಲಿ ಟೈಟಾನ್ ಕಂಪನಿಯ ಷೇರು ಮೌಲ್ಯವು ಶೇ 11ರಷ್ಟು ಏರಿಕೆ ಆಗಿದ್ದು, ಇದರಿಂದ ಕಂಪನಿಯ ಒಟ್ಟಾರೆ ಬಂಡವಾಳ ಮೌಲ್ಯವು ₹ 2.10 ಲಕ್ಷ ಕೋಟಿಗೆ ಏರಿಕೆ ಕಂಡಿತು.

ಬಿಎಸ್‌ಇನಲ್ಲಿ ಕಂಪನಿಯ ಷೇರು ಮೌಲ್ಯವು ಶೇ 11.69ರಷ್ಟು ಹೆಚ್ಚಾಗಿ ₹ 2,376ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಕಂಪನಿ ಷೇರು ಮೌಲ್ಯ ಶೇ 11.01ರಷ್ಟು ಹೆಚ್ಚಾಗಿ 52 ವಾರಗಳ ಗರಿಷ್ಠ ಮಟ್ಟವಾದ ₹ 2,384ಕ್ಕೆ ತಲುಪಿತು. ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಬೇಡಿಕೆಯಲ್ಲಿ ಉತ್ತಮ ಚೇತರಿಕೆ ಕಂಡುಬಂದಿದೆ ಎಂದು ಕಂಪನಿಯು ಬುಧವಾರ ಹೇಳಿಕೆ ನೀಡಿತ್ತು. ಇದರಿಂದಾಗಿ ಷೇರುಗಳ ಮೌಲ್ಯ ಹೆಚ್ಚಳವಾಗಿದೆ.

ಎಕ್ಸ್‌ಯುವಿ700: 57 ನಿಮಿಷದಲ್ಲಿ 25 ಸಾವಿರ ಬುಕಿಂಗ್

ನವದೆಹಲಿ (ಪಿಟಿಐ): ಹೊಸ ವಾಹನ 'ಎಕ್ಸ್‌ಯುವಿ700'ಗೆ 57 ನಿಮಿಷಗಳಲ್ಲಿ 25 ಸಾವಿರ ಬುಕಿಂಗ್ ಬಂದಿವೆ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಗುರುವಾರ ತಿಳಿಸಿದೆ.

ಮೊದಲ 25 ಸಾವಿರ 'ಎಕ್ಸ್‌ಯುವಿ700' ವಾಹನಗಳಿಗೆ ₹ 11.99 ಲಕ್ಷದಿಂದ ₹ 22.89 ಲಕ್ಷದವರೆಗೆ (ಎಕ್ಸ್ ಷೋರೂಂ) ಪರಿಚಯಾತ್ಮಕ ಬೆಲೆಯನ್ನು ಕಂಪನಿ ಘೋಷಿಸಿತ್ತು. ಎರಡನೇ ಹಂತದ ಬುಕಿಂಗ್ ಅಕ್ಟೋಬರ್ 8ರಿಂದ ಆರಂಭ ಆಗಲಿದ್ದು, ಬೆಲೆಯು ₹ 12.49 ಲಕ್ಷದಿಂದ ₹ 22.99 ಲಕ್ಷದವರೆಗೆ ಇರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಡೀಸೆಲ್ ಮತ್ತು ಪೆಟ್ರೋಲ್ ಎಂಜಿನ್‌ನ ಮ್ಯಾನುಯಲ್ ಮತ್ತು ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಇದು ಲಭ್ಯವಿದೆ.

ಜಿಇಎಫ್ ಇಂಡಿಯಾಗೆ ಪ್ಲಾಟಿನಂ ಪ್ರಶಸ್ತಿ


ಬೆಂಗಳೂರು: ಫ್ರೀಡಂ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ ತಯಾರಕ ಕಂಪನಿಯಾದ ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್‌ಗೆ (ಜಿಇಎಫ್ ಇಂಡಿಯಾ) 2021ನೇ ಸಾಲಿನ ಗ್ಲೋಬಾಯಿಲ್ ಪ್ರಶಸ್ತಿಗಳ ಪೈಕಿ, ದೇಶಕ್ಕೆ 'ಅತ್ಯಂತ ಹೆಚ್ಚಿನ ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದು' ಮಾಡಿಕೊಂಡ ವಿಭಾಗದಲ್ಲಿ ಪ್ಲಾಟಿನಂ ಪ್ರಶಸ್ತಿ ಲಭಿಸಿದೆ.

ಅಡುಗೆ ಎಣ್ಣೆ ಉದ್ಯಮದಲ್ಲಿ ಗ್ಲೋಬಾಯಿಲ್ ಪ್ರಶಸ್ತಿಗಳು ಅತ್ಯಂತ ವಿಶ್ವಾಸಾರ್ಹತೆ ಹೊಂದಿವೆ ಎಂದು ಕಂಪನಿಯ ಪ್ರಕಟಣೆ ಹೇಳಿದೆ. ಕಚ್ಚಾ ಸೂರ್ಯಕಾಂತಿ ಎಣ್ಣೆಯನ್ನು ಜಿಇಎಫ್ ಇಂಡಿಯಾ ಕಂಪನಿಯ 3 ಸಂಸ್ಕರಣಾ ಘಟಕಗಳಲ್ಲಿ ಸಂಸ್ಕರಿಸಿ, ದೇಶದ ಎಲ್ಲೆಡೆ ಮಾರಾಟ ಮಾಡಲಾಗುತ್ತದೆ. 'ಪ್ರಶಸ್ತಿ ಪಡೆದಿರುವುದು ನಮಗೆ ಸಂತಸ ತಂದಿದೆ. ಇದಕ್ಕೆ ನಾವು ನಮ್ಮ ಗ್ರಾಹಕರು, ವಿತರಕರು ಮತ್ತು ಸಣ್ಣ ವ್ಯಾಪಾರಸ್ಥರಿಗೆ ಧನ್ಯವಾದ ಅರ್ಪಿಸುತ್ತೇವೆ' ಎಂದು ಫ್ರೀಡಂ ಹೆಲ್ತಿ ಕುಕಿಂಗ್ ಆಯಿಲ್ಸ್‌ನ ಮಾರಾಟ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ ಹೇಳಿದ್ದಾರೆ.

ದಿನವೂ ಏರುತ್ತಲೇ ಇದೆ ಪೆಟ್ರೋಲ್, ಡೀಸೆಲ್ ದರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೈಸೆಗಳ ಲೆಕ್ಕದಲ್ಲಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸುತ್ತಲೇ ಇವೆ. ಗುರುವಾರ ಪೆಟ್ರೋಲ್ ದರವನ್ನು ಲೀಟರಿಗೆ 30 ಪೈಸೆ ಮತ್ತು ಡಿಸೆಲ್ ದರ ಲೀಟರಿಗೆ 35 ಪೈಸೆಗಳಷ್ಟು ಏರಿಕೆ ಮಾಡಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಏರಿಕೆಗೆ ಅನುಗುಣವಾಗಿ ಕಂಪನಿಗಳು ದೇಶದಲ್ಲಿ ಇಂಧನ ದರ ಹೆಚ್ಚಿಸುತ್ತಿವೆ. ಗುರುವಾರದ ದರ ಏರಿಕೆಯಿಂದಾಗಿ ದೇಶದಾದ್ಯಂತ ಪೆಟ್ರೋಲ್, ಡೀಸೆಲ್ ದರಗಳು ಗರಿಷ್ಠ ಮಟ್ಟ ತಲುಪಿವೆ. ಗುರುವಾರದ ದರ ಏರಿಕೆಯಿಂದಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 106.77 ಮತ್ತು ಡೀಸೆಲ್ ದರ ₹ 97.32ಕ್ಕೆ ತಲುಪಿದೆ.



ದೆಹಲಿಯಲ್ಲಿ ಪೆಟ್ರೋಲ್ ದರ ₹ 103.24 ಮತ್ತು ಡೀಸೆಲ್ ₹ 91.42ಕ್ಕೆ ತಲುಪಿದೆ. ಸೆಪ್ಟೆಂಬರ್ 28ರಿಂದ ಇಲ್ಲಿಯವರೆಗೆ ಪೆಟ್ರೋಲ್ ದರವು ಲೀಟರಿಗೆ ₹ 3.15ರಷ್ಟು ಏರಿಕೆ ಆಗಿದ್ದರೆ, ಡೀಸೆಲ್ ದರವು ಸೆ. 24ರಿಂದ ಇಲ್ಲಿಯವರೆಗೆ ಲೀಟರಿಗೆ ₹ 2.15ರಷ್ಟು ಹೆಚ್ಚಾಗಿದೆ.

ಡೆಹರಾಡೂನ್, ಚಂಡೀಗಢ, ಗುವಾಹತಿ ಮತ್ತು ರಾಂಚಿಯಲ್ಲಿ ಮಾತ್ರವೇ ಪೆಟ್ರೋಲ್ ದರವು ಲೀಟರಿಗೆ ಸದ್ಯ ₹ 100ಕ್ಕಿಂತ ಕಡಿಮೆ ಮಟ್ಟದಲ್ಲಿದೆ. ಡೀಸೆಲ್ ದರವು ಮಧ್ಯಪ್ರದೇಶ, ರಾಜಸ್ಥಾನ, ಒಡಿಶಾ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಹಲವು ನಗರಗಳಲ್ಲಿ ಈಗಾಗಲೇ ₹ 100ರ ಗಡಿ ದಾಟಿದೆ.

7–ಇಲೆವೆನ್ ಮಳಿಗೆ ಆರಂಭಿಸಲಿರುವ ರಿಲಯನ್ಸ್

ನವದೆಹಲಿ (ಪಿಟಿಐ): ಮುಕೇಶ್ ಅಂಬಾನಿ ಮಾಲೀಕತ್ವದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ದೇಶದಲ್ಲಿ 7–ಇಲೆವೆನ್ ಮಳಿಗೆಗಳನ್ನು ಆರಂಭಿಸಲಿದೆ. ಫ್ಯೂಚರ್ ಸಮೂಹವು 7–ಇಲೆವೆನ್ ಜೊತೆ ಒಪ್ಪಂದ ಮುರಿದುಕೊಂಡ ಬೆನ್ನಲ್ಲೇ ರಿಲಯನ್ಸ್ ಈ ವಿಚಾರ ತಿಳಿಸಿದೆ.

7–ಇಲೆವೆನ್‌ನ ಮೊದಲ ಮಳಿಗೆಯು ಮುಂಬೈನಲ್ಲಿ ಶನಿವಾರ ಆರಂಭವಾಗಲಿದೆ. ಇದಾದ ನಂತರದಲ್ಲಿ ತ್ವರಿತವಾಗಿ ಬೇರೆ ಬೇರೆ ಕಡೆಗಳಲ್ಲಿಯೂ ಇದು ಆರಂಭ ಆಗಲಿದೆ ಎಂದು ರಿಲಯನ್ಸ್ ರಿಟೇಲ್ ಪ್ರಕಟಣೆ ತಿಳಿಸಿದೆ. ಫ್ಯೂಚರ್ ರಿಟೇಲ್ ಮತ್ತು 7–ಇಲೆವೆನ್ ಕಂಪನಿಗಳು 2019ರ ಫೆಬ್ರುವರಿಯಲ್ಲಿ ಒಪ್ಪಂದ ಮಾಡಿಕೊಂಡಿದ್ದವು. ಆದರೆ ಮಳಿಗೆಯನ್ನು ತೆರೆಯಲು ಅಥವಾ ಫ್ರ್ಯಾಂಚೈಸ್ ಶುಲ್ಕ ಪಾವತಿಸಲು ಫ್ಯೂಚರ್‌ಗೆ ಆಗದಿದ್ದ ಕಾರಣದಿಂದಾಗಿ ಒಪ್ಪಂದ ರದ್ದು ಮಾಡಲಾಯಿತು.

'ಭಾರತದ ಮಾರುಕಟ್ಟೆ ಪ್ರವೇಶಿಸಲು ಇದು ನಮಗೆ ಸೂಕ್ತ ಸಮಯ' ಎಂದು 7–ಇಲೆವೆನ್ ಕಂಪನಿಯ ಅಧ್ಯಕ್ಷ ಜೋ ಡೆಪಿಂಟೊ ಹೇಳಿದ್ದಾರೆ. 7–ಇಲೆವೆನ್ ಕಂಪನಿಯು ಅಮೆರಿಕದ ಟೆಕ್ಸಾಸ್ ಮೂಲದ್ದು. ಇದು ಫ್ರ್ಯಾಂಚೈಸ್‌ಗಳ ಮೂಲಕ ಹಾಗೂ ನೇರವಾಗಿ ಒಟ್ಟು 77 ಸಾವಿರಕ್ಕಿಂತ ಹೆಚ್ಚಿನ ಮಳಿಗೆಗಳನ್ನು ಜಗತ್ತಿನ 18 ದೇಶಗಳಲ್ಲಿ ಹೊಂದಿದೆ.

ಟಿವಿಎಸ್ ಜುಪಿಟರ್ 125ಸಿಸಿ ಸ್ಕೂಟರ್ ಬಿಡುಗಡೆ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿವಿಎಸ್ ಮೋಟರ್ ಕಂಪನಿಯು ತನ್ನ ಜುಪಿಟರ್ ಸ್ಕೂಟರ್‌ನ 125 ಸಿಸಿ ಆವೃತ್ತಿಯನ್ನು ಗುರುವಾರ ಬಿಡುಗಡೆ ಮಾಡಿದೆ. ದೆಹಲಿಯಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 73,400ರಿಂದ ಆರಂಭ ಆಗುತ್ತದೆ.

ಸೆಮಿ ಡಿಜಿಟಲ್ ಸ್ಪೀಡೊಮೀಟರ್, ಸೀಟಿನ ಅಡಿಯಲ್ಲಿ 33 ಲೀಟರ್ ಸಾಮರ್ಥ್ಯದ ಅತ್ಯಧಿಕ ಸಂಗ್ರಹಣಾ ಸ್ಥಳಾವಕಾಶ, ಎರಡು ಹೆಲ್ಮೆಟ್ ಇಡುವಷ್ಟು ಜಾಗ, ದೊಡ್ಡದಾದ ಸೀಟ್, ಆಕರ್ಷಕ ವಿನ್ಯಾಸ ಮತ್ತು ಸರಿಸಾಟಿಯಿಲ್ಲದ ಮೈಲೇಜ್ ಹೊಂದಿದೆ ಎಂದು ಕಂಪನಿಯು ಹೇಳಿದೆ.

'ಹೊಸ ಸ್ಕೂಟರ್ ದೃಢವಾಗಿದ್ದು, ಹೆಚ್ಚುವರಿಯಾಗಿ ವಿವಿಧ ಸೌಲಭ್ಯಗಳನ್ನು ಹೊಂದಿದೆ' ಎಂದು ಟಿವಿಎಸ್ ಮೋಟರ್ ಕಂಪನಿಯ ಸಿಇಒ ಕೆ.ಎನ್. ರಾಧಾಕೃಷ್ಣನ್ ತಿಳಿಸಿದ್ದಾರೆ.

ವಾಹನ ವಿತರಕರ ಸಂಘಟನೆಗಳ ಒಕ್ಕೂಟ ಮಾಹಿತಿ

ವಾಹನಗಳ ರಿಟೇಲ್ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ವಾಹನಗಳ ರಿಟೇಲ್ ಮಾರಾಟವು 2020ರ ಸೆಪ್ಟೆಂಬರ್‌ಗೆ ಹೋಲಿಸಿದರೆ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಶೇಕಡ 5ರಷ್ಟು ಇಳಿಕೆ ಆಗಿದೆ ಎಂದು ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಮಂಗಳವಾರ ತಿಳಿಸಿದೆ.

ದ್ವಿಚಕ್ರ ವಾಹನ ಮತ್ತು ಟ್ರ್ಯಾಕ್ಟರ್ ಮಾರಾಟದಲ್ಲಿ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಅದು ಹೇಳಿದೆ. 2020ರ ಸೆಪ್ಟೆಂಬರ್‌ನಲ್ಲಿ ಒಟ್ಟು ಮಾರಾಟವು 13.68 ಲಕ್ಷ ಇತ್ತು. 2021ರ ಸೆಪ್ಟೆಂಬರ್‌ನಲ್ಲಿ 12.96 ಲಕ್ಷ ವಾಹನಗಳ ಮಾರಾಟ ಆಗಿದೆ.

ದ್ವಿಚಕ್ರ ವಾಹನ ಮಾರಾಟವು 10.33 ಲಕ್ಷದಿಂದ 9.14 ಲಕ್ಷಕ್ಕೆ, ಅಂದರೆ ಶೇ 11.54ರಷ್ಟು, ಇಳಿಕೆ ಆಗಿದೆ. ಟ್ರ್ಯಾಕ್ಟರ್‌ಗಳ ರಿಟೇಲ್ ಮಾರಾಟ 69,462 ರಿಂದ 52,896ಕ್ಕೆ (ಶೇಕಡ 23.85ರಷ್ಟು) ಕಡಿಮೆ ಆಗಿದೆ.



ಪ್ರಯಾಣಿಕ ವಾಹನ ಮಾರಾಟ ಶೇ 16.32ರಷ್ಟು ಹೆಚ್ಚಾಗಿದೆ. ವಾಣಿಜ್ಯ ವಾಹನಗಳ ಮಾರಾಟವು ಶೇ 46.64ರಷ್ಟು, ತ್ರಿಚಕ್ರ ವಾಹನಗಳ ಮಾರಾಟ ಶೇ 50.9ರಷ್ಟು ಏರಿಕೆ ಆಗಿದೆ. ಸೆಮಿಕಂಡಕ್ಟರ್ ಕೊರತೆಯಿಂದಾಗಿ 150ಸಿಸಿ ವಿಭಾಗದ ಮೇಲೆ ಪರಿಣಾಮ ಉಂಟಾಗುತ್ತಿದೆ ಎಂದು ಒಕ್ಕೂಟದ ಅಧ್ಯಕ್ಷ ವೆಂಕಟೇಶ್ ಗುಲಾಟಿ ಹೇಳಿದ್ದಾರೆ.

ಈ ವರ್ಷದ ಹಬ್ಬದ ಋತುವಿನಲ್ಲಿಯೂ ಸೆಮಿಕಂಡಕ್ಟರ್ ಕೊರತೆಯು ಪ್ರಯಾಣಿಕ ವಾಹನ ಮಾರಾಟದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಲಿದೆ. ವಾಹನ ವಿತರಕರ ಬಳಿಕ ಪ್ರಸಕ್ತ ಹಣಕಾಸು ವರ್ಷದಲ್ಲಿ ದಾಸ್ತಾನು ಮಿತಿಯು 15ರಿಂದ 20 ದಿನಗಳಿಗೆ ಸಾಕಾಗುವಷ್ಟು ಮಾತ್ರ ಇದೆ. ಪ್ರಯಾಣಿಕ ವಾಹನಕ್ಕೆ ಹೆಚ್ಚು ಬೇಡಿಕೆ ಇರುವುದರಿಂದ ಗ್ರಾಹಕರು ಹೊಸ ವಾಹನ ಖರೀದಿಗೆ ಕಾಯಬೇಕಾದ ಅವಧಿ ಹೆಚ್ಚುತ್ತಿದೆ ಎಂದು ಅವರು ತಿಳಿಸಿದ್ದಾರೆ.

ವಾಹನಗಳ ರಿಟೇಲ್ ಮಾರಾಟವು ಕಳೆದ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಗೆ ಹೋಲಿಸಿದರೆ ಈ ಬಾರಿ ಶೇ 35ರಷ್ಟು ಏರಿಕೆ ಆಗಿದೆ. ಆದರೆ 2019ರ ಅವಧಿಗೆ ಹೋಲಿಸಿದರೆ ಶೇ 29ರಷ್ಟು ಇಳಿಕೆ ಆಗಿದೆ.

ಎನ್‌ಎಂಡಿಸಿಗೆ ಮೊಹಂತಿ ನಿರ್ದೇಶಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಮಾಲೀಕತ್ವದ ಎನ್‌ಎಂಡಿಸಿ ಲಿಮಿಟೆಡ್‌ನ ನಿರ್ದೇಶಕ (ಉತ್ಪಾದನೆ) ಆಗಿ ಡಿ.ಕೆ. ಮೊಹಂತಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಮೊಹಂತಿ ಅವರು 2015ರಲ್ಲಿ ಎನ್‌ಎಂಡಿಸಿ ಸೇರಿದರು. ಇವರು ರಾಷ್ಟ್ರೀಯ ಇಸ್ಪಾಟ್ ನಿಗಮ್ ಲಿಮಿಟೆಡ್ ಮೂಲಕ ತಮ್ಮ ವೃತ್ತಿ ಬದುಕು ಆರಂಭಿಸಿದರು. 33 ವರ್ಷಕ್ಕೂ ಹೆಚ್ಚಿನ ಸೇವಾ ಅನುಭವ ಇವರಿಗೆ ಇದೆ ಎಂದು ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	415
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಚಿತ್ರದುರ್ಗ	
ಆಪಿ	45219-45629
ಬೆಟ್ಟೆ	37810-38279
ಕೆಂಪುಗೋಟು	31600-32000
ರಾಶಿ	44739-45169
ಕುಮಟ	
ಚಿಪ್ಪು	25509-40789
ಕೋಕ	18109-37005
ಹಳೆಚಾಲಿ	42010-46099
ಹೊಸಚಾಲಿ	44149-46099
ಪುತ್ತೂರು	
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	33699-41009
ಚಾಲಿ	44099-46729
ಕೋಕ	23899-39099
ಕೆಂಪುಗೋಟು	32699-34389
ರಾಶಿ	42989-45599
ತಟ್ಟಿಬೆಟ್ಟೆ	40019-44649
ಯಲ್ಲಾಪುರ	
ಬಿಳಿಗೋಟು	32122-39769
ಕೋಕ	24299-34012
ಚಾಲಿ	41909-47190
ಕೆಂಪುಗೋಟು	31599-35600
ರಾಶಿ	43779-48989
ತಟ್ಟಿಬೆಟ್ಟೆ	40099-43060
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	44009-50069
ಗೊಬರಲು	17000-37500
ನ್ಯೂ ವೆರೈಟಿ	39410-43569
ಸಾಗರ	
ಬಿಳಿಗೋಟು	26899-39200
ಕೋಕ	12500-38700
ಚಾಲಿ	36001-45069
ಕೆಂಪುಗೋಟು	30899-38299
ರಾಶಿ	38599-45299
ಸಿಪ್ಪೆಗೋಟು	8519-24089
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	233-491
ದ್ವಿತಳಿ (ಬಿ.ವಿ)	332-551

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13550	13000	13400	193.45 ಸೆಂಟ್ಸ್
ಎಸಿ	6325	4800	5350	
ಆರ್‌ಪಿ	6100	6000	6275	ಲಂಡನ್
ಆರ್‌ಸಿ	3535	3500	3625	2116 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

7-10-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10550-10600
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1485 (1485)
ಒಂದು ವಾರದ ಡೆಲಿವರಿ	1480 (1480)
ಸೋಯಾ ಕಚ್ಚಾ	1230 (1237)
ಪಾಮ್ ವಾರದ ಡೆಲಿವರಿ	1228 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,650 (46,600)
ಬೆಳ್ಳಿ ಕೆ.ಜಿ 61,200 (60,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ **ಪ್ರಜಾಧ್ವನಿ**
ಜನರ ಮನದಾಳದ ಮಾತು

ಗಾರ್ಮೆಂಟ್ ಕಾರ್ಖಾನೆಯ ಕಾರ್ಮಿಕರ ತುಟ್ಟಿಭತ್ಯೆ ಏರಿಕೆಯನ್ನು ಮುಂದೂಡಿರುವುದು ಸರಿಯೆ?

QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ



Honda Motorcycle and Scooter India Pvt. Ltd., Registered Office: Commercial Complex II, Sector - 49-50, Golf Course Extension Road, Gurugram - 122018 (Haryana), India; Website: www.honda2wheelersindia.com; Customer Care: customercare@honda2wheelersindia.com

*ಹಣಕಾಸು ಯೋಜನೆ ಆಫರ್‌ಗಳು ಆಯ್ದ ಹಣಕಾಸು ಸಹಭಾಗಿಗಳಿಂದ ಆಯ್ದ ಮಾಡೆಲ್‌ಗಳ ಮೇಲೆ ಅವರ ಸ್ವಂತ ವಿವೇಚನೆಗೆ ತಕ್ಕಂತೆ ಗ್ರಾಹಕರ ಆಯ್ದ ಪ್ರೊಫೈಲ್‌ನಲ್ಲಿ ಲಭ್ಯವಿದೆ ಮತ್ತು ಹಣಕಾಸು ಸಂಸ್ಥೆಯ ನಿಯಮವನ್ನು ಅನುಸರಿಸಿದೆ. ಎರಡು ಆಫರ್‌ಗಳನ್ನು ಜೊತೆಯಾಗಿ ಸೇರಿಸಿ ಪಡೆಯುವಂತಿಲ್ಲ. ಕ್ಯಾಶ್‌ಬ್ಯಾಕ್ ಆಫರ್‌ನಲ್ಲಿ ₹5000 ವರೆಗೆ 5% ಕ್ಯಾಶ್‌ಬ್ಯಾಕ್ ಅನ್ನು ಪ್ರತಿ ಕಾರ್ಡ್‌ಗೆ ಕನಿಷ್ಠ ₹50,000 ವ್ಯವಹಾರ ಮಾಡಿದರೆ ಲಭ್ಯವಿರುತ್ತದೆ, ಆಯ್ದ SBI ಕ್ರೆಡಿಟ್ ಕಾರ್ಡ್‌ಗಳ ಮಾಸಿಕ ಕಂತು ವ್ಯವಹಾರದಲ್ಲಿ ಮಾತ್ರ ಆಫರ್ ನೀಡಲಾದ ತಿಂಗಳಲ್ಲಿ ಪ್ರತೀ ತಿಂಗಳಿಗೆ ಒಂದು ಬಾರಿ ಮಾತ್ರ ಲಭ್ಯವಿರುತ್ತದೆ. ಯೋಜನೆಯ ಮಾನ್ಯತೆ ಅವಧಿಯು 2021 ಸೆಪ್ಟೆಂಬರ್ 1ರಿಂದ ನವೆಂಬರ್ 30ರವರೆಗೆ ಇರಲಿದೆ. ಯೋಜನೆ ಮತ್ತು ಆಫರ್‌ಗಳು ಆಯ್ದ ಡೀಲರ್‌ಶಿಪ್‌ನಲ್ಲಿ ಮಾತ್ರವೇ ಲಭ್ಯವಿರಲಿದೆ ಮತ್ತು ಅದನ್ನು ಯಾವುದೂ ಪೂರ್ವ ಮಾಹಿತಿ ನೀಡದೆ ಯಾವ ಸಮಯದಲ್ಲಾದರು ಹಿಂಪಡೆಯಬಹುದು. ##₹5 ಲಕ್ಷ ಖಾಸಗಿ ಅಪಘಾತ ವಿಮಾ ರಕ್ಷಣೆಯು ಹೋಂಡಾ ಜಾಯ್ ಕ್ಲಬ್ ಲಾಯಲ್ಟಿ ಸದಸ್ಯತ್ವ ಖರೀದಿಯಲ್ಲಿ ಮಾತ್ರವೇ ಲಭ್ಯವಿರುತ್ತದೆ. ಎಲ್ಲಾ ಕ್ಲೇಮ್‌ಗಳು ವಿಮಾ ಸಂಸ್ಥೆಯ ನಿಯಮ ಮತ್ತು ಮಾರ್ಗಸೂಚಿಗಳಿಗೆ ಅನುಸಾರವಾಗಿ ಇತ್ಯರ್ಥವಾಗುತ್ತವೆ. ಹೆಚ್ಚಿನ ವಿವರಗಳಿಗೆ ದಯವಿಟ್ಟು HJC ಸಹಾಯವಾಣಿಗೆ 18005322555 ಕರೆಮಾಡಿ. *ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಈ ಜಾಹೀರಾತಿನಲ್ಲಿ ತೋರಿಸಲಾದ ಉತ್ಪನ್ನ (ಪ್ರೊಡಕ್ಟ್) ಮತ್ತು ಮಾರುಕಟ್ಟೆಯಲ್ಲಿ ಲಭ್ಯವಿರುವ ವಾಸ್ತವಿಕ ಉತ್ಪನ್ನದ (ಪ್ರೊಡಕ್ಟ್) ನಡುವೆ ವ್ಯತ್ಯಾಸವಿರಬಹುದು. ಉತ್ಪನ್ನದಲ್ಲಿ (ಪ್ರೊಡಕ್ಟ್) ತೋರಿಸಲಾದ ಬಿಡಿಭಾಗಗಳು (ಎಕ್ಸರಿ) ಸ್ಟಾಂಡರ್ಡ್ ಉತ್ಪನ್ನದ (ಪ್ರೊಡಕ್ಟ್) ಭಾಗವಾಗದೆ ಇರಬಹುದು.



ಕೊಹ್ಲಿ ಪಡೆಗೆ ಮ್ಯಾಕ್ಸ್‌ವೆಲ್ ಬ್ಯಾಟಿಂಗ್ ಬಲ: ಡೆಲ್ಲಿ ಕ್ಯಾಪಿಟಲ್ಸ್ ನಿರಾಳ

ಆರ್‌ಸಿಬಿಗೆ ಜಯದ ಕಾತರ

ದುಬೈ (ಪಿಟಿಐ): ಪ್ಲೇ ಆಫ್ ಹಂತದಲ್ಲಿ ಈಗಾಗಲೇ ಸ್ಥಾನ ಭದ್ರಪಡಿಸಿಕೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ಮುಖಾಮುಖಿಯಾಗಲಿವೆ.

ಕಳೆದ ಎರಡು ಪಂದ್ಯಗಳಲ್ಲಿ ಕ್ರಮವಾಗಿ ಮುಂಬೈ ಮತ್ತು ಚೆನ್ನೈ ವಿರುದ್ಧ ಜಯ ಗಳಿಸಿರುವ ಡೆಲ್ಲಿ ಕ್ಯಾಪಿಟಲ್ಸ್ ಹ್ಯಾಟ್ರಿಕ್ ಗೆಲುವಿನೊಂದಿಗೆ ಲೀಗ್ ಹಂತದ ಅಭಿಯಾನ ಮುಕ್ತಾಯಗೊಳಿಸುವ ನಿರೀಕ್ಷೆಯೊಂದಿಗೆ ಕಣಕ್ಕೆ ಇಳಿಯಲಿದೆ. ಸನ್‌ರೈಸರ್ಸ್ ವಿರುದ್ಧ ಬುಧವಾರ ಸೋಲು ಕಂಡಿರುವ ಬೆಂಗಳೂರು ತಂಡ ಕೂಡ ಜಯದೊಂದಿಗೆ ಪ್ಲೇ ಆಫ್ ಪಂದ್ಯಕ್ಕೆ ಸಜ್ಜಾಗಲು ಪ್ರಯತ್ನಿಸಲಿದೆ.

13 ಪಂದ್ಯಗಳಿಂದ 20 ಪಾಯಿಂಟ್ ಸಂಪಾದಿಸಿರುವ ಡೆಲ್ಲಿ ಪಾಯಿಂಟ್ ಪಟ್ಟಿಯ ಅಗ್ರ ಸ್ಥಾನವನ್ನು ಖಚಿತಪಡಿಸಿಕೊಂಡಿದೆ. ಸನ್‌ರೈಸರ್ಸ್ ವಿರುದ್ಧದ ಸೋಲಿನಿಂದಾಗಿ ಎರಡನೇ ಸ್ಥಾನಕ್ಕೇರುವ ಬೆಂಗಳೂರು ತಂಡದ ಕನಸು ಭಗ್ನಗೊಂಡಿದೆ. ಚೆನ್ನೈ ಸೂಪರ್ ಕಿಂಗ್ಸ್ ಗುರುವಾರದ ಪಂದ್ಯದಲ್ಲಿ ಸೋತಿದ್ದರೂ ಅದರ ರನ್ ರೇಟ್ ಬೆಂಗಳೂರಿಗಿಂತ ಹೆಚ್ಚು ಇದೆ.

ಎಬಿ ಡಿವಿಲಿಯರ್ಸ್, ದೇವದತ್ತ ಪಡಿಕ್ಕಲ್ ಮತ್ತು ವಿರಾಟ್ ಕೊಹ್ಲಿ ಅವರಂಥ ಹೆಸರಾಂತ ಬ್ಯಾಟರ್‌ಗಳು ಇದ್ದರೂ ಸನ್‌ರೈಸರ್ಸ್ ನೀಡಿದ ಸಾಮಾನ್ಯ ಗುರಿಯನ್ನು ಯಶಸ್ವಿಯಾಗಿ ಬೆನ್ನತ್ತಲು ಬೆಂಗಳೂರು ತಂಡಕ್ಕೆ ಸಾಧ್ಯವಾಗಿರಲಿಲ್ಲ. ಇದು, ತಂಡದ ಮೇಲೆ ಆತಂಕದ ಕಾರ್ಮೋಡ ಕವಿಯುವಂತೆ ಮಾಡಿದೆ. ಪಂದ್ಯ ಗೆಲ್ಲಿಸಲು ಗ್ಲೆನ್ ಮ್ಯಾಕ್ಸ್‌ವೆಲ್ ಸಾಕಷ್ಟು ಪ್ರಯತ್ನಪಟ್ಟಿದ್ದರು.



ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಹಿಂದಿನ ಪಂದ್ಯಗಳಲ್ಲಿ ಗೆಲುವಿನ ರೂವಾರಿಯಾಗಿದ್ದ ಅವರ ಮೇಲೆ ಈಗಲೂ ತಂಡ ಭರವಸೆ ಇರಿಸಿದೆ. ಮ್ಯಾಕ್ಸ್‌ವೆಲ್ ಈ ವರೆಗೆ ಒಟ್ಟು ಐದು ಅರ್ಧಶತಕಗಳೊಂದಿಗೆ 447 ರನ್ ಕಲೆ ಹಾಕಿದ್ದಾರೆ.

ದೇವದತ್ತ ಪಡಿಕ್ಕಲ್ ಜೊತೆ ವಿರಾಟ್ ಕೊಹ್ಲಿ ಲಯ ಕಂಡುಕೊಂಡರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ನಿರಾತಂಕವಾಗಿ ಆಡಬಹುದಾಗಿದೆ.

ಭರವಸೆಯಲ್ಲಿ ಡೆಲ್ಲಿ: ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಅತ್ಯುತ್ತಮ ಫಾರ್ಮ್‌ನಲ್ಲಿದೆ. ಪ್ಲೇ ಆಫ್ ಹಂತ ಸಮೀಪಿಸುತ್ತಿದ್ದಂತೆ ಹೆಚ್ಚು ಯಶಸ್ಸು ಕಂಡಿರುವ ತಂಡ ಹಿಂದಿನ ಐದು ಪಂದ್ಯಗಳ ಪೈಕಿ ನಾಲ್ಕನ್ನು ಗೆದ್ದುಕೊಂಡಿದೆ. ಪೃಥ್ವಿ ಶಾ ಅವರ ವೈಫಲ್ಯದ ನಡುವೆಯೂ ಡೆಲ್ಲಿ ತಂಡದ ಬ್ಯಾಟಿಂಗ್ ಬಳಗ ಬಲಿಷ್ಠವಾಗಿದೆ. 13 ಇನಿಂಗ್ಸ್‌ಗಳಲ್ಲಿ 501 ರನ್ ಗಳಿಸಿರುವ ಶಿಖರ್ ಧವನ್ ಅಗ್ರ ಕ್ರಮಾಂಕದಲ್ಲಿ ತಮ್ಮ ಸಾಮರ್ಥ್ಯ ಸಾಬೀತು ಮಾಡಿದ್ದಾರೆ.

ತಂಡದ ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದೆ.

ಮುಖಾಮುಖಿ

ಪಂದ್ಯಗಳು	26
ಬೆಂಗಳೂರು ಜಯ	15
ಡೆಲ್ಲಿ ಗೆಲುವು	10
ಫಲಿತಾಂಶವಿಲ್ಲ	1

ಮುಖಾಮುಖಿಯಲ್ಲಿ ಗರಿಷ್ಠ ರನ್

ಬೆಂಗಳೂರು	215
ಡೆಲ್ಲಿ	196

ಮುಖಾಮುಖಿಯಲ್ಲಿ ಕನಿಷ್ಠ ರನ್

ಬೆಂಗಳೂರು	137
ಡೆಲ್ಲಿ	95

ಪಂದ್ಯ ಆರಂಭ: ರಾತ್ರಿ 7.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪ್ಲೇ ಆಫ್: ಮುಂಬೈಗೆ ಕಠಿಣ ಸವಾಲು

ಅಬುಧಾಬಿ (ಪಿಟಿಐ): ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಇದೀಗ ವಿಷಮ ಸ್ಥಿತಿಯಲ್ಲಿದೆ. ಪ್ಲೇ ಆಫ್ ಕನಸು ಬಹುತೇಕ ಕಮರಿ ಹೋಗಿರುವ ತಂಡ ಕೊನೆಯ ಲೀಗ್ ಪಂದ್ಯದಲ್ಲಿ ಶುಕ್ರವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಸೆಣಸಲಿದೆ. ನಿರೀಕ್ಷೆಗೂ ಮೀರಿದ ರನ್‌ರೇಟ್‌ನೊಂದಿಗೆ ಗೆದ್ದರೆ ಮಾತ್ರ ತಂಡಕ್ಕೆ ಪ್ಲೇ ಆಫ್ ಹಂತ ತಲುಪಲು ಸಾಧ್ಯ.

ಹಿಂದಿನ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಎದುರು ಎಂಟು ವಿಕೆಟ್‌ಗಳಿಂದ ಗೆದ್ದಿರುವ ಕಾರಣ ತಂಡದ ಪ್ಲೇ ಆಫ್ ಆಸೆ ಜೀವಂತವಾಗಿ ಉಳಿದಿತ್ತು. ಆದರೆ ರನ್‌ರೇಟ್ (-0.048) ಕಡಿಮೆ ಇರುವುದರಿಂದ ಲೆಕ್ಕಾಚಾರದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ (+0.587) ತಂಡವನ್ನು ಹಿಂದಿಕ್ಕಬೇಕಾಗಿದೆ. ರಾಜಸ್ಥಾನ್ ರಾಯಲ್ಸ್ ಎದುರು ಗುರುವಾರದ ಪಂದ್ಯದಲ್ಲಿ ಭಾರಿ ಜಯ ಗಳಿಸಿದ್ದರಿಂದ ಕೋಲ್ಕತ್ತದ ಪಾಯಿಂಟ್ 14ಕ್ಕೇರಿದ್ದು ರನ್ ರೇಟ್ ಕೂಡ ಹೆಚ್ಚಿದೆ. ಮುಂಬೈ 12 ಪಾಯಿಂಟ್‌ಗಳನ್ನು ಹೊಂದಿದೆ.

ರಾಜಸ್ಥಾನ್ ರಾಯಲ್ಸ್ ಎದುರಿನ ಪಂದ್ಯದಲ್ಲಿ ಕೋಲ್ಕತ್ತ ಸೋತಿದ್ದರೆ ಶುಕ್ರವಾರದ ಪಂದ್ಯದಲ್ಲಿ ಎದುರಾಳಿಯನ್ನು ಮಣಿಸಿ ಮುಂಬೈ ಇಂಡಿಯನ್ಸ್ ಅಂತಿಮ ನಾಲ್ಕರಲ್ಲಿ ಸ್ಥಾನ ಗಳಿಸಲು ಅವಕಾಶ ಇತ್ತು. ಆದರೆ ಈಗ ರೋಹಿತ್ ಶರ್ಮಾ ಬಳಗದ ಲೆಕ್ಕಾಚಾರ ಬುಡಮೇಲಾಗಿದೆ.

ನಾಯಕ ಉತ್ತಮ ಆರಂಭ ಕಾಣುತ್ತಿದ್ದರೂ ಅದೇ ಲಯವನ್ನು ಮುಂದುವರಿಸಲಾಗುತ್ತಿಲ್ಲ. ನಿರೀಕ್ಷಿತ ಸಾಮರ್ಥ್ಯ ತೋರಲು ವಿಫಲರಾಗಿರುವ ಇಶಾನ್ ಕಿಶನ್ ಕಳೆದ ಪಂದ್ಯದಲ್ಲಿ ಅಜೇಯ ಅರ್ಧಶತಕ ಗಳಿಸಿರುವುದರಿಂದ ಅವರ ಆತ್ಮವಿಶ್ವಾಸ ಹೆಚ್ಚಿದೆ. ವೇಗಿ ಜಸ್‌ಪ್ರೀತ್ ಬೂಮ್ರಾ ನಿರೀಕ್ಷೆಗೆ ತಕ್ಕ ಬೌಲಿಂಗ್ ಮಾಡುತ್ತಿದ್ದಾರೆ. ಸನ್‌ರೈಸರ್ಸ್ ಪರ ಹಿಂದಿನ ಪಂದ್ಯದಲ್ಲಿ ಜೇಸನ್ ರಾಯ್ ಮತ್ತು ನಾಯಕ ಕೇನ್ ವಿಲಿಯಮ್ಸನ್ ಅಮೋಘ ಬ್ಯಾಟಿಂಗ್ ಮಾಡಿದ್ದರು. ಆದರೆ ತಂಡಕ್ಕೆ ಜಯ ತಂದುಕೊಡುವಲ್ಲಿ ಬೌಲರ್‌ಗಳು ಪ್ರಮುಖ ಪಾತ್ರ ವಹಿಸಿದ್ದರು. ಅದೇ ಲಯವನ್ನು ಉಳಿಸಿಕೊಳ್ಳುವ ವಿಶ್ವಾಸದಲ್ಲಿದೆ ತಂಡ.

ಮುಖಾಮುಖಿ

ಪಂದ್ಯಗಳು	17
ಮುಂಬೈ ಗೆಲುವು	9
ಹೈದರಾಬಾದ್ ಜಯ	8

ಆರಂಭ: ರಾತ್ರಿ 7.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಆವೇಶ್ ಖಾನ್ –ಪಿಟಿಐ ಚಿತ್ರ

ಚೆನ್ನೈ ವಿರುದ್ಧ ಪಂಜಾಬ್ ‘ಕಿಂಗ್’


ಡುಪ್ಲೆಸಿ ಆಟ ವ್ಯರ್ಥ; ಅಜೇಯ 98 ರನ್ ಗಳಿಸಿದ ನಾಯಕ ಕೆ.ಎಲ್‌.ರಾಹುಲ್

ದುಬೈ (ಪಿಟಿಐ): ನಾಯಕ ಕೆ.ಎಲ್. ರಾಹುಲ್ (ಔಟಾಗದೆ 98; 42 ಎಸೆತ, 7 ಬೌಂಡರಿ, 8 ಸಿಕ್ಸರ್) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಅಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಪಂಜಾಬ್ ಆರು ವಿಕೆಟ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಜಯ ಗಳಿಸಿತು. ಫಫ್ ಡು ಪ್ಲೆಸಿ (76; 55 ಎ, 8 ಬೌಂ, 2 ಸಿ) ಅವರ ಏಕಾಂಗಿ ಹೋರಾಟದ ಫಲವಾಗಿ ಚೆನ್ನೈ ಆರು ವಿಕೆಟ್‌ಗಳಿಗೆ 134 ರನ್ ಗಳಿಸಿತ್ತು. ಕಿಂಗ್ಸ್ 13 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು 139 ರನ್ ಗಳಿಸಿತು.

ಸಾಧಾರಣ ಮೊತ್ತ ಬೆನ್ನತ್ತಿದ ಕಿಂಗ್ಸ್ 46 ರನ್ ಗಳಿಸುವಷ್ಟರಲ್ಲಿ ಮಯಂಕ್ ಅಗರವಾಲ್ ಅವರ ವಿಕೆಟ್ ಕಳೆದುಕೊಂಡಿತು. ಅದೇ ಮೊತ್ತಕ್ಕೆ ಸರ್ಫರಾಜ್ ಖಾನ್ ಅವರ ವಿಕೆಟ್‌ಕೂಡ ಉರುಳಿತು. ಶಾರುಖ್ ಖಾನ್ ಜೊತೆಗೂಡಿ ರಾಹುಲ್ 34 ರನ್‌ಗಳನ್ನು ಸೇರಿಸಿದರು. ಶಾರುಖ್ ಕೇವಲ ಎಂಟು ರನ್ ಗಳಿಸಿ ಔಟಾದರು. ನಂತರ ಏಡನ್ ಮರ್ಕರಮ್ ಜೊತೆ 46 ರನ್ ಸೇರಿಸಿದರು. ವಿಕೆಟ್‌ಗಳು ಉರುಳುತ್ತಿದ್ದರೂ ರಾಹುಲ್ ಭರ್ಜರಿ ಬ್ಯಾಟಿಂಗ್ ಮುಂದುವರಿಸಿದರು. ಹೀಗಾಗಿ ತಂಡಕ್ಕೆ ಸುಲಭ ಜಯ ಒಲಿಯಿತು.

ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಂಡದ ಮೊತ್ತ 18 ರನ್ ಆಗಿದ್ದಾಗ ಋತುರಾಜ್ ಗಾಯಕವಾಡ್ ವಿಕೆಟ್ ಕಳೆದುಕೊಂಡರು. ಮೋಯಿನ್ ಅಲಿ, ರಾಬಿನ್ ಉತ್ತಪ್ಪ, ಅಂಬಟಿ ರಾಯುಡು ಮತ್ತು ನಾಯಕ ಮಹೇಂದ್ರ ಸಿಂಗ್ ಧೋನಿ ಅವರ ವಿಕೆಟ್‌ಗಳು ಬೇಗನೇ ಉರುಳಿದವು. ಆದರೆ ಫಫ್ ಡು ಪ್ಲೆಸಿ ಕ್ರೀಸ್‌ನಲ್ಲಿ ಭದ್ರವಾಗಿ ನೆಲೆಯೂರಿದರು. ರವೀಂದ್ರ ಜಡೇಜ ಜೊತೆ ಆರನೇ ವಿಕೆಟ್‌ಗೆ 67 ರನ್ ಸೇರಿಸಿ ಪ್ಲೆಸಿ ಔಟಾದರು.



ಕೆ.ಎಲ್‌.ರಾಹುಲ್ ಅವರ ಬ್ಯಾಟಿಂಗ್ ಶೈಲಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 6ಕ್ಕೆ 134 (20 ಓವರ್)

ಋತುರಾಜ್ ಸಿ ಶಾರುಖ್ ಬಿ ಅರ್ಷದೀಪ್ 12 (14 ಎ, 4x1), ಡುಪ್ಲೆಸಿ ಸಿ ರಾಹುಲ್ ಬಿ ಶಮಿ 76 (55 ಎ, 4x8, 6x2), ಮೋಯಿನ್ ಸಿ ರಾಹುಲ್ ಬಿ ಅರ್ಷದೀಪ್ 0 (6 ಎ), ಉತ್ತಪ್ಪ ಸಿ ಹರಪ್ರೀತ್ ಬಿ ಜೋರ್ಡಾನ್ 2 (6 ಎ), ಅಂಬಟಿ ಸಿ ಅರ್ಷದೀಪ್ ಬಿ ಜೋರ್ಡಾನ್ 4 (5 ಎ), ಧೋನಿ ಬಿ ಬಿಷ್ಣೋಯಿ 12 (15 ಎ, 4x2), ಜಡೇಜ ಔಟಾಗದೆ 15 (17 ಎ, 4x1), ಬ್ರಾವೊ ಔಟಾಗದೆ 4 (2 ಎ, 4x1)

ಇತರೆ: (ಬೈ 1, ವೈಡ್ 8) 9

ವಿಕೆಟ್ ಪತನ: 1-18 (ಋತುರಾಜ್ ಗಾಯಕವಾಡ್, 3.5), 2-29 (ಮೋಯಿನ್ ಅಲಿ, 5.4), 3-32 (ರಾಬಿನ್ ಉತ್ತಪ್ಪ, 6.5), 4-42 (ಅಂಬಟಿ ರಾಯುಡು, 8.3), 5-61 (ಮಹೇಂದ್ರ ಸಿಂಗ್ ಧೋನಿ, 11.6), 6-128 (ಫಫ್ ಡು ಪ್ಲೆಸಿ, 19.3)

ಬೌಲಿಂಗ್: ಮೊಹಮ್ಮದ್ ಶಮಿ 4-0-22-1, ಹರಪ್ರೀತ್ ಬ್ರಾರ್ 4-0-22-0, ಅರ್ಷದೀಪ್ ಸಿಂಗ್ 4-0-35-2, ಕ್ರಿಸ್ ಜೋರ್ಡಾನ್ 3-0-20-2, ರವಿ ಬಿಷ್ಣೋಯಿ 4-0-25-1, ಮೊಯಿಸಸ್ ಹೆನ್ರಿಕ್ಸ್ 1-0-9-0

ಪಂಜಾಬ್ ಕಿಂಗ್ಸ್ 4ಕ್ಕೆ 139 (13 ಓವರ್)

ರಾಹುಲ್ ಔಟಾಗದೆ 98 (42 ಎ, 4x7, 6x8), ಮಯಂಕ್ ಎಲ್‌ಬಿಡಬ್ಲ್ಯು ಠಾಕೂರ್ 12 (12 ಎ, 4x2), ಸರ್ಫರಾಜ್ ಸಿ ಡುಪ್ಲೆಸಿ ಬಿ ಠಾಕೂರ್ 0 (3 ಎ), ಶಾರುಖ್ ಸಿ ಬ್ರಾವೊ ಬಿ ಚಾಹರ್ 8 (10 ಎ, 6x1), ಮರ್ಕರಮ್ ಸಿ ಧೋನಿ ಬಿ ಠಾಕೂರ್ 13 (8 ಎ, 6x1), ಹೆನ್ರಿಕ್ಸ್ ಔಟಾಗದೆ 3 (3 ಎ).

ಇತರೆ: (ವೈಡ್ 5) 5

ವಿಕೆಟ್ ಪತನ: 1-46 (ಮಯಂಕ್ ಅಗರವಾಲ್, 4.3), 2-46 (ಸರ್ಫರಾಜ್ ಖಾನ್, 4.6), 3-80 (ಶಾರುಖ್ ಖಾನ್, 8.6), 4-126 (ಏಡನ್ ಮರ್ಕರಮ್, 12.1)

ಬೌಲಿಂಗ್: ದೀಪಕ್ ಚಾಹರ್ 4-0-48-1, ಜೋಶ್ ಹ್ಯಾಜಲ್‌ವುಡ್ 3-0-22-0, ಶಾರ್ದೂಲ್ ಠಾಕೂರ್ 3-0-28-3, ರವೀಂದ್ರ ಜಡೇಜ 1-0-9-0, ಡ್ವೇನ್ ಬ್ರಾವೊ 2-0-32-0

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 6 ವಿಕೆಟ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	13	10	3	00	00	20
ಚೆನ್ನೈ ಸೂಪರ್ ಕಿಂಗ್ಸ್	14	9	5	00	00	18
ಬೆಂಗಳೂರು	13	8	5	00	00	16
ಕೋಲ್ಕತ್ತ ನೈಟ್ ರೈಡರ್ಸ್	14	7	7	00	00	14
ಪಂಜಾಬ್ ಕಿಂಗ್ಸ್	14	6	8	00	00	12
ಮುಂಬೈ ಇಂಡಿಯನ್ಸ್	13	6	7	00	00	12
ರಾಜಸ್ಥಾನ	14	5	9	00	00	10
ಹೈದರಾಬಾದ್	13	3	10	00	00	6

* ಗುರುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	626
ಡುಪ್ಲೆಸಿ	ಚೆನ್ನೈ	546
ಋತುರಾಜ್	ಚೆನ್ನೈ	533

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	29
ಆವೇಶ್ ಖಾನ್	ಡೆಲ್ಲಿ	22
ಬೂಮ್ರಾ	ಮುಂಬೈ	19

ವಿಶ್ವ ಕುಸ್ತಿ: ಅನ್ಶುಗೆ ಬೆಳ್ಳಿ; ಸರಿತಾಗೆ ಕಂಚು

ಒಸ್ಲೊ, ನಾರ್ವೆ: ಅತ್ಯುತ್ತಮ ಸಾಮರ್ಥ್ಯ ತೋರಿದ ಭಾರತದ ಅನ್ಶು ಮಲಿಕ್ ಹಾಗೂ ಸರಿತಾ ಮೊರ್ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಮುತ್ತಿಟ್ಟಿದ್ದಾರೆ.

ಮಹಿಳೆಯರ 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅನ್ಶು ಫೈನಲ್‌ನಲ್ಲಿ 1-4ರಿಂದ ಅಮೆರಿಕದ ಹೆಲೆನ್ ಲೂಯಿಸ್ ಮಾರೊಸ್ ಎದುರು ಸೋತರು.

ವಿಶ್ವ ಮಹಿಳಾ ಕುಸ್ತಿಯಲ್ಲಿ ಭಾರತಕ್ಕೆ ಬೆಳ್ಳಿ ಬಂದಿದ್ದು ಇದೇ ಮೊದಲು. ಈ ಹಿಂದೆ ಅಲ್ಕಾ ತೋಮರ್ (2006), ಗೀತಾ ಪೋಗಟ್ (2012), ಬಬಿತಾ ಪೋಗಟ್ (2012), ಪೂಜಾ ದಂಡಾ (2018) ಮತ್ತು ವಿನೇಶಾ ಪೋಗಟ್ (2019) ಕಂಚು ಗೆದ್ದುಕೊಂಡಿದ್ದರು.

59 ಕೆಜಿ ವಿಭಾಗದ ಕಂಚಿನ ಪದಕದ ಸುತ್ತಿನಲ್ಲಿ ಸರಿತಾ 8-2ರಿಂದ ಸ್ವೀಡನ್‌ನ ಸಾರಾ ಜೊಹಾನ್ನಾ ಲಿಂಡ್‌ಬರ್ಗ್ ಅವರನ್ನು ಚಿತ್ ಮಾಡಿದರು.



ಅನ್ಶು ಮಲಿಕ್–ಟ್ವಿಟರ್ ಸಂಗ್ರಹ ಚಿತ್ರ

ಪ್ಲೇಆಫ್‌ನತ್ತ ಹೆಜ್ಜೆ ಇರಿಸಿದ ಕೋಲ್ಕತ್ತ ನೈಟ್ ರೈಡರ್ಸ್

ಶಾರ್ಜಾ (ಪಿಟಿಐ): ಸವಾಲಿನ ಮೊತ್ತ ಕಲೆ ಹಾಕಿದ ನಂತರ ಎದುರಾಳಿಗಳನ್ನು ಕಡಿಮೆ ರನ್‌ಗಳಿಗೆ ಕೆಡವಿದ ಕೋಲ್ಕತ್ತ ನೈಟ್ ರೈಡರ್ಸ್ ಕೊನೆಯ ಲೀಗ್ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿತು. ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಏಯಾನ್ ಮಾರ್ಗನ್ ಬಳಗ ರಾಜಸ್ಥಾನ್ ರಾಯಲ್ಸ್ ತಂಡವನ್ನು 86 ರನ್‌ಗಳಿಂದ ಸೋಲಿಸಿತು. ಇದರೊಂದಿಗೆ ತಂಡದಲ್ಲಿ ಪ್ಲೇ ಆಫ್ ಕನಸು ಚಿಗುರಿದೆ.

172 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ ಬ್ಯಾಟರ್‌ಗಳು ಶಿವಂ ಮಾವಿ ಮತ್ತು ಲಾಕಿ ಫರ್ಗ್ಯುಸನ್ ಅವರ ದಾಳಿಗೆ ನಲುಗಿದರು. ತಂಡಕ್ಕೆ 16.1 ಓವರ್‌ಗಳಲ್ಲಿ 85 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಏಳನೇ ಕ್ರಮಾಂಕದ ರಾಹುಲ್ ತೆವಾಟಿಯಾ (44; 36 ಎ, 5 ಬೌಂ, 2 ಸಿ) ನಿರಾತಂಕವಾಗಿ ಬ್ಯಾಟ್ ಬೀಸಿ ತಂಡದ ಗೌರವ ಉಳಿಸಲು ಪ್ರಯತ್ನಿಸಿದರು. ತೇವಾಟಿಯಾ ಮತ್ತು ಶಿವಂ ದುಬೆ ಅವರನ್ನು ಹೊರತುಪಡಿಸಿದರೆ ಉಳಿದ ಯಾರಿಗೂ ಎರಡಂಕಿ ಮೊತ್ತ ದಾಟಲು ಆಗಲಿಲ್ಲ.

ಶುಭಮನ್-ವೆಂಕಟೇಶ್ ಭರ್ಜರಿ ಜೊತೆಯಾಟ: ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಕೋಲ್ಕತ್ತ ನೈಟ್ ರೈಡರ್ಸ್ ನಾಲ್ಕು ವಿಕೆಟ್‌ಗಳಿಗೆ 171 ರನ್ ಗಳಿಸಿತು. ಇದು ಶಾರ್ಜಾ ಅಂಗಣದಲ್ಲಿ ಈ ಆವೃತ್ತಿಯಲ್ಲಿ ತಂಡವೊಂದು ಗಳಿಸಿದ ಗರಿಷ್ಠ ಮೊತ್ತವಾಗಿದೆ.

ಶುಭಮನ್ ಗಿಲ್ (56; 44 ಎಸೆತ, 4 ಬೌಂಡರಿ, 2 ಸಿಕ್ಸರ್) ಮತ್ತು ವೆಂಕಟೇಶ್ ಅಯ್ಯರ್ (38; 35 ಎ, 3 ಬೌಂ, 2 ಸಿ) ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ ಇವರಿಬ್ಬರು 79 ರನ್ ಸೇರಿಸಿದರು. ಎಂಟನೇ ಓವರ್‌ನಲ್ಲೇ ಈ ಜೋಡಿ ತಂಡದ ಮೊತ್ತವನ್ನು 50ಕ್ಕೇರಿಸಿದರು. 10ನೇ ಓವರ್‌ನಲ್ಲಿ 14 ರನ್ ಕಲೆ ಹಾಕಿ ತಂಡವನ್ನು 75ರ ಗಡಿ ದಾಟಿಸಿದರು.

ತೇವಾಟಿಯಾ ಎಸೆತವನ್ನು ರಿವರ್ಸ್ ಸ್ವೀಪ್ ಮಾಡಲು ಪ್ರಯತ್ನಿಸಿ ವೆಂಕಟೇಶ್ ಅಯ್ಯರ್ ಮೊದಲು ವಿಕೆಟ್ ಕಳೆದುಕೊಂಡರು. ನಿತೀಶ್ ರಾಣಾ ಮತ್ತು ರಾಹುಲ್ ತ್ರಿಪಾಠಿ ಕೂಡ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು.

ದಿನೇಶ್ ಕಾರ್ತಿಕ್ ಹಾಗೂ ನಾಯಕ ಏಯಾನ್ ಮಾರ್ಗನ್ ಅವರ ಅಜೇಯ ಆಟ ತಂಡದ ಮೊತ್ತವನ್ನು 170ರ ಗಡಿ ದಾಟಿಸಲು ನೆರವಾಯಿತು.



ವಿಕೆಟ್ ಗಳಿಸಿದ ಶಿವಂ ಮಾವಿ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 4ಕ್ಕೆ 171 (20 ಓವರ್)

ಶುಭಮನ್ ಸಿ ಜೈಸ್ವಾಲ್ ಬಿ ಮೊರಿಸ್ 56 (44ಎ, 4X4, 6X2) ವೆಂಕಟೇಶ್ ಬಿ ತೇವಾಟಿಯಾ 38 (35ಎ, 4X3, 6X2), ನಿತೀಶ್ ಸಿ ಲಿವಿಂಗ್‌ಸ್ಟೋನ್ ಬಿ ಫಿಲಿಪ್ಸ್ 12 (5ಎ, 4X1, 6X1), ತ್ರಿಪಾಠಿ ಬಿ ಸಕಾರಿಯಾ 21 (14ಎ, 4X3), ದಿನೇಶ್ ಔಟಾಗದೆ 14 (11ಎ, 6X1), ಮಾರ್ಗನ್ ಔಟಾಗದೆ 13 (11ಎ, 4X1, 6X1))

ಇತರೆ: (ಬೈ 5, ಲೆಗ್‌ಬೈ 3, ವೈಡ್ 9) 17

ವಿಕೆಟ್ ಪತನ: 1-79 (ವೆಂಕಟೇಶ್ ಅಯ್ಯರ್, 10.5), 2-92 (ನಿತೀಶ್ ರಾಣಾ, 11.5), 3-133 (ಶುಭಮನ್ ಗಿಲ್, 15.4), 4-145 (ರಾಹುಲ್ ತ್ರಿಪಾಠಿ, 17.1),

ಬೌಲಿಂಗ್: ಜಯದೇವ್ ಉನದ್ಕತ್ 4-0-35-0, ಕ್ರಿಸ್ ಮೊರಿಸ್ 4-0-28-1, ಚೇತನ್ ಸಕಾರಿಯಾ 4-0-23-1, ಮುಸ್ತಫಿಜುರ್ ರೆಹಮಾನ್ 4-0-31-0, ಶಿವಂ ದುಬೆ 2-0-18-0, ರಾಹುಲ್ ತೇವಾಟಿಯಾ 1-0-11-1, ಗ್ಲೆನ್ ಫಿಲಿಪ್ಸ್ 1-0-17-1

ರಾಜಸ್ಥಾನ್ ರಾಯಲ್ಸ್ 85 (16.1 ಓವರ್)

ಜೈಸ್ವಾಲ್ ಬಿ ಶಕೀಬ್ 0 (3ಎ), ಲಿವಿಂಗ್‌ಸ್ಟೋನ್ ಸಿ ತ್ರಿಪಾಠಿ ಬಿ ಫರ್ಗ್ಯುಸನ್ 6 (6ಎ, 4X1), ಸಂಜು ಸಿ ಮಾರ್ಗನ್ ಬಿ ಮಾವಿ 1 (4ಎ), ಶಿವಂ ಬಿ ಮಾವಿ 18 (20ಎ, 6X1), ರಾವತ್ ಎಲ್‌ಬಿಡಬ್ಲ್ಯು ಫರ್ಗ್ಯುಸನ್ 0 (1ಎ), ಫಿಲಿಪ್ಸ್ ಬಿ ಮಾವಿ 8 (12ಎ, 6X1), ತೇವಾಟಿಯಾ ಬಿ ಮಾವಿ 44 (36ಎ, 4X5, 6X2), ಮೊರಿಸ್ ಎಲ್‌ಬಿಡಬ್ಲ್ಯು ವರುಣ್ 0 (2ಎ), ಜಯದೇವ್ ಸಿ ಶಕೀಬ್ ಬಿ ಫರ್ಗ್ಯುಸನ್ 6 (5ಎ, 4X1), ಸಕಾರಿಯಾ ರನೌಟ್ (ಶಕೀಬ್/ಕಾರ್ತಿಕ್) 1 (5ಎ), ಮುಸ್ತಫಿಜುರ್ ಔಟಾಗದೆ 0 (3ಎ)

ಇತರೆ: (ಬೈ 1) 1

ವಿಕೆಟ್ ಪತನ: 1-0 (ಯಶಸ್ವಿ ಜೈಸ್ವಾಲ್, 0.3), 2-1 (ಸಂಜು ಸ್ಯಾಮ್ಸನ್, 1.1), 3-12 (ಲಿಯಾಮ್ ಲಿವಿಂಗ್‌ಸ್ಟೋನ್, 3.2), 4-13 (ಅನುಜ್ ರಾವತ್, 3.4), 5-33 (ಗ್ಲೆನ್ ಫಿಲಿಪ್ಸ್, 7.3), 6-34 (ಶಿವಂ ದುಬೆ, 7.6), 7-35 (ಕ್ರಿಸ್ ಮೊರಿಸ್, 8.6), 8-62 (ಜಯದೇವ್ ಉನದ್ಕತ್, 11.2), 9-85 (ಚೇತನ್ ಸಕಾರಿಯಾ, 15.3), 10-85 (ರಾಹುಲ್ ತೇವಾಟಿಯಾ, 16.1).),

ಬೌಲಿಂಗ್: 1-0-1-1, ಶಿವಂ ಮಾವಿ 3.1-0-21-4, ಸುನಿಲ್ ನಾರಾಯಣ್ 4-0-30-0, ಲಾಕಿ ಫರ್ಗ್ಯುಸನ್ 4-0-18-3, ವರುಣ್ ಚಕ್ರವರ್ತಿ 4-0-14-1.

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 86 ರನ್‌ಗಳ ಜಯ.

ಪ್ರಥಮ ದರ್ಜೆ ಕ್ರಿಕೆಟ್‌ಗೆ ಅಭಿಮನ್ಯು ಮಿಥುನ್ ವಿದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಣಜಿ ತಂಡಕ್ಕೆ ಸ್ಮರಣೀಯ ಗೆಲುವಿನ ಕಾಣಿಕೆ ನೀಡಿರುವ ವೇಗದ ಬೌಲರ್ ಅಭಿಮನ್ಯು ಮಿಥುನ್ ಪ್ರಥಮ ದರ್ಜೆ ಕ್ರಿಕೆಟ್‌ನಿಂದ ನಿವೃತ್ತರಾಗಲು ನಿರ್ಧರಿಸಿದ್ದಾರೆ. ರಾಜ್ಯ ಕ್ರಿಕೆಟ್ ಸಂಸ್ಥೆಗೆ ಗುರುವಾರ ಬರೆದಿರುವ ಪತ್ರದಲ್ಲಿ ಅವರು ಈ ವಿಷಯವನ್ನು ಬಹಿರಂಗ ಮಾಡಿದ್ದಾರೆ.

ವಲ್ಚರ್ಸ್ ಕ್ರಿಕೆಟ್ ಕ್ಲಬ್‌ನ ಸದಸ್ಯರಾಗಿರುವ ಅಭಿಮನ್ಯು ರಾಷ್ಟ್ರೀಯ ತಂಡದಲ್ಲಿ ನಾಲ್ಕು ಟೆಸ್ಟ್ ಮತ್ತು ಐದು ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಮುಂಬೈ ಇಂಡಿಯನ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳಲ್ಲಿ ಆಡಿದ್ದಾರೆ.

ಆದರೆ ದೇಶಿ ಕ್ರಿಕೆಟ್‌ನಲ್ಲಿ ಅವರು ವಿಶಿಷ್ಟ ಛಾಪು ಮೂಡಿಸಿದ್ದಾರೆ. 103 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ಅವರು 338 ವಿಕೆಟ್ ಉರುಳಿಸಿದ್ದಾರೆ. ಬ್ಯಾಟಿಂಗ್‌ನಲ್ಲೂ ತಂಡಕ್ಕೆ ಅಪೂರ್ವ ಕಾಣಿಕೆಗಳನ್ನು ನೀಡಿದ್ದು ಗರಿಷ್ಠ 89 ರನ್ ಸೇರಿದಂತೆ ಒಟ್ಟು 123 ಇನಿಂಗ್ಸ್‌ಗಳಲ್ಲಿ 1937 ರನ್ ಕಲೆ ಹಾಕಿದ್ದಾರೆ. ನಾಲ್ಕು ಅರ್ಧಶತಕ ಗಳಿಸಿದ್ದಾರೆ.

2009ರಲ್ಲಿ ಮೀರತ್‌ನಲ್ಲಿ ಉತ್ತರ ಪ್ರದೇಶ ವಿರುದ್ಧ ನಡೆದ ಪಂದ್ಯದಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಅಭಿಮನ್ಯು 2020ರಲ್ಲಿ ಕೋಲ್ಕತ್ತದಲ್ಲಿ ನಡೆದ ಪಶ್ಚಿಮ ಬಂಗಾಳ ಎದುರು ಕೊನೆಯ ಪಂದ್ಯ ಆಡಿದ್ದರು.

ಬೌಲಿಂಗ್‌ನಲ್ಲಿ 36 ರನ್‌ಗಳಿಗೆ ಆರು ವಿಕೆಟ್ ಅವರ ಗರಿಷ್ಠ ಸಾಧನೆಯಾಗಿದ್ದು ಪಂದ್ಯವೊಂದರಲ್ಲಿ 11 ವಿಕೆಟ್ ಉರುಳಿಸಿದ ಸಾಧನೆಯೊಂದಿಗೆ ಎರಡು ಬಾರಿ 10 ವಿಕೆಟ್ ಪಡೆದಿದ್ದಾರೆ.



ಅಭಿಮನ್ಯು ಮಿಥುನ್

ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ಭಾರತ

ಮಾಲಿ (ಪಿಟಿಐ): ಬಾಂಗ್ಲಾದೇಶ ಎದುರಿನ ಮೊದಲ ಪಂದ್ಯವನ್ನು ಡ್ರಾ ಮಾಡಿಕೊಂಡಿದ್ದ ಭಾರತ ತಂಡ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಎರಡನೇ ಪಂದ್ಯದಲ್ಲೂ ಡ್ರಾಗೆ ಮಣಿಯಿತು. ಶ್ರೀಲಂಕಾ ವಿರುದ್ಧ ಗುರುವಾರ ನಡೆದ ಪಂದ್ಯ ಗೋಲುರಹಿತ ಸಮಬಲದಲ್ಲಿ ಮುಕ್ತಾಯಗೊಂಡಿತು.

ಫಿಫಾ ರ್‍ಯಾಂಕಿಂಗ್‌ನಲ್ಲಿ 205ನೇ ಸ್ಥಾನದಲ್ಲಿರುವ ಶ್ರೀಲಂಕಾ ಎದುರು 107ನೇ ಸ್ಥಾನದಲ್ಲಿರುವ ಭಾರತ ಸಂಪೂರ್ಣ ಆಧಿಪತ್ಯ ಸ್ಥಾಪಿಸಿತು. ಆದರೆ ಗೋಲು ಗಳಿಸಲಾಗದೆ ನಿರಾಸೆಗೆ ಒಳಗಾಯಿತು. ಅವಕಾಶಗಳನ್ನು ಸೃಷ್ಟಿಸಿಕೊಳ್ಳುವಲ್ಲಿ ವಿಫಲವಾದ ಭಾರತ ಲಭಿಸಿದ ಅವಕಾಶಗಳಲ್ಲಿ ಗೋಲು ಗಳಿಸುವುದಕ್ಕೂ ವಿಫಲವಾಯಿತು. ಸುನಿಲ್ ಚೆಟ್ರಿ ನಾಯಕತ್ವದ ತಂಡ ಮುಂದಿನ ಪಂದ್ಯದಲ್ಲಿ ಭಾನುವಾರ ನೇಪಾಳವನ್ನು ಎದುರಿಸಲಿದೆ.

ಫುಟ್‌ಬಾಲ್: ಕೇರಳಕ್ಕೆ ಮಣಿದ ಕಾರ್ಬೆಟ್

ಬೆಂಗಳೂರು: ಮೊದಲ ಪಂದ್ಯದಲ್ಲಿ ನೀರಸ ಆಟವಾಡಿದ ಕೇರಳ ಯುನೈಟೆಡ್ ಎಫ್‌ಸಿ ತಂಡ ಐ-ಲೀಗ್ ಅರ್ಹತಾ ಟೂರ್ನಿಯ ಎರಡನೇ ಪಂದ್ಯದಲ್ಲಿ ಚೇತರಿಸಿಕೊಂಡಿತು. ಗುರುವಾರ ನಡೆದ ಪಂದ್ಯದಲ್ಲಿ ತಂಡ ಕಾರ್ಬೆಟ್ ಎಫ್‌ಸಿಯನ್ನು 2-0 ಗೋಲುಗಳಿಂದ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶಿಸ್ತಿನ ಆಟ ಪ್ರದರ್ಶಿಸಿದ ಕೇರಳ ಯುನೈಟೆಡ್ ಎರಡು ಅವಧಿಯಲ್ಲಿ ಒಂದೊಂದು ಗೋಲು ಗಳಿಸಿತು. ಎದುರಾಳಿ ತಂಡಕ್ಕೆ ಗೋಲು ಬಿಟ್ಟುಕೊಡದೇ ಏಕಪಕ್ಷೀಯ ಜಯ ಸಾಧಿಸಿತು. ಹಫೀಜ್ ಮೊಹಮ್ಮದಾಲಿ 41ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ಮುನ್ನಡೆ ತಂದುಕೊಟ್ಟರು. 83ನೇ ನಿಮಿಷದಲ್ಲಿ ಬದಲಿ ಆಟಗಾರ ಜೆಸಿನ್ ತೋಣಿಕ್ಕರ ಗೋಲು ಗಳಿಸಿದರು.

ಈ ಜಯದೊಂದಿಗೆ ಕೇರಳ ತಂಡ ನಾಕ್ ಔಟ್ ಹಂತಕ್ಕೇರುವ ಕನಸನ್ನು ಜೀವಂತವಾಗಿರಿಸಿದೆ. ಅರ್ಜುನ್ ಜಯರಾಜ್ ಮುನ್ನಡೆಸುತ್ತಿರುವ ತಂಡ ಗುರುವಾರದ ಪಂದ್ಯದ ಆರಂಭದಿಂದಲೇ ಪಾರಮ್ಯ ಮೆರೆಯಿತು.

ಕ್ರಿಕೆಟ್: ದಕ್ಷಿಣ ವಲಯ ತಂಡಕ್ಕೆ ಪ್ರಶಸ್ತಿ ಗರಿ

ಹುಬ್ಬಳ್ಳಿ: ಕರ್ನಾಟಕದ ಆರು ಆಟಗಾರರನ್ನು ಒಳಗೊಂಡ ದಕ್ಷಿಣ ವಲಯ ತಂಡ, ಅಖಿಲ ಭಾರತ ಅಂಗವಿಕಲರ ಕ್ರಿಕೆಟ್ ಸಂಸ್ಥೆ ವಾರಣಾಸಿಯಲ್ಲಿ ಆಯೋಜಿಸಿದ್ದ ಅಂತರ ವಲಯ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದೆ.

ಉತ್ತರ ಪ್ರದೇಶ ಸರ್ಕಾರದ ಸಹಯೋಗದಲ್ಲಿ ನಡೆದ ತಲಾ 15 ಓವರ್‌ಗಳ ಪಂದ್ಯದ ಟೂರ್ನಿಯಲ್ಲಿ ಐದು ವಲಯ ತಂಡಗಳು ಪಾಲ್ಗೊಂಡಿದ್ದವು. ಗುರುವಾರ ನಡೆದ ಫೈನಲ್‌ನಲ್ಲಿ ದಕ್ಷಿಣ ವಲಯ ತಂಡ ಮೂರು ವಿಕೆಟ್‌ಗಳ ಗೆಲುವು ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ಉತ್ತರ ವಲಯ 15 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 70 ರನ್ ಗಳಿಸಿತ್ತು. ಈ ಗುರಿಯನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯ ಜಿತೇಂದ್ರ ವಡ್ಡಿ ನಾಯಕತ್ವದ ದಕ್ಷಿಣ ವಲಯ ತಂಡ 13.4 ಓವರ್‌ಗಳಲ್ಲಿ 7 ವಿಕೆಟ್‌ಗಳನ್ನು ಕಳೆದುಕೊಂಡು ತಲುಪಿ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ರಾಷ್ಟ್ರೀಯ ವಾಲಿಬಾಲ್ ಮುಂದೂಡಿಕೆ

ಚಿತ್ರದುರ್ಗ: ಮುರುಘಾ ಮಠದ ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಶುಕ್ರವಾರದಿಂದ ನಡೆಯಬೇಕಾಗಿದ್ದ ರಾಷ್ಟ್ರಮಟ್ಟದ ಆಹ್ವಾನಿತ ವಾಲಿಬಾಲ್ ಟೂರ್ನಿಯನ್ನು ಮಳೆಯ ಕಾರಣದಿಂದ ಮುಂದೂಡಲಾಗಿದೆ.

‘ಭಾರತ ವಾಲಿಬಾಲ್ ಫೆಡರೇಷನ್ ಪ್ರತಿನಿಧಿಗಳಾದ ಆಂಥೋನಿ ಜೋಸೆಫ್ ಹಾಗೂ ಶ್ರೀಧರನ್ ಅವರು ಗುರುವಾರ ಅಂಗಣ ಪರಿಶೀಲಿಸಿ ಪಂದ್ಯಗಳನ್ನು ನಡೆಸುವುದು ಅಸಾಧ್ಯವೆಂದು ಶಿಫಾರಸು ಮಾಡಿದರು. ಹೀಗಾಗಿ ಟೂರ್ನಿಯನ್ನು ಮುಂದೂಡಲಾಗಿದೆ. ಮುಂದಿನ ವರ್ಷ ಜನವರಿ ಅಥವಾ ಫೆಬ್ರುವರಿಯಲ್ಲಿ ಟೂರ್ನಿ ಆಯೋಜಿಸಲಾಗುವುದು’ ಎಂದು ಶರಣ ಸಂಸ್ಕೃತಿ ಉತ್ಸವ ಸಮಿತಿಯ ಗೌರವ ಅಧ್ಯಕ್ಷರಾದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ತಿಳಿಸಿದರು.

ಜೆಮಿಮಾ ಆಟಕ್ಕೆ ಮಳೆ ಕಾಟ

ಮಹಿಳೆಯರ ಟಿ20 ಪಂದ್ಯ ರದ್ದು

ಗೋಲ್ಡ್‌ಕೋಸ್ಟ್ (ಪಿಟಿಐ): ಭಾರತದ ಜೆಮಿಮಾ ರಾಡ್ರಿಗಸ್ (ಔಟಾಗದೆ 49, 36 ಎ, 7 ಬೌಂಡರಿ) ಅವರ ಮಿಂಚಿನ ಆಟ ಮುಂದುವರಿಸಲು ಮಳೆ ಅವಕಾಶ ಮಾಡಿಕೊಡಲಿಲ್ಲ. ಆಸ್ಟ್ರೇಲಿಯಾ ಎದುರಿನ ಮಹಿಳಾ ಟಿ20 ಸರಣಿಯ ಮೊದಲ ಟಿ20 ಪಂದ್ಯವು ಗುರುವಾರ ಒಂದು ಇನಿಂಗ್ಸ್ ಕೂಡ ಪೂರ್ಣಗೊಳ್ಳದೆ ರದ್ದಾಯಿತು.

ಟಾಸ್ ಗೆದ್ದ ಆತಿಥೇಯ ಆಸ್ಟ್ರೇಲಿಯಾ, ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ತಂಡಕ್ಕೆ ಬ್ಯಾಟಿಂಗ್ ಅವಕಾಶ ನೀಡಿತು. 15.2 ಓವರ್‌ಗಳಲ್ಲಿ ಭಾರತ ನಾಲ್ಕು ವಿಕೆಟ್‌ಗೆ 131 ರನ್ ಗಳಿಸಿದ್ದ ವೇಳೆ ಸುರಿದ ಭಾರಿ ಮಳೆ ಆಟಕ್ಕೆ ತಡೆಯೊಡ್ಡಿತು.

ಮೊದಲ ವಿಕೆಟ್ ಜೊತೆಯಾಟದಲ್ಲಿ ಸ್ಮೃತಿ ಮಂದಾನ (17, 10 ಎ) ಹಾಗೂ ಶಫಾಲಿ ವರ್ಮಾ (18, 14ಎ) ಅವರು 31 ಪೇರಿಸಿ ಉತ್ತಮ ಆರಂಭವನ್ನೇ ನೀಡಿದರು. ಆದರೆ ವೈಯಕ್ತಿಕ ದೊಡ್ಡ ಮೊತ್ತ ಗಳಿಸುವಲ್ಲಿ ಅವರಿಗೆ ಸಾಧ್ಯವಾಗಲಿಲ್ಲ. ಶಫಾಲಿ ಇನಿಂಗ್ಸ್‌ನಲ್ಲಿ ಆಕರ್ಷಕ ಮೂರು ಸಿಕ್ಸರ್‌ಗಳಿದ್ದವು. ಆ್ಯಶ್ಲಿ ಗಾರ್ಡನರ್ ಇವರಿಬ್ಬರ ವಿಕೆಟ್ ಉರುಳಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ಜೆಮಿಮಾ ಆತಿಥೇಯ ಬೌಲರ್‌ಗಳನ್ನು ದಂಡಿಸಿದರು. ಆಟ ನಿಂತಾಗ ರಿಚಾ ಘೋಷ್ (ಔಟಾಗದೆ 17, 13 ಎ, 3 ಬೌ) ಜೊತೆ ಅವರು ಕ್ರೀಸ್‌ನಲ್ಲಿದ್ದರು.



ಜೆಮಿಮಾ ರಾಡ್ರಿಗಸ್

ನಾಯಕಿ ಹರ್ಮನ್‌ಪ್ರೀತ್ ಕೌರ್ ಹಾಗೂ ಯಷ್ಟಿಕಾ ಭಾಟಿಯಾ ಮಿಂಚಲಿಲ್ಲ. ಆಸ್ಟ್ರೇಲಿಯಾ ಪರ ಆ್ಯಶ್ಲಿ ಗಾರ್ಡನರ್ (28ಕ್ಕೆ 2) ಹಾಗೂ ಜಾರ್ಜಿಯಾ ವಾರೆಹಮ್ (3ಕ್ಕೆ 1) ಅವರ ಬೌಲಿಂಗ್ ಉತ್ತಮವಾಗಿತ್ತು.

ಉಭಯ ತಂಡಗಳ ನಡುವಣ ಎರಡನೇ ಪಂದ್ಯವು ಶನಿವಾರ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಭಾರತ: 15.2 ಓವರ್‌ಗಳಲ್ಲಿ 4ಕ್ಕೆ 131 (ಜೆಮಿಮಾ ರಾಡ್ರಿಗಸ್ ಔಟಾಗದೆ 49, ಶಫಾಲಿ ವರ್ಮಾ 18, ಸ್ಮೃತಿ ಮಂದಾನ 17, ರಿಚಾ ಘೋಷ್ ಔಟಾಗದೆ 17, ಯಷ್ಟಿಕಾ ಭಾಟಿಯಾ 15, ಹರ್ಮನ್‌ಪ್ರೀತ್ ಕೌರ್ 12; ಆ್ಯಶ್ಲಿ ಗಾರ್ಡನರ್ 28ಕ್ಕೆ 2, ಜಾರ್ಜಿಯಾ ವಾರೆಹಮ್ 3ಕ್ಕೆ 1, ಸೋಫಿಯಾ ಮೊಲಿನೆಕ್ಸ್ 23ಕ್ಕೆ 1). ಫಲಿತಾಂಶ: ಪಂದ್ಯ ರದ್ದು.



ಹೊಸ ಪ್ರಯತ್ನದ ‘ಸನಿಹ’...

ಮಿಸ್ಟರ್ ಮೈಸೂರು, ಮಿಸ್ಟರ್ ಕರ್ನಾಟಕ, ರಿಯಾಲಿಟಿ ಷೋಗಳು, ಮಾಡೆಲಿಂಗ್‌ನಲ್ಲಿ ಯಶಸ್ಸಿಗೇರಿ ಚಂದನವನ ಪ್ರವೇಶಿಸಿದವರು ಸೂರಜ್ ಗೌಡ. ‘ನಿನ್ನ ಸನಿಹಕೆ’ ಅವರ ನಾಲ್ಕನೇ ಚಿತ್ರ. ಇಲ್ಲಿ ಅವರು ನಟನೆಯ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ಈ ಚಿತ್ರ ಬಿಡುಗಡೆಯಾಗುವ ಹೊತ್ತಿನಲ್ಲಿ ಅವರು ‘ಸಿನಿಮಾ ಪುರವಣಿ’ ಜೊತೆ ಮಾತಿಗಿಳಿದರು.


ಸೂರಜ್ ಗೌಡ

ಶರತ್ ಹೆಗ್ಡೆ

- **ಮಿಸ್ಟರ್ ಮೈಸೂರು, ಕರ್ನಾಟಕ, ‘ಮದುವೆಯ ಮಮತೆಯ ಕರೆಯೋಲೆ’ವರೆಗಿನ ಸಿನಿಮಾ ಪ್ರಯಾಣ ಹೇಗಿತ್ತು?**

ಸಿನಿಮಾ ಪ್ರಯಾಣ ಶುರುವಾಗಿದ್ದೇ ಮಿಸ್ಟರ್ ಮೈಸೂರು, ಮಿಸ್ಟರ್ ಕರ್ನಾಟಕದಿಂದ. ತೂಗುದೀಪ ಪ್ರೊಡಕ್ಷನ್ಸ್ ಅಡಿ ‘ಮದುವೆಯ ಮಮತೆಯ ಕರೆಯೋಲೆ’ ಸಿನಿಮಾ ಬಂತು. ಆ ಬಳಿಕ ‘ಕಹಿ’ ಅನ್ನುವ ಸಿನಿಮಾ ಮಾಡಿದೆ. ಅದರಲ್ಲಿ ಒಂದು ಸೈಕೋಪಾತ್ ಪಾತ್ರ. ಮುಂದೆ ‘ಸಿಲಿಕಾನ್ ಸಿಟಿ’ ಅನ್ನುವ ಸಿನಿಮಾ ಮಾಡಿದೆ. ಆ ಚಿತ್ರ ಸೈಮಾ ಪ್ರಶಸ್ತಿಗೆ ನಾಮನಿರ್ದೇಶನ ಆಗಿದೆ. ಆ ಬಳಿಕ ನನಗೆ ಸೂಕ್ತ ಅನಿಸುವ ಸಿನಿಮಾಗಳು ಬರಲಿಲ್ಲ. ನಾನೇ ಏಕೆ ಕಥೆ ಬರೆದು ನಿರ್ದೇಶಿಸಬಾರದು ಎಂದು ನಿರ್ಧರಿಸಿ ‘ನಿನ್ನ ಸನಿಹಕೆ’ ಸಿನಿಮಾ ಮಾಡಿದ್ದೇವೆ.

- **‘ನಿನ್ನ ಸನಿಹಕೆ’ ಚಿತ್ರದಲ್ಲೇನಿದೆ?**

ನಮ್ಮ ಜೀವನಕ್ಕೆ ಹತ್ತಿರವಾದ ಘಟನೆಗಳೇ ಇವೆ. ಎಲ್ಲರ ಬದುಕಿನಲ್ಲೂ ನಡೆದಿರುವ ಅಥವಾ ನಾವೆಲ್ಲೋ ನೋಡಿರುವ ಘಟನೆಗಳನ್ನು ರೊಮ್ಯಾಂಟಿಕ್ ಕಾಮಿಡಿ ಮೂಲಕ ಹೇಳಲು ಹೊರಟದ್ದೇವೆ. ಶೀರ್ಷಿಕೆಯೂ ಹಾಗೆಯೇ ನೋಡುಗರಿಗೆ ಹತ್ತಿರವಾಗಬೇಕು ಎಂಬ ಉದ್ದೇಶದಿಂದಲೇ ಇಟ್ಟದ್ದೇವೆ. ಬೆಂಗಳೂರಿನಲ್ಲಿ ಉದ್ಯೋಗಕ್ಕಾಗಿ ಬಂದ ಜೋಡಿ ಲಿವ್ ಇನ್ ಸಂಬಂಧದಲ್ಲಿ ಜೊತೆಯಾಗಿರುತ್ತಾರೆ. ಅವರು ಎದುರಿಸುವ ಸವಾಲುಗಳನ್ನು ತಮಾಷೆಯಾಗಿ ತೋರಿಸಿದ್ದೇವೆ. ಕುಟುಂಬ ಸಮೇತ ನೋಡಬಹುದಾದ ಚಿತ್ರವಿದು.

- **ಅಭಿನಯ– ನಿರ್ದೇಶನ ಹೊಸ ಸವಾಲು ಏನಿತ್ತು?**

ಒಳ್ಳೆಯ ತಂಡ ಇತ್ತು. ಹಾಗಾಗಿ ಯಾವುದೇ ಸವಾಲು ಅನಿಸಿರಲಿಲ್ಲ. ಇಲ್ಲಿ ದೊಡ್ಮನೆ (ಡಾ.ರಾಜ್‌ಕುಮಾರ್ ಕುಟುಂಬ)ಯಿಂದ ಮೊದಲ ನಾಯಕಿ ಬೆಳ್ಳಿತೆರೆಗೆ ಪರಿಚಯವಾಗುತ್ತಿದ್ದಾರೆ. ಆ ಜವಾಬ್ದಾರಿ ಇತ್ತು. ನಿರ್ಮಾಪಕರ ಹೂಡಿಕೆ ಇದೆ. ರಘು ದೀಕ್ಷಿತ್ ಸಂಗೀತವನ್ನು ಸಿನಿಮಾ ಕಥೆಯ ಜೊತೆಗೇ ಒಯ್ಯುವ, ಸಮತೋಲನ ಕಾಯ್ದುಕೊಳ್ಳುವ ಜವಾಬ್ದಾರಿ ಇತ್ತು.

- **ನಿಮ್ಮ ಮತ್ತು ಧನ್ಯಾ ರಾಮ್‌ಕುಮಾರ್ ಕಾಂಬಿನೇಷನ್ ಹೇಗಿದೆ?**

ತುಂಬಾ ಆತ್ಮೀಯತೆ ನಮ್ಮಿಬ್ಬರ ನಡುವಿದೆ. ಧನ್ಯಾ ಕೂಡಾ ಹಾಗೇ ಇದ್ದಾರೆ. ಪರಸ್ಪರ ತಪ್ಪುಗಳನ್ನು ತಿದ್ದಿಕೊಂಡು ನಗುನಗುತ್ತಾ ಚಿತ್ರೀಕರಣದಲ್ಲಿ ತೊಡಗಿದ್ದೆವು. ನನ್ನ ಆತ್ಮೀಯರ ಬಳಗದಲ್ಲಿ ಅವರಿದ್ದಾರೆ. ದೃಶ್ಯದ ನೈಜತೆಗಾಗಿ ಧನ್ಯಾ ಕೆನ್ನೆಗೆ ಬಾರಿಸಿದ್ದಾರೆ. ಬಾಟಲಲ್ಲಿ ಹೊಡೆದದ್ದೂ ಇದೆ...ಹಹ್ಹ... ಮತ್ತೆ ಅವರೇ ಸಮಾಧಾನಪಡಿಸಿದ್ದೂ ಇದೆ.

- **‘ನಿನ್ನ ಸನಿಹಕೆ’ ಮೇಕಿಂಗ್‌ನ ಸುಂದರ ಅನುಭವ?**

ಶೂಟಿಂಗ್ ಸೆಟ್‌ನಲ್ಲಿ ನಾನೊಬ್ಬನೇ ಸುಂದರವಾಗಿರುವವನು ಎಂದುಕೊಂಡಿದ್ದೆ. ಆದರೆ ಒಂದು ದಿನ ಧನ್ಯಾ ಅವರ ತಂದೆ ರಾಮ್ ಕುಮಾರ್ ಬಂದರು. ನೋಡಿದ್ರೆ ನನಗಿಂತ ಅವರೇ ತುಂಬಾ ಚೆನ್ನಾಗಿದ್ದರು. ಹೌದಲ್ವಾ, ಆ ಕ್ಷಣದಿಂದ ನಾನೊಬ್ಬನೇ ಸುಂದರ ಅನ್ನುವುದನ್ನು ಬಿಟ್ಟುಬಿಟ್ಟೆ. ಪುನೀತ್ ರಾಜ್‌ಕುಮಾರ್ ಅವರೂ ಸೆಟ್‌ಗೆ ಬಂದದ್ದೂ ಖುಷಿಯ ಅನುಭವ

- **ಮುಂದಿನ ಯೋಜನೆಗಳು?**

ಎರಡು ಸ್ಕ್ರಿಪ್ಟ್ ಬರೆದಿದ್ದೇನೆ. ಅದರ ಕೆಲಸವೂ ಆರಂಭವಾಗಬೇಕು. ಈಗಿನ ನಿರ್ಮಾಪಕರೇ ಆ ಚಿತ್ರವನ್ನೂ ನಿರ್ಮಿಸಲು ಮುಂದಾಗಿದ್ದಾರೆ. ಸದ್ಯ ನಿನ್ನ ಸನಿಹಕೆ ಬಿಡುಗಡೆ, ಪ್ರೇಕ್ಷಕರ ಪ್ರತಿಕ್ರಿಯೆ ಬಗ್ಗೆ ಕುತೂಹಲವಿದೆ.

ಅವರವರ ಭಾವಕ್ಕೆ

ಲಿವ್ ಇನ್ ರಿಲೇಷನ್‌ಷಿಪ್ ಬಗ್ಗೆ ನಿಮ್ಮ ನಿಲುವು ಏನು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸೂರಜ್, ‘ನೋಡಿ ಇದೆಲ್ಲಾ ಅವರವರ ಭಾವಕ್ಕೆ. ಕೆಲವರಿಗೆ ಎಲ್ಲ ಸಂಬಂಧಗಳೂ ಮದುವೆಯ ನಂತರವೇ ಇರಬೇಕು ಎಂದೆಲ್ಲಾ ನೋಡುವವರೂ ಇದ್ದಾರೆ. ಅಥವಾ ಟೇಕ್ ಕೊಡುವ ಮೊದಲೇ ‘ರಿಹರ್ಸಲ್’ ಬೇಕು ಅನ್ನುವವರೂ ಇದ್ದಾರೆ. ನಾವು ಇಲ್ಲಿ ಲಿವ್ ಇನ್ ರಿಲೇಷನ್‌ಷಿಪ್‌ನಲ್ಲಿ ಇರುವ ಒಳ್ಳೆಯ ಅಂಶಗಳನ್ನೂ ಹೇಳಿದ್ದೇವೆ. ಇನ್ನೊಂದು ಆಯಾಮವನ್ನೂ ತೋರಿಸಿದ್ದೇವೆ. ಹಾಗಾಗಿ ಸಮಾಜದ, ಜನರ ಅಭಿಪ್ರಾಯಕ್ಕೇ ಇದನ್ನು ಬಿಟ್ಟಿದ್ದೇವೆ’ ಎಂದರು.


ಪ್ರೇರಣಾ ಕಂಬಂ, ಸುಮುಖ

‘ಫಿಸಿಕ್ಸ್ ಟೀಚರ್’ ಆಗಿ ಬರುತ್ತಿದ್ದಾರೆ ಸುಮುಖ

ಕಿರುತೆರೆ ಹಾಗೂ ಹಿರಿತೆರೆಯ ಸಾಕಷ್ಟು ಧಾರಾವಾಹಿ ಹಾಗೂ ಚಲನಚಿತ್ರಗಳಲ್ಲಿ ಅಭಿನಯಿಸಿರುವ ಶಶಿಕುಮಾರ್ ಹಾಗೂ ನಂದಿತಾ ಯಾದವ್ ಪುತ್ರ ಸುಮುಖ ಅವರು, ಇದೀಗ ಚಂದನವನಕ್ಕೆ ನಾಯಕ, ನಿರ್ದೇಶಕನಾಗಿ ಪರಿಚಯವಾಗುತ್ತಿದ್ದಾರೆ.

ನಂದಿತಾ ಯಾದವ್ ನಿರ್ದೇಶನದ ‘ರಾಜಸ್ಥಾನ್ ಡೈರೀಸ್’ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದ ಅನುಭವ ಸುಮುಖ ಅವರಿಗಿದೆ. ಈಗ ಸುಮುಖ ‘ಫಿಸಿಕ್ಸ್ ಟೀಚರ್’ಗೆ ನಿರ್ದೇಶಕ, ನಾಯಕ.

‘ಇದು ಟೀಚರ್ ಮತ್ತು ಶಾಲೆಗಷ್ಟೇ ಮೀಸಲಾದ ಕಥೆಯಲ್ಲ. ಒಬ್ಬ ಅವಿವಾಹಿತ ಫಿಸಿಕ್ಸ್ ಟೀಚರ್ ಜೀವನದಲ್ಲಿ ನಡೆಯುವ ಕಥೆಯಿದು. ಭೌತಶಾಸ್ತ್ರ ನಮ್ಮ ಜೀವನದ ಮೇಲೆ ಎಷ್ಟು ಪರಿಣಾಮ ಬೀರುತ್ತದೆ ಎಂಬುದನ್ನು ಹೇಳಲು ಹೊರಟಿದ್ದೇನೆ. ಬ್ರಾಹ್ಮಣರ ಮನೆಯಲ್ಲಿ ಈ ಫಿಸಿಕ್ಸ್ ಟೀಚರ್ ಬೆಳೆದಿರುತ್ತಾನೆ. ಅವರ ಮನೆಯಲ್ಲಿ ಕೇಳಿ ಬರುವ ಕರ್ನಾಟಕ ಶಾಸ್ತ್ರೀಯ ಸಂಗೀತ ಕೂಡ ಈ ಚಿತ್ರದ ಒಂದು ಭಾಗವಾಗಿರುತ್ತದೆ. ಅ. 7ರಿಂದ ಚಿತ್ರೀಕರಣ ಆರಂಭವಾಗಿ. ಮಾಸಾಂತ್ಯಕ್ಕೆ ಮುಗಿಯಲಿದೆ. ಈ ವರ್ಷದ ಕೊನಗೆ ಅಥವಾ ಹೊಸವರ್ಷದ ಆಗಮನದ ವೇಳೆ ‘ಫಿಸಿಕ್ಸ್ ಟೀಚರ್’ ನಿಮ್ಮ ಮುಂದೆ ಹಾಜರಾಗುತ್ತಾನೆ’ ಎಂದರು ಸುಮುಖ

‘ನಾನು ಈ ಚಿತ್ರದಲ್ಲಿ ಜಲಜ ಎಂಬ ಪಾತ್ರ ಮಾಡುತ್ತಿದ್ದೇನೆ. ಸುಮುಖ ‘ಫಿಸಿಕ್ಸ್ ಟೀಚರ್’ ಆದರೆ, ನಾನು ಮನಃಶಾಸ್ತ್ರದ ಶಿಕ್ಷಕಿ. ಇದರಲ್ಲಿ ಫಿಸಿಕ್ಸ್ ಅಷ್ಟೇ ಅಲ್ಲದೇ ಪ್ರೇಮಕಥೆಯೂ ಇದೆ’ ಎಂದರು ನಾಯಕಿ ಪ್ರೇರಣಾ ಕಂಬಂ.

ಚಿತ್ರದ ಮೂರು ಹಾಡುಗಳಿಗೆ ಸಂಗೀತ ನೀಡಿರುವ ಹಾಗೂ ಸುಮುಖ ಅವರೊಂದಿಗೆ ಸೇರಿ ಕಥೆ ಬರೆದಿರುವ ಸ್ಕಂಧ ಸುಬ್ರಹ್ಮಣ್ಯ ಸೂಕ್ಷ್ಮವಾಗಿ ಕಥೆಯ ಎಳೆ ತೆರೆದಿಟ್ಟರು.

ಛಾಯಾಗ್ರಾಹಕ ರಾಘು ಗ್ಯಾರಹಳ್ಳಿ, ಸಂಕಲನಕಾರ ಅಜಯ್ ಕುಮಾರ್, ವಸ್ತ್ರಾಲಂಕಾರ ಸಾಚಿ ರಾವಲ್, ಪ್ರಸಾಧನಕ್ಕೆ ಅಭಿಲಾಷ ಕುಲಕರ್ಣಿ ತಂಡದಲ್ಲಿದ್ದಾರೆ. ಪಾಸಿಂಗ್ ಶಾಟ್ ಫಿಲ್ಮ್ ಈ ಚಿತ್ರ ನಿರ್ಮಾಣ ಮಾಡುತ್ತಿದೆ. ಚಿತ್ರದ ಟೀಸರ್ ಬಿಡುಗಡೆಯಾಗಿದೆ.

ಹೊರಟಿತು ‘ಝೀ ಕುಟುಂಬ’ ಅವಾರ್ಡ್ಸ್ ರಥ

ಝೀ ಕನ್ನಡ ವಾಹಿನಿಯ ‘ಕುಟುಂಬ’ ಅವಾರ್ಡ್ಸ್ ರಥ ನಾಡಿನಾದ್ಯಂತ ಸಂಚಾರಕ್ಕೆ ಹೊರಟಿದೆ. ವೀಕ್ಷಕರ ಅಭಿಪ್ರಾಯ ಆಧರಿಸಿ ನೀಡುವ ಪ್ರಶಸ್ತಿಗಾಗಿ ಈ ರಥ ಎಲ್ಲ ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಲಿದೆ ಎಂದು ವಾಹಿನಿಯ ಬ್ಯುಸಿನೆಸ್ ಹೆಡ್ ರಾಘವೇಂದ್ರ ಹುಣಸೂರು ಹೇಳಿದರು.

ಇತ್ತೀಚೆಗೆ ನಾದಬ್ರಹ್ಮ ಹಂಸಲೇಖ ಅವರು ಈ ವಾಹನಗಳಿಗೆ ಚಾಲನೆ ನೀಡಿದರು.

ಝೀ ವಾಹಿನಿಯ ಕಾರ್ಯಕ್ರಮಗಳ ಫಲಕ ಹೊತ್ತ ವಾಹನಗಳು 16 ದಿನಗಳ ಕಾಲ ಎಲ್ಲ 31 ಜಿಲ್ಲೆಗಳಲ್ಲಿ ಸಂಚರಿಸಲಿವೆ ಎಂದು ಮಾಧ್ಯಮಗೋಷ್ಠಿಯಲ್ಲಿ ಹುಣಸೂರು ಅವರು ಹೇಳಿದರು.

ಹೊಸತನದತ್ತ ಝೀ ಕನ್ನಡ; ₹ 100 ಕೋಟಿ ಹೂಡಿಕೆ

ಮುಂದೆ ವಾಹಿನಿಯ ಡಿಜಿಟಲ್ ವೇದಿಕೆಯಲ್ಲಿ (ಝೀ5) ಕನ್ನಡದ ವೆಬ್ ಸರಣಿಗಳು ‘ಝೀ ಒರಿಜಿನಲ್ಸ್’ ಬರಲಿವೆ. ಅದಕ್ಕಾಗಿ ಝೀ 5 ಅಪ್ಲಿಕೇಷನ್‌ನನ್ನು ಉನ್ನತಗೊಳಿಸುವ ಕೆಲಸ ನಡೆದಿದೆ. ಕನ್ನಡದ ಸರಣಿ ಪ್ರಸಾರಕ್ಕೆ ಡಿಸೆಂಬರ್ ವೇಳೆಗೆ ಝೀ ಸಂಸ್ಥೆ ₹ 100 ಕೋಟಿ ಹೂಡಲಿದೆ. ಮುಂದಿನ ಜೂನ್ ವೇಳೆಗೆ



ಹಂಸಲೇಖ, ರಾಘವೇಂದ್ರ ಹುಣಸೂರು


ಝೀ 5 ವೇದಿಕೆಯಲ್ಲಿ ಕನ್ನಡದ ವೆಬ್ ಸರಣಿಗಳು, ಡಿಜಿಟಲ್ ವೇದಿಕೆಯ ಪ್ರತ್ಯೇಕ ಕಾರ್ಯಕ್ರಮಗಳು ಪ್ರಸಾರವಾಗಲಿವೆ. ಝೀ ವಾಹಿನಿ ಜನವರಿಯಿಂದ ಪೂರ್ಣ ಹೊಸತನದಿಂದ ಮೂಡಿಬರಲಿದೆ ಎಂದು ಹುಣಸೂರು ಮಾಹಿತಿ ನೀಡಿದರು.

ಡಿಜಿಟಲ್‌ನಲ್ಲಿ ವೀಕೆಂಡ್ ವಿತ್ ರಮೇಶ್

‘ವಾಹಿನಿಯ ಜನಪ್ರಿಯ ಸರಣಿ ‘ವೀಕೆಂಡ್ ವಿತ್ ರಮೇಶ್’ ಮುಂದೆ ಡಿಜಿಟಲ್ ವೇದಿಕೆಯಲ್ಲಿ ಮಾತ್ರ ಪ್ರಸಾರವಾಗಲಿದೆ. ಇದರಲ್ಲಿ ದೊಡ್ಡ ಉದ್ಯಮವನ್ನು ಕಟ್ಟಿ ಬೆಳೆಸಿದ ಕಥೆಗಳು ಅಲ್ಲಿ ಪ್ರಸಾರವಾಗಲಿವೆ’ ಎಂದರು. ಝೀ ಸೋನಿ ಕಂಪನಿಗಳು ಶೀಘ್ರ ವಿಲೀನಗೊಳ್ಳುವ ಸಾಧ್ಯತೆ ಇದೆ. ಆಗ ಭಾರತದಲ್ಲಿ 50 ಸಾವಿರ ಕೋಟಿ ಮೌಲ್ಯದ, ಮನೋರಂಜನಾ ಕ್ಷೇತ್ರದ ಬೃಹತ್ ಉದ್ಯಮ ಸಂಸ್ಥೆಯೊಂದು ರೂಪುಗೊಳ್ಳಲಿದೆ ಎಂದು ಅವರು ಹೇಳಿದರು.

ಹಂಸಲೇಖ ಮಾತನಾಡಿ, ‘ಝೀ ಸರಿಗಮಪ ವೇದಿಕೆಯಲ್ಲಿ ಕೆಲಸ ಮಾಡುವುದೆಂದರೆ ಒಂದು ಪೂರ್ಣಾನುಭೂತಿಯ ಅನುಭವ. ಸರಿಗಮಪ ಕರ್ನಾಟಕದ ಮಟ್ಟಿಗೆ ಒಂದು ವಿಶ್ವವಿದ್ಯಾಲಯ ಪರಿಕಲ್ಪನೆಯನ್ನು ತಂದುಕೊಟ್ಟಿದೆ’ ಎಂದರು.

ನಟ ಅನಿರುದ್ಧ ಜಟ್ಕರ್ ಮಾತನಾಡಿ, ‘ಜೊತೆಜೊತೆಯಲಿ ಧಾರಾವಾಹಿಗೆ ದೇಶ ವಿದೇಶಗಳಿಂದಲೂ ಅತ್ಯುತ್ತಮ ಪ್ರತಿಕ್ರಿಯೆ ಬರುತ್ತಿದೆ. ಕನ್ನಡ ಕಲಿಯಲು ಈ ಧಾರಾವಾಹಿ ಪ್ರಚೋದನೆ ನೀಡಿದೆ. ಸಾಧಿಸುವ ಛಲವೇ ವಾಹಿನಿಯನ್ನು ಬೆಳೆಸಿದೆ’ ಎಂದರು.




ಸಿನಿ ಸಂಕ್ಷಿಪ್ತ

ಮಾತಂಗಿ ದೀವಟಿಗೆ ಚಿತ್ರದಲ್ಲಿ ಹನುಮಕ್ಕ ಮತ್ತು ಡಿ.ಎಸ್.ಚೌಗಲೆ

ಸೆಟ್ಟೇರಿತು ‘ಮಾತಂಗಿ ದೀವಟಿಗೆ’

ದೇಶಮಾನೆ ಕ್ರಿಯೇಷನ್ಸ್ ನಿರ್ಮಾಣ ಮಾಡುತ್ತಿರುವ ಡಾ.ಸಮತಾ ದೇಶಮಾನೆ ರಚಿಸಿದ ಕನ್ನಡದ ಮೊದಲ ಮಹಿಳಾ ದಲಿತ ಆತ್ಮಕತೆ ಆಧರಿಸಿದ ಸಿನಿಮಾ ‘ಮಾತಂಗಿ ದೀವಟಿಗೆ’ಯ ಚಿತ್ರೀಕರಣ ಆರಂಭವಾಗಿದ್ದು, ಕಲಬುರಗಿಯ ವಿವಿಧ ತಾಣಗಳಲ್ಲಿ ಚಿತ್ರೀಕರಣ ನಡೆಯುತ್ತಿದೆ.

ಗಾಂಧಿ ಜಯಂತಿಯಂದು ಚಿತ್ರದ ಮುಹೂರ್ತ ನಡೆದಿದೆ. ಈ ಚಿತ್ರವನ್ನು ನಿರ್ಮಿಸಿದವರು ಜಿ.ವೈ.ಪದ್ಮ. ಛಾಯಾಗ್ರಹಣ ಪಿ.ವಿ.ಆರ್.ಸ್ವಾಮಿ ಅವರದ್ದು. ಜೆ.ಎಂ. ಪ್ರಹ್ಲಾದ ಅವರು ಚಿತ್ರಕತೆ-ಸಂಭಾಷಣೆ ಬರೆದಿದ್ದು, ಮಂಜು ಪಾಂಡವಪುರ ಇದನ್ನು ನಿರ್ದೇಶಿಸಿದ್ದಾರೆ. ಈ ದಲಿತ ಆತ್ಮಕತೆಯ ಪ್ರಧಾನ ಪಾತ್ರದಲ್ಲಿ ನಾಟಕಕಾರ ಡಿ.ಎಸ್.ಚೌಗಲೆ ಮತ್ತು ರಂಗಭೂಮಿ, ಚಲನಚಿತ್ರ ಕಲಾವಿದೆ ಹನುಮಕ್ಕ ಡಿ.ಮರಿಯಮ್ಮನಹಳ್ಳಿ ಅವರು ಅಭಿನಯಿಸುತ್ತಿದ್ದಾರೆ.

ಕಲಬುರಗಿಯ ಬಾಬುರಾವ ಎಂಬ ಸ್ವಾತಂತ್ರ್ಯ ಹೋರಾಟಗಾರ ವೃತ್ತಿಯಿಂದ ಚಮ್ಮಾರಿಕೆಯವನಾಗಿದ್ದು ನಂತರ ಎಮ್.ಎಸ್.ಕೆ ಮಿಲ್‌ನಲ್ಲಿ ಕಾರ್ಮಿಕನಾಗಿ ಸೇರುತ್ತಾನೆ. ಹೇಗೆ ಕಡು ಕಷ್ಟ ಮತ್ತು ಬಡತನಗಳಲ್ಲಿ ತನ್ನ ಎಂಟು ಮಕ್ಕಳನ್ನು ಬೆಳೆಸುವನೆಂಬ ಕತೆಯೇ ಈ ಚಿತ್ರದ ಜೀವಾಳ.

‘ಆಕಾಶವಾಣಿ ಬೆಂಗಳೂರು ನಿಲಯ’ ಇಂದಿನಿಂದ ಪ್ರಸಾರ!

ಕಥೆಗೂ ಶೀರ್ಷಿಕೆಗೂ ಸಂಬಂಧವಿಲ್ಲ. ಆದರೆ, ಇಲ್ಲಿ ರೇಡಿಯೊ ಪ್ರಮುಖ ಪಾತ್ರ. ಅದು ಆಗಾಗ ಮಾತನಾಡುತ್ತಿರುತ್ತದೆ. ಹಾಗಾಗಿ ಈ ಚಿತ್ರದ ಹೆಸರು ‘ಆಕಾಶವಾಣಿ ಬೆಂಗಳೂರು ನಿಲಯ’.


ಹೀಗೆಂದವರು ಈ ಚಿತ್ರದ ಕಥೆಗಾರ ವಿಜಯಕುಮಾರ್. ಹಿಂದೆ ‘ನಾವೇ ಭಾಗ್ಯವಂತರು’ ಎಂಬ ಚಿತ್ರ ನಿರ್ದೇಶಿಸಿದ್ದ ಎಂ.ಹರಿಕೃಷ್ಣ ಅವರ ನಿರ್ದೇಶನದ ಎರಡನೇ ಚಿತ್ರ ಇದು. ಶಿವಾನಂದಪ್ಪ ಈ ಚಿತ್ರದ ನಿರ್ಮಾಪಕರು.


ರಣವೀರ್ ಪಾಟೀಲ್, ನಿಖಿತಾ ಸ್ವಾಮಿ

ಹಾರರ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದ ಚಿತ್ರೀಕರಣ ಬೆಂಗಳೂರು, ತಿಪಟೂರು ಹಾಗೂ ನೊಣವಿನಕೆರೆ ಸುತ್ತಮುತ್ತ ನಡೆಸಲಾಗಿದೆ. ನಾಯಕಿ ನಿಖಿತಾಸ್ವಾಮಿ ಮಾತನಾಡಿ, ‘ಈ ಚಿತ್ರದಲ್ಲಿ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಒಬ್ಬ ಹುಡುಗಿಗೆ ಯಾರೂ ಇಲ್ಲ ಎಂದಾಗ ಆಕೆಯನ್ನು ಜನ ಹೇಗೆಲ್ಲ ನೋಡುತ್ತಾರೆ, ವೈವಾಹಿಕ ವೆಬ್‌ಸೈಟ್‌ಗಳಿಂದ ಜನ ಹೇಗೆ ಮೋಸ ಹೋಗುತ್ತಾರೆ ಎಂಬ ವಿಷಯಗಳು ಚಿತ್ರದಲ್ಲಿವೆ’ ಎಂದರು.

ನಾಯಕ ರಣವೀರ್ ಪಾಟೀಲ ಮಾತನಾಡಿ, ‘ನನ್ನ ಪಾತ್ರಕ್ಕೆ ಮೂರು ಆಯಾಮಗಳಿವೆ. ಅದರಲ್ಲೊಂದು ಡೆವಿಲ್ ಕ್ಯಾರೆಕ್ಟರ್ ಎಂದು ಹೇಳಿದರು. ಕಾಮಿಡಿ ಕಿಲಾಡಿಗಳು ಖ್ಯಾತಿಯ ನಟಿ ದಿವ್ಯಶ್ರೀ ಅವರಿಗೆ ಕೆಲಸದಾಕೆಯ ಪಾತ್ರ ಇದೆ. ಇದಕ್ಕಾಗಿ ಮಂಡ್ಯ ಗ್ರಾಮೀಣ ಭಾಷೆಯನ್ನು ಕಲಿತಿದ್ದಾರಂತೆ.

ಡಿಸ್ಕವರಿ ಪ್ಲಸ್‌ನಲ್ಲಿ ಇಸ್ರೊ ಸಾಧನೆ



ಇಂಡಿಯಾಸ್ ಸ್ಪೇಸ್ ಒಡೆಸ್ಸಿ (ಸಾಕ್ಷ್ಯಚಿತ್ರ ಸರಣಿ)
ನಿರ್ಮಾಣ: ಮಿಡಿಟೆಕ್ ಸ್ಟುಡಿಯೋಸ್
ಪ್ರಸಾರ: ಡಿಸ್ಕವರಿ ಪ್ಲಸ್

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ 60 ವರ್ಷಗಳ ಪ್ರಯಾಣವನ್ನು ದಾಖಲಿಸಿದೆ ಡಿಸ್ಕವರಿ ಪ್ಲಸ್. ‘ಇಂಡಿಯಾಸ್ ಸ್ಪೇಸ್ ಒಡೆಸ್ಸಿ’ ಹೆಸರಿನಲ್ಲಿ ಕಾರ್ಯಕ್ರಮ ನಿರ್ಮಾಣವಾಗಿದ್ದು ಅ. 7ರಿಂದ ಡಿಸ್ಕವರಿ ಪ್ಲಸ್‌ನಲ್ಲಿ ಪ್ರಸಾರ ಆರಂಭವಾಗಿದೆ.

ಈ ಸರಣಿಗೆ ಚಿತ್ರನಟ ಆರ್. ಮಾಧವನ್ ಹಿಂದಿಯಲ್ಲಿ ವಿವರಣೆ ನೀಡಿದ್ದಾರೆ. ತನ್ನ ಪ್ರತಿ ಯಶಸ್ಸಿನ ಹಿಂದೆ ಇಸ್ರೊ ಸಂಸ್ಥೆ ಎದುರಿಸಿದ ಕಠಿಣ ಸವಾಲುಗಳು, ಪರಿಸ್ಥಿತಿಗಳನ್ನು ಸರಣಿಯಲ್ಲಿ ಕಟ್ಟಿಕೊಡಲಾಗಿದೆ. ವಿಜ್ಞಾನಿ ಡಾ.ಹೋಮಿ ಜೆ. ಬಾಬಾ ಮತ್ತು ಡಾ.ವಿಕ್ರಂ ಸಾರಾಬಾಯಿ ಅವರಿಂದ ಆರಂಭಗೊಂಡ ಇಸ್ರೊ ಬೆಳವಣಿಗೆಯ ಮೆಟ್ಟಿಲುಗಳು ಈ ಸರಣಿಯಲ್ಲಿ ಚಿತ್ರಿಣವಾಗಿವೆ.

ಮಿಡಿಟೆಕ್ ಸ್ಟುಡಿಯೋಸ್ ಈ ಸರಣಿಯನ್ನು ನಿರ್ಮಿಸಿದೆ. ಇಸ್ರೊದ ವಿವಿಧ ತಜ್ಞರು ಹಾಗೂ ಬಾಹ್ಯಾಕಾಶ ಇತಿಹಾಸಕಾರರು ಮತ್ತು ಸಂಶೋಧಕರು, ಇಸ್ರೊದ ಮಾಜಿ ಅಧ್ಯಕ್ಷ ಡಾ.ಜಿ. ಮಾಧವನ್ ನಾಯರ್ ಅವರ ಮಾತುಗಳು ಸರಣಿಯಲ್ಲಿವೆ. ಭಾರತದ ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ, ಪ್ರೊ.ಸತೀಶ್ ಧವನ್ ಅವರ ಸಾಧನೆಯ ದಾಖಲೆಗಳೂ ಇವೆ.

‘ಕಬ್ಜ’ ಲೋಕದಲ್ಲಿ ನವಾಬ್ ಶಾ


ನವಾಬ್ ಶಾ

ನಟ ಉಪೇಂದ್ರ ಅಭಿನಯದ ಪ್ಯಾನ್ ಇಂಡಿಯಾ ಸಿನಿಮಾ ‘ಕಬ್ಜ’ಗೆ ಬಾಲಿವುಡ್ ನಟ ನವಾಬ್ ಶಾ ಪ್ರವೇಶಿಸಿದ್ದಾರೆ. ಬೆಂಗಳೂರಿನ ಮಿನರ್ವ ಮಿಲ್‌ನಲ್ಲಿ ನಿರ್ಮಿಸಲಾಗಿರುವ ಅದ್ದೂರಿ ಸೆಟ್‌ನಲ್ಲಿ ಚಿತ್ರದ ಐದನೇ ಹಂತದ ಚಿತ್ರೀಕರಣ ಆರಂಭವಾಗಿದೆ.

ಕೋಟಿಗೊಬ್ಬ-3ಯಲ್ಲೂ ನವಾಬ್ ಶಾ ನಟಿಸಿದ್ದು, ಇದು ಇವರ ಮೂರನೇ ಕನ್ನಡ ಸಿನಿಮಾವಾಗಿದೆ. ಈ ಹಂತದ ಚಿತ್ರೀಕರಣಕ್ಕಾಗಿ ಕೆ.ಜಿ.ಎಫ್ ಖ್ಯಾತಿಯ ಕಲಾ ನಿರ್ದೇಶಕ ಶಿವಕುಮಾರ್ ಅವರ ನೇತೃತ್ವದಲ್ಲಿ ಸುಮಾರು ಒಂದು ತಿಂಗಳಿನಿಂದ ಮಿನರ್ವ ಮಿಲ್‌ನಲ್ಲಿ ಸೆಟ್ ನಿರ್ಮಾಣವಾಗಿದೆ. ಇಲ್ಲಿ ಸುಮಾರು 42 ದಿನಗಳ ಕಾಲ ಚಿತ್ರೀಕರಣ ಮುಗಿಸಿ, ಚಿತ್ರತಂಡವು ಹೈದರಾಬಾದ್ ಮತ್ತು ಮಂಗಳೂರಿನಲ್ಲಿ ಚಿತ್ರೀಕರಣ ನಡೆಸಲಿದೆ. ಚಿತ್ರದಲ್ಲಿ ‘ಭಾರ್ಗವ್ ಭಕ್ಷಿ’ ಎಂಬ ವಿಶೇಷ ಪಾತ್ರದಲ್ಲಿ ಕಿಚ್ಚ ಸುದೀಪ್ ಕಾಣಿಸಿಕೊಳ್ಳಲಿದ್ದಾರೆ.

ಚಿತ್ರೀಕರಣದ ಅನುಭವ ಹಂಚಿಕೊಂಡ ನವಾಬ್ ಶಾ, ‘ಉಪೇಂದ್ರ ಅವರು ಒಬ್ಬ ನಿರ್ದೇಶಕನಾಗಿ, ನಟನಾಗಿ ಅದ್ಭುತ ಕಲಾವಿದ. ಅವರೊಂದಿಗೆ ಕೆಲಸ ಮಾಡುವ ಅವಕಾಶ ದೊರಕಿರುವುದು ಖುಷಿಯ ವಿಚಾರ. ಸ್ಯಾಂಡಲ್‌ವುಡ್ ಬೆಳೆಯುತ್ತಿದೆ. ಬಂಡವಾಳ ಹೂಡಿಕೆಯೂ ಹೆಚ್ಚುತ್ತಿದೆ. ಆರ್.ಚಂದ್ರು ಅವರ ಜೊತೆಗೆ ಮೊದಲ ಬಾರಿ ಕೆಲಸ ಮಾಡುತ್ತಿದ್ದೇನೆ’ ಎಂದರು.

‘ಚಿತ್ರದ ಎರಡನೇ ಭಾಗದ ಕಥೆ ಸಿದ್ಧವಾಗಿದ್ದು, ಮೊದಲನೇ ಭಾಗದ ಚಿತ್ರೀಕರಣ ಪೂರ್ಣಗೊಂಡ ಕೂಡಲೇ ಎರಡನೇ ಭಾಗದ ಚಿತ್ರೀಕರಣಕ್ಕೆ ಸಿದ್ಧತೆ ಆರಂಭಿಸಲಿದ್ದೇವೆ. ಬೆಂಗಳೂರಿನಲ್ಲಿ ಚಿತ್ರೀಕರಣ ಮುಗಿದರೆ ಶೇ 75 ಚಿತ್ರೀಕರಣ ಪೂರ್ಣಗೊಳ್ಳಲಿದೆ. ಜಾರ್ಖಂಡ್‌ನಲ್ಲೂ ಚಿತ್ರೀಕರಣ ನಡೆಸುವ ಚಿಂತನೆ ಇದೆ. ಇತರೆ ಅಂಡರ್‌ವಲ್ಡ್ ಸಿನಿಮಾಗಳಿಗೆ ಹೋಲಿಸಿದರೆ ಇದೊಂದು ವಿಭಿನ್ನ ಪ್ರಯತ್ನ. ಇದು ಪಕ್ಕಾ ಆ್ಯಕ್ಷನ್ ಸಿನಿಮಾ’ ಎನ್ನುತ್ತಾರೆ ನಿರ್ದೇಶಕ ಆರ್. ಚಂದ್ರು.

ಶ್ರೀ ಸಿದ್ದೇಶ್ವರ ಎಂಟರ್ ಪ್ರೈಸಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಕಬ್ಜ ಚಿತ್ರಕ್ಕೆ ಕೆ.ಜಿ.ಎಫ್ ಖ್ಯಾತಿಯ ರವಿ ಬಸ್ರೂರು ಸಂಗೀತ ನಿರ್ದೇಶನವಿದೆ.. ಕಾರ್ಯಕಾರಿ ನಿರ್ಮಾಪಕರಾಗಿ ಮುನೀಂದ್ರ ಹಾಗೂ ಲೈನ್ ಪ್ರೊಡ್ಯೂಸರ್ ಆಗಿ ರಾಜಶೇಖರ್ ಕಾರ್ಯನಿರ್ವಹಿಸುತ್ತಿದ್ದಾರೆ. ಎ.ಜೆ.ಶೆಟ್ಟಿ ಛಾಯಾಗ್ರಹಣ, ಮಹೇಶ್ ಸಂಕಲನ, ರಾಜು ಸುಂದರಂ, ಗಣೇಶ್, ಶೇಖರ್ ನೃತ್ಯ ನಿರ್ದೇಶನ ಹಾಗೂ ರವಿವರ್ಮ, ವಿಕ್ರಂಮೋರ್,ವಿಜಯ್, ಪೀಟರ್ ಹೆನ್ ಸಾಹಸ ನಿರ್ದೇಶನವಿರುವ ಈ ಚಿತ್ರದ ತಾರಾಬಳಗದಲ್ಲಿ ಕಾಮರಾಜನ್(ಐ ಮೂವಿ ಖ್ಯಾತಿ), ಜಗಪತಿ ಬಾಬು, ರಾಹುಲ್ ಜಗತಪ್, ಅನೂಪ್ ರೇವಣ್ಣ, ಜಾನ್ ಕೊಕ್ಕಿನ್, ರಾಹುಲ್ ದೇವ್, ನವೀನ್, ಕೋಟ ಶ್ರೀನಿವಾಸ್, ಜಯಪ್ರಕಾಶ್, ಕಾಟ್ ರಾಜು, ಸುಬ್ಬರಾಜು ಮುಂತಾದವರಿದ್ದಾರೆ. ❖

‘ಮಾಫಿಯಾ’ ಆಳಲಿದ್ದಾರೆ ಪ್ರಜ್ವಲ್ ದೇವರಾಜ್


ಪ್ರಜ್ವಲ್ ದೇವರಾಜ್

ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ನಾಯಕನಾಗಿ ನಟಿಸುತ್ತಿರುವ 35 ನೇ ಚಿತ್ರ ‘ಮಾಫಿಯಾ’. ಈ ಚಿತ್ರವನ್ನು ‘ಮಮ್ಮಿ’ ಚಿತ್ರದ ಖ್ಯಾತಿಯ ಲೋಹಿತ್ ನಿರ್ದೇಶಿಸುತ್ತಿದ್ದಾರೆ. ನ. 1ರಿಂದ ಚಿತ್ರೀಕರಣ ಆರಂಭವಾಗಲಿದೆ. ಬೆಂಗಳೂರು, ಮೈಸೂರು ಮತ್ತು ರಾಮೋಜಿ ಫಿಲ್ಮ್ ಸಿಟಿಯಲ್ಲಿ ಚಿತ್ರೀಕರಣ ನಡೆಯಲಿದೆ.

ಪ್ರಜ್ವಲ್‌ಗೆ ನಾಯಕಿಯಾಗಿ ಅದಿತಿ ಪ್ರಭುದೇವ ನಟಿಸಲಿದ್ದಾರೆ. ಉಳಿದ ತಾರಾಬಳಗದ ಆಯ್ಕೆ ನಡೆಯುತ್ತಿದೆ. ಬೆಂಗಳೂರು ಕುಮಾರ್ ಫಿಲಂಸ್ ಲಾಂಛನದಲ್ಲಿ ಕುಮಾರ್ ಬಿ. ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಅನೂಪ್ ಸೀಳಿನ್ ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ಮಾಸ್ತಿ ಸಂಭಾಷಣೆ ಬರೆಯುತ್ತಿದ್ದಾರೆ. ಜೆಬಿನ್ ಜಾಕಬ್ ಈ ಚಿತ್ರದ ಛಾಯಾಗ್ರಾಹಕರು. ❖

ಅರ್ಧ ಶತಕದತ್ತ ಯೋಗಿ ‘ಲಂಕೆ’


ಕಾವ್ಯ ಶೆಟ್ಟಿ, ಯೋಗಿ, ಎಸ್ತರ್ ನೊರೋನ್ಹ

ಲೂಸ್ ಮಾದ ಯೋಗೇಶ್ ಅಭಿನಯದ ‘ಲಂಕೆ’ ಚಿತ್ರ ಐವತ್ತನೇ ದಿನದತ್ತ ದಾಪುಗಾಲಿಡುತ್ತಿದೆ.

‘ಚಿತ್ರ ಬಿಡುಗಡೆಯ ಸಮಯದಲ್ಲಿ ಕೆಲವರು ಇದು ಒಂದು ವಾರದ ಸಿನಿಮಾ ಎಂದಿದ್ದರು. ಅವರಿಗೆ ಉತ್ತರವಾಗಿ ‘ಲಂಕೆ’ ಇಪ್ಪತ್ತೈದು ದಿನಗಳನ್ನು ಪೂರೈಸಿದೆ. ಐವತ್ತರ ಸಂಭ್ರಮವೂ ಹತ್ತಿರದಲ್ಲಿದೆ. ನಿರ್ಮಾಪಕರಿಗೆ ಹಾಕಿದ ಹಣ ಬಂದಿದೆ. ಲಾಭ ಬರುವ ನಿರೀಕ್ಷೆ ಇದೆ. ತೆಲುಗಿನ ಖ್ಯಾತನಾಮರೊಬ್ಬರು ‘ಲಂಕೆ’ಯ ರಿಮೇಕ್ ಹಕ್ಕು ಪಡೆದುಕೊಂಡಿದ್ದಾರೆ. ನನ್ನ ಹಾಗೂ ಯೋಗಿ ಕಾಂಬಿನೇಶನ್ ನಲ್ಲಿ ನೂತನ ಚಿತ್ರ ಸಹ ಸದ್ಯದಲ್ಲೇ ಆರಂಭವಾಗಲಿದೆ’ ಎಂದಿದ್ದಾರೆ ನಿರ್ದೇಶಕ ರಾಮಪ್ರಸಾದ್.

‘ಚಿತ್ರಮಂದಿರಗಳಲ್ಲಿ ಶೇ 50 ಆಸನ ಭರ್ತಿಗೆ ಅವಕಾಶವಿದ್ದಾಗ ನಮ್ಮ ಚಿತ್ರ ಬಿಡುಗಡೆಯಾಯಿತು. ಯಾರು ಏನೇ ಹೇಳಿದರೂ ನಮ್ಮ ಚಿತ್ರ ಗೆದ್ದೇ ಗೆಲ್ಲುತ್ತದೆ ಎಂಬ ವಿಶ್ವಾಸದಿಂದ ಚಿತ್ರ ಬಿಡುಗಡೆ ಮಾಡಿದ ನಿರ್ದೇಶಕರ ಧೈರ್ಯ ಮೆಚ್ಚಲೇಬೇಕು. ಸುಚೇಂದ್ರ ಪ್ರಸಾದ್ ಅವರಂತಹ ನಟರೊಂದಿಗೆ ನಟಿಸಿದ್ದು ಸಂತಸ ತಂದಿದೆ.. ನಮ್ಮ ಚಿತ್ರ ಇನ್ನೂ ಹೆಚ್ಚು ದಿನಗಳ ಕಾಲ ಓಡುವ ಭರವಸೆ ಇದೆ’ ಎಂದರು ನಾಯಕ ಯೋಗಿ.

‘ನಿರ್ದೇಶಕ ರಾಮಪ್ರಸಾದ್ ನಿರ್ದೇಶನದ ಎಲ್ಲಾ ಚಿತ್ರಗಳಲ್ಲೂ ನಟಿಸಿದ್ದೇನೆ. ಅವರು ಬಳಸಿಕೊಳ್ಳುವ ಮಾಧ್ಯಮ ವಿಶೇಷವಾಗಿರುತ್ತದೆ. ಯೋಗಿ, ಕಾವ್ಯ ಶೆಟ್ಟಿ ಅವರೊಂದಿಗೆ ಕೆಲವು ಚಿತ್ರಗಳಲ್ಲಿ ಈ ಹಿಂದೆ ನಟಿಸಿದ್ದೇನೆ. ಇದರಲ್ಲೂ ನಟಿಸಿದ್ದೇನೆ. ಈ ಸಂದರ್ಭಕ್ಕೆ ‘ಲಂಕೆ’ ಯ ಗೆಲುವು ನಿಜಕ್ಕೂ ಖುಷಿ ತಂದಿದೆ’ ಎಂದರು ನಟ ಸುಚೇಂದ್ರ ಪ್ರಸಾದ್.

‘ಕಥೆ ಕೇಳಿದಾಗ ತುಂಬಾ ಹಿಡಿಸಿತು. ಹಾಗಾಗಿ ಪಾತ್ರ ಒಪ್ಪಿಕೊಂಡೆ. ನನ್ನ ಪಾತ್ರಕ್ಕೆ ಉತ್ತಮ ಮನ್ನಣೆ ದೊರೆತಿದೆ. ಇಂತಹ ಪಾತ್ರ ಕೊಟ್ಟ ನಿರ್ದೇಶಕರಿಗೆ ಆಭಾರಿ’ ಎಂದರು ಎಸ್ತರ್ ನೊರೋನ್ಹ. ❖

ಡಿಸೆಂಬರ್‌ನಲ್ಲಿ ಚಂದನವನದ ‘ಬಿಸಿಎಲ್’ ಸೀಸನ್ 2


ಹರ್ಷಿಕಾ ಪೂಣಚ್ಚ

ಕಮರ್ ಫಿಲಂ ಫ್ಯಾಕ್ಟರಿ ಮೂಲಕ ಕಮರ್ ನೇತೃತ್ವದಲ್ಲಿ ಸ್ಯಾಂಡಲ್ ವುಡ್ ‘ಬಿ ಸಿ ಎಲ್ ಸೀಸನ್ 2’ (ಬಾಕ್ಸ್ ಕ್ರಿಕೆಟ್ ಲೀಗ್) ಡಿಸೆಂಬರ್‌ನಲ್ಲಿ ಆರಂಭವಾಗಲಿದೆ.

ಕಳೆದ ನಲವತ್ತೈದು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಕ್ರಿಯರಾಗಿರುವ ಕೆ.ಬಿ.ಬಾಬು (ನರ್ಗಿಸ್ ಬಾಬು) ಅವರ ಪುತ್ರ ಕಮರ್ ಈ ಟೂರ್ನಿ ಆಯೋಜಿಸುತ್ತಿದ್ದು, ಅವರು ಮಾಹಿತಿ ನೀಡಿದರು.

‘ಮೊನ್ನೆಯಷ್ಟೇ ಐಬಿಎಲ್ ಟೂರ್ನಿ ಮುಗಿದಿದೆ. ಡಿಸೆಂಬರ್‌ನಲ್ಲಿ ಸ್ಯಾಂಡಲ್ ವುಡ್ ಬಿಸಿಎಲ್ ಸೀಸನ್ 2 ಆರಂಭ ಮಾಡುತ್ತಿದ್ದೇವೆ. ಸದ್ಯಕ್ಕೆ ಒಟ್ಟು 6 ತಂಡಗಳಿವೆ. ಚಂದನವನದ ಸಾಕಷ್ಟು ಸ್ಟಾರ್ ಗಳು ಈ ಟೂರ್ನಿಯಲ್ಲಿ ಭಾಗವಹಿಸುತ್ತಾರೆ. ಬೆಂಗಳೂರು, ಮೈಸೂರು, ಹಾಸನ, ದಾವಣಗೆರೆ, ಶಿವಮೊಗ್ಗ, ಮಂಗಳೂರು ಹೀಗೆ ಒಂದೊಂದು ಊರಿನ ಹೆಸರಿನಲ್ಲಿ ಆರು ತಂಡಗಳಿದ್ದು, ಆರು ತಂಡಗಳಿಗೆ ಮಾಲೀಕರಿರುತ್ತಾರೆ. ಅವರೇ ತಮ್ಮ ತಂಡಗಳಿಗೆ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಒಂದು ತಂಡದಲ್ಲಿ ಏಳು ಪುರುಷ ಹಾಗೂ ನಾಲ್ಕು ಮಹಿಳಾ ಆಟಗಾರರಿರುತ್ತಾರೆ’ ಎಂದು ಕಮರ್ ಹೇಳಿದರು.

ಬೆಂಗಳೂರು ತಂಡದ ಮಾಲೀಕರಾದ ಜಾಕೀರ್ ಹುಸೇನ್, ಪೂಜಾಶ್ರೀ, ಮೈಸೂರು ತಂಡದ ಮಾಲೀಕರಾದ ರಘು, ಗೀತಾಂಜಲಿ, ಹಾಸನ ತಂಡದ ಮಾಲೀಕರಾದ ದಿವ್ಯ - ಪ್ರಸಾದ್ ಹಾಗೂ ದಾವಣಗೆರೆ ತಂಡದ ಮಾಲೀಕರಾದ ವಿಜಯಲಕ್ಷ್ಮಿ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಆಟಗಾರರ ಪೈಕಿ ಹರ್ಷಿಕಾ ಪೂಣಚ್ಛ, ತರುಣ್ ಚಂದ್ರ, ಹರ್ಷ ಇದ್ದರು. ❖

‘ಅನಿರೀಕ್ಷಿತ’ ಗೆದ್ದಿತು ಛಾಯಾಗ್ರಹಣ ಪ್ರಶಸ್ತಿ


ಅನಿರೀಕ್ಷಿತ ಚಿತ್ರೀಕರಣದಲ್ಲಿ ಮಿಮಿಕ್ರಿ ದಯಾನಂದ್ (ಎಡ), ಜೀವನ್

ಚಂದನವನದ ಚಿತ್ರವೊಂದಕ್ಕೆ ಕೇರಳದಲ್ಲಿ ನಡೆದ ಚಿತ್ರೋತ್ಸವದಲ್ಲಿ ಛಾಯಾಗ್ರಹಣ ವಿಭಾಗದಲ್ಲಿ ಪ್ರಶಸ್ತಿ ಲಭಿಸಿದೆ.

ಮಿಮಿಕ್ರಿ ದಯಾನಂದ್ ನಿರ್ದೇಶನದ ‘ಅನಿರೀಕ್ಷಿತ’ ಪ್ರಶಸ್ತಿ ಗೆದ್ದ ಚಿತ್ರ. ಜೀವನ್‌ಗೌಡ ಅವರು ಈ ಚಿತ್ರದ ಛಾಯಾಗ್ರಾಹಕರು. ಅವರ ಛಾಯಾಗ್ರಹಣಕ್ಕೆ ಕೇರಳದ ಆರ್ಟ್ ಇಂಡಿಪೆಂಡೆಂಟ್ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್‌ನ 7 ವರ್ಷದ ಸ್ಪರ್ಧೆಯಲ್ಲಿ ಈ ಪ್ರಶಸ್ತಿ ಲಭಿಸಿದೆ. ಅಮೆರಿಕದ ನ್ಯೂಜೆರ್ಸಿಯಲ್ಲಿ ನಡೆದ ‘ಸ್ಟಾರ್ ಹಾಲಿವುಡ್ ಅವಾರ್ಡ್ಸ್’ನಲ್ಲೂ ಈ ಚಿತ್ರಕ್ಕೆ ಉತ್ತಮ ಛಾಯಾಗ್ರಹಣ ಪ್ರಶಸ್ತಿ ಲಭಿಸಿದೆ.

ಚಿತ್ರದಲ್ಲಿ ದಯಾನಂದ್ ಅವರ ನಟನೆ ಇದೆ. ಸಂತೋಷ್ ಕೊಂಡೆಕೇರಿ ಅವರ ಕ್ರಿಯೇಟಿವ್ ಡೈರೆಕ್ಷನ್ ಇದೆ. ಗುರುಕಿರಣ್ ಸಂಗೀತ ನೀಡಿದ್ದಾರೆ. ನೆಲ್ಲೋಲಿ ರಾಜಶೇಖರ್ ಅವರ ಸಂಭಾಷಣೆ ಇದೆ. ರಘು ಅವರ ಸಂಕಲನ ಇದೆ. ಲಾಕ್‌ಡೌನ್ ಅವಧಿಯಲ್ಲಿ 13 ತಂತ್ರಜ್ಞರು ಈ ಚಿತ್ರ ನಿರ್ಮಾಣದಲ್ಲಿ ತೊಡಗಿದ್ದರು. ಎಸ್. ಕೆ. ಟಾಕೀಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಾಣಗೊಂಡಿದೆ. ❖


ಮನು ರವಿಚಂದ್ರನ್, ಕಯಾದು ಲೋಹರ್

ದಸರಾ ಸಂಭ್ರಮದಲ್ಲಿ ‘ಮುಗಿಲ್‌ಪೇಟೆ’ ಹಾಡು

ದಸರಾ ಮೊದಲ ದಿನ (ಅ. 7) ‘ಮುಗಿಲ್ ಪೇಟೆ’ ಚಿತ್ರದ ವಿಡಿಯೋ ಹಾಡು ಬಿಡುಗಡೆಯಾಗಿದೆ. ಮನು ರವಿಚಂದ್ರನ್ ನಾಯಕನಾಗಿ ನಟಿಸಿರುವ ಚಿತ್ರವಿದು. ಈ ಚಿತ್ರಕ್ಕೆ ಶ್ರೀಧರ್ ಸಂಭ್ರಮ್ ಅವರ ಸಂಗೀತವಿದೆ.

ಮನು ರವಿಚಂದ್ರನ್ ಅವರಿಗೆ ಕಯಾದು ಲೋಹರ್ ನಾಯಕಿ. ನಕುಲ್ ಈ ಹಾಡಿಗೆ ಧ್ವನಿಯಾಗಿದ್ದಾರೆ. ಭರತ್ ಎಸ್. ನಾವುಂದ ರಚನೆ ಹಾಗೂ ನಿರ್ದೇಶನದ ಈ ಚಿತ್ರವನ್ನು ಮೋತಿ ಮೂವಿ ಮೇಕರ್ಸ್ ಲಾಂಛನದಲ್ಲಿ ರಕ್ಷಾ ವಿಜಯ್ ಕುಮಾರ್ ನಿರ್ಮಿಸಿದ್ದಾರೆ. ದೀಪಾವಳಿಗೆ ಚಿತ್ರ ತೆರೆಗೆ ಬರಲಿದೆ.

ಈಗಾಗಲೇ ಟ್ರೇಲರ್‌ಗೆ ನಿರೀಕ್ಷೆಗೂ ಮೀರಿ ಮೆಚ್ಚುಗೆ ಸಿಕ್ಕಿದೆ. ಚಿತ್ರಕ್ಕೂ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರಕುವ ವಿಶ್ವಾಸವಿದೆ ಎಂದಿದೆ ಚಿತ್ರ ತಂಡ.

ರಿಷಿ, ಅವಿನಾಶ್, ತಾರಾ ಅನುರಾಧ, ಸಾಧುಕೋಕಿಲ, ರಂಗಾಯಣ ರಘು ತಾರಾಗಣದಲ್ಲಿದ್ದಾರೆ. ರವಿವರ್ಮ (ಗಂಗು) ಅವರ ಛಾಯಾಗ್ರಹಣವಿದೆ. ❖

ಕ್ರಿಸ್‌ಮಸ್‌ಗೆ ಬರ್ತಾನೆ ‘ಬಡವ ರಾಸ್ಕಲ್’



ಡಾಲಿ ಧನಂಜಯ್

ಸಾಲು ಸಾಲು ಚಿತ್ರಗಳಲ್ಲಿ ಬಣ್ಣಹಚ್ಚುತ್ತಿರುವ ನಟ ಡಾಲಿ ಧನಂಜಯ್ ಚಿತ್ರರಂಗದಲ್ಲಿ ಬ್ಯುಸಿಯಾಗಿದ್ದಾರೆ. 2021ರಲ್ಲಿ ‘ಪೊಗರು’, ‘ಯುವರತ್ನ’ ಬಳಿಕ ಇದೇ 14ರಂದು ತೆರೆಕಾಣುತ್ತಿರುವ ನಟ ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿರುವ ‘ಸಲಗ’ದಲ್ಲೂ ‘ಸಾಮ್ರಾಟ್’ ಎಂಬ ಖಡಕ್ ಪೊಲೀಸ್ ಅಧಿಕಾರಿ ಪಾತ್ರಕ್ಕೆ ಧನಂಜಯ್ ಬಣ್ಣಹಚ್ಚಿದ್ದಾರೆ.

ಇದೀಗ ಧನಂಜಯ್ ಅವರೇ ತಮ್ಮ ಡಾಲಿ ಪಿಕ್ಚರ್ಸ್ ಲಾಂಛನದಡಿ ನಿರ್ಮಾಣ ಮಾಡಿರುವ ‘ಬಡವ ರಾಸ್ಕಲ್’ ಡಿ.24ರಂದು ತೆರೆಕಾಣಲಿದೆ. ಸೆ.24ರಂದೇ ಈ ಚಿತ್ರ ತೆರೆಕಾಣಬೇಕಿತ್ತು. ಆದರೆ ಚಿತ್ರಮಂದಿರಗಳಲ್ಲಿ ಶೇ 100 ಆಸನ ಭರ್ತಿಗೆ ಸರ್ಕಾರ ಅವಕಾಶ ನೀಡದೇ ಇದ್ದ ಕಾರಣ ಚಿತ್ರ ಬಿಡುಗಡೆ ಮುಂದೂಡಲಾಗಿತ್ತು. ವಾಸುಕಿ ವೈಭವ್ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಧನಂಜಯ್ ಅವರೇ ಸಾಹಿತ್ಯ ಬರೆದಿರುವ ಚಿತ್ರದ ಹಾಡು ‘ಉಡುಪಿ ಹೋಟೆಲ್ಲು’ ಈಗಾಗಲೇ ಹಿಟ್ ಆಗಿದ್ದು, ಧನಂಜಯ್-ಅಮೃತ ಅಯ್ಯಂಗಾರ್ ಜೋಡಿ ಪ್ರೇಕ್ಷಕರನ್ನು ಸೆಳೆದಿದೆ.

ಚಿತ್ರದಲ್ಲಿ ಬಹುತೇಕ ಕಲಾವಿದರು ಧನಂಜಯ್ ಅವರ ರಂಗಭೂಮಿ, ಕಾಲೇಜು ಗೆಳೆಯರೇ ಆಗಿದ್ದು, ಶಂಕರ್ ಗುರು ಈ ಚಿತ್ರ ನಿರ್ದೇಶಿಸುತ್ತಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಶಂಕರ್ ಗುರು ಅವರೇ ಬರೆದಿದ್ದು, ಇದು ಇವರ ನಿರ್ದೇಶನದ ಚೊಚ್ಚಲ ಚಿತ್ರ. ಮಧ್ಯಮ ವರ್ಗದ ಜನರ ದಿನನಿತ್ಯದ ಜೀವನದಲ್ಲಿ ನಡೆಯುವ ಘಟನೆಗಳೆ ಈ ಚಿತ್ರದ ಕಥಾಹಂದರ. ರಂಗಾಯಣ ರಘು, ತಾರಾ, ಸ್ಪರ್ಶ ಚಿತ್ರ ಖ್ಯಾತಿಯ ರೇಖಾ, ನಾಗಭೂಷಣ್, ಪೂರ್ಣಚಂದ್ರ ಪ್ರಮುಖ ತಾರಾಬಳಗದಲ್ಲಿದ್ದಾರೆ. ❖

ಬಂದಿದೆ ‘ನಮೋ ಗಾಂಧಿ’


ಸಾಕ್ಷಿ, ಶ್ವೇತಾ ಶ್ರೀನಿವಾಸ್

ದೇಶ 75ನೇ ಸ್ವಾತಂತ್ರ್ಯೋತ್ಸವದಲ್ಲಿರುವ ಸಂದರ್ಭದಲ್ಲಿ ಗಾಂಧೀಜಿ ಅವರ ಹುಟ್ಟುಹಬ್ಬದ ಪ್ರಯುಕ್ತ ಕಿರುಚಿತ್ರ ‘ನಮೋ ಗಾಂಧಿ’ ಬಿಡುಗಡೆಯಾಗಿದೆ.


ರಂಗಭೂಮಿಯಲ್ಲಿ ಸಕ್ರಿಯರಾಗಿರುವ, ಟಿವಿ ರಿಯಾಲಿಟಿ ಷೋಗಳ ನಿರ್ಮಾಪಕ ಎಸ್.ಎಲ್.ಎನ್ ಸ್ವಾಮಿ ನಿರ್ದೇಶನದ ಚಿತ್ರವಿದು. 24 ಗಂಟೆಗಳಲ್ಲಿ ನಿರ್ಮಾಣವಾಗಿದೆ ಎಂಬುದು ಚಿತ್ರದ ಹೆಗ್ಗಳಿಕೆ.

ಗಾಂಧೀಜಿಯವರ ತತ್ವಗಳಿಂದ ಪ್ರೇರೇಪಿತಳಾದ ಬಾಲಕಿಯೊಬ್ಬಳು, ತಾನು ಕಂಡ ಅನ್ಯಾಯ, ಅಕ್ರಮಗಳನ್ನು ಗಾಂಧಿ ಪಾತ್ರದ ಪ್ರಭಾವದ ಹಿನ್ನೆಲೆಯಲ್ಲಿ ಹೇಗೆ ಬದಲಿಸುತ್ತಾಳೆ ಎಂಬುದೇ ಕಿರುಚಿತ್ರದ ಕಥಾವಸ್ತು.

ಪುಟಾಣಿ ಪ್ರತಿಭೆ ಸಾಕ್ಷಿ, ಶ್ವೇತ ಶ್ರೀನಿವಾಸ್, ಟೈಗರ್ ಗಂಗ, ಸಿಂಹಾದ್ರಿ ಇದರಲ್ಲಿ ನಟಿಸಿದ್ದಾರೆ. ಟ್ರಯೋ ಅಪರೇಲ್ಸ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಾದ ಶೇಷಶಯನಂ ಈ ಕಿರುಚಿತ್ರದ ನಿರ್ಮಾಪಕರು. ರಮೇಶ್ಚಂದ್ರ ಹಾಗೂ ಸುರೇಖ ಹೆಗ್ಡೆ ಅವರ ಗಾಯನವಿದೆ.

ಗಾಂಧೀಜಿ ಅವರನ್ನು ಅರ್ಥ ಮಾಡಿಕೊಳ್ಳುವುದು ಮೇಲ್ನೋಟಕ್ಕೆ ಸುಲಭ. ಆದರೆ ಹತ್ತಿರ ಹತ್ತಿರ ಹೋಗುತ್ತಿದಂತೆ ಅವರ ಬಗ್ಗೆ ತಿಳಿಸುಕೊಳ್ಳುವುದು ಅಷ್ಟೇ ಜಟಿಲ. ಅರ್ಥ ಮಾಡಿಕೊಂಡರೆ ಸುಲಭ. ಗಾಂಧಿ ತತ್ವಗಳಿಂದ ಸಮಾಜದ ಅನ್ಯಾಯಗಳನ್ನು ಸರಿ ಪಡಿಸುವ ಕಿರುಪಯತ್ನವನ್ನು ಈ ಕಿರುಚಿತ್ರದ ಮೂಲಕ ಹೇಳ ಹೊರಟಿದ್ದೇನೆ ಎಂದರು ಎಸ್.ಎಲ್.ಎನ್. ಸ್ವಾಮಿ. ❖

ಧ್ರುವ ರಗಡ್ ಲುಕ್!



ಧ್ರುವ ಸರ್ಜಾ

ನಟ ಧ್ರುವ ಸರ್ಜಾ ಅವರು ಪ್ರಸ್ತುತ ಎ.ಪಿ. ಅರ್ಜುನ್ ನಿರ್ದೇಶನದ ‘ಮಾರ್ಟಿನ್’ ಚಿತ್ರದ ಚಿತ್ರೀಕರಣದಲ್ಲಿ ತಲ್ಲೀನರಾಗಿದ್ದಾರೆ. ಧ್ರುವ ಅವರ ಜನ್ಮದಿನಕ್ಕೆ ಚಿತ್ರತಂಡವು ವಿಶೇಷ ಪೋಸ್ಟರ್ ಮೂಲಕ ಶುಭಕೋರಿದ್ದು, ರಗಡ್ ಲುಕ್‌ನಲ್ಲಿ ಧ್ರುವ ಕಾಣಿಸಿಕೊಂಡಿದ್ದಾರೆ.

ಈ ಆ್ಯಕ್ಷನ್ ಕಮರ್ಷಿಯಲ್ ಸಿನಿಮಾದ ಚಿತ್ರೀಕರಣ ಕಳೆದ ಆಗಸ್ಟ್‌ನಲ್ಲಿ ಪ್ರಾರಂಭವಾಗಿತ್ತು. ಡಿಸೆಂಬರ್ ಒಳಗಾಗಿ ಚಿತ್ರೀಕರಣ ಪೂರ್ಣಗೊಳಿಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಪ್ಯಾನ್ ಇಂಡಿಯಾ ಸಿನಿಮಾ ಆಗಿರುವ ‘ಮಾರ್ಟಿನ್’ ಐದು ಭಾಷೆಗಳಲ್ಲಿ ತೆರೆ ಕಾಣಲಿದೆ. ಈ ಪಾತ್ರಕ್ಕಾಗಿ ತಮ್ಮ ಮಾತಿನ ಶೈಲಿಯನ್ನು ಧ್ರುವ ಬದಲಾಯಿಸಿಕೊಂಡಿದ್ದು, ಮೈಕೈತುಂಬಾ ಟ್ಯಾಟೂ ಹಾಕಿಸಿಕೊಂಡಿದ್ದಾರೆ.

ಅರ್ಜುನ್ ನಿರ್ದೇಶನದ ‘ಅದ್ದೂರಿ’ ಮುಖಾಂತರ ಧ್ರುವ 2012ರಲ್ಲಿ ಚಂದನವನಕ್ಕೆ ಪ್ರವೇಶಿಸಿದ್ದರು. ‘ಮಾರ್ಟಿನ್’ ಸಿನಿಮಾ ಮುಖಾಂತರ ಈ ಜೋಡಿ ಮತ್ತೆ ಒಂದಾಗಿದೆ. ‘ಮಾರ್ಟಿನ್’ ಎಂದಾಕ್ಷಣ ಹೀರೊ ಹೆಸರು ‘ಮಾರ್ಟಿನ್’ ಎಂದಲ್ಲ. ಮಾರ್ಟಿನ್ ಅನ್ನೋದು ಯಾರು ಎನ್ನುವುದೇ ಸಿನಿಮಾ. ಚಿತ್ರದ ಪ್ರತಿಯೊಂದು ಡೈಲಾಗ್‌ನಲ್ಲಿ ತೂಕವಿದೆ. ಚಿತ್ರಕ್ಕಾಗಿ ನನ್ನನ್ನು ನಾನು ಬದಲಾಯಿಸಿಕೊಂಡಿದ್ದೇನೆ’ ಎಂದು ಧ್ರುವ ಇತ್ತೀಚೆಗೆ ತಿಳಿಸಿದ್ದರು. ❖